ವಿಶ್ವವಾಣಿ
ವಿಶ್ವಾಸವೇ ವಿಶ್ವ

## ನಿರ್ಣಾಯಕ ಪಂದ್ಯದಲ್ಲಿ ಸೂರ್ಯ ಶಿಕಾರಿ

ವೈಭವ ಸೂರ್ಯವಂಶಿಯವರ ಸಿಡಿಲಬ್ಬರದ ಬ್ಯಾಟಿಂಗ್ (29 ಬಾಲ್, 97 ರನ್, 12 ಸಿಕ್ಸರ್ 5 ಬೌಂಡರಿ) ಬ್ಯಾಟಿಂಗ್ ನೆರವಿನಿಂದ ಐಪಿಎಲ್ ಟೂರ್ನಿ ಎಲಿಮಿನೇಟರ್ ಪಂದ್ಯದಲ್ಲಿ ರಾಜಸ್ಥಾನ್ ರಾಯಲ್ಸ್ ತಂಡ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 243 ರನ್ ಕಲೆ ಹಾಕಿದ್ದು, ಸನ್‌ರೈಸರ್ಸ್ ಹೈದರಾಬಾದ್‌ಗೆ ಗೆಲ್ಲಲು 244 ರನ್‌ಗಳ ಬೃಹತ್ ಗುರಿ ನೀಡಿದೆ.

## ಹೈಕಮಾಂಡ್ ಕೋರಿಕೆ ಮನ್ನಿಸಿ ಪದತ್ಯಾಗಕ್ಕೆ ಸಜ್ಜಾದ ಸಿಎಂ ಸಿದ್ದರಾಮಯ್ಯ

# ಸಿದ್ದು ನಿರ್ಗಮನ ಸಾಧ್ಯತೆ

## ಇಂದು ಉಪಾಹಾರ ಸಭೆ ಬಳಿಕ ಪತ್ರಿಕಾಗೋಷ್ಠಿ ಬಳಿಕ ರಾಜ್ಯಪಾಲರ ಭೇಟಿ

## ಸಿಎಂ ಪಟ್ಟಕ್ಕೇರಲು ಡಿಕೆಶಿ ಸಜ್ಜು, ಸಿಎಲ್‌ಪಿ ಬಳಿಕ ಕೆಪಿಸಿಸಿ ಪಟ್ಟಕ್ಕೆ ರಾಜೀನಾಮೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಳೆದ ಆರು ತಿಂಗಳುಗಳಿಂದ ನಡೆಯುತ್ತಿದ್ದ ನಾಯಕತ್ವ ಬದಲಾವಣೆಯ ಹಗ್ಗ-ಜಗ್ಗಾಟಕ್ಕೆ ಮಂಗಳವಾರ ನಡೆದ ಆರೇಳು ತಾಸಿನ ಸುದೀರ್ಘ ಸಭೆಯಲ್ಲಿ ಉತ್ತರ ಸಿಕ್ಕಿದೆ. ಒಂದೆಡೆ ಸಿದ್ದರಾಮಯ್ಯ ನಿರ್ಗಮನಕ್ಕೆ ವೇದಿಕೆ ಸಜ್ಜಾಗಿದ್ದರೆ, ಇನ್ನೊಂದೆಡೆ ಕಳೆದ ಮೂರು ವರ್ಷಗಳಿಂದ ಶಬರಿಯಂತೆ ಕಾದಿದ್ದ ಡಿ.ಕೆ.ಶಿವಕುಮಾರ್ ರಾಜ್ಯದ ಮುಖ್ಯಮಂತ್ರಿಯಾಗಲು ತುದಿಗಾಲಲ್ಲಿ ನಿಂತಿದ್ದಾರೆ.

ದೆಹಲಿಯಿಂದ ವಿಮಾನವೇರುವಾಗಲೇ ರಾಜೀನಾಮೆಯ ಸುಳಿವನ್ನು ನೀಡಿದ್ದ ಸಿದ್ದರಾಮಯ್ಯ ಅವರು, ರಾಜ್ಯಪಾಲರ ಸಮಯ ಕೇಳುವ ಮೂಲಕ ಈ ಸುಳಿವಿಗೆ ಪುಷ್ಠಿ ನೀಡಿದ್ದಾರೆ. ಇನ್ನೆರಡು ದಿನದಲ್ಲಿ ರಾಜೀನಾಮೆ ನೀಡುವುದು ನಿಶ್ಚಿತ ಎನ್ನುವ ಮಾತಿಗೆ ಪೂರಕವಾಗಿ ಗುರುವಾರವೇ ತಮ್ಮ ರಾಜೀನಾಮೆ ಸಲ್ಲಿಸಲು, ಅದಕ್ಕೂ ಮೊದಲು ತಮ್ಮ ಸಚಿವ ಸಂಪುಟ ಸಹೋದ್ಯೋಗಿಗಳೊಂದಿಗೆ ಬ್ರೇಕ್‌ಫಾಸ್ಟ್ ಸಭೆ ನಡೆಸಿ ಸಚಿವರಿಗೆ ತಮ್ಮ ರಾಜೀನಾಮೆಯ ವಿಷಯವನ್ನು ಅಧಿಕೃತವಾಗಿ ತಿಳಿಸಿ, ಬಳಿಕ ಲೋಕಭವನಕ್ಕೆ ತೆರಳಲು ಮುಂದಾಗಿದ್ದಾರೆ.

ರಾಜ್ಯಪಾಲರ ಭೇಟಿಗೆ ಅವಕಾಶ ಕೇಳಿರುವ ಸಿದ್ದರಾಮಯ್ಯ ಅವರಿಗೆ ಬುಧವಾರ ರಾತ್ರಿ ವೇಳೆಗೆ ಸಮಯ ನಿಗದಿಯಾಗಲಿದೆ. ಇದಕ್ಕೂ ಮೊದಲು ಸುದ್ದಿಗೋಷ್ಠಿ ನಡೆಸಿ ಬಳಿಕ ರಾಜೀ ನಾಮೆ ಸಲ್ಲಿಸುವುದು ನಿಶ್ಚಿತ ಎನ್ನಲಾಗಿದೆ. ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಿದ ಬೆನ್ನಿಗೇ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಡಿ.ಕೆ. ಶಿವಕುಮಾರ್ ರಾಜೀನಾಮೆ ಸಲ್ಲಿಸುವ ಮೂಲಕ ಮುಖ್ಯಮಂತ್ರಿ ಗದ್ದುಗೆಗೆ ಹಾದಿ ಸಲೀಸು ಮಾಡಿಕೊಳ್ಳಲಿದ್ದಾರೆ ಎನ್ನುವ ಮಾತುಗಳು ಕಾಂಗ್ರೆಸ್ ವಲಯದಲ್ಲಿ ಕೇಳಿಬರುತ್ತಿದೆ. ಆದರೆ ಡಿ.ಕೆ. ಆಪ್ತರ ಪ್ರಕಾರ, ಶಾಸಕಾಂಗ ಪಕ್ಷದ ಸಭೆಯಲ್ಲಿ ಡಿ.ಕೆ.ಶಿವಕುಮಾರ್ ಹೆಸರು ಅಂತಿಮವಾದ ಬಳಿಕವೇ ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಲು ಡಿಕೆ ತೀರ್ಮಾನಿಸಿದ್ದಾರೆ ಎನ್ನಲಾಗಿದೆ.

**ರಾಜೀನಾಮೆ ಬಳಿಕ ಸಿಎಲ್‌ಪಿ ಸಭೆ:** ಸಿದ್ದರಾಮಯ್ಯ ಅವರು ರಾಜ್ಯಪಾಲರಿಗೆ ರಾಜೀನಾಮೆ ಪತ್ರ ನೀಡಿದ ನಂತರ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆಯಲಿದ್ದು, ಆ ಸಭೆಯಲ್ಲಿ ನೂತನ ಶಾಸಕಾಂಗ ಪಕ್ಷದ ಆಯ್ಕೆಯಾಗಲಿದೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಶಾಸ ಕಾಂಗ ಪಕ್ಷದ ನೂತನ ನಾಯಕನಾಗಿ ಆಯ್ಕೆಯಾಗಲಿದ್ದಾರೆ. ಹೈಕಮಾಂಡ್‌ನ ಸಂದೇಶ ಹೊತ್ತು ಬರಲಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್ ಹಾಗೂ ಸುರ್ಜೇವಾಲ ಅವರು ಶಾಸಕಾಂಗ ಪಕ್ಷದ ಸಭೆಯಲ್ಲಿ ಹೈಕಮಾಂಡ್ ಸಂದೇಶವನ್ನು ಎಲ್ಲಾ ಶಾಸಕರಿಗೆ ವಿವರಿಸಿ, ಹೈಕಮಾಂಡ್ ಅಣತಿಯಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಶಾಸಕಾಂಗ ಪಕ್ಷದ ನಾಯಕನ್ನಾಗಿ ಆಯ್ಕೆ ಮಾಡುವ ಪ್ರಸ್ತಾವ ಶಾಸಕರ ಮುಂದಿಡಲಿದ್ದು, ಶಾಸಕಾಂಗ ಪಕ್ಷದ ಸಭೆಯಲ್ಲಿ ಡಿ.ಕೆ. ಶಿವಕುಮಾರ್ ಆಯ್ಕೆಗೆ ಎಲ್ಲಾ ಶಾಸಕರ ಒಪ್ಪಿಗೆ ಪಡೆಯುವ ಪ್ರಕ್ರಿಯೆ ಪೂರ್ಣಗೊಳಿಸಲಿದ್ದಾರೆ ಎನ್ನಲಾಗಿದೆ.

→ 4

ಮುಖ್ಯಮಂತ್ರಿಗಳ ರಾಜೀನಾಮೆ ಅನ್ನೋದೆಲ್ಲಾ ಊಹಾಪೋಹ. ಸಿಎಂ ರಾಜೀನಾಮೆ ಪ್ರಶ್ನೆಯೇ ಉದ್ಭವವಾಗಲ್ಲ. ವೇಣುಗೋಪಾಲ್, ಸಿಎಂ, ಡಿಸಿಎಂ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ದೆಹಲಿಯಲ್ಲಿ ನಡೆದ ಸಭೆ ರಾಜ್ಯಸಭೆ ವಿಧಾನಪರಿಷತ್ ಅಭ್ಯರ್ಥಿಗಳ ಆಯ್ಕೆಗಷ್ಟೇ ಸೀಮಿತವಾಗಿ ಚರ್ಚೆಯಾಗಿದೆ ಎಂದು ಹೇಳಿದ್ದಾರೆ. ಬೇರೆಯದ್ದೆಲ್ಲಾ ಊಹಾಪೋಹ ಅಂತಾ ಹೇಳಿದ್ದಾರೆ. ಆದ್ದರಿಂದ ನಾಯಕತ್ವ ಬದಲಾವಣೆ ಉದ್ಭವಿಸಲ್ಲ

-ಎಂ.ಬಿ. ಪಾಟೀಲ್, ಸಚಿವ

ಮುಖ್ಯಮಂತ್ರಿಗಳು ಹೇಳಿದ ಬಳಿಕವೇ ಏನಾಗಿದೆ ಎನ್ನುವುದು ಗೊತ್ತಾಗಲಿದೆ. ಹೈಕಮಾಂಡ್ ಸಭೆಯಲ್ಲಿ ಏನಾಗಿದೆ, ಅವರು ಏನು ಆದೇಶ ನೀಡಿದ್ದಾರೆ ಎಂದು ತಿಳಿದುಬಂದಿಲ್ಲ. ಗುರುವಾರ ಬ್ರೇಕ್‌ಫಾಸ್ಟ್ ಮೀಟಿಂಗ್ ಬಳಿಕವೇ ಸಿಎಂ ಈ ಬಗ್ಗೆ ಮಾತನಾಡಲಿದ್ದಾರೆ. ಹೈಕಮಾಂಡ್ ನಮ್ಮನ್ನು ಕರೆದರೆ ನಮ್ಮ ಬೇಡಿಕೆ ಏನೆಂದು ತಿಳಿಸಲಾಗುವುದು. ಎಲ್ಲವನ್ನೂ ಪಕ್ಷವೇ ನಿರ್ಧರಿಸಲಿದೆ.

-ಸತೀಶ್ ಜಾರಕಿಹೊಳಿ, ಸಚಿವ

ದೆಹಲಿ ಭೇಟಿ, ನಾಯಕತ್ವ ಗೊಂದಲದ ಬಗ್ಗೆ ಯಾವುದೇ ಪ್ರತಿಕ್ರಿಯೆ ನೀಡುವುದಿಲ್ಲ. ನಾಳೆ(ಗುರುವಾರ) ಏನಾಯಿತು ಎನ್ನುವುದನ್ನು ವಿವರವಾಗಿ ಮಾತನಾಡುವೆ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

### ಇಡೀ ದಿನ ಆಪ್ತರ ಜತೆ ಸಭೆ

ಮಂಗಳವಾರ ತಡರಾತ್ರಿ ಬೆಂಗಳೂರಿಗೆ ಆಗಮಿಸಿದ ಸಿದ್ದರಾಮಯ್ಯ ಬುಧವಾರ ಜವಹರ್ ಲಾಲ್ ನೆಹರು ಪುಣ್ಯಸ್ಮರಣೆ ಕಾರ್ಯಕ್ರಮದ ಹೊರತಾಗಿ ಇನ್ಯಾವುದೇ ಸರಕಾರಿ ಕಾರ್ಯಕ್ರಮದಲ್ಲಿ ಭಾಗವಹಿಸಲಿಲ್ಲ. ಇಡೀ ದಿನ ತಮ್ಮ ಆಪ್ತರೊಂದಿಗೆ ಸಭೆ ನಡೆಸಿದ ಅವರು, ಮುಂದಿನ ಕಾರ್ಯತಂತ್ರದ ಬಗ್ಗೆ ಚರ್ಚಿಸಿದ್ದಾರೆ ಎನ್ನಲಾಗಿದೆ. ಹಲವು ಶಾಸಕರು, ಸಚಿವರು ಸಿದ್ದರಾಮಯ್ಯ ಅವರನ್ನು ಭೇಟಿಯಾಗಿ ರಾಜೀನಾಮೆ ನಿರ್ಧಾರ ಬದಲಿಸುವಂತೆ ಒತ್ತಡ ಹೇರಿದ್ದಾರೆ.

### ಬೆಂಗಳೂರಿಗೆ ಆಗಮಿಸಿದ ಡಿಕೆಶಿ

ಕಾಂಗ್ರೆಸ್ ಹೈಕಮಾಂಡ್ ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಬದಲಿಸಿ ನೂತನ ಮುಖ್ಯಮಂತ್ರಿಯ ನೇಮಕಕ್ಕೆ ನಿರ್ಧಾರ ಕೈಗೊಂಡಿರುವ ಬೆನ್ನಲ್ಲೆ ನೂತನ ಮುಖ್ಯಮಂತ್ರಿಯಾಗಲಿರುವ ಡಿ.ಕೆ. ಶಿವಕುಮಾರ್, ಬುಧವಾರ ದೆಹಲಿಯಲ್ಲಿ ಬಿಡುವಿಲ್ಲದ ಚರ್ಚೆ ನಡೆಸಿದ್ದಾರೆ. ಈ ಮಧ್ಯೆ ಗುರುವಾರ ಬೆಳಿಗ್ಗೆ ದೆಹಲಿಯಿಂದ ವಾಪಸಾಗುವ ಸೂಚನೆ ಇದ್ದರೂ ಬುಧವಾರವೇ ಬೆಂಗಳೂರಿಗೆ ಆಗಮಿಸಿದ್ದು, ಗುರುವಾರ ಬೆಳಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಯೋಜಿಸಿರುವ ಸಚಿವರ ಉಪಾಹಾರ ಸಭೆಯಲ್ಲಿ ಪಾಲ್ಗೊಳ್ಳುವರು ಎಂದು ಹೇಳಲಾಗಿದೆ. ಡಿಕೆಶಿ ಅವರನ್ನು ಅಭಿಮಾನಿಗಳು ಪಟಾಕಿ ಸಿಡಿಸಿ ಬರಮಾಡಿಕೊಂಡಿದ್ದಾರೆ.

### ಕೊನೆ ತನಕ ಸಿದ್ದು ಪರ ಆಪ್ತರ ಬ್ಯಾಟ್

ಸಿದ್ದರಾಮಯ್ಯ ಅವರು ರಾಜೀನಾಮೆ ನೀಡುವುದು ಬಹುತೇಕ ನಿಶ್ಚಿತವಾಗಿದ್ದರೂ, ಕೆಲ ಆಪ್ತರು ಸಿದ್ದರಾಮಯ್ಯ ಪರವಾಗಿಯೇ ಬ್ಯಾಟ್ ಮಾಡುತ್ತಿದ್ದಾರೆ. ಸಭೆಯಲ್ಲಿಯೂ ರಾಜೀನಾಮೆ ನೀಡುವುದು ಬೇಡ. ಸಂಖ್ಯಾಬಲವನ್ನು ಕೇಳೋಣ ಎನ್ನುವ ಚರ್ಚೆಗಳನ್ನು ಮಾಡಿದ್ದಾರೆ. ಎಂ.ಬಿ. ಪಾಟೀಲ್ ಸೇರಿದಂತೆ ಕೆಲ ಸಚಿವರು ಒಂದು ಹೆಜ್ಜೆ ಮುಂದೆ ಹೋಗಿ, ಮುಖ್ಯಮಂತ್ರಿ ರಾಜೀನಾಮೆ ನೀಡುತ್ತಾರೆ ಎನ್ನುವುದು ಊಹಾಪೋಹದ ಸುದ್ದಿ. ಇದಕ್ಕೆ ಕಿಮ್ಮತ್ತಿಲ್ಲ ಎಂದಿದ್ದಾರೆ. ಈ ಮೂಲಕ ರಾಜೀನಾಮೆ ನೀಡುವ ತನಕವೂ, ಅವರ ಪರವಾಗಿ ಮಾತನಾಡಲು ಕೆಲವರು ತೀರ್ಮಾನಿಸಿದ್ದಾರೆ.

## ತೀರ್ಮಾನ ಆಗಿಲ್ಲ ಎಂದ ಸುರ್ಜೇವಾಲ

ಬೆಂಗಳೂರು: ಕಾಂಗ್ರೆಸ್ ಹೈಕಮಾಂಡ್ ಸದ್ಯಕ್ಕೆ ಯಾವುದೇ ನಿರ್ಧಾರ ಕೈಗೊಂಡಿಲ್ಲ. ಯಾವುದೇ ಊಹಾಪೋಹಗಳಿಗೆ ಕಿವಿಗೊಡಬೇಡಿ ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸುರ್ಜೇವಾಲ ಹೇಳಿ ಗೊಂದಲ ಮೂಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ನಾಯಕತ್ವ ಬದಲಾವಣೆ ಮಾಡಲು ಶಾಸಕಾಂಗ ಪಕ್ಷದ ಸಭೆಯನ್ನೇ ಕರೆದಿಲ್ಲವೆಂದು ಸುರ್ಜೇವಾಲ ಸ್ಪಷ್ಟನೆ ನೀಡಿದ್ದಾರೆ. ವಿಪಕ್ಷ ನಾಯಕರಾಗಿ ಕೆಲಸ ನಿರ್ವಹಿಸಿದ್ದ ಸಿದ್ದರಾಮಯ್ಯ ಅವರು, 2ನೇ ಬಾರಿಗೆ ಸಿಎಂ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಡಿ.ಕೆ.ಶಿವಕುಮಾರ್ ಕೂಡ ಹಲವು ಸಿಎಂಗಳ ಜೊತೆ ಸಚಿವರಾಗಿ ಕೆಲಸ ಮಾಡಿದ್ದು, ಅವರು ಸಂಘಟನಾ ಚತುರರೂ ಹೌದು ಎಂದರು.

ಮಾಧ್ಯಮಗಳು ಈ ವಿಷಯದ ಬಗ್ಗೆ ಊಹಾಪೋಹಗಳನ್ನು ವರದಿ ಮಾಡಬಾರದು. ಕಾಂಗ್ರೆಸ್ ತನ್ನ ನಾಯಕತ್ವದ ವಿಷಯಗಳನ್ನು ನಿರ್ಧರಿಸುವ ಸಾಮರ್ಥ್ಯ ಹೊಂದಿದೆ ಮತ್ತು ಯಾವುದೇ ನಿರ್ಧಾರ ತೆಗೆದುಕೊಂಡರೂ ಅದನ್ನು ಸಾರ್ವಜನಿಕರಿಗೆ ತಿಳಿಸುತ್ತದೆ. ಅಲ್ಲಿಯವರೆಗೆ, ದಯವಿಟ್ಟು ಊಹಾಪೋಹಗಳನ್ನು ಹರಡಬೇಡಿ. ಇನ್ನೂ ಈ ಬಗ್ಗೆ ಯಾವುದೇ ನಿರ್ಧಾರ ತೆಗೆದುಕೊಂಡಿಲ್ಲ. ನಿರ್ಧಾರ ತೆಗೆದುಕೊಂಡ ನಂತರ, ನಾವು ನಿಮಗೆ ತಿಳಿಸುತ್ತೇವೆ. ಅದು ಒಂದು ತಿಂಗಳು, 20 ದಿನಗಳು, ನಾಳೆ ಎಂದು ನಾನು ನಿಮಗೆ ಹೇಳಲು ಸಾಧ್ಯವಿಲ್ಲ ಎಂದಿದ್ದಾರೆ.

ಮುಂದಿನ ದಿನಗಳಲ್ಲಿ ಪಕ್ಷ ಯಾವ ನಿರ್ಧಾರ ತೆಗೆದುಕೊಳ್ಳಲಿದೆಯೋ ಅದನ್ನು ನಿಮಗೆ ತಿಳಿಸುತ್ತೇವೆ. ನಾವು ಯಾವುದೇ ನಿರ್ಧಾರ ತೆಗೆದುಕೊಂಡರೂ ಕರ್ನಾಟಕದ ಹಿತಾಸಕ್ತಿಗಾಗಿ ಮಾತ್ರ. ಯಾವುದೇ ವೈಯಕ್ತಿಕ ಲಾಭಕ್ಕಾಗಿ ನಿರ್ಣಯ ತೆಗೆದುಕೊಳ್ಳಲ್ಲ, ಕರ್ನಾಟಕದ ಹಿತಕ್ಕಾಗಿ ನಿರ್ಣಯ ತೆಗೆದುಕೊಳ್ಳಲಾಗುತ್ತದೆ. ಮಲ್ಲಿಕಾರ್ಜುನ್ ಖರ್ಗೆ ಕರ್ನಾಟಕದವರೇ ಇದ್ದಾರೆ, ರಾಹುಲ್‌ಗಾಂಧಿ ಕರ್ನಾಟಕದ ಮೇಲೆ ಅಪಾರ ಪ್ರೀತಿ ಹೊಂದಿದ್ದಾರೆ.

ರಣದೀಪ್ ಸುರ್ಜೇವಾಲ, ಕಾಂಗ್ರೆಸ್ ಉಸ್ತುವಾರಿ

## ಸತೀಶ್‌ಗೆ ಕೆಪಿಸಿಸಿ ಪಟ್ಟ, ಮೂವರು ಡಿಸಿಎಂ?

### ಮುಸ್ಲಿಂ, ದಲಿತ, ಲಿಂಗಾಯತ ಅಥವಾ ಒಬಿಸಿ ಡಿಸಿಎಂ ಸ್ಥಾನ ಸಾಧ್ಯತೆ

### ಅಹಿಂದ, ಲಿಂಗಾಯತ ಲೆಕ್ಕಾಚಾರದಲ್ಲಿ ಸಿದ್ದು ಆಪ್ತರಿಗೆ ಹೆಚ್ಚಿನ ಮಣೆ

### ಡಿಕೆ ಸಂಪುಟದಿಂದ ಹಿಂದೆ ಸರಿಯಲಿರುವ ಕೆಲ ಹಿರಿಯ ಸಚಿವರು?

**ಬೆಂಗಳೂರು:** ಮುಖ್ಯಮಂತ್ರಿ ಸ್ಥಾನದಿಂದ ಸಿದ್ದರಾಮಯ್ಯ ಕೆಳಗಿಳಿಯುವುದು ಖಚಿತವಾಗುತ್ತಿದ್ದಂತೆ ರಾಜ್ಯ ಕಾಂಗ್ರೆಸ್‌ನ ಇಡೀ ಚಿತ್ರಣವೇ ಬದಲಾಗುವುದು ನಿಶ್ಚಯವಾಗಿದೆ. ಸಿದ್ದರಾಮಯ್ಯ ಅವರ ಮುಖ್ಯಮಂತ್ರಿ ಪಟ್ಟದ ಮೇಲೆ ಕೂರಲು ಡಿ.ಕೆ.ಶಿವಕುಮಾರ್ ಸಜ್ಜಾಗಿದ್ದರೆ, ಇನ್ನೊಂದೆಡೆ ಡಿ.ಕೆ.ಶಿವಕುಮಾರ್ ಅವರಿಂದ ತೆರವಾಗಲಿರುವ ಕೆಪಿಸಿಸಿ ಅಧ್ಯಕ್ಷ ಗಾದಿ ಮೇಲೆ ಸತೀಶ್ ಜಾರಕಿಹೊಳಿ ಕಣ್ಣಿಟ್ಟಿದ್ದು, ಅದಕ್ಕೆ ಹೈಕಮಾಂಡ್ ಸಹ ಗ್ರೀನ್ ಸಿಗ್ನಲ್ ನೀಡಿದೆ.

ಡಿ.ಕೆ.ಶಿವಕುಮಾರ್ ಸಿಎಂ ಸ್ಥಾನದ ಮೇಲೆ ಕೂರುವುದು ನಿಶ್ಚಿಯವಾಗುತ್ತಿದ್ದಂತೆ ಅಹಿಂದ ಟ್ರಂಪ್ ಕಾರ್ಡ್ ಬಳಸಿರುವ ಸಿದ್ದರಾಮಯ್ಯ, ಸತೀಶ್ ಜಾರಕಿಹೊಳಿ ಅವರನ್ನು ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಕೂರಿಸಬೇಕು ಎನ್ನುವ ಪ್ರಸ್ತಾಪ ಮುಂದಿಟ್ಟಿದ್ದಾರೆ. ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಸೇರಿದಂತೆ ಬಹುತೇಕ ನಾಯಕರಿಗೆ ಈ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲದ ಕಾರಣ ಸತೀಶ್‌ಗೆ ಕೆಪಿಸಿಸಿ ಅಧ್ಯಕ್ಷ ಸ್ಥಾನ ನೀಡಲು ಸಮ್ಮತಿಸಿದ್ದಾರೆ. ಶಾಸಕಾಂಗ ಪಕ್ಷದ ಸಭೆಯಲ್ಲಿ ಅಧಿಕೃತ ಘೋಷಣೆಯಾದ ಬಳಿಕ ಕೆಪಿಸಿಸಿ ಅಧ್ಯಕ್ಷರನ್ನಾಗಿ ಸತೀಶ್ ಅವರನ್ನು ಅಧಿಕೃತವಾಗಿ ಘೋಷಿಸಲು ಹೈಕಮಾಂಡ್ ತೀರ್ಮಾನಿಸಿದೆ ಎನ್ನಲಾಗಿದೆ.

ಸಿದ್ದರಾಮಯ್ಯ ವಾಪಸಾದರೂ ದೆಹಲಿಯಲ್ಲಿಯೇ ಬೀಡುಬಿಟ್ಟಿದ್ದ ಸತೀಶ್ ಜಾರಕಿಹೊಳಿ ಅವರು ದೆಹಲಿ ನಾಯಕರೊಂದಿಗೆ ಚರ್ಚೆ ಮುಂದುವರೆಸಿ, ಕೆಪಿಸಿಸಿ ಅಧ್ಯಕ್ಷ ಸ್ಥಾನದೊಂದಿಗೆ ಸಚಿವ ಸ್ಥಾನ ಮುಂದುವರೆಸುವಂತೆ ಕೇಳಿದ್ದಾರೆ. ಆದರೆ ಈ ವಿಷಯದಲ್ಲಿ ಅಂತಿಮ ತೀರ್ಮಾನ ಹೈಕಮಾಂಡ್ ತೆಗೆದುಕೊಂಡಿಲ್ಲ ಎನ್ನಲಾಗಿದೆ. ಮುಂದಿನ ದಿನದಲ್ಲಿ ರಾಜ್ಯದಲ್ಲಿ ನಡೆಯುವ ರಾಜಕೀಯ ಮೇಲಾಟಗಳನ್ನು ನೋಡಿಕೊಂಡು ಈ ಬಗ್ಗೆ ತೀರ್ಮಾನ ಕೈಗೊಳ್ಳುವ ಸಾಧ್ಯತೆಯಿದೆ ಎಂದು ಮೂಲಗಳು ತಿಳಿಸಿವೆ. ಕೆಪಿಸಿಸಿ ಅಧ್ಯಕ್ಷ ಸ್ಥಾನ ಮಾತ್ರವಲ್ಲದೇ, ಕಾರ್ಯಾಧ್ಯಕ್ಷರ ಸ್ಥಾನದಲ್ಲಿಯೂ ಕೆಲ ಬದಲಾವಣೆಯಾಗುವ ಸಾಧ್ಯತೆಯಿದೆ. ಆದರೆ ಕಾರ್ಯಾಧ್ಯಕ್ಷ ಸ್ಥಾನಕ್ಕೆ ಯಾರನ್ನು ಕೂರಿಸಬೇಕು ಎನ್ನುವ ಕೆಲ ತಿಂಗಳ ಬಳಿಕ ತೀರ್ಮಾನವಾಗುವ ಸಾಧ್ಯತೆಯಿದೆ

→ 4



## ಆಪ್ತರ ಮುಂದೆ ಮೌನಕ್ಕೆ ಜಾರಿದ ಸಿದ್ದು

### ಕಾವೇರಿಗೆ ಶಾಸಕರ ದಂಡು, ದಿಢೀರ್ ತೀರ್ಮಾನಕ್ಕೆ ಹಲವು ಶಾಸಕರ ಬೇಸರ

### ಎಲ್ಲವನ್ನು ಮಾಧ್ಯಮದ ಮೂಲಕವೇ ಜನರಿಗೆ ತಿಳಿಸುವೆ ಎಂದ ಸಿದ್ದರಾಮಯ್ಯ

**ಬೆಂಗಳೂರು:** ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಇಂದಿರಾ ಭವನದಲ್ಲಿ ನಡೆದ ಸಭೆಯ ಬಳಿಕ ಮೌನಕ್ಕೆ ಜಾರಿರುವ ಸಿದ್ದರಾಮಯ್ಯ ಅವರು, ಬುಧವಾರ ತಮ್ಮ ಆಪ್ತರ ಮುಂದೆಯೂ ಅದೇ ಮೌನವನ್ನು ಮುಂದುವರಿಸಿದ್ದಾರೆ.

ಮುಖ್ಯಮಂತ್ರಿ ಸ್ಥಾನಕ್ಕೆ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡುವುದು ಖಚಿತವಾಗುತ್ತಿದ್ದಂತೆ ಬುಧವಾರ ಬೆಳಗ್ಗೆ 56ಕ್ಕೂ ಹೆಚ್ಚು ಶಾಸಕರು, ಹಲವು ಸಚಿವರು ಸೇರಿದಂತೆ ಸಿದ್ದರಾಮಯ್ಯ ಆಪ್ತರು ಅಧಿಕೃತ ನಿವಾಸ ಕಾವೇರಿಗೆ ಆಗಮಿಸಿದರು. ದೆಹಲಿಯಲ್ಲಿ ಏನಾಯಿತು ಎನ್ನುವುದನ್ನು ತಿಳಿಯಲು ಆಗಮಿಸಿದ್ದ ನೂರಾರು ನಾಯಕರಿಂದ ಕಾವೇರಿ ನಿವಾಸದ ವೇಟಿಂಗ್ ರೂಮ್, ಹಾಲ್ ತುಂಬಿ ತುಳುಕುತ್ತಿತ್ತು. ಆಪ್ತರೊಂದಿಗೆ ಕೋಣೆಯಲ್ಲಿ ಕೂತಿದ್ದ ಸಿದ್ದರಾಮಯ್ಯ ಅವರಿಗೆ ಹಿರಿಯ ಶಾಸಕರು, ಆಪ್ತರು ದೆಹಲಿಯಲ್ಲಿ ನಡೆದಿದ್ದೇನು? ಯಾವುದೇ ಬದಲಾವಣೆ ಇಲ್ಲ ಎಂದು ವೇಣುಗೋಪಾಲ್ ಹೇಳಿದ ಬಳಿಕವೂ, ರಾಜೀನಾಮೆಯ ಪ್ರಸ್ತಾಪ ಮಾಡಿದ್ದೇಕೆ ಎನ್ನುವ ಪ್ರಶ್ನೆಗಳನ್ನು ಕೇಳಿದ್ದಾರೆ.

ಸಿದ್ದರಾಮಯ್ಯ ಅವರು ಕೋಣೆಯಲ್ಲಿ ಕೂತ ಬಳಿಕ ಸುಮಾರು 30 ನಿಮಿಷಗಳ ಕಾಲ ಯಾರೊಬ್ಬರೂ ಮಾತನಾಡಲಿಲ್ಲ. ಈ ಮೌನವನ್ನು ಮೊದಲಿಗೆ ಕತ್ತರಿಸಿದ್ದು ಕಾಂಗ್ರೆಸ್ ಹಿರಿಯ ಶಾಸಕ, ಸಿದ್ದರಾಮಯ್ಯ ಆಪ್ತ ಆರ್.ವಿ. ದೇಶಪಾಂಡೆ. ಸಭೆಯಲ್ಲಿ ಏನಾಯಿತು? ಏಕೆ ಈ ತೀರ್ಮಾನ ಕೈಗೊಂಡಿರಿ ಎಂದು ಪ್ರಶ್ನಿಸಿದ್ದಾರೆ. ಬಸವರಾಜ ರಾಯರಡ್ಡಿ ಅವರು, ಅಲ್ಲಿ ಹೋದಾಗ ಏನಾಯಿತು? ಎನ್ನುವುದಾದರೂ ಹೇಳಿ ಎಂದು ಒತ್ತಡ ಹೇರಿದ್ದಾರೆ.

### ಮೌನದಲ್ಲೇ ಬೇಸರ ಭಾವ

ಕೆಲ ಶಾಸಕರು ಹೈಕಮಾಂಡ್ ತೆಗೆದುಕೊಂಡ ತೀರ್ಮಾನಕ್ಕೆ ಅಸಮಾಧಾನ ವ್ಯಕ್ತಪಡಿಸಿದರೂ ನಿರ್ಭಾವುಕರಾಗಿಯೇ ಕುಳಿತಿದ್ದ ಸಿದ್ದರಾಮಯ್ಯ ಅವರು ಏನು ಹೇಳದಿದ್ದರೂ, ಅವರ ಮುಖಭಾವ, ನಡವಳಿಕೆಯಲ್ಲಿ ತೀವ್ರ ಬೇಸರವಿತ್ತು. ಸಂಪುಟ ಪುನಾರಚನೆಗೆ ಒಪ್ಪಿಗೆ ಪಡೆಯಲು ಹೋಗಿದ್ದ ಸಿದ್ದರಾಮಯ್ಯ ಅವರಿಗೆ ರಾಜೀನಾಮೆ ನೀಡಿ ಎನ್ನುವ ಸಂದೇಶ ನೀಡಿದ ಹೈಕಮಾಂಡ್ ನಡೆ ಸಿದ್ದರಾಮಯ್ಯ ಅವರ ಬೇಸರಕ್ಕೆ ಕಾರಣ ಎನ್ನುವ ಮಾತುಗಳನ್ನು ಅವರ ಆಪ್ತರು ಆಡಿದ್ದಾರೆ.

### ಸೊಂಪಾದ ಪುಟಗಳು

ಬಣ್ಣ, ಭಾವನೆಗಳ ಮೆರವಣಿಗೆಯ ಬ್ರಹ್ಮಾನಂದ!

ನೂರೆಂಟು ವಿಶ್ವ
ವಿಶ್ವೇಶ್ವರ ಭಟ್ 6



ಬಾಲ ಕುಣಿಸುವ ಹಕ್ಕಿ ಮತ್ತು ಅಮುರ್ ಫಾಲ್ಕನ್

ಕಾಡುದಾರಿ
ಹರೀಶ್ ಕೇರ 7

### ದಾರಿದೀಪೋಕ್ತಿ



ನಿಮ್ಮ ಭಾವನೆಗಳನ್ನು ತೀರಾ ಮನಸ್ಸಿನ ಆಳಕ್ಕೆ ಇಳಿಯಲು ಬಿಡಬೇಡಿ. ಜನರು ತಮ್ಮ ಅಭಿಪ್ರಾಯಗಳನ್ನು, ನಿಲುವುಗಳನ್ನು ಯಾವಾಗ ಬೇಕಾದರೂ ಬದಲಾಯಿಸುತ್ತಾರೆ. ಇಷ್ಟಕ್ಕೇ ನಾನು ಮನಸ್ಸಿಗೆ ಹಚ್ಚಿಕೊಂಡೆನಲ್ಲ ಎಂದು ಆಗ ನಿಮಗೆ ಪಶ್ಚಾತ್ತಾಪ ಆಗಬಹುದು.

### ವಕ್ರತುಂಡೋಕ್ತಿ

ಟಿವಿ ನಿಜಕ್ಕೂ ಓದಲು ಪ್ರೇರಕ. ಯಾರಾದರೂ ಟಿವಿ ಸೆಟ್ ಆನ್ ಮಾಡಿದರೆ ಪಕ್ಕದ ರೂಮಿಗೆ ಹೋಗಿ ಓದಬೇಕು ಎನಿಸುತ್ತದೆ.

## ಭಾವನಾ ರಾಮಣ್ಣ ಸೇರಿ ಹಲವರಿಗೆ ಕೆಪಿಸಿಸಿ ಕೊಕ್

**ಬೆಂಗಳೂರು:** ಕರ್ನಾಟಕ ಕಾಂಗ್ರೆಸ್‌ನಲ್ಲಿ ಮಹತ್ವದ ರಾಜಕೀಯ ಬೆಳವಣಿಗೆಗಳು ನಡೆಯುತ್ತಿರುವಾಗಲೇ ಕೆಪಿಸಿಸಿ ವಕ್ತಾರ ನಿಕೇತ್ ಮೌರ್ಯ, ನಟಿ ಭಾವನಾ ರಾಮಣ್ಣ ಸೇರಿದಂತೆ 31 ಕೆಪಿಸಿಸಿ ಪದಾಧಿಕಾರಿಗಳಿಗೆ ಡಿ.ಕೆ.ಶಿವಕುಮಾರ ಗೇಟ್‌ಪಾಸ್ ನೀಡಿದ್ದಾರೆ. ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಸಭೆಗೆ ಗೈರುಹಾಜರಿ ಹಿನ್ನೆಲೆ ಈ ಕ್ರಮ ಕೈಗೊಳ್ಳಲಾಗಿದೆ ಎನ್ನಲಾಗುತ್ತಿದ್ದರೂ, ಇದರ ಹಿಂದಿನ ರಾಜಕೀಯ ಬೇರೆಯದ್ದೇ ರೂಪ ಪಡೆದುಕೊಂಡಿದೆ.

## ಜಾತಿ ಗಣತಿ ವರದಿ ಸ್ವೀಕರಿಸಿದ ಸಿಎಂ

**ಬೆಂಗಳೂರು:** ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ಮುನ್ನವೇ ಬುಧವಾರ ಸಿದ್ದರಾಮಯ್ಯ ಅವರು ಜಾತಿ ಜನಗಣತಿ ವರದಿಯನ್ನು ಸ್ವೀಕರಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಸಂಜೆ ವೇಳೆ ವಿಧಾನಸೌಧಕ್ಕೆ ಆಗಮಿಸಿ ಸಿಎಂ ಕೊಠಡಿಯಲ್ಲಿ ವರದಿ ಸ್ವೀಕರಿಸಿದರು. ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್. ಆರ್. ನಾಯ್ಕ್ , ಆಯೋಗದ ಸದಸ್ಯ ಕಾರ್ಯದರ್ಶಿ ಹಾಗೂ ಅಧಿಕಾರಿಗಳು ಸಿಎಂಗೆ ವರದಿ ಸಲ್ಲಿಸಿದರು. ಹಲವು ಆಯೋಗಗಳು ಸಲ್ಲಿಸಿದ್ದ ವರದಿಯಲ್ಲಿನ ಲೋಪದೋಷ, ಕಡತಗಳ ನಾಪತ್ತೆ ಪ್ರಕರಣದ ಹಿನ್ನೆಲೆಯಲ್ಲಿ ಮತ್ತೊಮ್ಮೆ ಜನಗಣತಿ ವರದಿ ಸಲ್ಲಿಸುವಂತೆ ಸಿಎಂ ಸಿದ್ದರಾಮಯ್ಯ ಸೂಚಿಸಿದ್ದರು. ಡಿಸಿಎಂ ಡಿ.ಕೆ.ಶಿವಕುಮಾರ್ ಜಾತಿ ಜನಗಣತಿಯನ್ನು ವಿರೋಧಿಸಿದ್ದರು.

### ಫನ್‌ತರಂಗ

- ರಘುಪತಿ ಶೃಂಗೇರಿ -

ದೆಹಲಿಯಲ್ಲಿ ಕೈಕಮಾಂಡ್ ಜೊತೆ ಹೈ ವೋಲ್ಟೇಜ್ ಮೀಟಿಂಗ್.



## ಸಮಾಚಾರ ಸಣ್ಣದಲ್ಲ

### ಬಾಯಿ ಕ್ಯಾನ್ಸರ್ ಪತ್ತೆ, ತಂಬಾಕು ಮುಕ್ತ ಶಿಬಿರ

**ಹುಬ್ಬಳ್ಳಿ:** ವಿಶ್ವ ತಂಬಾಕು ರಹಿತ ದಿನಾಚರಣೆ ಗೆ ನಗರದ ಕಲ್ಯಾಣ ನಗರದ ಡೆಂಟಲ್ ಇನ್‌ಸ್ಟಿಟ್ಯೂಟ್ ವತಿಯಿಂದ ಮೇ 31ರಂದು ಸಾರ್ವಜನಿಕರಿಗಾಗಿ ಬಾಯಿ ಕ್ಯಾನ್ಸರ್ ಮುನ್ನೆಚ್ಚರಿಕೆ ಹಾಗೂ ತಂಬಾಕು ವ್ಯಸನ ಮುಕ್ತ ಉಚಿತ ಶಿಬಿರ ಹಮ್ಮಿಕೊಳ್ಳಲಾಗಿದೆ ಎಂದು ಲೇಸರ್ ಬಯೋಫೋಟೋನಿಕ್ಸ್ ತಜ್ಞ ಡಾ.ಚಂದ್ರಶೇಖರ್ ಯಾವಗಲ ಹೇಳಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ಸಂಸ್ಥೆಯ ಆವರಣದಲ್ಲಿ ಈ ವಿಶೇಷ ಶಿಬಿರ ಜರುಗಲಿದೆ. ಶಿಬಿರದಲ್ಲಿ ವಿಶ್ವದ ಅತ್ಯಾಧುನಿಕ ಲೇಸರ್‌ತಂತ್ರಜ್ಞಾನ ಬಳಸಿ ಕೇವಲ 5 ನಿಮಿಷಗಳಲ್ಲಿ ನೋವು ಆಗದಂತೆ ತಪಾಸಣೆ ನಡೆಸಲಾಗುತ್ತದೆ ಎಂದರು. ಈ ತಂತ್ರಜ್ಞಾನ ಬರಿಗಣ್ಣಿಗೆ ಕಾಣಿಸದ ಪೂರ್ವ ಹಂತದ ಬದಲಾವಣೆಗಳನ್ನು ಮೊದಲೇ ಪತ್ತೆಹಚ್ಚಲು ನೆರವಾಗುತ್ತದೆ. ಧೂಮಪಾನ, ಗುಟ್ಕಾ ಹಾಗೂ ತಂಬಾಕು ಚಟದಿಂದ ಮುಕ್ತಿ ಹೊಂದಲು ಬಯಸುವವರು ಈ ಶಿಬಿರದ ಸದುಪಯೋಗ ಪಡೆದುಕೊಳ್ಳಬಹುದು ಎಂದರು.

### ಜಿಪಂ ಸಾಮಾನ್ಯ ಸಭೆ ಮುಂದೂಡಿಕೆ

**ಕಾರವಾರ:** ಮೇ.29 ರಂದು ಬೆಳಗ್ಗೆ 10.30 ಗಂಟೆಗೆ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ, ಜಿ.ಪಂ. ಆಡಳಿತಾಧಿಕಾರಿಗಳ ಅಧ್ಯಕ್ಷತೆಯಲ್ಲಿ ನಿಗಧಿಪಡಿಸಲಾಗಿದ್ದ ಸಾಮಾನ್ಯ ಸಭೆಯನ್ನು ಮುಂದೂಡಲಾಗಿದ್ದು, ಮುಂದಿನ ದಿನಾಂಕವನ್ನು ತಿಳಿಸಲಾಗುವುದು ಎಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ವಿದ್ಯಾರ್ಥಿನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

**ಕಾರವಾರ:** ಉತ್ತರ ಕನ್ನಡ ಜಿಲ್ಲೆಯ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕ/ ಬಾಲಕಿಯರ ವಿದ್ಯಾರ್ಥಿನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ-1, 2ಎ, 2ಬಿ, 3ಎ, 3ಬಿ ಪರಿಶಿಷ್ಟ ಜಾತಿ / ಪರಿಶಿಷ್ಟ ವರ್ಗದ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳಿಗೆ ಪ್ರಸಕ್ತ ಸಾಲಿಗೆ ಪ್ರವೇಶಾತಿ ಕಲ್ಪಿಸಲು ಆನ್ ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಜೂ.15 ಕೊನೆಯ ದಿನವಾಗಿದೆ. ಅರ್ಹ ವಿದ್ಯಾರ್ಥಿಗಳು ನಿಗದಿತ ಅವಧಿಯಲ್ಲಿ ಅರ್ಜಿ ಸಲ್ಲಿಸಿ ಇದರ ಸದುಪಯೋಗ ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08382-226589 ನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸುವಂತೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಎಕ್ಸಿಕ್ಯೂಟಿವ್ ಲಾಂಜ್‌ನ ಬಳಕೆಗೆ ಅನುಮತಿ

**ಕಾರವಾರ:** ಹುಬ್ಬಳ್ಳಿಯ ಗೋಕುಲ ರೋಡ್ ಕೇಂದ್ರ ಬಸ್ ನಿಲ್ದಾಣದ ಎಕ್ಸಿಕ್ಯೂಟಿವ್ (ಪ್ರತಿಷ್ಠಿತ) ಲಾಂಜ್ ನ ಪ್ರಾಯೋಗಿಕವಾಗಿ ಸಾರ್ವಜನಿಕ ಪ್ರಯಾಣಿಕರ ಬಳಕೆಗೆ ಅನುಮತಿ ನೀಡಿದೆ. ಪ್ರಸ್ತುತ ಜನಸಂದಣಿ/ ಸಂಚಾರ ಒತ್ತಡ ದಿನಗಳಲ್ಲಿ ಎಕ್ಸಿಕ್ಯೂಟಿವ್ (ಪ್ರತಿಷ್ಠಿತ) ಲಾಂಜ್ ನ ಬಳಕೆಗೆ ಪ್ರತಿಷ್ಠಿತ ಸಾರಿಗೆ ಪ್ರಯಾಣಿಕರ ಯಾವುದೇ ಶುಲ್ಕವಿಲ್ಲದೆ, ಪ್ರತಿಷ್ಠಿತ ಸಾರಿಗೆಯ ಪ್ರಯಾಣಿಕರ ಹೊರತುಪಡಿಸಿ ಇತರೆ ಪ್ರಯಾಣಿಕರ ವಿಶ್ರಾಂತಿಗೆ ಪ್ರತಿ ಗಂಟೆಗೆ 5ರು. ದರವಿರುತ್ತದೆ. ಎಕ್ಸಿಕ್ಯೂಟಿವ್ (ಪ್ರತಿಷ್ಠಿತ) ಲಾಂಜ್‌ನ ಬಳಕೆದಾರರ ಸೌಕರ್ಯಕ್ಕಾಗಿ ಚಹಾ. ಕಾಫಿ, ಐಸ್ ಕ್ರೀಮ್ ಮತ್ತು ಸ್ನಾಕ್‌ಗಳನ್ನು ಬಳಸಲು ಮತ್ತು ಸದರಿ ಎಕ್ಸಿಕ್ಯೂಟಿವ್ (ಪ್ರತಿಷ್ಠಿತ) ಲಾಂಜ್ ನ ಶೌಚಾಲಯವನ್ನು ಯಾವುದೇ ಶುಲ್ಕ ವಿಲ್ಲದೆ ಉಪಯೋಗಿಸಬಹುದಾಗಿದೆ. ಸದರಿ ಸೇವೆಯ ಸದುಪಯೋಗವನ್ನು ಸಾರ್ವಜನಿಕರು ಪ್ರಯಾಣಿಕರು ಪಡೆದುಕೊಳ್ಳಬೇಕೆಂದು ವಾ.ಕ.ರ.ಸಾ. ಸಂಸ್ಥೆ ಸಾರ್ವಜನಿಕ ಸಂಪರ್ಕಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಡಿಪ್ಲೊಮಾ ಪ್ರವೇಶ ಅವಧಿ ವಿಸ್ತರಣೆ

**ಶಿರಸಿ:** ಇಲ್ಲಿನ ಎಂಇಎಸ್ ಆರ್.ಎನ್.ಶೆಟ್ಟಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ 2026-27ನೇ ಸಾಲಿನ ಪ್ರಥಮ ವರ್ಷದ ಡಿಪ್ಲೊಮಾ ಪ್ರವೇಶ ಅವಧಿಯನ್ನು ವಿಸ್ತರಣೆ ಮಾಡಲಾಗಿದೆ. ಅಲ್ಲದೇ 2 ವರ್ಷಗಳ ಐ.ಟಿ.ಐ./ ದ್ವಿತೀಯ ಪಿಯುಸಿ (ತಾಂತ್ರಿಕ /ವಿಜ್ಞಾನ ವಿಷಯಗಳಲ್ಲಿ) ತೇರ್ಗಡೆ ಹೊಂದಿದ ಅರ್ಹ ವಿದ್ಯಾರ್ಥಿಗಳಿಗೆ ಲ್ಯಾಟರಲ್ ಎಂಟ್ರಿ ಸ್ಕೀಂ ಅಡಿಯಲ್ಲಿ ನೇರವಾಗಿ ಎರಡನೇ ವರ್ಷದ ಡಿಪ್ಲೊಮಾ ಕೋರ್ಸುಗಳಿಗೂ ಪ್ರವೇಶ ಪಡೆಯಲು ಅವಕಾಶವಿದ್ದು, ಹೆಚ್ಚಿನ ಮಾಹಿತಿಗಾಗಿ ನೇರವಾಗಿ ಇಲ್ಲವೇ ದೂರವಾಣಿ ಸಂಖ್ಯೆ: 08384 451122/ 9845505742/ 8762572423/ 9241081997ರ ಮುಖಾಂತರ ಸಂಪರ್ಕಿಸಲು ಕೋರಲಾಗಿದೆ. ಕಾಲೇಜಿನಲ್ಲಿ ಕೆಲವೇ ಸೀಟುಗಳು ಲಭ್ಯವಿದ್ದು, ಎಸ್‌ಎಸ್‌ಎಲ್‌ಸಿ ಪಾಸಾದ ವಿದ್ಯಾರ್ಥಿಗಳು ಇದರ ಪ್ರಯೋಜನವನ್ನು ಕೂಡಲೇ ಪಡೆದುಕೊಳ್ಳಬೇಕಾಗಿ ಪ್ರಾಚಾರ್ಯ ಜಿ.ಜಿ.ಹೆಗಡೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

**ಕಳೆದಿದೆ**
ನಾನು ರಾಘವೇಂದ್ರ ಎಸ್. ಶೆಟ್ಟಿ, ದಂಡಿನ ಓಣಿ, ಅಂಬಾ ಭವಾನಿ ಗುಡಿ ಹತ್ತಿರ, ಧಾರವಾಡ. ಮೂಲ ದಸ್ತಾವೇಜು/ಮೂಲ ಪತ್ರವವನ್ನು (ಸಂಖ್ಯೆ: 175/ಬ ಪ್ಲಾಟ ನಂ.24 PID No.151300101900123070 ಗ್ರಾಮ: ಮುಮ್ಮಿಗಟ್ಟಿ) ದಿ: 26-04-2026 ರಂದು ಧಾರವಾಡ ಹೊಸ ಬಸ್ ನಿಲ್ದಾಣದ ಹತ್ತಿರ ಕಳೆದುಕೊಂಡಿರುತ್ತೇನೆ. ಈ ಕುರಿತು ಹುಬ್ಬಳ್ಳಿ-ಧಾರವಾಡ ಸಿಟಿ ಪೊಲೀಸ್ ಠಾಣೆಯಲ್ಲಿ (No:2176855/2026) ದಾಖಲಿಸಿರುತ್ತೇನೆ. ಈ ದಾಖಲೆ ಯಾರಿಗಾದರು ಸಿಕ್ಕಲ್ಲಿ ಈ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಲು ವಿನಂತಿ.
**ರಾಘವೇಂದ್ರ ಎಸ್. ಶೆಟ್ಟಿ**
ದಂಡಿನ ಓಣಿ, ಅಂಬಾ ಭವಾನಿ ಗುಡಿ ಹತ್ತಿರ, ಧಾರವಾಡ. M: 9620879754

# ಉ.ಕ.ಜಿಲ್ಲೆಯ ಪರಿಸರ ರಕ್ಷಣೆಗೆ ಮುಂದಾಗಿ

## ಪಶ್ಚಿಮ ಘಟ್ಟದ ಪರಿಸರ ಅರಣ್ಯ, ಅಧ್ಯಯನ ಕುರಿತ ಕಾರ್ಯಾಗಾರ | ಶಾಸಕ ಶಿವರಾಮ್ ಹೆಬ್ಬಾರ್ ಸಲಹೆ


ಪಟ್ಟಣದ ತಾಲೂಕು ಪಂಚಾಯತ್ ಸಭಾಭವನದಲ್ಲಿ ಅಂತಾರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ ನಿಮಿತ್ತ ಹಮ್ಮಿಕೊಂಡಿದ್ದ ಪಶ್ಚಿಮ ಘಟ್ಟದ ಜೀವವೈವಿಧ್ಯ ಪರಿಸರ ಕುರಿತ ರಾಜ್ಯಮಟ್ಟದ ಕಾರ್ಯಾಗಾರವನ್ನು ಶಾಸಕ ಶಿವರಾಮ್ ಹೆಬ್ಬಾರ್ ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು.

**ಯಲ್ಲಾಪುರ:** ಪಂಚ ನದಿಗಳಿಗೆ ಜನ್ಮಕೊಟ್ಟ, 6 ಡ್ಯಾಮ್‌ಗಳಿಗೆ ಶಕ್ತಿಕೊಟ್ಟ, ರಾಜ್ಯದಲ್ಲಿಯೇ ಅತೀ ಹೆಚ್ಚು ವಿದ್ಯುತ್ ಉತ್ಪಾದಿಸುವ ಉತ್ತರ ಕನ್ನಡ ಜಿಲ್ಲೆಯ ತ್ಯಾಗದ ಪರಿಣಾಮ ಮಾತ್ರ ಯಕ್ಷ ಪ್ರಶ್ನೆಯಾಗಿದೆ ಎಂದು ಶಾಸಕ ಶಿವರಾಮ್ ಹೆಬ್ಬಾರ್ ಹೇಳಿದರು.

ಬುಧವಾರ ಪಟ್ಟಣದ ತಾಲೂಕು ಪಂಚಾಯತ್ ಸಭಾಭವನದಲ್ಲಿ ಜೀವ ವೈವಿಧ್ಯ ಮಂಡಳಿ, ತಾಲೂಕು ಪಂಚಾಯತ ಜೀವವೈವಿಧ್ಯ ಸಮೀತಿ, ವೃಕ್ಷ ಲಕ್ಷ ಆಂದೋಲನ ಇವರ ಆಶ್ರಯದಲ್ಲಿ ಅಂತಾರಾಷ್ಟ್ರೀಯ ಜೀವವೈವಿಧ್ಯ ದಿನಾಚರಣೆ ನಿಮಿತ್ತ ಹಮ್ಮಿಕೊಂಡಿದ್ದ ಪಶ್ಚಿಮ ಘಟ್ಟದ ಜೀವವೈವಿಧ್ಯ ಪರಿಸರ ಅರಣ್ಯ, ಅಧ್ಯಯನಗಳು ಕುರಿತ ರಾಜ್ಯಮಟ್ಟದ ಒಂದು ದಿನದ ಕಾರ್ಯಾಗಾರವನ್ನು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿ ಮಾತನಾಡಿ, ಬೇಡ್ತಿ ಆರಂಭದಿಂದ ಇಂದಿನವರೆಗೂ ಹತ್ತು ಹಲವು ಹೋರಾಟ ನಡೆದಿದೆ. ಆದರೆ ಪಕ್ಷಾತೀತವಾಗಿ ಧರ್ಮಪೀಠದ ನೇತೃತ್ವದಲ್ಲಿ ನಡೆಸಿದ ಹೋರಾಟ ಯಶಸ್ವಿಯಾಗಿದ್ದು, ಅದರಂತೆ ಇದೀಗ ಬೇಡ್ತಿ ನದಿ ತಿರುವು ಹೋರಾಟ ಸ್ವಾಮೀಜಿಯವರ ನೇತೃತ್ವದಲ್ಲಿ ಗಟ್ಟಿ ಹೆಜ್ಜೆ ಇಟ್ಟಿದ್ದು, ಅದು ಯಶಸ್ವಿಯಾಗುತ್ತದೆ ಎಂದರಲ್ಲದೇ ಜಿಲ್ಲೆಗೆ ದೊಡ್ಡದೊಡ್ಡ ಯೋಜನೆಗಳು ಬಂದಾಗ ಪಕ್ಷಾತೀತವಾಗಿ ಒಂದಾಗಿ ಅದನ್ನು ವಿರೋಧಿಸುವ ಮೂಲಕ ಇನ್ನಾದರೂ ಜಿಲ್ಲೆಯ ಪರಿಸರ ಮೇಲಿನ ಅತ್ಯಾಚಾರವನ್ನು ನಿಲ್ಲಿಸಬೇಕು.

ಜನ ಸಾಮಾನ್ಯರು ಮರ ಕಡಿಯುವದು ನಮ್ಮ ಕೆಲಸ, ಬೆಳೆಸುವದು ಅರಣ್ಯ ಇಲಾಖೆ ಜವಾಬ್ದಾರಿ ಎಂದು ಭಾವಿಸದೇ ಅರಣ್ಯ ಸಂರಕ್ಷಣೆ ಪ್ರತಿಯೊಬ್ಬರ ಹೊಣೆಯಾಗಿದೆ. ಜಿಲ್ಲೆಯ ಪರಿಸರ ಪರಿಸ್ಥಿತಿ ಹಿನ್ನೊಟ, ಮುಂದೆ ನಡೆಯಬಹುದಾದ ಘಟನೆ ಕುರಿತ ಚರ್ಚೆಗೆ ಈ ಕಾರ್ಯಗಾರ ಮಹತ್ವದ ವೇದಿಕೆಯಾಗಲಿದೆ ಎಂದರು.

ಡಿಎಫ್‌ಒ ಆಜೀಜ್ ಶೇಖ, ತಾ ಪಂ ಆಡಳಿತಧಿಕಾರಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ವೃಕ್ಷ ಲಕ್ಷ ಆಂದೋಲನದ ಮುಖ್ಯಸ್ಥ ಅನಂತ ಹೆಗಡೆ ಅಶೀಸರ ಪ್ರಾಸ್ತವಿಕ ಮಾತನಾಡಿದರು.

ಇದೇ ಸಂದರ್ಭದಲ್ಲಿ ಜೀವ ವೈವಿಧ್ಯ ರಕ್ಷಣೆಗೆ ಕೊಡುಗೆ ನೀಡಿರುವ ಸಾಧಕರಿಗೆ ಸನ್ಮಾನ ನಡೆಯಿತು. ಪಶ್ಚಿಮ ಘಟ್ಟದ ಅಧ್ಯಯನ ಕುರಿತು ಪರಿಸರ ವಿಜ್ಞಾನಿ ಡಾ.ಕೇಶವ ಕುರ್ಸೆ ಡಾ.ಟಿ.ವಿ.ರಾಮಚಂದ್ರ, ಡಾ.ವಿ.ಎನ್. ನಾಯ್ಕ, ಡಾ.ಪ್ರಕಾಶ ಮೇಸ್ತ, ಡಾ.ಬಾಲಚಂದ್ರ ಸಾಯಿಮನೆ, ಡಾ.ಪ್ರೀತಮ್ ಬೆಂಗಳೂರು , ಡಾ.ಶಿವಾನಂದ್ ಭಟ್ ಸಾಗರ್ ವಿಷಯ ಮಂಡನೆ ಮಾಡಿದರು.

ಕೆ.ಎಸ್.ಭಟ್ ಅನಗೋಡ್ ನಿರ್ವಹಿಸಿದರು. ಶ್ರೀಲತಾ ಹೆಗಡೆ ಹಾಗೂ ಸಂಗಡಿಗರು ಪ್ರಾರ್ಥಿಸಿದರು. ತಾಪಂ ಕಾರ್ಯನಿರ್ವಹಣಾಧಿಕಾರಿ ರಾಜೇಶ್ ಧನವಾಡಕರ್ ಸ್ವಾಗತಿಸಿದರು. ನರಸಿಂಹ ಸಾತೊಡ್ಡಿ ವಂದಿಸಿದರು. ಇದೆ ಸಂದರ್ಭದಲ್ಲಿ ವಿವಿಧ ಗಿಡಮೂಲಿಕೆ, ಭತ್ತದ ತಳಿ, ಅರಣ್ಯ ಉತ್ಪನ್ನ ಗಳ ವಸ್ತು ಪ್ರದರ್ಶನ ನಡೆಯಿತು.

> ಇಲ್ಲಿನ ಅಪಾರವಾದ ಅರಣ್ಯ ಸಂಪತ್ತನ್ನು ಉಳಿಸಿಕೊಳ್ಳಬೇಕು. ನಾವು ಹೇಗೆ ಉತ್ತಮ ವಾತಾವರಣದಲ್ಲಿ ಬೆಳೆದಿದ್ದೇವೆಯೋ ಅದೇ ರೀತಿ ಮುಂದಿನ ಪೀಳಿಗೆಗೆ ದೊರಯುವಂತೆ ಕಾಪಿಟ್ಟು ಕೊಳ್ಳಬೇಕು. ಮುಂದಿನ ದಿನಗಳಲ್ಲಿ ಗ್ರಾಮ ಪಂಚಾಯತಗೊಂದರಂತೆ ಜೀವಿವೈವಿಧ್ಯ ಪಾರ್ಕ್ ನಿರ್ಮಿಸುವ ಉದ್ದೇಶವಿದೆ.
> -ವಡ್ಡಾಳ ಜಗದೀಶ, ಅಧ್ಯಕ್ಷ, ಕರ್ನಾಟಕ ಜೀವ ವೈವಿಧ್ಯ ಮಂಡಳಿ

> ನಮ್ಮ ಪೂರ್ವಜರು ಪ್ರತಿಯೊಂದು ಮರವನ್ನು ಪೂಜಿಸುತ್ತಿದ್ದರು. ಆದರೆ ಅವಶ್ಯ ಇದ್ದರಷ್ಟೇ ಬಳಸುತ್ತಿದ್ದರು. ಜಗತ್ತಿನಲ್ಲಿ 36 ಜೀವವೈವಿಧ್ಯತೆಯ ಹಾಟ್ ಸ್ಪಾಟ್‌ಗಳಿದ್ದು ಭಾರತದಲ್ಲಿಯೇ 4 ಇದ್ದು ದೇಶದ ಕೀರ್ತಿ ಹೆಚ್ಚಿಸಿದೆ. ನಮ್ಮ ಜಿಲ್ಲೆಯಲ್ಲಿಯೇ ಶೇ 20ರಷ್ಟು ಜೀವ ವೈವಿಧ್ಯತೆ ಇದೆ. ಇದನ್ನೆಲ್ಲಾ ಅರಿತು ಅದನ್ನು ಸಂರಕ್ಷಣೆ ಮಾಡಿಕೊಳ್ಳಬೇಕು.
> - ಹೀರಾಲಾಲ್, ಕೆನರಾ ವೃತ್ತ ಅರಣ್ಯ ಸಂರಕ್ಷಣಾಧಿಕಾರಿ

# ಸರಕಾರದ ಯೋಜನೆಗಳು ಎಲ್ಲರಿಗೂ ತಲುಪಲಿ

ಸಭೆಯ ಅಧ್ಯಕ್ಷತೆ ವಹಿಸಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯದ ನಿರ್ದೇಶಕ ಸಿ.ಕೆ.ಮಲ್ಲಪ್ಪ ಮಾತನಾಡಿದರು.

**ಕಾರವಾರ:** ಸರಕಾರದ ಯೋಜನೆಗಳು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪಬೇಕು. ಆ ನಿಟ್ಟಿನಲ್ಲಿ ಸಾಮಾಜಿಕ ಪರಿಶೋಧನಾ ತಂಡದ ಕಾರ್ಯ ಅತ್ಯಂತ ಅವಶ್ಯಕ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಾಮಾಜಿಕ ಪರಿಶೋಧನಾ ನಿರ್ದೇಶನಾಲಯದ ನಿರ್ದೇಶಕ ಸಿ.ಕೆ. ಮಲ್ಲಪ್ಪ ಹೇಳಿದರು.

ಅವರು ಬುಧವಾರ ಮುಂಡಗೋಡ ತಾಲೂಕಿನ ಕಾತೂರು ಗ್ರಾಮ ಪಂಚಾಯತಿಯಲ್ಲಿ ಸಾಮಾಜಿಕ ಪರಿಶೋಧನಾ ಕಾರ್ಯದ ಪರಿಶೀಲನೆ ಹಾಗೂ ಜಿಲ್ಲೆಯ ಎಲ್ಲ ತಾಲೂಕುಗಳ ಸಂಪನ್ಮೂಲ ವ್ಯಕ್ತಿಗಳು ಮತ್ತು ಗ್ರಾಮ ಸಂಪನ್ಮೂಲ ವ್ಯಕ್ತಿಗಳ ಸಾಮಾಜಿಕ ಪರಿಶೋಧನಾ ಕಾರ್ಯದ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಸಭೆಯಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ, 15ನೇ ಹಣಕಾಸು ಸೇರಿದಂತೆ ಕೇಂದ್ರ ಪುರಸ್ಕೃತ ವಿವಿಧ ಯೋಜನೆಗಳ ಪ್ರಮುಖ ಕಡತಗಳು ಹಾಗೂ ದಾಖಲೆಗಳನ್ನು ಪರಿಶೀಲಿಸಿದರು.

ಇದೇ ವೇಳೆ ಜಿಲ್ಲೆಯ ಎಲ್ಲ ತಾಲೂಕುಗಳ ಸಂಪನ್ಮೂಲ ವ್ಯಕ್ತಿಗಳು ಹಾಗೂ ಗ್ರಾಮ ಸಂಪನ್ಮೂಲ ವ್ಯಕ್ತಿಗಳ ಸಾಮಾಜಿಕ ಪರಿಶೋಧನಾ ಕಾರ್ಯದ ಪ್ರಗತಿ ಪರಿಶೀಲಿಸಿ, ಸರಕಾರ ಯೋಜನೆಗಳ ಅನುಷ್ಠಾನದಲ್ಲಿ ಪಾರದರ್ಶಕತೆ, ಕಾಮಗಾರಿಗಳ ಗುಣಮಟ್ಟ ಪರಿಶೀಲನೆ, ದಾಖಲೆಗಳ ಪರಿಶೀಲನೆ, ವಿಶೇಷ ಗ್ರಾಮ ಸಭೆ ಆಯೋಜನೆ, ಜನರ ಸಹಭಾಗಿತ್ವ, ಕ್ರಮ ಮತ್ತು ವಸೂಲಾತಿ ಸೇರಿದಂತೆ ಯೋಜನೆಗಳನ್ನು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ತಲುಪಿಸುವಲ್ಲಿ ಮತ್ತು ಯೋಜನೆಗಳ ಬಗ್ಗೆ ಅರಿವು ಮೂಡಿಸುವಲ್ಲಿ ಸಾಮಾಜಿಕ ಪರಿಶೋಧನಾ ಸಂಪನ್ಮೂಲ ವ್ಯಕ್ತಿಗಳು ಮೈಗೂಡಿಸಿಕೊಳ್ಳಬೇಕಾದ ಮತ್ತು ಅನುಸರಿಸಬೇಕಾದ ಕ್ರಮಗಳ ಬಗ್ಗೆ ಮಾರ್ಗದರ್ಶನ ಹಾಗೂ ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು.

ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಮಹಾತ್ಮ ಗಾಂಧಿ ನರೇಗಾ ಯೋಜನೆಯಡಿ ಅನುಷ್ಠಾನವಾಗುತ್ತಿರುವ ಬಸನಕಟ್ಟೆ ಕೆರೆ ಹೂಳೆತ್ತುವ ಕಾಮಗಾರಿ ಸ್ಥಳಕ್ಕೆ ಭೇಟಿ ನೀಡಿ, ತಾಂತ್ರಿಕ ಸಂಯೋಜಕರು ಮತ್ತು ತಾಂತ್ರಿಕ ಸಹಾಯಕರೊಂದಿಗೆ ಕಾಮಗಾರಿ ನಿರ್ವಹಣೆ ಕುರಿತು ಸಮಾಲೋಚಿಸಿ, ಅಗತ್ಯ ಸಲಹೆ ಸೂಚನೆಗಳನ್ನು ನೀಡಿದರು. ಇದೇ ವೇಳೆ ಕೂಲಿಕಾರರೊಂದಿಗೆ ಸಂವಾದ ನಡೆಸಿ, ಅಭಿಪ್ರಾಯ ಸಂಗ್ರಹಿಸಿದರು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿ ಟಿ.ವಾಯ್. ದಾಸನಕೊಪ್ಪ, ಸಹಾಯಕ ನಿರ್ದೇಶಕ (ಗ್ರಾಉ) ಸೋಮಲಿಂಗಪ್ಪ ಛಬ್ಬಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಸಹಾಯಕ ಅಭಿಯಂತರರು ದೀಪಾ ಎಸ್. ಶೆಡಗೇರಿ, ಅನುಷ್ಠಾನ ಇಲಾಖೆಯ ಅಧಿಕಾರಿಗಳು, ಗ್ರಾಮ ಪಂಚಾಯತ್ ಆಡಳಿತಾಧಿಕಾರಿಗಳು, ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು, ಸಾಮಾಜಿಕ ಪರಿಶೋಧನೆ ಜಿಲ್ಲಾ ಸಮಾಲೋಚಕರು, ತಾಲೂಕು ಮತ್ತು ಗ್ರಾಮ ಪಂಚಾಯತಿ ಮಟ್ಟದ ಸಂಪನ್ಮೂಲ ವ್ಯಕ್ತಿಗಳು, ಮನರೇಗಾ ತಾಂತ್ರಿಕ ಸಿಬ್ಬಂದಿ ಹಾಗೂ ಕೂಲಿಕಾರರು ಉಪಸ್ಥಿತರಿದ್ದರು.

# ಪರಿಸರ ದಿನಾಚರಣೆಗೆ ರೀಲ್ಸ್ ಸ್ಪರ್ಧೆ

**ಕಾರವಾರ:** ವಿಶ್ವ ಪರಿಸರ ದಿನಾಚರಣೆ-2026ರ ಅಂಗವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಕಾರವಾರ ಪ್ರಾದೇಶಿಕ ಕಚೇರಿವತಿಯಿಂದ, ಪರಿಸರ ಜಾಗೃತಿ ಹಾಗೂ ಹವಾಮಾನ ಕ್ರಮಗಳಿಗೆ ಸಾರ್ವಜನಿಕರ ಸಕ್ರಿಯ ಪಾಲ್ಗೊಳ್ಳುವಿಕೆಯನ್ನು ಉತ್ತೇಜಿ ಸುವ ಉದ್ದೇಶದಿಂದ , ವಿಶೇಷ ರೀಲ್ಸ್ ಸ್ಪರ್ಧೆಯನ್ನು ಆಯೋಜಿಸಲಾಗಿದೆ.

'ಪ್ರಕೃತಿಯಿಂದ ಪ್ರೇರಿತ, ಉತ್ತಮ ಹವಾಮಾನಕ್ಕಾಗಿ, ಮುಂದಿನ ಭವಿಷ್ಯಕ್ಕಾಗಿ' ಎಂಬ ಧ್ಯೇಯ ವಾಕ್ಯದಡಿ ನಡೆಯಲಿರುವ ಈ ಸ್ಪರ್ಧೆಯ ಮೂಲಕ ಪರಿಸರ ಸಂರಕ್ಷಣೆ, ಸುಸ್ಥಿರ ಜೀವನಶೈಲಿ, ಹವಾಮಾನ ಬದಲಾವಣೆಯ ಬಗ್ಗೆ ಅರಿವು ಹಾಗೂ ನೈಸರ್ಗಿಕ ಸಂಪನ್ಮೂಲಗಳ ಸಂರಕ್ಷಣೆಯ ಕುರಿತು ಜನರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಈ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಜಿಲ್ಲೆಯಲ್ಲಿ ವಾಸಿಸುವ ವಿದ್ಯಾರ್ಥಿಗಳು, ಶಿಕ್ಷಕರು, ಸಂಶೋಧಕರು ಮತ್ತು ಸಂಶೋಧನಾ ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಸ್ಪರ್ದೆಯಲ್ಲಿ ಭಾಗವಹಿಸಲು ಅರ್ಹರು. ಆಯ್ಕೆ ಸಮಿತಿಯ ನಿರ್ಧಾರವೇ ಅಂತಿಮ ವಾಗಿರುತ್ತದೆ.

ಜಿಲ್ಲೆಯ ನಿವಾಸಿಗಳಿಗೆ ಮುಕ್ತವಾಗಿರುವ ಈ ಸ್ಪರ್ಧೆಯಲ್ಲಿ ಭಾಗವಹಿ ಸುವವರು ತಮ್ಮ ಸೃಜನಶೀಲತೆ ಯನ್ನು ಬಳಸಿಕೊಂಡು 60 ಸೆಕೆಂಡುಗಳಿಂದ 120 ಸೆಕೆಂಡುಗಳ ಅವಧಿಯ ಮೂಲ ರೀಲ್ಸ್ ವಿಡಿಯೊ ಗಳನ್ನು ಸಿದ್ಧಪಡಿಸಿ ಸಲ್ಲಿಸಬೇಕು. ಎಂಪಿ4 ಅಥವಾ ಎಂಒವಿನಲ್ಲಿ ಕಳುಹಿಸಬೇಕು. ಸಲ್ಲಿಕೆಯಾಗುವ ವಿಡಿಯೊಗಳು ಸ್ಪರ್ಧೆಯ ಅಧಿಕೃತ ವಿಷಯ ವಸ್ತುವಿಗೆ ಹೊಂದಿಕೆಯಾಗಿರಬೇಕು. ಅಸಭ್ಯ, ಆಕ್ರಮ ಣಕಾರಿ, ಮಾನಹಾನಿಕಾರಕ ಅಥವಾ ಧಾರ್ಮಿಕವಾಗಿ ಸೂಕ್ಷ್ಮ ವಿಷಯ ಗಳನ್ನು ಒಳಗೊಂಡಿರಬಾರದು ಎಂದು ಮಂಡಳಿ ಸ್ಪಷ್ಟಪಡಿಸಿದೆ.

ಸ್ಪರ್ಧೆಯಲ್ಲಿ ವಿಜೇತರಿಗಾಗಿ ಆಕರ್ಷಕ ನಗದು ಬಹುಮಾನಗಳನ್ನು ಘೋಷಿಸಲಾಗಿದ್ದು, ಪ್ರಥಮ 3,000, ದ್ವಿತೀಯ 2,00 ಹಾಗೂ ತೃತೀಯ 1,000 ಬಹುಮಾನ ನೀಡಲಾಗುತ್ತದೆ. ಭಾಗವಹಿಸಲು ಇಚ್ಛಿಸುವ ಆಸಕ್ತರು ತಾವು ಸಿದ್ಧಪಡಿಸಿದ ರೀಲ್ ಲಿಂಕ್‌ನ್ನು ವಾಟ್ಸ್ ಆಫ್ ಅಥವಾ ಈ ಮೇಲ್‌ಗೆ ಹೆಸರು, ವಯಸ್ಸು, ಸಂಪರ್ಕ ಸಂಖ್ಯೆ ಹಾಗೂ ಸ್ಥಳದ ವಿವರಗಳೊಂದಿಗೆ ಕಳುಹಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ 9980081886 ಸಂಖ್ಯೆಗೆ ವಾಟ್ಸಾಪ್ ಮೂಲಕ ಸಂಪರ್ಕಿಸಬಹುದು. ರೀಲ್ಸ್ ಕಳುಹಿಸಲು ಜೂ. 2 ಕೊನೆಯ ದಿನವಾಗಿದೆ. ಜೂನ್ 5 ರ ವಿಶ್ವ ಪರಿಸರ ದಿನಾಚರಣೆಯ ಸಮಾರಂಭದಲ್ಲಿ ಫಲಿತಾಂಶ ಪ್ರಕಟಣೆಯಾಗಲಿದೆ.

ಡಿಜಿಟಲ್ ವೇದಿಕೆಗಳ ಮೂಲಕ, ವಿಶೇಷವಾಗಿ ಯುವಜನರ ಪಾಲ್ಗೊಳ್ಳು ವಿಕೆಯಿಂದ ಪರಿಸರ ಸಂರಕ್ಷಣೆಯ ಸಂದೇಶವನ್ನು ಸಮಾಜದ ವಿವಿಧ ವರ್ಗಗಳಿಗೆ ತಲುಪಿಸಿ, ಹಸಿರು ಭವಿಷ್ಯ ನಿರ್ಮಾಣದತ್ತ ಸಮೂಹ ಪ್ರಯತ್ನಕ್ಕೆ ಉತ್ತೇಜನ ನೀಡುವುದು ಈ ಸ್ಪರ್ಧೆಯ ಪ್ರಮುಖ ಉದ್ದೇಶವಾಗಿದೆ ಎಂದು ಪರಿಸರ ಅಧಿಕಾರಿ ಪ್ರಕಣೆಯಲ್ಲಿ ತಿಳಿಸಿದ್ದಾರೆ.

ರಾಷ್ಟ್ರೀಯ ಈಡಿಗ ಮಹಾಮಂಡಳಿ ಆಗ್ರಹ | ಪ್ರಣವಾನಂದ ಸ್ವಾಮೀಜಿ ನೇತೃತ್ವದಲ್ಲಿ ಹೋರಾಟ

# ದುರಂತದಲ್ಲಿ ಮೃತರ ಕುಟುಂಬಕ್ಕೆ 10ಲಕ್ಷ ನೀಡಿ

ಗೋಕರ್ಣದ ಪುಣ್ಯಾಶ್ರಮದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ದೇವರಾಜ ನಾಯ್ಕ ಮಾತನಾಡಿದರು.

**ಗೋಕರ್ಣ:** ಜಿಲ್ಲೆಯ ಭಟ್ಕಳ ತಾಲೂಕಿನ ಅಳ್ವೆಕೋಡಿ ಹತ್ತಿರದ ನದಿಯಲ್ಲಿ ನಡೆದ ಜಲ ದುರಂತದಲ್ಲಿ 11 ಜನರು ಮೃತಪಟ್ಟಿದ್ದಾರೆ. ಇವರು ಕಪ್ಪೆಚಿಪ್ಪು ತೆಗೆಯಲು ಹೋದ ಸಂದರ್ಭದಲ್ಲಿ ಮಳೆಯ ಪರಿಣಾಮ ಒಮ್ಮೆಲೆ ನೀರು ಏರಿಕೆಯಾದ್ದರಿಂದ ಈ ದುರಂತ ನಡೆದಿದೆ. ಹೀಗಾಗಿ ರಾಜ್ಯ ಸರಕಾರ ಇವರಿಗೂ ಮೀನುಗಾರರಂತೆ 5 ಲಕ್ಷದ ಬದಲಾಗಿ 10 ಲಕ್ಷ ಪರಿಹಾರ ನೀಡಬೇಕು ಎಂದು ರಾಷ್ಟ್ರೀಯ ಈಡಿಗ ಮಹಾಮಂಡಳಿಯ ಜಿಲ್ಲಾಧ್ಯಕ್ಷ ದೇವರಾಜ ಡಿ. ನಾಯ್ಕ ಆಗ್ರಹಿಸಿದರು.

ಇಲ್ಲಿಯ ಪುಣ್ಯಾಶ್ರಮದಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಒಂದೇ ಕುಟುಂಬದ ಹಲವರು ಸೇರಿ 11 ಜನರು ಸಾವನ್ನಪ್ಪಿರುವುದು ನಿಜಕ್ಕೂ ದುರಂತ. ಈಗ ಆ ಕುಟುಂಬದ ಮಕ್ಕಳು ಜೀವನ ನಡೆಸಬೇಕಾಗಿದೆ. ರಾಜ್ಯ ಸರಕಾರ ತಲಾ 5 ಲಕ್ಷ ರೂ. ಪರಿಹಾರ ಘೋಷಿಸಿದೆ. ಹಾಗೇ ಕೇಂದ್ರ ಸರಕಾರ ತಲಾ 2 ಲಕ್ಷ ರು. ಘೋಷಿಸಿದೆ. ರಾಜ್ಯ ಸರ್ಕಾರ 10 ಲಕ್ಷ ನೀಡದಿದ್ದಲ್ಲಿ ರಾಷ್ಟ್ರೀಯ ಈಡಿಗ ಮಹಾಮಂಡಳಿಯ ಡಾ. ಶ್ರೀ ಪ್ರಣವಾನಂದ ಸ್ವಾಮೀಜಿ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದು ಎಚ್ಚರಿಸಿದರು.

ರಾಷ್ಟ್ರೀಯ ಈಡಿಗ ಮಹಾಮಂಡಳಿ ಭಟ್ಕಳ ತಾಲೂಕು ಅಧ್ಯಕ್ಷ ಶ್ರೀಧರ ನಾಯ್ಕ ಮಾತನಾಡಿ, ಯಾವುದೇ ಸಮುದಾಯದವರು ಯಾವ ಕಸುಬನ್ನು ಮಾಡುತ್ತಾರೋ ಅಂತವರು ದುರಂತಕ್ಕೆ ಒಳಗಾದಾಗ ಆ ಕಸುಬಿಗೆ ನೀಡುವ ಪರಿಹಾರ ನೀಡಬೇಕು. ರಾಜ್ಯ ಸರಕಾರ ಈ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳಬೇಕು. ಇಲ್ಲದಿದ್ದಲ್ಲಿ ಹೋರಾಟ ಅನಿವಾರ್ಯವಾಗಲಿದೆ ಎಂದರು.

ರಾಷ್ಟ್ರೀಯ ಈಡಿಗ ಮಹಾಮಂಡಳಿಯ ಅಂಕೋಲಾ ತಾಲೂಕು ಪ್ರಧಾನ ಕಾರ್ಯದರ್ಶಿ ನಾಗರಾಜ ಮಂಜಗುಣಿ ಮಾತನಾಡಿ, ಈ ದುರ್ಘಟನೆಯ ಸಂದರ್ಭದಲ್ಲಿ ದೂರದಿಂದಲೇ ಗಮನಿಸಿದ ಯುವಕ ಗಿರೀಶ ದಿನಕರ ಮೊಗೇರ, ತನ್ನ ದೋಣಿಯನ್ನು ತಕ್ಷಣ ಅಲ್ಲಿಗೆ ತೆಗೆದುಕೊಂಡು ಹೋಗಿ ಇಬ್ಬರನ್ನು ರಕ್ಷಿಸಿದ್ದಾನೆ. ಇಲ್ಲದಿದ್ದಲ್ಲಿ ಅವರು ಕೂಡ ಸಾವಿನ ದವಡೆಗೆ ಒಳಗಾಗುತ್ತಿದ್ದರು. ಹೀಗಾಗಿ ಗಿರೀಶ ಮೊಗೇರ ಅವರಿಗೆ ರಾಜ್ಯ ಸರಕಾರ ಶೌರ್ಯ ಪ್ರಶಸ್ತಿ ನೀಡಬೇಕು ಎಂದರು.

ಈ ಸಂದರ್ಭದಲ್ಲಿ ರಾಷ್ಟ್ರೀಯ ಈಡಿಗ ಮಹಾಮಂಡಳಿಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂತೋಷ ನಾಯ್ಕ ಗಂಗಾವಳಿ, ಅಂಕೋಲಾ ಘಟಕದ ಅಧ್ಯಕ್ಷ ದಾಮೋದರ ಜಿ. ನಾಯ್ಕ, ವರ್ಧನ ನಾಯ್ಕ ಬೇಲೆಕಾನ, ಅವಿನಾಶ ನಾಯ್ಕ ಮಧುರವಳ್ಳಿ ಇತರರಿದ್ದರು.

> ರಾಜ್ಯದಲ್ಲಿ ಮೀನುಗಾರಿಕೆ ಸಂದರ್ಭದಲ್ಲಿ ಮೀನುಗಾರರು ದುರಂತಕ್ಕೀಡಾದರೆ ರಾಜ್ಯ ಸರಕಾರದಿಂದ 10 ಲಕ್ಷ ರು. ನೀಡಲಾಗುತ್ತದೆ. ಈ ಘಟನೆಯನ್ನು ಜಾತಿಯಿಂದ ಅಳೆಯದೇ ಕಸುಬಿನಿಂದ ಅಳೆದು ತಲಾ 10 ಲಕ್ಷ ನೀಡಬೇಕು.
> - ದೇವರಾಜ ಡಿ. ನಾಯ್ಕ, ರಾಷ್ಟ್ರೀಯ ಈಡಿಗ ಮಹಾಮಂಡಳಿ ಜಿಲ್ಲಾಧ್ಯಕ್ಷ

# ಚಂಡೀಗಢದ ರಾಷ್ಟ್ರೀಯ ಸಂಸ್ಥೆಯಿಂದ ಕೃತಕ ಬುದ್ಧಿಮತ್ತೆ ತರಬೇತಿ ಯಶಸ್ವಿ

**ಹಳಿಯಾಳ:** ಬೋಧನೆ ಹಾಗೂ ಕಲಿಕಾ ಪ್ರಕ್ರಿಯೆಯಲ್ಲಿ ಶ್ರೇಷ್ಠತೆ ಕಾಯ್ದುಕೊಳ್ಳಲು ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದ ಬಳಕೆ ಕುರಿತಾಗಿ ಇಲ್ಲಿನ ಕೆಎಲ್‌ಎಸ್ ವಿಡಿಐಟಿ ಕಾಲೇಜಿನ ಪ್ರಾಧ್ಯಾಪಕರಿಗೆ ಆಯೋಜಿಸಲಾಗಿದ್ದ ಒಂದು ವಾರದ ವಿಶೇಷ ತರಬೇತಿ ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ಮುಕ್ತಾಯಗೊಂಡಿದೆ.

ಚಂಡೀಗಢದ ಪ್ರತಿಷ್ಠಿತ 'ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಿಕಲ್ ಟೀಚರ್ಸ್ ಟ್ರೈನಿಂಗ್ ಅಂಡ್ ರಿಸರ್ಚ್' ಸಂಸ್ಥೆ ಹಾಗೂ ಹಳಿಯಾಳದ ಕೆಎಲ್‌ಎಸ್ ವಿಡಿಐಟಿ ಕಾಲೇಜಿನ ಸಂಯುಕ್ತ ಆಶ್ರಯದಲ್ಲಿ ಆನ್‌ಲೈನ್ ಮುಖಾಂತರ ಈ ತರಬೇತಿಯನ್ನು ಹಮ್ಮಿಕೊಳ್ಳಲಾಗಿತ್ತು. ನವದೆಹಲಿಯ ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ ಮಾನ್ಯತೆ ಪಡೆದಿದ್ದ ಈ ಕಾರ್ಯಕ್ರಮದಲ್ಲಿ ಕಾಲೇಜಿನ 60 ಪ್ರಾಧ್ಯಾಪಕರು ಸಕ್ರಿಯವಾಗಿ ಪಾಲ್ಗೊಂಡು ತರಬೇತಿ ಪಡೆದಿದ್ದಾರೆ.

ಈ ತರಬೇತಿ ಕಾರ್ಯಕ್ರಮದಲ್ಲಿ ಪ್ರಮುಖವಾಗಿ ಶಿಕ್ಷಣ ಮತ್ತು ಸಂಶೋಧನೆ, ಪರೀಕ್ಷೆ ಹಾಗೂ ಮೌಲ್ಯಮಾಪನ ಪ್ರಕ್ರಿಯೆಗಳಲ್ಲಿ ಕೃತಕ ಬುದ್ಧಿಮತ್ತೆಯನ್ನು ಸಮರ್ಪಕವಾಗಿ ಬಳಸುವ ವಿಧಾನಗಳ ಕುರಿತು ವಿಸ್ತೃತವಾಗಿ ತಿಳಿಸಿಕೊಡಲಾಯಿತು. ಅಲ್ಲದೆ, ವಿದ್ಯಾರ್ಥಿಗಳಿಗೆ ತಾಂತ್ರಿಕ ವಿಷಯಗಳ ಆಳವಾದ ಜ್ಞಾನವನ್ನು ನೀಡಲು ಎಐ ತಂತ್ರಜ್ಞಾನದ ಮೂಲಕ ಆಕರ್ಷಕ ಪ್ರೆಸೆಂಟೇಶನ್ ಹಾಗೂ ವಿಡಿಯೋಗಳ ತಯಾರಿಕೆ ಮತ್ತು ವಿವಿಧ ಜನರೇಟಿವ್ ಎಐ ಪರಿಕರಗಳ ಬಳಕೆಯ ಕುರಿತು ಪ್ರಾಧ್ಯಾಪಕರಿಗೆ ಪ್ರಾಯೋಗಿಕ ಅರಿವು ಮೂಡಿಸಲಾಯಿತು.

ಬುಧವಾರ ಜರುಗಿದ ಸಮಾರೋಪ ಸಮಾರಂಭದಲ್ಲಿ ತರಬೇತಿ ಪೂರೈಸಿದ ಪ್ರಾಧ್ಯಾಪಕರಿಗೆ ಪ್ರಮಾಣಪತ್ರ ವಿತರಿಸಿ ಮಾತನಾಡಿದ ಪ್ರಾಚಾರ್ಯ ಡಾ. ವಿ.ಎ. ಕುಲಕರ್ಣಿ ಅವರು, ಆಧುನಿಕ ಕೃತಕ ಬುದ್ಧಿಮತ್ತೆ ತಂತ್ರಜ್ಞಾನವನ್ನು ಬಳಸಿಕೊಂಡು ವಿದ್ಯಾರ್ಥಿಗಳಿಗೆ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಮನಮುಟ್ಟುವಂತೆ ಬೋಧಿಸಲು ಮತ್ತು ಅವರ ಕಲಿಕಾ ಸಾಮರ್ಥ್ಯವನ್ನು ಹೆಚ್ಚಿಸಲು ಈ ತರಬೇತಿ ಪ್ರತಿಯೊಬ್ಬ ಪ್ರಾಧ್ಯಾಪಕರಿಗೂ ಸಾಥ್ ನೀಡಲಿದೆ ಎಂದು ಆಶಯ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ಕಾಲೇಜಿನ ಪ್ರಮುಖ ಪ್ರಾಧ್ಯಾಪಕರಾದ ಪ್ರೊ. ಗುರುರಾಜ್ ಸತ್ತಿಗೇರಿ, ಡಾ. ಶೈಲೇಶ್ ಚನ್ನಪಟ್ಟಣ ಹಾಗೂ ಪ್ರೊ. ಪೂಜಾ ಶಿಂಧೆ ಅವರು ತರಬೇತಿ ಅವಧಿಯ ತಮ್ಮ ಅಮೂಲ್ಯವಾದ ಅನುಭವಗಳನ್ನು ಹಂಚಿಕೊಂಡರು. ಪ್ರೊ. ಸೀಮಾ ಬಸರಿಕಟ್ಟಿ ಅವರು ಈ ಸಮಗ್ರ ತರಬೇತಿ ಕಾರ್ಯಕ್ರಮದ ಯಶಸ್ವಿ ಸಂಯೋಜನೆಯನ್ನು ನಿರ್ವಹಿಸಿದ್ದರು.

# ತೋಟಗಾರಿಕೆ ಮಾರುಕಟ್ಟೆ ತರಬೇತಿ

## ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯಿಂದ ನಡೆದ ಕಾರ್ಯಕ್ರಮ

**ಶಿರಸಿ:** ಭಟ್ಕಳ ತಾಲೂಕಿನ ಹುರುಳಿಸಾಲ ವಲಯದ ಮಾರುಕೇರಿ ಕಾರ್ಯಕ್ಷೇತ್ರದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ತೋಟಗಾರಿಕೆ ಬೆಳೆಯಲ್ಲಿ ತಂತ್ರಜ್ಞಾನ ಆಧಾರಿತ ಮಾರುಕಟ್ಟೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮವನ್ನು ದೀಪ ಬೆಳಗಿಸುವ ಮೂಲಕ ಉದ್ಘಾಟಿಸಿದ ಸಂಪನ್ಮೂಲ ವ್ಯಕ್ತಿ ಮಂಜುನಾಥ್ ಅವರು, ರೈತರಿಗೆ ಆಧುನಿಕ ಕೃಷಿ ಪದ್ಧತಿಗಳ ಕುರಿತು ಸಮಗ್ರ ಮಾಹಿತಿ ನೀಡಿದರು.

ತರಬೇತಿಯಲ್ಲಿ ಮುಖ್ಯವಾಗಿ ತೋಟಗಾರಿಕೆ ಬೆಳೆಯಲ್ಲಿ ಮಿಶ್ರ ಬೆಳೆಯ ಆಯ್ಕೆ, ಅರಣ್ಯೀಕರಣ ಗಿಡಗಳನ್ನು ನೆಡುವ ವಿಧಾನ ಹಾಗೂ ತೋಟಗಾರಿಕೆಯಲ್ಲಿ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಕುರಿತು ಸವಿಸ್ತಾರವಾಗಿ ಚರ್ಚಿಸಲಾಯಿತು. ಇದರೊಂದಿಗೆ ಬೆಳೆಗಳಿಗೆ ತಗುಲುವ ವಿವಿಧ ರೋಗಬಾಧೆಗಳು ಹಾಗೂ ರೋಗ ನಿಯಂತ್ರಣಕ್ಕಾಗಿ ಸೂಕ್ತ ಔಷಧ ಸಿಂಪಡಣೆ ಮಾಡುವ ವಿಧಾನಗಳ ಬಗ್ಗೆಯೂ ರೈತರಲ್ಲಿ ಜಾಗೃತಿ ಮೂಡಿಸಲಾಯಿತು.

ಇದೇ ಸಂದರ್ಭದಲ್ಲಿ ತೋಟಗಾರಿಕೆ ಇಲಾಖೆಯಿಂದ ಸಿಗುವ ವಿವಿಧ ಸೌಲಭ್ಯಗಳಾದ ಕೃಷಿ ಹೊಂಡ, ಕೃಷಿ ಯಂತ್ರೋಪಕರಣಗಳು, ಜೇನು ಸಾಕಾಣಿಕೆ, ಲಘು ಪೋಷಕಾಂಶಗಳ ಬಳಕೆ ಹಾಗೂ ತೋಟಗಾರಿಕಾ ಬೆಳೆಗಳನ್ನು ಬಾಧಿಸುತ್ತಿರುವ ಪ್ರಮುಖ ಕೀಟಬಾಧೆಯಾದ ಎಲೆ ಚುಕ್ಕಿ ರೋಗದ ಔಷಧಿಗಳ ಬಗ್ಗೆ ಮಾಹಿತಿ ನೀಡಲಾಯಿತು. ತೋಟಗಾರಿಕೆ ಇಲಾಖೆಯ ವತಿಯಿಂದ ಹನಿ ನೀರಾವರಿ ಪದ್ಧತಿಯನ್ನು ಅಳವಡಿಸಿಕೊಳ್ಳುವ ರೈತರಿಗೆ ಲಭ್ಯವಿರುವ ಸಬ್ಸಿಡಿ ಸೌಲತ್ತುಗಳ ಕುರಿತು ಸಹ ಇದೇ ವೇಳೆ ರೈತರಿಗೆ ತಿಳಿಸಿಕೊಡಲಾಯಿತು.

ಈ ಮಹತ್ವದ ಕೃಷಿ ತರಬೇತಿ ಕಾರ್ಯಕ್ರಮದಲ್ಲಿ ಕೃಷಿ ಮೇಲ್ವಿಚಾರಕ ಮಹೇಶ್ ಹೆಗಡೆ, ಮೇಲ್ವಿಚಾರಕ ರಮೇಶ್, ಒಕ್ಕೂಟದ ಪದಾಧಿಕಾರಿಗಳು ಹಾಗೂ ಸೇವಾಪ್ರತಿನಿಧಿಗಳು ಉಪಸ್ಥಿತರಿದ್ದು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

# ದೇಗುಲದ ದುರಸ್ತಿಗೆ ಪುರಾತತ್ವ ಇಲಾಖೆ ನಿರ್ಲಕ್ಷ್ಯ

## ಜನಪ್ರತಿನಿಧಿಗಳ ಬೇಜವಾಬ್ದಾರಿತನವೇ ದುಸ್ಥಿತಿಗೆ ಕಾರಣ | ಆಕ್ರೋಶ

**ಶಿರಸಿ:** ಸುದೀರ್ಘ ಇತಿಹಾಸವನ್ನು ಹೊಂದಿರುವ, ಸಮಗ್ರ ಕನ್ನಡಿಗರ ಅಸ್ಮಿತೆಯ ಸಾಕ್ಷಿಯಾದ ಕದಂಬರ ಸಾಂಸ್ಕೃತಿಕ ಕೊಂಡಿ ಬನವಾಸಿಯ ಶ್ರೀ ಮಧುಕೇಶ್ವರ ದೇವಸ್ಥಾನವು ಕಳೆದ ನಾಲ್ಕೈದು ವರ್ಷಗಳಿಂದ ಸೋರುತ್ತಿದ್ದರೂ ಸೂಕ್ತ ಕ್ರಮ ಕೈಗೊಳ್ಳದಿರುವುದು ಕನ್ನಡಿಗರ ಮನಸ್ಸಿಗೆ ತೀವ್ರ ಆಘಾತವನ್ನುಂಟು ಮಾಡಿದೆ ಎಂದು ಬನವಾಸಿ ದೇಗುಲದ ವ್ಯವಸ್ಥಾಪನಾ ಸಮಿತಿಯ ಮಾಜಿ ಪ್ರಧಾನ ಕಾರ್ಯದರ್ಶಿ ಡಾ.ಜಿ.ಎ.ಹೆಗಡೆ ಸೋಂದಾ ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಪುರಾತತ್ವ ಇಲಾಖೆ ಮತ್ತು ಸಂಬಂಧಪಟ್ಟ ಜನಪ್ರತಿನಿಧಿಗಳ ಬೇಜವಾಬ್ದಾರಿತನವೇ ಈ ದುಸ್ಥಿತಿಗೆ ಪ್ರಮುಖ ಕಾರಣ ಎಂದು ನೇರವಾಗಿ ಆರೋಪಿಸಿದ್ದಾರೆ.

ಐತಿಹಾಸಿಕ ಸ್ಮಾರಕಗಳನ್ನು ಇದ್ದ ಸ್ಥಿತಿಯಲ್ಲಿಯೇ ರಕ್ಷಿಸುವ ಹೊಣೆ ಹೊತ್ತಿರುವ ಪುರಾತತ್ವ ಇಲಾಖೆಯು, ತನ್ನ ನಿಯಮಾವಳಿಗಳ ಪ್ರಕಾರ ದೇವಸ್ಥಾನದ ಸುತ್ತಮುತ್ತಲಿನ 100 ಅಡಿ ಜಾಗದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ರಾಜ್ಯ ಸರಕಾರಕ್ಕಾಗಲಿ ಅಥವಾ ಸ್ಥಳೀಯ ವ್ಯವಸ್ಥಾಪನಾ ಸಮಿತಿಗಾಗಲಿ ಅಧಿಕಾರ ನೀಡುವುದಿಲ್ಲ.

ಪರಿಸ್ಥಿತಿ ಹೀಗಿರುವಾಗ, ಗುಡಿ ಸೋರುತ್ತಿರುವಾಗ ಅದರ ಸಂಪೂರ್ಣ ದುರಸ್ತಿ ಕಾರ್ಯ ಕೈಗೊಳ್ಳುವ ಜವಾಬ್ದಾರಿ ಪುರಾತತ್ವ ಇಲಾಖೆಯದ್ದೇ ಆಗಿರುತ್ತದೆ. ಇಲಾಖೆಯು ಈ ಹೊಣೆಗಾರಿಕೆಯಿಂದ ನುಣುಚಿಕೊಳ್ಳಲು ಸಾಧ್ಯವಿಲ್ಲ ಎಂದು ಅವರು ಪ್ರತಿಪಾದಿಸಿದ್ದಾರೆ.

ತಮ್ಮ ಕಠಿಣ ನಿಯಮಗಳಿಂದಾಗಿ ತಾನೂ ಕೆಲಸ ಮಾಡದೆ, ಇತ್ತ ಸಾರ್ವಜನಿಕರು ಅಥವಾ ಸರ್ಕಾರಕ್ಕೂ ಅವಕಾಶ ನೀಡದೆ ಇಲಾಖೆಯು ವಹಿಸಿರುವ ಈ ದಿವ್ಯ ನಿರ್ಲಕ್ಷ್ಯ ಖಂಡನೀಯ ಎಂದು ಡಾ. ಹೆಗಡೆ ತಿಳಿಸಿದ್ದಾರೆ.

ಈ ಪುರಾತನ ದೇವಾಲಯದ ಯಥಾಸ್ಥಿತಿಯನ್ನು ಕಾಪಾಡಿ ಅಭಿವೃದ್ಧಿಪಡಿ ಸುವಲ್ಲಿ ಸಮಗ್ರ ಕನ್ನಡಿಗರೂ ಪಾಲುದಾರ ರಾಗಿದ್ದಾರೆ (ಸ್ಟೇಕ್ ಹೋಲ್ಡರ್ಸ್) ಎಂಬುದನ್ನು ಸಂಬಂಧಪಟ್ಟ ಅಧಿಕಾರಿಗಳು ಅರಿತುಕೊಂಡು ತಕ್ಷಣವೇ ಎಚ್ಚೆತ್ತುಕೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಬನವಾಸಿಯ ಸಮಗ್ರ ಅಭಿವೃದ್ಧಿಗಾಗಿ ನಿರಂತರವಾಗಿ ಶ್ರಮಿಸುತ್ತಿರುವ ಹೋರಾಟ ಸಮಿತಿಯ ಹೋರಾಟವನ್ನು ಹಾಗೂ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯು ಕೈಗೊಂಡಿರುವ ಕಟ್ಟುನಿಟ್ಟಿನ ಕ್ರಮಗಳನ್ನು ಮುಕ್ತಕಂಠದಿಂದ ಶ್ಲಾಘಿಸಿರುವ ಅವರು, ತಮ್ಮ ಸಂಪೂರ್ಣ ಬೆಂಬಲವನ್ನು ಘೋಷಿಸಿದ್ದಾರೆ.

ನಾಡಿನ ಬೌದ್ಧಿಕ ವಲಯದ ಪ್ರಾಜ್ಞರು ಹಾಗೂ ಚಿಂತಕರು ಈ ಹೋರಾಟಕ್ಕೆ ಕೈಜೋಡಿಸಬೇಕು. ಐತಿಹಾಸಿಕ ಮಧುಕೇಶ್ವರ ದೇವಸ್ಥಾನಕ್ಕೆ ನ್ಯಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ದೇಶದ ಪ್ರಧಾನಮಂತ್ರಿ ಹಾಗೂ ರಾಷ್ಟ್ರಪತಿಗಳ ಗಮನ ಸೆಳೆಯಲು ಮುಂದಾಗಬೇಕು ಎಂದು ಆಗ್ರಹಿಸಿದ್ದಾರೆ.

ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಂದಿಗೆ ಸಭೆ | ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ

# ಕಡ್ಡಾಯವಾಗಿ ಬಿಎಲ್ಎ ನೇಮಕ ಮಾಡಿ

**ಕೊಪ್ಪಳ:** ಕೇಂದ್ರ ಚುನಾವಣೆ ಆಯೋಗ 2026ರ ಮೇ. 14ರಂದು ಹೊರಡಿಸಿರುವ ಪ್ರಕಟಣೆಯಂತೆ ಅರ್ಹತಾ ದಿನಾಂಕ: 01- 10-2026ಕ್ಕೆ ಅನ್ವಯಿಸುವಂತೆ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ 2026ರ ವೇಳಾಪಟ್ಟಿ ನಿಗದಿಪಡಿಸಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿಯೂ ಆಗಿರುವ ಜಿಲ್ಲಾಧಿಕಾರಿ ಡಾ.ಸುರೇಶ ಬಿ. ಇಟ್ನಾಳ ತಿಳಿಸಿದರು.

ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆಗೆ ಸಂಬಂಧಿಸಿದಂತೆ ಕೊಪ್ಪಳ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲೆಯ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆಯ ಅಧ್ಯಕ್ಷತೆ ವಹಿಸಿ ಬುಧವಾರ ಮಾತನಾಡಿ, ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ-2026ಕ್ಕೆ ಸಂಬಂಧಿಸಿದಂತೆ ದಿನಾಂಕ: 01-10-2026ನ್ನು ಅರ್ಹತಾ ದಿನಾಂಕ ಎಂದು ನಿಗದಿಪಡಿಸಲಾಗಿದೆ. 2026ರ ಜೂನ್ 20 ರಿಂದ ಜೂನ್ 29 ರವರೆಗೆ ಪರಿಷ್ಕರಣೆಯ ಸಿದ್ಧತೆ, ತರಬೇತಿ ಮತ್ತು ಮುದ್ರಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಜೂನ್ 30 ರಿಂದ ಜುಲೈ 29ರ ವರೆಗೆ ಬಿಎಲ್ಒಗಳಿಂದ ಮನೆ ಮನೆ ಭೇಟಿ ನಡೆಯುತ್ತದೆ. ಜುಲೈ 29ರ ಒಳಗೆ ಮತಗಟ್ಟೆಗಳ ರ್ಯಾಷನಲೈಜೇಷನ್ ನಡೆಯಲಿದೆ. ಆಗಸ್ಟ್ 5 ರಂದು ಕರಡು ಮತದಾರರ ಪಟ್ಟಿ ಪ್ರಕಟಣೆ ಮಾಡಲಾಗುತ್ತದೆ. ಆ. 5 ರಿಂದ ಸೆಪ್ಟೆಂಬರ್4ರ ವರೆಗೆ ಹಕ್ಕು ಮತ್ತು ಆಕ್ಷೇಪಣೆ ಸಲ್ಲಿಸಲು ಅವಕಾಶ ಇರುತ್ತದೆ. ಆ. 5 ರಿಂದ ಅಕ್ಟೋಬರ್ 3ರ ವರೆಗೆ ನೋಟಿಸ್ ಅವಧಿ, ಹಕ್ಕು ಮತ್ತು ಆಕ್ಷೇಪಣೆಗಳ ವಿಲೇವಾರಿ ನಡೆಯಲಿದೆ. 2026ರ ಅಕ್ಟೋಬರ್7 ರಂದು ಅಂತಿಮ ಮತದಾರರ ಪಟ್ಟಿ ಪ್ರಕಟಣೆ ಮಾಡಲಾಗುತ್ತಿದೆ ಎಂದು ಮಾಹಿತಿ ನೀಡಿದರು.

ಬಿಎಲ್ಎ ನೇಮಕಕ್ಕೆ ಸೂಚನೆ: ಕುಷ್ಟಗಿ, ಕನಕಗಿರಿ, ಗಂಗಾವತಿ, ಯಲಬುರ್ಗಾ, ಕೊಪ್ಪಳ ವಿಧಾನಸಭೆ ಕ್ಷೇತ್ರ ಸೇರಿ ಕೊಪ್ಪಳ ಜಿಲ್ಲೆಯ ಒಟ್ಟು 11,92,589 ಮತದಾರ ಪೈಕಿ ಈಗಾಗಲೇ ಶೇ.94.98ರಷ್ಟು ಮ್ಯಾಪಿಂಗ್ ಕಾರ್ಯ ನಡೆದಿರುತ್ತದೆ. ಉಳಿದ 59,853 ಮತದಾರರಿಗೆ ಮ್ಯಾಪಿಂಗ್ ಕಾರ್ಯ ಬಾಕಿ ಇದೆ. ಅರ್ಹ ಎಲ್ಲ ಮತದಾರರ ಹೆಸರು ಮತದಾರರ ಪಟ್ಟಿಗೆ ಸೇರ್ಪಡೆ ಆಗಬೇಕಿದೆ ಎಂದು ಜಿಲ್ಲಾಧಿಕಾರಿಗಳು ಸಭೆಯಲ್ಲಿದ್ದ ವಿವಿಧ ರಾಜಕೀಯ ಪಕ್ಷಗಳ ಪ್ರತಿನಿಧಿಗಳಿಗೆ ತಿಳಿಸಿದರು.

ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಅಮರೇಗೌಡ ಪಾಟೀಲ್ ಬಯ್ಯಾಪೂರ, ನವೀನ್ ಗುಳಗಣ್ಣನವರ, ಕೃಷ್ಣ ಇಟ್ಟಂಗಿ, ಮಂಜುನಾಥ ಸೊರಟೂರ, ರಾಜು ಬಾಕಳೆ, ಕಳಕನಗೌಡ, ಶರಣು ಶೆಟ್ಟರ್, ಸೋಮನಗೌಡ, ರಮೇಶ ಡಂಬ್ರಳ್ಳಿ, ಮೌನೇಶ ಕಿನ್ನಾಳ, ಶಿವಕುಮಾರ್ಇ., ರಮೇಶ ಎಂ., ಜಿಲ್ಲಾ ಚುನಾವಣಾ ಶಾಖೆ ಶಿರಸ್ತೇದಾರ ನಾಗರಾಜ ಸೇರಿ ಚುನಾವಣಾ ಶಾಖೆ ಸಿಬ್ಬಂದಿ ಇದ್ದರು.

ಕೊಪ್ಪಳ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮತದಾರರ ಪಟ್ಟಿಗಳ ಎಸ್ಐಆರ್‌ಪ್ರಕ್ರಿಯೆ ಹಿನ್ನೆಲೆ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆ ಜಿಲ್ಲಾಧಿಕಾರಿ ಡಾ.ಸುರೇಶ ಇಟ್ನಾಳ ಅಧ್ಯಕ್ಷತೆಯಲ್ಲಿ ಬುಧವಾರ ನಡೆಯಿತು.

> ಕೊಪ್ಪಳ ಜಿಲ್ಲೆಯ 1315 ಮತಗಟ್ಟೆಗೆ ರಾಜಕೀಯ ಪಕ್ಷಗಳು ಕಡ್ಡಾಯವಾಗಿ ಬಿಎಲ್ಎ ನೇಮಿಸಬೇಕು. ಇದುವರೆಗೆ ಬಿಎಲ್ಎ ನೇಮಕ ಮಾಡದೇ ಇರುವ ರಾಜಕೀಯ ಪಕ್ಷಗಳು ಕೂಡಲೇ ಬಿಎಲ್ಎ ನೇಮಕ ಮಾಡಲು ಕ್ರಮ ವಹಿಸಬೇಕು.
> -ಡಾ.ಸುರೇಶ ಬಿ.ಇಟ್ನಾಳ, ಜಿಲ್ಲಾಧಿಕಾರಿ

> ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆಯ ಬಗ್ಗೆ ಜನರಿಗೆ ಗೊಂದಲಗಳಿದ್ದರೆ ಮಾಹಿತಿ ನೀಡಲು ವ್ಯವಸ್ಥೆ ಮಾಡಲಾಗಿದೆ. ಕೊಪ್ಪಳ ಜಿಲ್ಲೆಯ 152 ಗ್ರಾಮ ಪಂಚಾಯತ್ ಜೊತೆಗೆ ಪಟ್ಟಣ ಮತ್ತು ನಗರ ಪ್ರದೇಶಗಳ ಪ್ರತಿ ವಾರ್ಡ್ ನಲ್ಲಿ ವೋಟರ್‌ಫೆಸಿಲಿಟೇಷನ್ ಸೆಂಟರ್ ತೆರೆಯಲಾಗಿದೆ. ಕೇಂದ್ರದಲ್ಲಿ ಆಸನ, ಕುಡಿವ ನೀರು, ಇಂಟರ್‌ನೆಟ್, ಕಂಪ್ಯೂಟರ್‌ವ್ಯವಸ್ಥೆ ಮಾಡಲಾಗುತ್ತದೆ. ಹೋರ್ಡಿಂಗ್ಸ್, ಪೋಸ್ಟರ್, ಕರಪತ್ರಗಳ ಮೂಲಕ ಸಾರ್ವಜನಿಕರಿಗೆ ಮತದಾರರ ಪಟ್ಟಿಗಳ ವಿಶೇಷ ಸಮಗ್ರ ಪರಿಷ್ಕರಣೆ ಬಗ್ಗೆ ಮಾಹಿತಿ ನೀಡಲಾಗುತ್ತದೆ.
> -ವರ್ಣಿತ್ ನೇಗಿ, ಜಿಪಂ ಸಿಇಒ, ಕೊಪ್ಪಳ

# ಅನಿಲ ಬೆಲೆ ಏರಿಕೆ ಖಂಡಿಸಿ ಪ್ರತಿಭಟನೆ

**ರಾಯಚೂರು:** ಕೇಂದ್ರದ ಬಿಜೆಪಿ ಸರಕಾರ ಮೇಲಿಂದ ಮೇಲೆ ಪೆಟ್ರೋಲ್, ಡಿಸೆಲ್, ಅಡುಗೆ ಅನಿಲ ಬೆಲೆ ಏರಿಕೆ ಮಾಡಿರುವುದನ್ನು ಖಂಡಿಸಿ ಸಿಪಿಐ (ಎಂಎಲ್) ಪಕ್ಷದಿಂದ ನಗರದ ಡಾ. ಬಿಆರ್ ಅಂಬೇಡ್ಕರ್‌ವೃತ್ತದಲ್ಲಿ ಬೈಕ್‌ಗೆ ಹಗ್ಗ ಕಟ್ಟಿ ಎಳೆದು ವಿನೂತನವಾಗಿ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ಉದ್ದೇಶಿಸಿ ಸಿಪಿಐಎಂಎಲ್ ಲಿಬರೇಶನ್ ಜಿಲ್ಲಾ ಕಾರ್ಯದರ್ಶಿ ನಾಗರಾಜ ಪೂಜಾರ್‌ಮಾತನಾಡಿ, ಕೇಂದ್ರ ಸರಕಾರದಿಂದ ಮೇ.15 ರಿಂದ ಮೇ.25ರ ಒಳಗೆ ಕೇವಲ 11 ದಿನಗಳಲ್ಲಿ ಪೆಟ್ರೋಲ್ 7.38 ರು. ಹಾಗೂ ಡೀಸೆಲ್ 7.52 ರು. ಹಾಗೂ ಸಿಎನ್‌ಜಿ 6 ರು. ಏರಿಕೆ ಮಾಡಿದೆ.

ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಪ್ರಸ್ತುತ ಕಚ್ಚಾ ತೈಲದ ಬೆಲೆ ಪ್ರತಿ ಬ್ಯಾರಲ್ಗೆ 99 ಡಾಲರ್ಗಿಂತಲೂ ಕಡಿಮೆಯಿದ್ದರೂ, ಪೆಟ್ರೋಲ್ ಶೇ 42.8 ರಷ್ಟು ಮತ್ತು ಡೀಸೆಲ್ ಶೇ 67.9 ರಷ್ಟು ಏರಿಕೆಯಾಗಿದೆ. ಇಂಧನ ಬೆಲೆ ಏರಿಕೆಯು ಸಾರಿಗೆಯಿಂದ ಹಿಡಿದು ಆಹಾರ ಪದಾರ್ಥಗಳವರೆಗೆ ಪ್ರತಿಯೊಂದು ವಲಯದ ಮೇಲೂ ಪ್ರಭಾವ ಬೀರಿದ್ದು, ಮೋದಿ ಸರಕಾರ ಸಾಮಾನ್ಯ ಜನರು ಮತ್ತು ಮಧ್ಯಮ ವರ್ಗದವರ ಬೆನ್ನೆಲುಬನ್ನು ಮುರಿದಿದೆ ಎಂದು ದೂರಿದರು.

ನಂತರ ಪಕ್ಷದ ತಾಲೂಕು ಕಾರ್ಯದರ್ಶಿ ಅಜೀಜ್ ಜಾಗೀರದಾರ್‌ಮಾತನಾಡಿ, ಇಂಧನ, ಅಡುಗೆ ಅನಿಲ ಹಾಗೂ ಅಗತ್ಯ ವಸ್ತುಗಳ ಬೆಲೆಗಳನ್ನು ಹೆಚ್ಚಿಸುತ್ತಿರುವ ಕೇಂದ್ರ ಸರಕಾರ ಜನರು ಎಲ್ಲಿ ಬೀದಿಗಿಳಿದು ಹೋರಾಟ ಮಾಡುತ್ತಾರೆಂಬ ಆತಂಕದಿಂದ ಕುತಂತ್ರವನ್ನು ಹೆಣೆದಿದೆ .ಕೇಂದ್ರ ಸರಕಾರದ ಜನದ್ರೋಹಿ ನೀತಿಗೆ ಸಾಕ್ಷಿಯಾಗಿದೆ ಎಂದು ಆರೋಪಿಸಿದರು. ಪ್ರತಿಭಟನೆಯಲ್ಲಿ ಜಿಲಾನಿ ಯರಗೇರಾ, ಭೀಮಯ್ಯ, ಮಹೇಂದ್ರ, ಪ್ರಹ್ಲಾದ್, ಜಗದೀಶ್, ಹನೀಫ್ ಅಬಕಾರಿ, ಲಕ್ಷ್ಮಣ, ರಾಮಸ್ವಾಮಿ, ಮಾರಣ್ಣ, ನರಸಿಂಹಲು, ಸಣ್ಣ ನರಸಪ್ಪ, ಯಲ್ಲಪ್ಪ ಪಾಲ್ಗೊಂಡಿದ್ದರು.

ಪೆಟ್ರೋಲ್, ಡಿಸೆಲ್, ಅಡುಗೆ ಅನಿಲ ಬೆಲೆ ಏರಿಕೆ ಮಾಡಿರುವುದನ್ನು ಖಂಡಿಸಿ ಸಿಪಿಐ (ಎಂಎಲ್) ಪಕ್ಷದಿಂದ ನಗರದ ಡಾ. ಬಿಆರ್‌ಅಂಬೇಡ್ಕರ್‌ವೃತ್ತದಲ್ಲಿ ಬೈಕ್‌ಗೆ ಹಗ್ಗಕಟ್ಟಿ ಎಳೆದು ಪ್ರತಿಭಟನೆ ನಡೆಸಿದರು.

# ಭವಿಷ್ಯದ ಬದುಕಿಗೆ ಇತಿಹಾಸ ಓದಿ: ಶಾಸಕ

**ಹೂವಿನಹಡಗಲಿ:** ಇತಿಹಾಸವನ್ನು ಓದದಿದ್ದರೆ ಭವಿಷ್ಯದ ಬದುಕನ್ನು ಸರಿಯಾಗಿ ಕಟ್ಟಲು ಸಾಧ್ಯವಿಲ್ಲ ಎಂದು ಶಾಸಕ ಕೃಷ್ಣನಾಯಕ್ ಹೇಳಿದರು.

ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಇಲಾಖೆ, ಶ್ರೀಮತಿ ರುದ್ರಾಂಬ ಎಂ.ಪಿ.ಪ್ರಕಾಶ್ ಸರಕಾರಿ ಪ್ರಥಮ ದರ್ಜೆ ಕಾಲೇಜ ಕರ್ನಾಟಕ ರಾಜ್ಯ ಪತ್ತಾಗಾರ ಇಲಾಖೆ ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಏಕೀಕರಣ ಚಳುವಳಿ ಎರಡು ದಿನಗಳ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಅವರು ಉದ್ಘಾಟಿಸಿ ಮಾತನಾಡಿದರು. ಸ್ವಾತಂತ್ರ್ಯ ಹೋರಾಟದ ಬದುಕನ್ನು ನಾವು ಅಭ್ಯಾಸದಿಂದ ಅರಿತಿದ್ದೇವೆ ಅವರ ಸಂಕಷ್ಟಗಳು ಬವಣೆ ನೋವುನಲಿವುಗಳು ಅತ್ಯಂತ ಘೋರವಾಗಿವೆ ಎಂದರು. ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಏಕೀಕರಣ ಚಳುವಳಿ ಬಗ್ಗೆ ವಿಚಾರ ಸಂಕಿರಣ ಆಯೋಜಿಸಿರುವುದು ಉತ್ತಮವಾಗಿದೆ ಎಂದರು. ವಿಶ್ರಾಂತ ಪ್ರಾಧ್ಯಾಪಕರಾದ ಡಾ.ಬಿ.ಸಿ. ಮಹಾಬಲೇಶ್ವರ ಮಾತನಾಡಿ, 124 ವರ್ಷಗಳ ಸುದೀರ್ಘ ಹೋರಾಟ ನಡೆದು ಬಂದಿದೆ. ಇತಹಾಸದಲ್ಲಿ ಸಾವಿರಾರು ಕ್ರಾಂತಿಕಾರರು ಪ್ರಾಣದ ಹಂಗನ್ನು ತೊರೆದು ಹೋರಾಟ ಮಾಡಿದರು.ಸಂಘಟಿತ ಹೋರಾಟಕ್ಕಾಗಿ 1885ರಲ್ಲಿ ರಾಷ್ಟ್ರೀಯ ಕಾಂಗ್ರೆಸ್ನ ಸ್ಥಾಪನೆ ಮಾಡಲಾಯಿತು. ಕೇವಲ ಶಾಂತಿ ಮತ್ತು ಅಹಿಂಸೆಯಿಂದ ಸ್ವಾತಂತ್ರ್ಯ ಹೋರಾಟ ನಡೆದಿಲ್ಲ ರಕ್ತ, ಭಯಂಕರವಾದ ಶೋಷಣೆ ಜೀವ ಹಾನಿಗಳಿಂದ ಹೋರಾಟ ನಡೆದಿದೆ ಎಂದರು. ಎಸ್ ಆರ್‌ಎಂಪಿಪಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಎಂ.ವಿಜಯಕುಮಾರ್ ಹೇಮಪ್ಪ ಅಧ್ಯಕ್ಷತೆ ವಹಿಸಿದ್ದರು. ಹರಪನಹಳ್ಳಿ ಎಸ್ಯುಜೆಎಂಪಿಯು ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಎಂ.ಪಿ.ಎಂ.ದಯಾನಂದ ಸ್ವಾಮಿ ಪ್ರಾಚಾರ್ಯ ಡಾ.ಸತೀಶ್.ಕೆ, ಸಹ ಪ್ರಾಧ್ಯಾಪಕರಾದ ಡಾ.ಬೂದನೂರು ಸುರೇಶ್, ಸುನಿತಾದೇವಿ, ಜಿ.ಟಿ.ಉಮಾದೇವಿ ಇದ್ದರು.

ಹೂವಿನಹಡಗಲಿ ಪಟ್ಟಣದ ಎಸ್ಆರ್‌ಎಂಪಿಪಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಬಳ್ಳಾರಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟಗಾರರು ಮತ್ತು ಏಕೀಕರಣ ಚಳುವಳಿ ಎರಡು ದಿನಗಳ ವಿಚಾರ ಸಂಕಿರಣ ಕಾರ್ಯಕ್ರಮವನ್ನು ಶಾಸಕ ಕೃಷ್ಣನಾಯಕ್ ಉದ್ಘಾಟಿಸಿದರು.

ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆ | ಡಿಸಿ ನಾಗೇಂದ್ರ ಪ್ರಸಾದ್ ಸೂಚನೆ

# ಜನನ, ಮರಣ ನೋಂದಣಿ ಪೂರ್ಣಗೊಳಿಸಿ

**ಬಳ್ಳಾರಿ:** ಜಿಲ್ಲೆಯಲ್ಲಿ ಜನನ ಮತ್ತು ಮರಣ ನೋಂದಣಿ ಪ್ರಕ್ರಿಯೆಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸಬೇಕು ಎಂದು ಜಿಲ್ಲಾಧಿಕಾರಿ ನಾಗೇಂದ್ರ ಪ್ರಸಾದ್.ಕೆ ಹೇಳಿದರು.

ನಗರದ ನೂತನ ಜಿಲ್ಲಾಡಳಿತ ಭವನದ ಕೆಸ್ವಾನ್ ಹಾಲ್ ನಲ್ಲಿ ಜನನ ಮತ್ತು ಮರಣ ನೋಂದಣಿ ಪ್ರಕ್ರಿಯೆ, ಬೆಳೆ ಅಂದಾಜು ಸಮೀಕ್ಷೆ ಹಾಗೂ ಕೃಷಿ ಗಣತಿಯ ವಿವಿಧ ಹಂತಗಳ ಪ್ರಗತಿ ಕುರಿತು ಏರ್ಪಡಿಸಿದ್ದ ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು.

ಯಾವುದೇ ಜನನ ಅಥವಾ ಮರಣ ಸಂಭವಿಸಿದಾಗ ಅದನ್ನು ನಿಗದಿತ ಅವಧಿಯೊಳಗೆ ನೋಂದಾಯಿಸುವುದು ಕಡ್ಡಾಯವಾಗಿದೆ. ತಾಲೂಕು ಮಟ್ಟದ ಜನನ ಮತ್ತು ಮರಣ ಸಮನ್ವಯ ಸಮಿತಿ ಸಭೆಗಳು ಕಡ್ಡಾಯವಾಗಿ ಜರುಗಿಸಬೇಕು. ಈ ಕುರಿತು ಆಯಾ ತಾಲೂಖು ತಹಸೀಲ್ದಾರರು ಮೇಲ್ವಿಚಾರಣೆ ನಡೆಸಬೇಕು ಎಂದು ಸೂಚಿಸಿದರು.

ಜನನ ಅಥವಾ ಮರಣ ಸಂಭವಿಸಿದ 21 ದಿನಗಳ ಒಳಗಾಗಿ ಉಚಿತವಾಗಿ ನೋಂದಣಿ ಮಾಡಬಹುದು. 21 ದಿನಗಳು ಕಳೆದ ನಂತರ ಮತ್ತು 30 ದಿನಗಳ ಒಳಗಾಗಿ ಸಣ್ಣ ಪ್ರಮಾಣದ ತಡಶುಲ್ಕ ಪಾವತಿಸಿ ನೋಂದಾಯಿಸಬಹುದು. 30 ದಿನಗಳ ನಂತರ ಮತ್ತು 1 ವರ್ಷದ ಒಳಗಾಗಿ ನೋಂದಣಿ ಮಾಡಬೇಕಾದರೆ ನಿಗದಿತ ಪ್ರಾಧಿಕಾರದ ಅನುಮತಿ ಮತ್ತು ತಡಶುಲ್ಕ ಬೇಕಾಗುತ್ತದೆ. ಒಂದು ವರ್ಷ ಕಳೆದರೆ ಮ್ಯಾಜಿಸ್ಟ್ರೇಟ್ ಆದೇಶದ ಮೇರೆಗೆ ಮಾತ್ರ ನೋಂದಣಿ ಮಾಡಲು ಅವಕಾಶವಿರುತ್ತದೆ. ಹಾಗಾಗಿ ಸಾರ್ವಜನಿಕರಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದಂತೆ ನಿಗದಿತ ಅವಧಿಯೊಳಗೆ ನೋಂದಾಯಿಸಿಕೊಳ್ಳುವಂತೆ ಸೂಚಿಸಬೇಕು ಎಂದರು.

ಜಿಲ್ಲೆಯ ಬಳ್ಳಾರಿ, ಕಂಪ್ಲಿ, ಸಿರಗುಪ್ಪ, ಸಂಡೂರು ಹಾಗೂ ಕುರುಗೋಡು ವ್ಯಾಪ್ತಿಯಲ್ಲಿ ಕೈಗೊಳ್ಳಲಾದ ಕೃಷಿ ಹಾಗೂ ತೋಟಗಾರಿಕಾ ಬೆಳೆಗಳ ಕಟಾವು ಪ್ರಯೋಗಗಳನ್ನು ತಪ್ಪಿಲ್ಲದಂತೆ ನಮೂದಿಸಬೇಕು. ನಿಗದಿತ ಕಾಲಮಿತಿಯೊಳಗೆ ಪೂರ್ಣಗೊಳಿಸಿ ಸಲ್ಲಿಸುವಂತೆ ನಿರ್ದೇಶನ ನೀಡಿದರು.

ಬೆಳೆ ಅಂದಾಜು ಸಮೀಕ್ಷೆಗಳನ್ನು ಹೆಚ್ಚು ಪಾರದರ್ಶಕ ಹಾಗೂ ನಿಖರವಾಗಿಸಲು ತಂತ್ರಜ್ಞಾನ ಆಧಾರಿತ ವರದಿ ಸರಣಿಯನ್ನು ಬಳಸಲಾಗುತ್ತಿದೆ. ಕಟಾವು ಪ್ರಯೋಗಗಳ ಐಡಿ ಗಳ ಮೂಲಕ ಪ್ರತಿಯೊಂದು ಕಟಾವು ಪ್ರಕ್ರಿಯೆಯ ಪ್ರಗತಿಯನ್ನು ಆನ್ಲೈನ್ನಲ್ಲಿ ನಮೂದಿಸಲಾಗುತ್ತಿದ್ದು, ತಪ್ಪುಗಳಿಗೆ ಆಸ್ಪದವಿಲ್ಲದಂತೆ ದತ್ತಾಂಶ ನಿರ್ವಹಣೆ ಮಾಡಲು ಕಟ್ಟುನಿಟ್ಟಿನ ಸೂಚನೆ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ. ರಮೇಶ್ ಬಾಬು, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ.ಎನ್.ಬಸರೆಡ್ಡಿ ಸೇರಿದಂತೆ ಕಂದಾಯ, ಕೃಷಿ ಅಧಿಕಾರಿಗಳು ಹಾಗೂ ವಿಡಿಯೊ ಕಾನ್ಫರೆನ್ಸ್ ಮೂಲಕ ಎಲ್ಲಾ ತಾಲೂಕಿನ ತಹಸೀಲ್ದಾರರು, ಪುರಸಭೆಯ ಮುಖ್ಯಾಧಿಕಾರಿಗಳು, ಜಿಲ್ಲಾ ಮಟ್ಟದ ವಿವಿಧ ಅಧಿಕಾರಿಗಳು ಹಾಜರಿದ್ದರು.

ಜಿಲ್ಲಾ ಮಟ್ಟದ ಸಮನ್ವಯ ಸಮಿತಿ ಸಭೆಯಲ್ಲಿ ಡಿಸಿ ನಾಗೇಂದ್ರ ಪ್ರಸಾದ್.ಕೆ ಮಾತನಾಡಿದರು.

> ಕೆಲವು ಖಾಸಗಿ ಮತ್ತು ಸರಕಾರಿ ಆಸ್ಪತ್ರೆಗಳು ಮಗುವಿನ ಜನನ ಅಥವಾ ವ್ಯಕ್ತಿಯ ಮರಣದ ಮಾಹಿತಿಯನ್ನು ನಿಗದಿತ ಸಮಯದೊಳಗೆ ಸಾರ್ವಜನಿಕ ಆರೋಗ್ಯ ಅಧಿಕಾರಿಗಳಿಗೆ ಆನ್‌ಲೈನ್‌ನಲ್ಲಿ ಅಪ್ಲೋಡ್ ಮಾಡದಿರುವುದು ವಿಳಂಬಕ್ಕೆ ಕಾರಣವಾಗಿದೆ. ಆಧಾರ್‌ಕಾರ್ಡ್, ವಿಳಾಸದ ಪುರಾವೆ ಮತ್ತು ಆಸ್ಪತ್ರೆಯ ದಾಖಲೆಗಳಲ್ಲಿ ಸಣ್ಣ ತಪ್ಪುಗಳಿದ್ದರೂ ಅರ್ಜಿಗಳನ್ನು ತಿರಸ್ಕರಿಸಲಾಗುತ್ತಿದೆ ಅಥವಾ ಮರುಪರಿಶೀಲನೆಗೆ ಕಳುಹಿಸಲಾಗುತ್ತಿದೆ. ಜನನ ಮತ್ತು ಮರಣ ಪ್ರಮಾಣಪತ್ರಗಳು ಸಕಾಲದಲ್ಲಿ ಸಿಗದೇ ಇರುವುದರಿಂದ ಜನಸಾಮಾನ್ಯರ ದೈನಂದಿನ ಕೆಲಸಗಳಿಗೆ ಭಾರಿ ಹಿನ್ನಡೆಯಾಗುತ್ತಿದೆ.
> -ನಾಗೇಂದ್ರ ಪ್ರಸಾದ್.ಕೆ, ಡಿಸಿ

# ಮಹಿಳಾ ಸ್ವಾವಲಂಬನೆಯ ಹಾದಿ, ಕರ್ನಾಟಕದ ಮಾದರಿ

## ಕಲ್ಪವೃಕ್ಷವಾದ 'ಗೃಹಲಕ್ಷ್ಮಿ' | ಶೋಷಿತರ ಬದುಕಿಗೆ ಸ್ವಾಭಿಮಾನದ ಬೆಳಕು

ಗ್ಯಾರಂಟಿ ವಾರ್ತೆ

**ಬೆಂಗಳೂರು:** 'ನಾನು ತೃತೀಯಲಿಂಗಿಯಾಗಿರುವ ಕಾರಣ ಸಮಾಜ ನಮ್ಮನ್ನು ನೋಡುವ ದೃಷ್ಟಿಯೇ ಬೇರೆಯಾಗಿತ್ತು. ಇಷ್ಟು ವರ್ಷ ಕಷ್ಟ-ನೋವುಗಳನ್ನು ಸಹಿಸಿಕೊಂಡಿದ್ದ ನನಗೆ ಆಸರೆಯಾಗಿದ್ದೇ ಕರ್ನಾಟಕ ಸರ್ಕಾರದ 'ಗೃಹಲಕ್ಷ್ಮಿ' ಯೋಜನೆ. ಪ್ರತಿ ತಿಂಗಳು ಬರುತ್ತಿರುವ ಹಣದಿಂದಲೇ ನಾನೀಗ ಹಣ್ಣಿನ ಅಂಗಡಿ ಇಟ್ಟುಕೊಂಡು ಗೌರವದಿಂದ ಜೀವನ ನಡೆಸುತ್ತಿದ್ದೇನೆ. ಅಂದು ನಮ್ಮನ್ನು ಹೀಗಳೆಯುತ್ತಿದ್ದವರೆಲ್ಲಾ ಇಂದು ಪ್ರೀತಿಯಿಂದ 'ಅಕ್ಕಾ' ಎಂದು ಕರೆಯುತ್ತಿದ್ದಾರೆ...' ಇದು ಕಲಬುರಗಿಯ ಸಪ್ನಾ ಅವರ ಮನದಾಳದ ಮಾತುಗಳು.

ಗೃಹಲಕ್ಷ್ಮಿ

ಸಪ್ನಾರಂತಹ ಲಕ್ಷಾಂತರ ಶೋಷಿತ ಹಾಗೂ ಕೋಟ್ಯಂತರ ಗೃಹಿಣಿಯರ ಬದುಕಿನಲ್ಲಿ ಸ್ವಾಭಿಮಾನದ ಬೆಳಕು ಚೆಲ್ಲಿರುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ 'ಗೃಹಲಕ್ಷ್ಮಿ' ಯೋಜನೆ. ಮಹಿಳೆ ಆರ್ಥಿಕವಾಗಿ ಸಬಲಳಾದರೆ ಇಡೀ ಕುಟುಂಬವೇ ಪ್ರಗತಿಯ ಹಾದಿಯಲ್ಲಿ ಸಾಗುತ್ತದೆ ಎಂಬ ಉದಾತ್ತ ಚಿಂತನೆಯೊಂದಿಗೆ ಜಾರಿಗೆ ತಂದ ಈ ಮಹತ್ವಾಕಾಂಕ್ಷಿ ಯೋಜನೆಗೆ 2023ರ ಆಗಸ್ಟ್ 30ರಂದು ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಐತಿಹಾಸಿಕ ಚಾಲನೆ ನೀಡಲಾಗಿತ್ತು. ಇಂದು ಈ ಯೋಜನೆ ಯಶಸ್ವಿಯಾಗಿ ಮೂರು ವರ್ಷ ಪೂರೈಸಿದ್ದು, ನಾಡಿನ ಮನೆ-ಮನಗಳ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದೆ.

### ಮಾಸಿಕ ಗೌರವಧನ, ಮಹಿಳಾ ಸಬಲೀಕರಣದ ಹೊಸ ಆಯಾಮ

ಮನೆಯ ಯಜಮಾನಿ ತನಗೆ ಬೇಕಾದ ಸಣ್ಣಪುಟ್ಟ ಅಗತ್ಯಗಳಿಗೂ ಇತರರ ಮುಂದೆ ಕೈಚಾಚಬಾರದು ಎಂಬ ದೃಢ ಸಂಕಲ್ಪದೊಂದಿಗೆ ಈ ಯೋಜನೆಯನ್ನು ಆರಂಭಿಸಲಾಗಿದೆ. ಅರ್ಹ ಮಹಿಳೆಯರ ಖಾತೆಗೆ ಪ್ರತಿ ತಿಂಗಳು ₹2,000 ನಗದು ಹಣವನ್ನು ನೇರವಾಗಿ ಜಮೆ (DBT) ಮಾಡಲಾಗುತ್ತಿದೆ. ಇದು ಕೇವಲ ಉಚಿತ ಹಣವಲ್ಲ, ಬದಲಿಗೆ ದಿನವಿಡೀ ಸಂಸಾರಕ್ಕಾಗಿ ಶ್ರಮಿಸುವ ಗೃಹಿಣಿಯರ ತ್ಯಾಗಕ್ಕೆ ರಾಜ್ಯ ಸರ್ಕಾರ ನೀಡುತ್ತಿರುವ ಅತ್ಯುನ್ನತ 'ಗೌರವಧನ'ವಾಗಿದೆ. ಇದರಿಂದಾಗಿ ಗ್ರಾಮೀಣ ಹಾಗೂ ನಗರ ಪ್ರದೇಶದ ಕೆಳ ಮತ್ತು ಮಧ್ಯಮ ವರ್ಗದ ಮಹಿಳೆಯರು ತಮ್ಮದೇ ಆದ ಆರ್ಥಿಕ ಸ್ವಾತಂತ್ರ್ಯವನ್ನು ಪಡೆದುಕೊಂಡಿದ್ದಾರೆ.

### ಮೂರು ವರ್ಷಗಳಲ್ಲಿ ತಂದ ಆರ್ಥಿಕ ಕ್ರಾಂತಿ

ಪ್ರತಿ ವರ್ಷ ಬರೋಬ್ಬರಿ ₹24,000 ಪಡೆಯುತ್ತಿರುವ ಮಹಿಳೆಯರು, ಕಳೆದ ಮೂರು ವರ್ಷಗಳ ಅವಧಿಯಲ್ಲಿ ₹70,000 ಕ್ಕೂ ಅಧಿಕ ಆರ್ಥಿಕ ಆಸರೆಯನ್ನು ತಮ್ಮದಾಗಿಸಿಕೊಂಡಿದ್ದಾರೆ. ಈ ಹಣ ಬಡ ಕುಟುಂಬಗಳ ಆರ್ಥಿಕ ಚಿತ್ರಣವನ್ನೇ ಬದಲಿಸಿದೆ. ನಾಡಿನ ತಾಯಂದಿರು ಈ ಹಣವನ್ನು ಅತ್ಯಂತ ಜವಾಬ್ದಾರಿಯುತವಾಗಿ ಬಳಸುತ್ತಿದ್ದಾರೆ. ಸಾವಿರಾರು ಮಹಿಳೆಯರು ಈ ನೆರವಲ್ಲಿ ಕುರಿ-ಕೋಳಿ ಸಾಕಾಣಿಕೆ, ಮಕ್ಕಳ ವಿದ್ಯಾಭ್ಯಾಸ, ಮನೆಗೆ ಎಲೆಕ್ಟ್ರಾನಿಕ್ ಉಪಕರಣ ಖರೀದಿ, ಗೃಹೋದ್ಯಮಗಳನ್ನು ಆರಂಭಿಸಿ ಸಬಲೀಕರಣದ ಜೊತೆಗೆ ಸ್ವಾವಲಂಬನೆಯ ಹಾದಿ ಹಿಡಿದಿದ್ದಾರೆ. ಗ್ರಾಮೀಣ ಭಾಗದ ಅನೇಕ ಮಹಿಳೆಯರು ಈ ಹಣವನ್ನು ಒಟ್ಟುಗೂಡಿಸಿ, ಸ್ವ-ಸಹಾಯ ಸಂಘಗಳಲ್ಲಿ ಸಣ್ಣಪುಟ್ಟ ಉಳಿತಾಯ ಮಾಡುತ್ತಿದ್ದಾರೆ.

### ಮಹಿಳೆಯರ ಆರ್ಥಿಕ ಸ್ವಾತಂತ್ರ್ಯವೇ ಸಮೃದ್ಧ ಸಮಾಜದ ಬುನಾದಿ

'ಗೃಹಲಕ್ಷ್ಮಿ' ಯೋಜನೆ ಕೇವಲ ರಾಜಕೀಯ ಭರವಸೆಯಲ್ಲ; ಅದು ನಮ್ಮ ತಾಯಂದಿರ ಘನತೆ ಮತ್ತು ಗೌರವದ ಸಂಕೇತ. ಮಹಿಳೆಯರ ಕೈಯಲ್ಲಿ ಹಣ ಓಡಾಡಿದರೆ ಇಡೀ ಕುಟುಂಬ ಸುಖವಾಗಿರುತ್ತದೆ. ಕಳೆದ ಮೂರು ವರ್ಷಗಳಲ್ಲಿ 1.24 ಕೋಟಿಗೂ ಅಧಿಕ ತಾಯಂದಿರ ಖಾತೆಗೆ ನಿರಂತರವಾಗಿ ಹಣ ತಲುಪುತ್ತಿರುವುದು ನಮ್ಮ ಸರ್ಕಾರದ ಪ್ರಾಮಾಣಿಕತೆಗೆ ಸಾಕ್ಷಿ.

– ಸಿದ್ದರಾಮಯ್ಯ, ಮುಖ್ಯಮಂತ್ರಿಗಳು

### ಅಂಕಿ-ಅಂಶಗಳಲ್ಲಿ ಜಾಗತಿಕ ದಾಖಲೆ

ಇಡೀ ದೇಶದಲ್ಲೇ ಇಷ್ಟೊಂದು ಬೃಹತ್ ಸಂಖ್ಯೆಯ ಮಹಿಳಾ ಫಲಾನುಭವಿಗಳನ್ನು ಹೊಂದಿರುವ ಹಾಗೂ ನೇರ ನಗದು ವರ್ಗಾವಣೆ ಮಾಡುವ ಮತ್ತೊಂದು ಯೋಜನೆ ಇಲ್ಲ. 1.24 ಕೋಟಿಗೂ ಅಧಿಕ ಗೃಹಿಣಿಯರು ಪ್ರತಿ ತಿಂಗಳು ನೇರ ನಗದು ವರ್ಗಾವಣೆ ಮೂಲಕ ₹2,000 ಪಡೆಯುತ್ತಿದ್ದು, ಈವರೆಗೆ ಸರ್ಕಾರ ಈ ಯೋಜನೆಗಾಗಿ ₹69,783 ಕೋಟಿ ಅನುದಾನ ನೀಡಿದೆ.

### ದೇಶದ ಇತಿಹಾಸದಲ್ಲೇ ಅತಿ ದೊಡ್ಡ ಕ್ರಾಂತಿ

'ಗೃಹಲಕ್ಷ್ಮಿ' ಯೋಜನೆಯು ಕೇವಲ ಕರ್ನಾಟಕದ ಹೆಮ್ಮೆಯಲ್ಲ, ಇಡೀ ದೇಶದ ಇತಿಹಾಸದಲ್ಲೇ ಮಹಿಳೆಯ-ರಿಗಾಗಿ ಜಾರಿಯಾದ ಅತ್ಯಂತ ಬೃಹತ್ ನೇರ ನಗದು ವರ್ಗಾವಣೆ ಯೋಜನೆಯಾಗಿದೆ. ತಂತ್ರಜ್ಞಾನದ ಮೂಲಕ ಅತ್ಯಂತ ಪಾರದರ್ಶಕವಾಗಿ ಕೋಟ್ಯಂತರ ತಾಯಂದಿರನ್ನು ತಲುಪಿ, ಅವರ ಬದುಕಿಗೆ ಸ್ಥಿರವಾದ ಆರ್ಥಿಕ ಭದ್ರತೆ ನೀಡಲು ನಮ್ಮ ಸರ್ಕಾರ ಯಶಸ್ವಿಯಾಗಿದೆ.

– ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿಗಳು

### ಸಬಲ ಮಹಿಳೆ, ಸಶಕ್ತ ಸಮಾಜ

ಯಾವ ದೇಶದಲ್ಲಿ ಮಹಿಳೆಯರು ಆರ್ಥಿಕವಾಗಿ ಸಬಲರಾಗುತ್ತಾರೋ, ಆ ದೇಶ ಮಾತ್ರ ನಿಜವಾದ ಪ್ರಗತಿ ಸಾಧಿಸಲು ಸಾಧ್ಯ. 'ಗೃಹಲಕ್ಷ್ಮಿ' ಗ್ಯಾರಂಟಿ ಯೋಜನೆಯು ರಾಜ್ಯದ ಕೋಟ್ಯಂತರ ಕುಟುಂಬಗಳಿಗೆ ಬೆಲೆ ಏರಿಕೆಯ ಈ ದಿನಗಳಲ್ಲಿ ದೊಡ್ಡ ಆಸರೆಯಾಗಿ ನಿಂತಿದೆ. ಪ್ರತಿಯೊಂದು ಕುಟುಂಬವನ್ನು ಮುನ್ನಡೆಸುವ ಶಕ್ತಿ ಹೆಣ್ಣಿಗೆ ಇದೆ. ಆಕೆಯ ಕೈ ಬಲಪಡಿಸಿದರೆ ಇಡೀ ಕುಟುಂಬವೇ ಬಲವಾಗುತ್ತದೆ ಎಂಬ ನಂಬಿಕೆಯಿಂದ ನಮ್ಮ ಸರ್ಕಾರ ಈ ಯೋಜನೆಯನ್ನು ಜಾರಿಗೆ ತಂದಿದೆ.

– ಲಕ್ಷ್ಮಿ ಹೆಬ್ಬಾಳ್ಕರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು

ನಾನು ಉಪ್ಪಿನಕಾಯಿ ವ್ಯಾಪಾರ ಮಾಡ್ತೇನೆ. ಆದರೆ, ವ್ಯಾಪಾರಕ್ಕಾಗಿ ಪ್ರತಿದಿನ ಕಿಲೋಮೀಟರ್‌ಗಟ್ಲೆ ನಡೆಯಬೇಕಿತ್ತು, ಕಾಲುಗಳು ದಣಿದು ಹೋಗುತ್ತಿದ್ದವು. ಇಂತಹ ಸಂದರ್ಭದಲ್ಲಿ ನನ್ನ ಕೈಹಿಡಿದಿದ್ದು 'ಗೃಹಲಕ್ಷ್ಮಿ' ಯೋಜನೆ. ಪ್ರತಿ ತಿಂಗಳು ಬರುತ್ತಿರುವ 2,000 ರೂಪಾಯಿಗಳನ್ನು ಕೂಡಿಟ್ಟು ನಾನು ಸ್ವಂತ ಸ್ಕೂಟರ್ ಖರೀದಿಸಿದ್ದೇನೆ. ಮನೆಮನೆಗೆ ಹೋಗಿ ಉಪ್ಪಿನಕಾಯಿ ಮಾರಲು ತುಂಬಾ ಸಹಾಯವಾಗಿದೆ.

ಜೀನತ್, ಮಂಗಳೂರು

ನನಗೆ ಅಪ್ಪ-ಅಮ್ಮ ಇಬ್ಬರೂ ಇಲ್ಲ... ತುತ್ತು ಅನ್ನಕ್ಕೂ ಪರದಾಡುವಂತ ಮೂವರು ಹೆಣ್ಣುಮಕ್ಕಳು ನಾವು. ಅದರಲ್ಲೂ ನಾನು ಅಂಗವಿಕಲೆ. ಬದುಕೇ ಮುಗಿದುಹೋಯಿತು ಅಂದುಕೊಂಡಾಗ ಕೈಹಿಡಿದಿದ್ದು ಇದೇ 'ಗೃಹಲಕ್ಷ್ಮಿ' ಹಣ. ಅದರಿಂದಲೇ ಬಟ್ಟೆ ವ್ಯಾಪಾರ ಶುರು ಮಾಡಿಕೊಂಡಿದ್ದೇನೆ. ಯಾರ ಮುಂದೆಯೂ ಕೈಚಾಚದೆ, ಸ್ವಾವಲಂಬಿಯಾಗಿ ದುಡಿದು ತಿನ್ನಬೇಕು ಅನ್ನೋ ನನ್ನ ಆಸೆಗೆ ಸಿದ್ದರಾಮಯ್ಯ ಸರ್ ಜೀವ ಕೊಟ್ಟಿದ್ದಾರೆ.

ಜಯಮ್ಮ, ಬಳ್ಳಾರಿ

ಹೊಟ್ಟೆಯಲ್ಲಿದ್ದ ಮಗ ಐದು ತಿಂಗಳ ಕೂಸಾಗಿದ್ದಾಗಲೇ ಗಂಡ ನನ್ನನ್ನು ಬಿಟ್ಟು ಇನ್ನೊಂದು ಮದುವೆಯಾಗಿ ಹೋದ. ಸಾಲದ ಹೊರೆ ಹೆದರಿಸುತ್ತಿತ್ತು, ಸತ್ತು ಹೋಗೋಣ ಅನ್ನಿಸಿತ್ತು. ತಿನ್ನಲು ಅನ್ನವಿರಲಿಲ್ಲ, ಕರೆಂಟ್ ಬಿಲ್ ಕಟ್ಟದ್ದಕ್ಕೆ ಕನೆಕ್ಷನ್ ಕಟ್ ಮಾಡಿಕೊಂಡು ಹೋಗಿದ್ದರು. ಕತ್ತಲಲ್ಲಿ ಅತ್ತ ದಿನಗಳು ಅಪಾರ. ಇಂದು 'ಗೃಹಲಕ್ಷ್ಮಿ'ಯ ಹಣ ನನ್ನ ಬದುಕಿನ ಕತ್ತಲನ್ನು ದೂರ ಮಾಡಿದೆ. ಅಜ್ಜಿಯೊಬ್ಬರು ಕೊಟ್ಟ ಪುಟ್ಟ ಪೆಟ್ಟಿಗೆ ಅಂಗಡಿ ಇಟ್ಟುಕೊಂಡು, ಅಂಗಡಿಗೆ ಸಾಮಾನು ತರಲು ಈ ಹಣ ನೆರವಾಗಿದೆ. ಸಿದ್ದರಾಮಯ್ಯ ಪುಣ್ಯದ ಕೆಲಸ ಮಾಡಿದ್ದಾರೆ.

ರೇಣುಕಾ, ಕೊಪ್ಪಳ

ಗಂಡ ತೀರಿಹೋಗಿ 8 ವರ್ಷವಾಯಿತು. ಮೂವರು ಹೆಣ್ಣುಮಕ್ಕಳನ್ನು ಕಟ್ಟಿಕೊಂಡು ಗಂಡು ದಿಕ್ಕಿಲ್ಲದ ಮನೆಯನ್ನು ನಿಭಾಯಿಸುವುದು ನರಕಯಾತನೆಯಾಗಿತ್ತು. ಕಾಫಿ ಸೀಸನ್‌ನಲ್ಲಿ ಕೂಲಿ ಸಿಕ್ಕರೆ ಮಾತ್ರ ಕೈಯಲ್ಲಿ ಹಣ. ಇಲ್ಲದಿದ್ದರೆ ವರ್ಷಪೂರ್ತಿ ಖಾಲಿಯೇ ಇರಬೇಕು. ಇಂದು 'ಗೃಹಲಕ್ಷ್ಮಿ'ಯ ಹಣವೇ ನಮ್ಮ ಉಸಿರಾಗಿದೆ. ಒಂದೊಮ್ಮೆ ಈ ಯೋಜನೆ ನಿಂತು ಹೋದರೆ ನಮ್ಮ ಬದುಕು ಏನಾಗಬಹುದು ಎಂದು ಊಹಿಸಿಕೊಳ್ಳಲೂ ಅಸಾಧ್ಯ, ಕಣ್ಣಲ್ಲಿ ನೀರು ಬರುತ್ತದೆ.

ಲಕ್ಷ್ಮಿ, ಚಾಮರಾಜನಗರ

ಮನೆಯಲ್ಲಿ ಕಡು ಬಡತನ. ಸಂಸಾರವನ್ನು ನಿಭಾಯಿಸೋದು ತುಂಬಾ ಕಷ್ಟ ಇತ್ತು. ಸರ್ಕಾರದ 'ಗೃಹಲಕ್ಷ್ಮಿ' ಯೋಜನೆ ನನ್ನ ಬದುಕಿಗೆ ಆರ್ಥಿಕ ಶಕ್ತಿ ತುಂಬಿತು. ಪ್ರತಿ ತಿಂಗಳು ಬರುತ್ತಿದ್ದ ಹಣವನ್ನು ಕೂಡಿಟ್ಟು, ಅದರಿಂದ ಎರಡು ಮೇಕೆಗಳನ್ನು ಖರೀದಿಸಿ ಸಾಕಲು ಆರಂಭಿಸಿದೆ. ಸದ್ಯ ಅವುಗಳ ಸಂಖ್ಯೆ ಹೆಚ್ಚಾಗಿದ್ದು, ನಮ್ಮ ಕುಟುಂಬಕ್ಕೆ ಆದಾಯದ ಮೂಲವಾಗಿದೆ.

ದೇವಮ್ಮ, ಯಾದಗಿರಿ

ನಂಗೆ ನಾಟಿ ಕೋಳಿ ಸಾಕಾಣಿಕೆ ಆರಂಭಿಸುವ ಆಸೆ ಇತ್ತು. ವ್ಯಾಪಾರಕ್ಕಾಗಿ ಓಡಾಟ ಹಾಗೂ ಬಂಡವಾಳದ ಕೊರತೆಯಿಂದ ಕಂಗಾಲಾಗಿದ್ದೆ. 'ಗೃಹಲಕ್ಷ್ಮಿ' ಯೋಜನೆಯ ಹಣವನ್ನು ಕೂಡಿಟ್ಟು ನಾಟಿ ಕೋಳಿ ಫಾರ್ಮ್ ಶುರು ಮಾಡಿದೆ. ನಾನು ಈಗ ಯಾರ ಮೇಲೂ ಅವಲಂಬಿತಳಾಗದೇ ಬದುಕುತ್ತಿದ್ದೇನೆ.

ಲೀಲಾವತಿ, ಶಿವಮೊಗ್ಗ

ಕರ್ನಾಟಕ ವಾರ್ತೆ

# ಕುಟುಂಬದ ಐವರ ದುರ್ಮರಣ

**ಚಿತ್ರದುರ್ಗ:** ರಸ್ತೆಬದಿ ನಿಂತಿದ್ದ ಲಾರಿಗೆ ಬೊಲೆರೋ ಡಿಕ್ಕಿಯಾಗಿ ಸ್ಥಳದಲ್ಲೇ ಐವರು ದುರ್ಮರಣಕ್ಕೀಡಾದ ಘಟನೆ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲೂಕಿನ ಬೈರಾಪುರ ಗ್ರಾಮದ ಬಳಿ ನಡೆದಿದೆ. ರಾಷ್ಟ್ರೀಯ ಹೆದ್ದಾರಿಯಲ್ಲಿ ನಿಂತಿದ್ದ ಲಾರಿಗೆ ಬೊಲೆರೋ ವಾಹನ ಅತಿ ವೇಗವಾಗಿ ಬಂದು ಡಿಕ್ಕಿ ಹೊಡೆದ ಪರಿಣಾಮ, ವಾಹನದಲ್ಲಿದ್ದ ಒಂದೇ ಕುಟುಂಬದ ಐವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಮೃತರೆಲ್ಲರೂ ಬಳ್ಳಾರಿ ಮೂಲದವರು. ವೆಂಕಟೇಶ್ (28), ಶಿವಮ್ಮ (25), ಮೀನಾಕ್ಷಿ (16), ಪೂಜಾ (4), ಪರುಶುರಾಮ (1.5) ಮೃತರು. ಗಾಯಾಳುಗಳನ್ನು ಮೊಳಕಾಲ್ಮೂರು ಆಸ್ಪತ್ರೆಗೆ ದಾಖಲಿಸಲಾಗಿದೆ.


## ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ನ್ಯಾಕ್ ಎ' ಮಾನ್ಯತೆ, ಆಸ್ತಿ ಅಧಿಕಾರಿಗಳ ಕಛೇರಿ, ಜಿಕೆವಿಕೆ, ಬೆಂಗಳೂರು-560065.

ಸಂಖ್ಯೆ.ಆಅ/ಟಿ.ಎನ್/ಎಂ.ಪಿ. ಹಾಸ್ಟಲ್/2026–27 ದಿನಾಂಕ : 25–05–2026

### ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ)

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಮಾನವ ಸಂಪನ್ಮೂಲ ಪೂರೈಕೆ ಮಾಡಲು ಅರ್ಹ ಏಜೆನ್ಸಿಗಳಿಂದ ಟೆಂಡರನ್ನು ಆಹ್ವಾನಿಸಲಾಗಿದೆ. ಇದಕ್ಕೆ ಸಂಬಂಧಿಸಿದ ಟೆಂಡರ್ ಪ್ರಕಟಣೆಯ ವಿವರ, ಟೆಂಡರ್ ದಾಖಲಾತಿ, ದ್ವಿಲಕೋಟೆಯ ನಿಯಮಗಳು, ಷೆಡ್ಯೂಲ್ ಮತ್ತಿತರ ವಿವರಗಳು ವೆಬ್‌ಸೈಟ್: **www.kppp.karnataka.gov.in.** ರಲ್ಲಿ ದೊರೆಯುತ್ತದೆ. ಟೆಂಡರ್ ಡಾಕ್ಯುಮೆಂಟ್‌ನ ಶುಲ್ಕ ಕೆಪಿಪಿ ಪೋರ್ಟಲ್‌ನಲ್ಲಿ ನಮೂದಿಸಿರುವಂತೆ ಮತ್ತು ಇ.ಎಂ.ಡಿಯನ್ನು ಕೆಪಿಪಿ ಮಾದರಿಯಂತೆ ಕೆಪಿಪಿ ಪೋರ್ಟಲ್‌ನಲ್ಲಿ ಸಲ್ಲಿಸುವುದು.

| ಕ್ರಮ ಸಂಖ್ಯೆ | ಕೆಲಸದ ವಿವರ | ಟೆಂಡರ್‌ಗಿಟ್ಟ ಮೊತ್ತ (ಲಕ್ಷಗಳಲ್ಲಿ) | ಇ.ಎಂ.ಡಿ. (ರೂ.ಗಳಲ್ಲಿ) |
|---|---|---|---|
| 1. | ಕೃಷಿ ವಿಶ್ವವಿದ್ಯಾನಿಲಯದ ವಿವಿಧ ಆವರಣಗಳ ವಿದ್ಯಾರ್ಥಿನಿಲಯಗಳಿಗೆ ಮಾನವ ಸಂಪನ್ಮೂಲವನ್ನು ಒದಗಿಸುವ ಕೆಲಸ. | 313.00 | 4,69,500/- |

**ಕೆಲಸಕ್ಕೆ ಮೀಸಲಿಟ್ಟ ಅವಧಿ 1 ವರ್ಷ:** ಈ ಟೆಂಡರ್ ದ್ವಿಲಕೋಟೆ ಟೆಂಡರಾಗಿದ್ದು, ನಿಯಮಗಳನ್ನು ಇ-ಪೋರ್ಟಲ್‌ನಲ್ಲಿ ಪಡೆಯಬಹುದಾಗಿದೆ. **ಷೆಡ್ಯೂಲ್ ವಿವರ** (1) ಪ್ರಿಬಿಡ್ ಮೀಟಿಂಗ್ ದಿನಾಂಕ : **03-06-2026** ರ **ಬೆಳಗ್ಗೆ 10.30 ಗಂಟೆಗೆ.** (2) ಟೆಂಡರ್ ದಾಖಲೆಗಳನ್ನು ಅಪ್‌ಲೋಡ್ ಮಾಡಲು ಕೊನೆಯ **ದಿನಾಂಕ: 05-06-2026** ರ **ಸಂಜೆ: 4.00 ಗಂಟೆಯವರೆಗೆ.** (3) ತಾಂತ್ರಿಕ ಬಿಡ್ಡನ್ನು ತೆರೆಯುವ **ದಿನಾಂಕ : 08-06-2026 ರ ಬೆಳಗ್ಗೆ 10.30 ಗಂಟೆಗೆ.** (4) ಹಣಕಾಸಿನ ಬಿಡ್ಡನ್ನು ತೆರೆಯುವ **ದಿನಾಂಕ: 11-06-2026** ರ **ಬೆಳಗ್ಗೆ 10.30 ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಕಛೇರಿಯ ವೇಳೆಯಲ್ಲಿ ದೂರವಾಣಿ ಸಂಖ್ಯೆ: **080-23332765**ರಲ್ಲಿ ಸಂಪರ್ಕಿಸುವುದು. ಕೆಪಿಪಿ ಪೋರ್ಟಲ್‌ನ ಸಹಾಯವಾಣಿ **support@eprochelpdesk.com** ಮತ್ತು 8046010000/ 8068948777.

ಸಹಿ/–
ಆಸ್ತಿ ಅಧಿಕಾರಿಗಳು

DIPR/CP/RO833/AAPL/2026-27

## ಬೆಂಗಳೂರು ಉತ್ತರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ದಾಸರಹಳ್ಳಿ ವಿಭಾಗ, ಬೆಂ.ಉ.ನ.ಪಾ ವಲಯ-2, ಹೆಸರಘಟ್ಟ ಮುಖ್ಯ ರಸ್ತೆ, ಎಂಇಐ ಬಡಾವಣೆ, ಬಾಗಲಗುಂಟೆ, ಬೆಂಗಳೂರು – 560 073.

ಸಂಖ್ಯೆ:ಬೆಉನಪಾ/ಕಾಪಾಅ/ದಾ.ವಿ/ಟೆಂಡರ್/04/2026–27 ದಿನಾಂಕ: 27–05–2026

### ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ ಪ್ರಕಟಣೆ (ಐಎಫ್‌ಟಿ)
### ಏಕಲಕೋಟೆ ಟೆಂಡರ್ ದಾಖಲೆ ಪದ್ಧತಿ (ಕೆಡಬ್ಲ್ಯೂ–1)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬೆಂ.ಉ.ನ.ಪಾಲಿಕೆ, ಬೆಂಗಳೂರು ಇವರು ಆಯುಕ್ತರು ಬೆಂ.ಉ.ನ.ಪಾಲಿಕೆ, ಬೆಂಗಳೂರು ಇವರ ಪರವಾಗಿ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ

| Sl No. | ಕಾಮಗಾರಿಗಳ ಹೆಸರು |
|---|---|
| 1. | ಜಾಲಹಳ್ಳಿ ಉಪವಿಭಾಗದಲ್ಲಿ 2026ರ ಮುಂಗಾರು ಅವಧಿಗೆ ತಾತ್ಕಾಲಿಕ ನಿಯಂತ್ರಣ ಕೊಠಡಿಯನ್ನು ಸ್ಥಾಪನೆ ಮಾಡುವುದು (ವರ್ಗ–2ಎ) **ಅಂದಾಜು ಮೊತ್ತ: ₹.5.00 ಲಕ್ಷಗಳು, ಇಎಂಡಿ ಮೊತ್ತ: ₹.6250.00** |
| 2. | ಯಶವಂತಪುರ ಉಪವಿಭಾಗದಲ್ಲಿ 2026ರ ಮುಂಗಾರು ಅವಧಿಗೆ ತಾತ್ಕಾಲಿಕ ನಿಯಂತ್ರಣ ಕೊಠಡಿಯನ್ನು ಸ್ಥಾಪನೆ ಮಾಡುವುದು (ಸಾಮಾನ್ಯರಿಗೆ) **ಅಂದಾಜು ಮೊತ್ತ: ₹.7.50 ಲಕ್ಷಗಳು, ಇಎಂಡಿ ಮೊತ್ತ: ₹.18750.00** |

**ಟೆಂಡರ್ ವೇಳಾಪಟ್ಟಿ:** (1) ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ **08-06-2026**ರ ಸಂಜೆ **4:00** ಗಂಟೆಯವರೆಗೆ. (2) ಆರ್ಥಿಕ ಬಿಡ್‌ಗಳನ್ನು ದಿನಾಂಕ **09-06-2026**ರ ಸಂಜೆ **4:30** ಗಂಟೆಗೆ ತೆರೆಯಲಾಗುವುದು.

ಸಹಿ/– ಕಾರ್ಯಪಾಲಕ ಅಭಿಯಂತರರು
ದಾಸರಹಳ್ಳಿ ವಿಭಾಗ, ವಲಯ–2, ಬೆಂ.ಉ.ನ.ಪಾ

ಕರ್ನಾಟಕ ಸರ್ಕಾರ

## ರೇಷ್ಮೆ ಉಪನಿರ್ದೇಶಕರ ಕಛೇರಿ, ಸರ್ಕಾರಿ ಮಾದರಿ ಬಿತ್ತನೆ ಕೋಠಿ, ಹಾಸನ–573217

ದೂರವಾಣಿ ಸಂಖ್ಯೆ:08172–295326 ಇ–ಮೇಲ್ ಐ.ಡಿ:ddgmg.hsn@gmail.com

### ಟೆಂಡರ್ ಪ್ರಕಟಣೆ

ಸರ್ಕಾರಿ ಮಾದರಿ ಬಿತ್ತನೆ ಕೋಠಿಗೆ ಮೊಟ್ಟೆ ಉತ್ಪಾದನೆಗೆ ಮಾನವ ಸಂಪನ್ಮೂಲ ಸೇವಾ ಪೂರೈಕೆದಾರರ ನೇಮಕಾತಿಗೆ ಇ-ಟೆಂಡರ್ ಮುಖಾಂತರ ಟೆಂಡರ್ ಆಹ್ವಾನ ವೆಬ್‌ಸೈಟ್:https://kppp.karnataka.gov.in ಸಹಾಯವಾಣಿ :080–25501216/227 ಟೆಂಡರ್ ಸಂಖ್ಯೆ:DDS/GMG/HSN/E.Proc/19/2026-27 ಟೆಂಡರ್ ಪ್ರಕಟಿಸಿದ ದಿನಾಂಕ: 26–05–2026 ಟೆಂಡರ್ ಕೊನೆಯ ದಿನಾಂಕ: 06–06–20260 ಸಂಜೆ 4.00 ಟೆಂಡರ್ ತೆರೆಯುವ ದಿನಾಂಕ: 08–06–2026 ಬೆಳಿಗ್ಗೆ 11.00 ಆರ್ಥಿಕ ಬಿಡ್ ತೆರೆಯುವ ದಿನಾಂಕ:09–06–2026 ಬೆಳಿಗ್ಗೆ 11.00 ಟೆಂಡರ್ ತೆರೆಯುವ ಸ್ಥಳ: ರೇಷ್ಮೆ ಉಪನಿರ್ದೇಶಕರ ಕಛೇರಿ, ಸರ್ಕಾರಿ ಮಾದರಿ ಬಿತ್ತನೆ ಕೋಠಿ, ಹಾಸನ–573217 ಹಾಸನ ಜಿಲ್ಲೆ. ವಿಳಾಸ: ರೇಷ್ಮೆ ಉಪನಿರ್ದೇಶಕರ ಕಛೇರಿ ಸರ್ಕಾರಿ ಮಾದರಿ ಬಿತ್ತನೆ ಕೋಠಿ, ಹಾಸನ–573217 ಹಾಸನ ಜಿಲ್ಲೆ. ಇ-ಮೇಲ್ ಐಡಿ:–ddgmg.hsn@gmail.com 08172-295327 Mob. No. (7892259114)

ಸಹಿ/–ರೇಷ್ಮೆ ಉಪನಿರ್ದೇಶಕರು,
ಮಾದರಿ ಬಿತ್ತನೆ ಕೋಠಿ, ಹಾಸನ

ವಾಸಾಸಂಇ/ಹಿಸನಿ/ಹಾಸನ/172/ಕೆಎಸ್‌ಎಂಸಿಎ/2026–27

ಕರ್ನಾಟಕ ಸರ್ಕಾರ

## ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.

ಸಂ:ಕಾ.ಸಾ.ಚಿ/ಪಿ.ಬಿ–1/ಅಲ್ಪಾವಧಿ ಟೆಂಡರ್ ಪ್ರಕಟಣೆ–ಐ.ಎಫ್.ಟಿ–05/2026–27/823
ದಿನಾಂಕ: 25–05–2026

### ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ& ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ ಇವರು ಕೆಟಿಪಿಪಿ ಆಕ್ಟ್–2000 ನಿಯಮದಂತೆ ಹಾಗೂ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯು1, 2, 3 ಹಾಗೂ 4 (ಟೆಂಡರ್‌ಗಿಟ್ಟ ಮೊತ್ತ ಕನಿಷ್ಠ ರೂ.1.50 ಲಕ್ಷ ರೂಗಳೂ ಹಾಗೂ ಗರಿಷ್ಠ ರೂ.300.00 ಲಕ್ಷ ರೂಗಳು) ನಿಬಂಧನೆಗಳಿಗೊಳಪಟ್ಟಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಕೆ.ಪಿ.ಪಿ– ಪೋರ್ಟಲ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ 3/2/1 ನೇ ದರ್ಜೆ ಮತ್ತು ಬೆಸ್ಕಾಂ/ಕೆಪಿಟಿಸಿಎಲ್ ಇಲಾಖೆಯಲ್ಲಿ ನೊಂದಾಯಿತ 1ನೇ ದರ್ಜೆ ಅರ್ಹ ಗುತ್ತಿಗೆದಾರರಿಂದ ಒಟ್ಟು 15 ಕಾಮಗಾರಿಗಳ ಟೆಂಡರಗಳನ್ನು ಆಹ್ವಾನಿಸಲಾಗಿದೆ.

ಸದರಿ ಟೆಂಡರ್ ಪ್ರಕ್ರಿಯೆಗಳನ್ನು ಈ ಕೆಳಗಿನಂತೆ ನಿಗದಿಪಡಿಸಿದೆ. ದಿನಾಂಕ: 25–05–2026 ರಿಂದ ಕೆಪಿಪಿ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ:15–06–2026 ಸಾಯಂಕಾಲ 5.30 ರವರೆಗೆ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 16–06–2026 ರ ಸಾಯಂಕಾಲ 4.00 ಗಂಟೆಯವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ:17–06–2026 ಸಾಯಂಕಾಲ 04–30 ಗಂಟೆಯ ನಂತರ (ಸಾಧ್ಯವಾದಲ್ಲಿ), ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ:18–06–2026 ಸಾಯಂಕಾಲ 04–30 ಗಂಟೆಯ ನಂತರ(ಸಾಧ್ಯವಾದಲ್ಲಿ). ಸದರಿ ಕಾಮಗಾರಿಯಲ್ಲಿ ಟೆಂಡರ್ ಮೊತ್ತ ಅಥವಾ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಕೆ.ಪಿ.ಪಿ–ಪ್ರೊಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯುಮೆಂಟ್‌ನಲ್ಲಿ ನಮೂದಿಸಿರುವ ಮೊತ್ತ ಅಂತಿಮವಾಗಿರುತ್ತವೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ (08194–231811) ಹಾಗೂ ಕರ್ನಾಟಕ ಸರ್ಕಾರ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಸಹಾಯಕ ದೂರವಾಣಿ ಸಂಖ್ಯೆ:+91–8046010000, +91–8068948777 ರಿಂದ ಮಾಹಿತಿ ಪಡೆಯಬಹುದು.

DIPR/CTA/KSMCA/124/2026-27

ಸಹಿ/–ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ & ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.


### ಮೈಸೂರಿನಲ್ಲಿ ಇಬ್ಬರು, ಯಾದಗಿರಿಯಲ್ಲಿ ಒಬ್ಬ ಸಾವು। ರಾಯಚೂರು, ಬೀದರ್, ಕಲಬುರಗಿಯಲ್ಲಿ ಭಾರೀ ಮಳೆ

# ಪ್ರತ್ಯೇಕ ಪ್ರಕರಣ: ಸಿಡಿಲಿಗೆ ಮೂವರು ಬಲಿ

**ಬೆಂಗಳೂರು:** ರಾಯಚೂರು, ಕಲಬುರಗಿ ಸೇರಿ ರಾಜ್ಯದ ಹಲವೆಡೆ ಮಳೆರಾಯ ಅಬ್ಬರಿಸಿದ್ದು, ಬಿಸಿಲಿನಿಂದ ತತ್ತರಿಸಿದ ಜನರಿಗೆ ತಂಪೆರೆದಿದ್ದಾನೆ. ಇನ್ನೊಂದೆಡೆ ಮೈಸೂರಿನಲ್ಲಿ ಸಿಡಿಲು ಬಡಿದು ಇಬ್ಬರು ಮೃತಪಟ್ಟಿದ್ದಾರೆ. ಎಚ್.ಡಿ.ಕೋಟೆ ಹಾಗೂ ಹುಣಸೂರು ತಾಲೂಕುಗಳಲ್ಲಿ ದುರಂತ ಸಂಭವಿಸಿದೆ. ಎಚ್.ಡಿ.ಕೋಟೆ ತಾಲೂಕಿನ ಮಾಳದಹಾಡಿ ಗ್ರಾಮದಲ್ಲಿ ಮಧ್ಯಾಹ್ನ ಸುಮಾರು 1 ಗಂಟೆ ವೇಳೆಗೆ ಧಾರಾಕಾರವಾಗಿ ಸುರಿದ ಮಳೆ ವೇಳೆ ಸಿಡಿಲು ಬಡಿದು ಗ್ರಾಮದ ನಿವಾಸಿ ಅಪ್ಪಯ್ಯ ಸಾವನ್ನಪ್ಪಿದರು.

ಹುಣಸೂರು ತಾಲೂಕು ಕಸಬಾ ಹೋಬಳಿ ಹೊಸಪುರ ಗ್ರಾಮದಲ್ಲಿ ಸಿಡಿಲು ಬಡಿದು ಯಶೋಧಮ್ಮ ಸಾವನ್ನಪ್ಪಿದ್ದಾರೆ. ಮೃತರಿಗೆ ಪತಿ ಹಾಗೂ ಇಬ್ಬರು ಹೆಣ್ಣು ಮಕ್ಕಳಿದ್ದಾರೆ. ಇಬ್ಬರೂ ವ್ಯಕ್ತಿಗಳು ಬಡ ರೈತ ಕುಟುಂಬದವರಾಗಿದ್ದು, ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ವೇಳೆ ಈ ದುರ್ಘಟನೆ ಸಂಭವಿಸಿದೆ. ಸ್ಥಳಕ್ಕೆ ಗ್ರಾಮ ಪಂಚಾಯತಿ ಹಾಗೂ ತಾಲೂಕು ಆಡಳಿತ ಕೇಂದ್ರದ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿದರು. ಮೂರು ಪ್ರತ್ಯೇಕ ಘಟನೆ ಕುರಿತಂತೆ ಆಯಾ ಠಾಣಾ ವ್ಯಾಪ್ತಿಯಲ್ಲಿ ಪ್ರತ್ಯೇಕ ಪ್ರಕರಣ ದಾಖಲಾಗಿದೆ. ಇನ್ನೂ ರಾಯಚೂರಿನಲ್ಲಿ ಗುಡುಗು, ಸಿಡಿಲು ಸಹಿತ ಭಾರೀ ಮಳೆಯಾಗುತ್ತಿದ್ದು, ಬೆಳಗಿನ ಜಾವದಿಂದ ಬಿಟ್ಟು ಬಿಡದೇ ಸುರಿಯುತ್ತಿದೆ. ಬೀದಿಬದಿ ವ್ಯಾಪಾರಿಗಳು ಮಳೆಯಲ್ಲೇ ತರಕಾರಿ ಮಾರುತ್ತಿದ್ದಾರೆ. ಇದರ ನಡುವೆ ರಾಯಚೂರು ತಾಲೂಕಿನ ಕಡಗಂದೊಡ್ಡಿಯಲ್ಲಿ ರೈತ ವಿರೇಶ್ ಅವರಿಗೆ ಸಿಡಿಲು ಬಡಿದಿದ್ದು, ಗಾಯಗೊಂಡಿದ್ದಾರೆ. ಸದ್ಯ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಚಿಕಿತ್ಸೆ ಮುಂದುವರಿದಿದೆ. ಇನ್ನೂ ಕಲಬುರಗಿಯಲ್ಲಿ ಬೆಳಗ್ಗೆಯಿಂದ ಗುಡುಗು, ಸಿಡಿಲು ಸಹಿತ ಮಳೆಯಾಗುತ್ತಿದೆ. ಬಿಸಿಲಿನ ಝಳಕ್ಕೆ ತತ್ತರಿಸಿದ ಜನರಿಗೆ ಮಳೆರಾಯ ತಂಪೆರೆದಿದ್ದಾನೆ.

ಬಸವಕಲ್ಯಾಣ ನಗರದಲ್ಲಿ ಮಳೆಗೆ ಮರದ ಕೊಂಬೆ ಮುರಿದು ಬಿದ್ದಿರುವುದು.



## ಶಹಾಪುರ: ಸಿಡಿಲು ಬಡಿದು ವ್ಯಕ್ತಿ ಸಾವು

ಶಹಾಪುರ ತಾಲೂಕಿನ ರೋಜಾ (ಅಣಬಿ) ಗ್ರಾಮದಲ್ಲಿ ಜಮೀನಿನಲ್ಲಿ ಕೆಲಸ ಮಾಡಲು ಹೋಗಿದ್ದ ವ್ಯಕ್ತಿಯೊಬ್ಬರು ಸಿಡಿಲು ಬಡಿದು ಮೃತಪಟ್ಟಿದ್ದಾರೆ. ತೌಕಲ್ ಪಟೇಲ್ ತಂದೆ ಅಬ್ದುಲ್ ಭಾಷಾ ಹೆಡಗಿಮದ್ರಿ (42) ಮೃತ ದುರ್ದೈವಿಯಾಗಿದ್ದಾರೆ. ಬುಧವಾರ ಬೆಳಗಿನ ಜಾವದಿಂದಲೇ ಶುರುವಾದ ಜೋರು ಗಾಳಿ ಸಹಿತ ಮಳೆ ಗುಡುಗಿಗೆ ಮರದ ಕೆಳಗೆ ಕುಳಿತಿದ್ದ ಅವರಿಗೆ ಸಿಡಿಲು ಬಡಿದು ಸಾವನ್ನಪ್ಪಿದ್ದಾರೆ. ಮೃತರಿಗೆ ಉಬ್ಬರು ಗಂಡು ಇಬ್ಬರು ಹೆಣ್ಣು ಮಕ್ಕಳಿದ್ದು, ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿತ್ತು. ಈ ಕುರಿತು ಭೀಮರಾಯನಗುಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಬಸವ ಕಲ್ಯಾಣ: ಮನೆಗಳಿಗೆ ನುಗ್ಗಿದ ನೀರು

ಬೀದರ್ ಜಿಲ್ಲೆಯ ಬಸವಕಲ್ಯಾಣ ನಗರದಲ್ಲಿ ಬುಧವಾರ ಬೆಳಂಬೆಳಗ್ಗೆ ಸುರಿದ ಆಲಿಕಲ್ಲು ಸಹಿತ ಭಾರೀ ಮಳೆ ಹಲವು ಅವಾಂತರಗಳನ್ನು ಸೃಷ್ಟಿಸಿದೆ. ನಗರದ ತಗ್ಗು ಪ್ರದೇಶಗಳ ಮನೆಗಳಿಗೆ ನೀರು ನುಗ್ಗಿ, ನಿವಾಸಿಗಳು ಪರದಾಡಿದರು. ಮನೆಯೊಳಗಿನ ಧಾನ್ಯ, ಬಟ್ಟೆ, ಗೃಹೋಪಯೋಗಿ ವಸ್ತುಗಳು ನೀರಲ್ಲಿ ಜಲಾವೃತ ಆಗಿದ್ದವು. ಸುಮಾರು ಅರ್ಧ ಗಂಟೆಗೂ ಹೆಚ್ಚು ಸಮಯ ಗುಡುಗು ಸಹಿತ ಸುರಿದ ಮಳೆಗೆ ನಗರದ ಪ್ರಮುಖ ರಸ್ತೆಗಳ ಮೇಲೆ ದೊಡ್ಡ ದೊಡ್ಡ ಮರಗಳು, ವಿದ್ಯುತ್ ಕಂಬಗಳು ಧರೆಗುರುಳಿದವು. ನಗರದ ಹಳೆ ಬಸ್ ನಿಲ್ದಾಣ ರಸ್ತೆ, ತ್ರಿಪುರಾಂತ ರಸ್ತೆ, ಗಾಂಧಿವೃತ್ತ ಸೇರಿದಂತೆ ಹಲವು ಮುಖ್ಯ ರಸ್ತೆಗಳಲ್ಲಿ ಮರಗಳು ಉರುಳಿ ಬಿದ್ದ ಕಾರಣ ಶಾಲಾ ಕಾಲೇಜು ಹಾಗೂ ಕಚೇರಿಗೆ ತೆರಳುವವರಿಗೆ ತೀವ್ರ ತೊಂದರೆಯಾಯಿತು. ಕೆಲವೆಡೆ ವಾಹನಗಳು ಗಂಟೆಗಟ್ಟಲೆ ಸಾಲುಗಟ್ಟಿ ನಿಂತಿದ್ದ ದೃಶ್ಯ ಕಂಡುಬಂದಿತು. ನಗರಸಭೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಜೆಸಿಬಿ,ಟ್ರ್ಯಾಕ್ಟರ್ ಸಹಾಯದಿಂದ ಮರ ತೆರವು ಕಾರ್ಯ ನಡೆಸಿದರು.

## ಎಬೋಲಾ: ಮಹಿಳೆಯ ಸ್ಯಾಂಪಲ್ ವರದಿ ನೆಗೆಟಿವ್

**ಬೆಂಗಳೂರು:** ಎಬೋಲಾ ವೈರಸ್ ಶಂಕಿತ ಪ್ರಕರಣವೊಂದು ಬೆಂಗಳೂರಲ್ಲಿ ಪತ್ತೆಯಾಗಿರೋದು ಭಾರಿ ಆತಂಕಕ್ಕೆ ಕಾರಣವಾಗಿತ್ತು. ಆದರೆ ಉಗಾಂಡಾ ಮೂಲದ ಮಹಿಳೆಯ ಎಬೋಲಾ ಪರೀಕ್ಷೆಯ ರಿಪೋರ್ಟ್ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕೈಸೇರಿದ್ದು, ವರದಿ ನೆಗೆಟಿವ್ ಬಂದಿದೆ. ಹೀಗಾಗಿ ರಾಜ್ಯಕ್ಕೂ ಎಬೋಲಾ ಮಾರಿ ಕಾಲಿಟ್ಟಿತಾ ಎಂಬ ಆತಂಕದಲ್ಲಿದ್ದ ಇಲಾಖೆ ನಿಟ್ಟುಸಿರು ಬಿಟ್ಟಿದೆ.

ಉಗಾಂಡಾ ದೇಶದ ಕ್ಯಾಂಪಾಲಾ ಮೂಲದ ನಾಗಿರೆ ಲತಿಫಾ (28) ಎಂಬ ಮಹಿಳೆ ಕಳೆದ ಮೇ 23ರಂದು ಬೆಂಗಳೂರಿಗೆ ಆಗಮಿಸಿದ್ದರು. ಇಲ್ಲಿನ ರಾಯಲ್ ಏಸ್ ಬೂಟಿಕ್' ಹೋಟೆಲ್‌ನ ರೂಮ್ ನಂಬರ್ 303ರಲ್ಲಿ ತಂಗಿದ್ದ ಆಕೆಗೆ ಎಬೋಲಾ ಮಾದರಿಯ ಆರೋಗ್ಯ ಸಮಸ್ಯೆಗಳು ಇರುವುದು ಗೊತ್ತಾಗುತ್ತಿದ್ದಂತೆ ಎಚ್ಚೆತ್ತ ಆರೋಗ್ಯ ಇಲಾಖೆ, ತಕ್ಷಣವೇ ಆದೇಶ ಹೊರಡಿಸಿ ಆಂಬುಲೆನ್ಸ್ ಮೂಲಕ ಅವರನ್ನು ಐಸೋಲೇಷನ್‌ಗಾಗಿ ಆಸ್ಪತ್ರೆಗೆ ಸ್ಥಳಾಂತರಿಸಿತ್ತು. ಜತೆಗೆ ಶಂಕಿತ ಮಹಿಳೆಯಿಂದ ರಕ್ತ ಹಾಗೂ ಇತರ ಅಗತ್ಯ ಮಾದರಿಗಳನ್ನು ಸಂಗ್ರಹಿಸಿ, ಈ ಸ್ಯಾಂಪಲ್‌ಗಳನ್ನು ಹೆಚ್ಚಿನ ಪರೀಕ್ಷೆಗಾಗಿ ಪುಣೆಯ ಲ್ಯಾಬ್‌ಗೆ ಕಳುಹಿಸಲಾಗಿತ್ತು. ಆ ವರದಿ ಈಗ ನೆಗೆಟಿವ್ ಬಂದಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ಉಗಾಂಡಾದ ಕ್ಯಾಂಪಾಲಾ ಮೂಲದ ನಾಗಿರೆ ಲತಿಫಾ ಅವರ ಆರೋಗ್ಯ ಈಗ ಸ್ಥಿರವಾಗಿದ್ದು, ಹೀಗಾಗಿ ಐಸೋಲೇಷನ್‌ನಲ್ಲಿ ಇಡಲಾಗಿದ್ದ ಅವರನ್ನು ಆಸ್ಪತ್ರೆಯಿಂದ ಹೋಟೆಲ್‌ಗೆ ಸ್ಥಳಾಂತರ ಮಾಡಲಾಗಿದೆ. ಆದರೂ 21 ದಿನಗಳ ಕಾಲ ನಾಗಿರೆ ಲತಿಫಾ ಕ್ವಾರಂಟೈನ್ ಆಗಬೇಕಿದ್ದು, ಈ ಅವಧಿಯಲ್ಲಿ ಆರೋಗ್ಯ ಇಲಾಖೆ ನಿರಂತರವಾಗಿ ಮಾನಿಟರ್ ಮಾಡಲಿದೆ. ಮತ್ತೆ ರೋಗ ಲಕ್ಷಣ ಕಂಡುಬರದಿದ್ದರೆ ಕ್ಯಾರಂಟೈನ್‌ನಿಂದ ಬಿಡುಗಡೆ ಮಾಡಲಾಗುತ್ತದೆ. ಒಂದು ವೇಳೆ ರೋಗಲಕ್ಷಣ ಕಂಡುಬಂದರೆ 2ನೇ ಹಂತದಲ್ಲಿ ಪುಣೆಯ ಲ್ಯಾಬ್‌ನಲ್ಲಿ ಸ್ಯಾಂಪಲ್ ಪರಿಶೀಲನೆ ನಡೆಯಲಿದೆ ಎನ್ನಲಾಗಿದೆ.

# ಸಿದ್ದು ನಿರ್ಗಮನ ಸಾಧ್ಯತೆ

← ಮೊದಲಪುಟದಿಂದ

ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯ ನಂತರ ನೂತನ ಶಾಸಕಾಂಗ ಪಕ್ಷದ ನಾಯಕ ರಾಜ್ಯಪಾಲರನ್ನು ಭೇಟಿ ಮಾಡಿ ಪ್ರಮಾಣ ವಚನ ಕಾರ್ಯ ಕ್ರಮ ನಿಗದಿ ಮಾಡುವರು ಎಂದು ಹೇಳಲಾಗಿದೆ.

ನೂತನ ಮುಖ್ಯಮಂತ್ರಿಯ ಪ್ರಮಾಣ ವಚನ ಕಾರ್ಯಕ್ರಮಕ್ಕೆ ಶುಭ ಮುಹೂರ್ತ ನಿಗದಿಗೆ ಈಗಾಗಲೇ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಆಪ್ತರು ಹಲವು ಜ್ಯೋತಿಷಿಗಳನ್ನು ಸಂಪರ್ಕಿಸಿದ್ದು, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಾವು ನಂಬುವ ಹಾಗೂ ನಡೆದುಕೊಳ್ಳುವ ತಿಪಟೂರಿನ ಕಾಡಸಿದ್ದೇಶ್ವರ ಮಠದ ಅಜ್ಜಯ್ಯನವರ ಸೂಚನೆಯಂತೆ ಪ್ರಮಾಣ ವಚನ ಕಾರ್ಯಕ್ರಮಕ್ಕೆ ಮುಹೂರ್ತ ನಿಗದಿ ಮಾಡುವರು ಎಂದು ಹೇಳಲಾಗಿದೆ. ಜೂನ್ ಒಂದರ ಸೋಮ ವಾರ ನೂತನ ಮುಖ್ಯಮಂತ್ರಿಯ ಪ್ರಮಾಣ ವಚನ ಕಾರ್ಯಕ್ರಮ ನಡೆಯುವ ಸಾಧ್ಯತೆಗಳು ಹೆಚ್ಚಿವೆ.

### ಸಿಎಲ್‌ಪಿ ಸಭೆಯಲ್ಲಿ ಒನ್‌ಲೈನ್ ಅಜೆಂಡಾ

ಸಿದ್ದರಾಮಯ್ಯ ಅವರು ರಾಜೀನಾಮೆ ನೀಡುವುದು ಖಚಿತವಾಗುತ್ತಿದ್ದಂತೆ ಶಾಸಕಾಂಗ ಪಕ್ಷದ ಸಭೆ ಕರೆದು ನೂತನ ಮುಖ್ಯಮಂತ್ರಿ ಯನ್ನು ಆಯ್ಕೆ ಮಾಡುವ ನಾಮ್‌ಕೇವಾಸ್ತೆ ಪ್ರಕ್ರಿಯೆ ನಡೆಯಲಿದೆ. ಗುರುವಾರ ಸಿಎಲ್‌ಪಿ ಸಭೆ ನಡೆಸಿ, ಡಿ.ಕೆ.ಶಿವಕುಮಾರ್ ಹೆಸರನ್ನು ಹೈಕಮಾಂಡ್ ಕಡೆಯಿಂದ ಸೂಚಿಸಿ, ಸರ್ವಾನುಮತದ ಆಯ್ಕೆ ಮಾಡಲು ತೀರ್ಮಾನಿಸಲಾಗಿದೆ. ಮೇಲ್ನೋಟಕ್ಕೆ ಸಿಎಲ್‌ಪಿ ಸಭೆಯಲ್ಲಿ ಯಾವುದೇ ಗೊಂದಲಗಳಾಗುವುದಿಲ್ಲ ಎನ್ನಲಾಗುತ್ತಿದೆಯಾದರೂ, ಸಿದ್ದು ಆಪ್ತ ಶಾಸಕರು ಮೂರನೇ ಹೆಸರನ್ನು ಪ್ರಸ್ತಾಪಿಸುವ ಸಾಧ್ಯತೆಯಿದೆ. ಆದರೆ ಪಕ್ಷದ ಹೈಕಮಾಂಡ್ ಅಂತಿಮ ತೀರ್ಮಾನ ಮಾಡಿರುವುದರಿಂದ ಯಾವುದೇ ಬದಲಾವಣೆ ಸಾಧ್ಯತೆ ಕಡಿಮೆ.

## ಇಂದು ಸಿಎಂ ಕೊನೆ ಸುದ್ದಿಗೋಷ್ಠಿ?

2013-18ರವರೆಗೆ ಪೂರ್ಣಾವಧಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಅವರು ಎರಡನೇ ಅವಧಿಗೆ ಮೂರು ವರ್ಷ ಪೂರೈಸಿದ್ದರು. ಈ ಮೂಲಕ ಕರ್ನಾಟಕದಲ್ಲಿ ಸುದೀರ್ಘ ಅವಧಿಗೆ ಮುಖ್ಯಮಂತ್ರಿಯಾಗಿದ್ದ ದಾಖಲೆಯನ್ನು ಹೊಂದಿದ್ದರು. ಈ ದಾಖಲೆ ಅವಧಿ ಅಂತ್ಯಗೊಳಿಸುವ ಸಜ್ಜಾಗಿರುವ ಸಿದ್ದರಾಮಯ್ಯ ಅವರು ಗುರುವಾರ ಸುದ್ದಿಗೋಷ್ಠಿ ನಡೆಸಲು ತೀರ್ಮಾನಿಸಿದ್ದಾರೆ ಎನ್ನಲಾಗಿದೆ. ತಮ್ಮ ಕೊನೆಯ ಸುದ್ದಿಗೋಷ್ಠಿಯಲ್ಲಿ ರಾಜ್ಯ ಜನರಿಗೆ ಸ್ಪಷ್ಟ ಸಂದೇಶ ರವಾನಿಸುವ ಸಾಧ್ಯತೆಯಿದೆ. ಇದರೊಂದಿಗೆ ದೆಹಲಿಯಲ್ಲಿ ನಡೆದ ಬೆಳವಣಿಗೆಗಳನ್ನು ಪರೋಕ್ಷವಾಗಿ ಪ್ರಸ್ತಾಪಿಸುವ, ಎರಡು ಅವಧಿಗೆ ಮುಖ್ಯಮಂತ್ರಿಯಾಗಲು ಅವಕಾಶ ನೀಡಿದ ಹೈಕಮಾಂಡ್‌ಗೆ ಧನ್ಯವಾದ ತಿಳಿಸುವ ಮೂಲಕ ಭಾವನಾತ್ಮಕ ವಿದಾಯ ಸಂದೇಶ ರವಾನಿಸಲಿದ್ದಾರೆ ಎನ್ನಲಾಗಿದೆ.

## ವೇಣುಗೋಪಾಲ್ ಇಂದು ಬರಲ್ಲ

ರಾಜ್ಯದಲ್ಲಿ ಉಂಟಾಗಿರುವ ತೀವ್ರ ಅಸಮಾಧಾನದ ಹಿನ್ನೆಲೆಯಲ್ಲಿ ಕರ್ನಾಟಕಕ್ಕೆ ಗುರುವಾರ ಬರಬೇಕಾಗಿದ್ದ ಎಐಸಿಸಿ ಸಂಘಟನಾ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರ ಪ್ರವಾಸ ಕೊನೆ ಕ್ಷಣದಲ್ಲಿ ರದ್ದಾಗುವ ಸಾಧ್ಯತೆ ಇದೆ ಎನ್ನಲಾಗಿದೆ. ಆದರೆ, ದೆಹಲಿಯಿಂದಲೇ ಆಪರೇಷನ್ ನಡೆಸಿರುವ ವೇಣುಗೋಪಾಲ್, ಸಿಎಂ ಸಿದ್ದರಾಮಯ್ಯ ಅವರ ಅತ್ಯಾಪ್ತ ನಾಯಕರಿಗೆ ನೇರವಾಗಿ ಫೋನ್ ಕರೆ ಮಾಡಿದ್ದಾರೆ. ರಾಜೀನಾಮೆ ಪ್ರಕ್ರಿಯೆ ವೇಳೆ ರಾಜ್ಯದಲ್ಲಿ ಯಾವುದೇ ರೀತಿಯ ಗೊಂದಲ ಅಥವಾ ಗಲಾಟೆಗಳು ಸೃಷ್ಟಿಯಾಗಬಾರದು. ಎಲ್ಲವನ್ನೂ ಅತ್ಯಂತ ಶಾಂತಿಯುತವಾಗಿ ಮತ್ತು ಸುಗಮವಾಗಿ ಮುಗಿಸಬೇಕು ಎಂದು ಹೈಕಮಾಂಡ್‌ನ ಸಂದೇಶವನ್ನು ಸಿಎಂ ಆಪ್ತ ವಲಯಕ್ಕೆ ರವಾನಿಸಿದ್ದಾರೆ ಎನ್ನಲಾಗಿದೆ.

## ಆಪ್ತರ ಮುಂದೆ ಮೌನಕ್ಕೆ ಜಾರಿದ ಸಿದ್ದು

← ಮೊದಲಪುಟದಿಂದ

ಇದಕ್ಕೂ ಮೇಲೆ ನೋಡುತ್ತಾ ಕೂತಿದ್ದರೇ ಹೊರತು ಯಾವುದೇ ಪ್ರತಿಕ್ರಿಯೆ ನೀಡಿರಲಿಲ್ಲ. ಇದಾದ ಬಳಿಕ ಶಾಸಕ ಶಿವಲಿಂಗೇಗೌಡ ಅವರು, ' ಈ ರೀತಿ ಏಕಾಏಕಿ ಜನಪ್ರಿಯ ಮುಖ್ಯಮಂತ್ರಿಯೊಬ್ಬರನ್ನು ಇಳಿಸಿದರೆ ಅದರ ಅರ್ಥವೇನು? ಸುಮ್ಮನೆ ನೀವು ಹೋಗಬೇಕು ಎಂದರೆ ಹೇಗೆ? ಇದೆಂಥ ಪಕ್ಷ ಎಂದು ಅಸಮಾಧಾನ ಹೊರಹಾಕಿದ್ದಾರೆ. ಇದಕ್ಕೂ ಸಿದ್ದರಾಮಯ್ಯ ಅವರದ್ದು ಮೌನವೇ ಉತ್ತರವಾಗಿತ್ತು. ಇದಾದ ಬಳಿಕ ಸಚಿವ ಜಮೀರ್ ಅಹ್ಮದ್, ಕೆ.ಜೆ. ಜಾರ್ಜ್, ಕೆ.ವೆಂಕಟೇಶ್, ಎಂ.ಬಿ. ಪಾಟೀಲ್ ಸೇರಿದಂತೆ ಹಲವು ಸಚಿವರು, 56ಕ್ಕೂ ಹೆಚ್ಚು ಶಾಸಕರು ಕೇಳಿದಾಗಲೂ ಮಾತನಾಡಿಲ್ಲ. ಕೆಎಸ್‌ಟಿಡಿಸಿ ಅಧ್ಯಕ್ಷ ಎಂ. ಶ್ರೀನಿವಾಸ್ ಸೇರಿದಂತೆ ಹಲವರು, ಏನಾಗಿದೆ? ಇಳಿಸಲು ಕಾರಣವೇನು ಎನ್ನುವುದನ್ನಾದರು ತಿಳಿಸಿ ಎಂದು ಒತ್ತಡ ಹೇರಿದಾಗ ನಾನು ಎಲ್ಲವನ್ನೂ ನಾಳೆ (ಗುರುವಾರ) ಮಾಧ್ಯಮದ ಮುಂದೆ ಮಾತಾಡುವೆ. ಆ ಮೂಲಕ ರಾಜ್ಯದ ಜನರಿಗೆ ತಿಳಿಸುವೆ ಎನ್ನುವ ಮಾತನ್ನು ಹೇಳಿ ಮತ್ತೆ ಮೌನಕ್ಕೆ ಜಾರಿದ್ದಾರೆ. ಸಿದ್ದರಾಮಯ್ಯ ಅವರ ಈ ಮೌನವನ್ನು ನೋಡಿ, ಸುತ್ತಲಿದ್ದ ನಾಯಕರು ಮುಖ-ಮುಖ ನೋಡಿಕೊಂಡು ಕೆಲ ಕಾಲ ಕೂತಿದ್ದರು ಎಂದು ತಿಳಿದುಬಂದಿದೆ.

**ಹಲವು ಶಾಸಕರ ಆಕ್ಷೇಪ:** ಸಿದ್ದರಾಮಯ್ಯ ನೋಡಲು ಆಗಮಿಸಿದ್ದ ಹಲವು ಶಾಸಕರು ಮುಖ್ಯಮಂತ್ರಿ ಬದಲಾವಣೆಗೆ ಕಾರಣವನ್ನು ಕೇಳಿದಾಗ ಸಿದ್ದರಾಮಯ್ಯ ಉತ್ತರಿಸದೇ ಇರುವುದನ್ನು ಗಮನಿಸಿ, ಪಕ್ಷದ ಹೈಕಮಾಂಡ್ ವಿರುದ್ಧ ನೇರವಾಗಿ ಅಸಮಾಧಾನ ಹೊರಹಾಕಿದ್ದಾರೆ.

ಏಕಾಏಕಿ ಬದಲಾವಣೆ ಎಂದರೆ ಹೇಗೆ? ಶಾಸಕರ ಅಭಿಪ್ರಾಯವನ್ನಾದರೂ ಪಡೆಯಬೇಕು ಅಲ್ಲವೇ? ಈ ರೀತಿ ಮಾಡಿಯೇ ಪಕ್ಷ ಸಂಘಟನೆಗೆ ರಾಷ್ಟ್ರಾದ್ಯಂತ ಹೊಡೆತ ಬಿದ್ದಿದೆ ಎಂದು ಸಿದ್ದರಾಮಯ್ಯ ಮುಂದೆ ಬೇಸರ ವ್ಯಕ್ತಪಡಿಸಿದ್ದಾರೆ. ಇದಕ್ಕೂ ಸಿದ್ದರಾಮಯ್ಯ ಅವರು ನಿರ್ಭಾವುಕರಾಗಿ ಶಾಸಕರನ್ನು ನೋಡಿದ್ದಾರೆಯೇ ಹೊರತು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಇದು ಪಕ್ಷದ ಮೇಲೆ ಯಾವ ರೀತಿಯ ಹೊಡೆತ ಬೀಳಲಿದೆ ಎನ್ನುವ ಆತಂಕ ಹಲವರಲ್ಲಿದೆ.


ಕರ್ನಾಟಕ ಸರ್ಕಾರ

## ಕಾರ್ಯಾಲಯ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೀದರ.

ಸಂ: ಕಾನಿಅ/ಪಂರಾಇವಿ/ಬೀದರ/ತಾಶಾ–1/2026–27/251 ದಿನಾಂಕ: 27.05.2026

### ಅಲ್ಪಾವಧಿ ಟೆಂಡರ್ ಪ್ರಕಟಣೆ, (ಇ-ಪ್ರೊಕ್ಯೂರಮೆಂಟ್)

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ ರಾಜ್ ಇಂಜಿನಿಯರಿಂಗ ವಿಭಾಗ, ಬೀದರ ಇವರಿಂದ 5054 ಯೋಜನೆಯಡಿ ಮಂಜೂರಾದ 03 ಕಾಮಗಾರಿಗಳಿಗೆ **(ಕನಿಷ್ಟ ರೂ. 221,34,101.01** (Rupees Two Crore Twenty One Lakhs Thirty Four Thousand One Hundred One and paise one only) ಮತ್ತು **ಗರಿಷ್ಟ 309,47,853.51 ಮೊತ್ತದ** (Rupees Three Crore Nine Lakhs Forty Seven Thousand Eight Hundred Fifty Three and paise fifty one only) ಗುತ್ತಿಗೆದಾರರನ್ನು ನೇಮಿಸಲು, ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಕೆ.ಟಿ.ಪಿ.ಪಿ. ಕಾಯ್ದೆ ಹಾಗೂ ಕೆ.ಡಬ್ಲ್ಯೂ–04ರ ನಿಬಂಧನೆಗೊಳಪಟ್ಟು ಕೆ.ಪಿ.ಪಿ.ನಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಂತರಜಾಲ ತಾಣ https://kppp.karnataka.gov.inನ್ನು ಸಂಪರ್ಕಿಸಬಹುದು. (Work Indent No:- RDPR/2026-27/RD/WORK_INDENT26836, RDPR/2026-27/RD/WORK_INDENT26595 & RDPR/2026-27/RD/WORK_INDENT26680). **ಟೆಂಡರ್ ಪ್ರಕ್ರಿಯೆ ದಿನಾಂಕಗಳು:** 1. ಇ-ಪ್ರಾಕ್‌ನಲ್ಲಿ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:27.05.2026 ರಿಂದ 10.06.2026 16:00 ಗಂಟೆವರೆಗೆ. 2. ತಾಂತ್ರಿಕ ಬಿಡ್ ತೆರೆಯುವ ದಿನಾಂಕ :11.06.2026 ರಂದು 16:00 ಗಂಟೆ ನಂತರ, 3. ಆರ್ಥಿಕ ಬಿಡ್ ತೆರೆಯುವ ದಿನಾಂಕ:17.06.2026 ರಂದು 11:00 ಗಂಟೆ ನಂತರ

ಸಹಿ/–ಕಾರ್ಯನಿರ್ವಾಹಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಬೀದರ.

ವಾ.ಸಾ.ಸಂ.ಇ/ಬೀದರ/42/ಕೆ.ಎಸ್.ಎಂ.ಸಿ.&ಎ/2026–27

## ಬೆಳಗಾವಿ ಮಹಾನಗರ ಪಾಲಿಕೆ

ಸಿಟಿಎಸ್. ನಂ. 4821/26, 4821/27, ಆರ್.ಎಸ್. ನಂ. 1005, ಸುಭಾಷನಗರ, ಬೆಳಗಾವಿ.
ದೂರವಾಣಿ : 0831 – 2405304, ಇ–ಮೇಲ್ : itstaff_ulb_belgaum@yahoo.com,
ವೆಬ್‌ಸೈಟ್ : www.belgaumcity.mrc.gov.in

स्वच्छ भारत एक कदम स्वच्छता की ओर

ಸಂಖ್ಯೆ : ಮ.ನ.ಬೆ./ಕಂ.ಶಾ./ಜಾಹೀರಾತು/ಇ–ಹರಾಜು/2026–27 ದಿನಾಂಕ : 22–05–2026

### ಇ-ಹರಾಜು ಪ್ರಕಟಣೆ

**ಆಯುಕ್ತರು, ಮಹಾನಗರ ಪಾಲಿಕೆ ಬೆಳಗಾವಿ** ಇವರಿಂದ ಈ ಕೆಳಗಿನಂತೆ ವಿವರಿಸಲಾದ **ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿಯ ಉತ್ತರ ವಲಯದಲ್ಲಿ ಬರುವಂತಹ ವಿವಿಧ ಜಾಹೀರಾತುಗಳ ಪ್ರದರ್ಶನ ಮಾಡುವ ಕುರಿತು ಹರಾಜನ್ನು** ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ.

**ಕಾಮಗಾರಿ ಹೆಸರು : ಬೆಳಗಾವಿ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ಉತ್ತರ ವಲಯದಲ್ಲಿನ ಮಹಾನಗರ ಪಾಲಿಕೆಯ ಹೋರ್ಡಿಂಗ್ಸ್ – 28, ಎಲ್.ಇ.ಡಿ. ಸ್ಕ್ರೀನ್ – 02, ಬಸ್ ಬ್ಯಾಕ್‌ಡ್ರಾಪ್ – 23, ಗ್ಯಾಂಟ್ರೀಜ – 03, ಕ್ಯಾಂಟಿಲೀವರ್ – 08 ಗಳ ಜಾಹೀರಾತು ಪ್ರದರ್ಶನ ಶುಲ್ಕ ವಸೂಲಾತಿ ಕುರಿತು ಇ–ಹರಾಜು ಮಾಡುವುದು. (Auction for Collection of fees for Hoardings - 28, LED Screen - 02, Bus Backdrop - 23, Gantry - 03 and Cantilever - 08 Advertisement Board in the Belagavi City Corporation North Zone Limit) Auction No. : DMA/2026-27/AUCTION/6805, ಕನಿಷ್ಠ ಹರಾಜು ಮೊತ್ತ : ರೂ. 79,70,649/– (ಜಿ.ಎಸ್.ಟಿ. ಹೊರತುಪಡಿಸಿ), ಇ.ಎಂ.ಡಿ. ಹಣ (ರೂ. ಗಳಲ್ಲಿ) : 1,59,413/–, ನಿರ್ವಹಿಸುವ ಕಾಲಾವಧಿ : 03 ವರ್ಷಗಳು.**

1) **ಹರಾಜು ಕುರಿತು ವಿವರಣೆಗಾಗಿ ಕೊನೆಯ ದಿನಾಂಕ ಮತ್ತು ವೇಳೆ : 08–06–2026 ರ ಸಂಜೆ 5.00 ಘಂಟೆಯವರೆಗೆ,**
2) **ಹರಾಜಿನಲ್ಲಿ ಭಾಗವಹಿಸುವ ಕೊನೆಯ ದಿನಾಂಕ ಮತ್ತು ವೇಳೆ : 10–06–2026 ರ ಸಂಜೆ 5.00 ಘಂಟೆಯವರೆಗೆ,**
3) **ಹರಾಜಿನ ಆರಂಭದ ದಿನಾಂಕ ಮತ್ತು ವೇಳೆ : 15–06–2026 ರ ಬೆಳಿಗ್ಗೆ 11.00 ರಿಂದ 5.00 ಘಂಟೆಯವರೆಗೆ.**

ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ **ವೆಬ್‌ಸೈಟ್ : https://kppp.karnataka.gov.in** ನಲ್ಲಿ ವೇಳಾ ಪಟ್ಟಿಯೊಂದಿಗೆ ಪ್ರಕಟಿಸಲಾಗಿದೆ. ಒಂದು ವೇಳೆ ತಾಂತ್ರಿಕ ಕಾರಣಗಳಿಂದ ಸದರಿ ಹರಾಜಿನಲ್ಲಿ ಯಾವುದಾದರು ಬದಲಾವಣೆಯಾದಲ್ಲಿ ಸದರಿ ಬದಲಾವಣೆಯ ವಿವರಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು.

ಸಹಿ/– ಉಪ ಆಯುಕ್ತರು (ಕಂದಾಯ), ಮಹಾನಗರ ಪಾಲಿಕೆ, ಬೆಳಗಾವಿ. | ಸಹಿ/– ಮುಖ್ಯ ಲೆಕ್ಕಾಧಿಕಾರಿಗಳು, ಮಹಾನಗರ ಪಾಲಿಕೆ, ಬೆಳಗಾವಿ. | ಸಹಿ/– ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ.

ಡಿಐಪಿಆರ್/ಬೆಳಗಾವಿ/324/ಮಣಿಪಾಲ್/2026–27


## ಶಿವಾನಂದ ನೀಲಣ್ಣನವರ್ ಕೋರ್ಟ್‌ಗೆ ಹಾಜರು

**ಬೆಳಗಾವಿ:** ಬಹುಚರ್ಚಿತ 4,500 ಕೋಟಿ ರು.ವಂಚನೆ ಆರೋಪ ಪ್ರಕರಣದಲ್ಲಿ ಪ್ರಮುಖ ಆರೋಪಿ ಶಿವಾನಂದ ನೀಲಣ್ಣವರ್ ಅವರನ್ನು ಸಿಐಡಿ ಅಧಿಕಾರಿಗಳು ಬುಧವಾರ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯಕ್ಕೆ ಹಾಜರು ಪಡಿಸಿದರು.

ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಅಧಿಕಾರಿಗಳ ಮನವಿಯನ್ನು ಪರಿಗಣಿಸಿದ ನ್ಯಾಯಾಧೀಶ ಗಂಗಾಧರ್ ಕೆ. ಅವರು ನೀಲಣ್ಣವರ್‌ಗೆ 14 ದಿನಗಳ ನ್ಯಾಯಾಂಗ ಬಂಧನ ವಿಧಿಸಿ ಆದೇಶಿಸಿದರು. ಸಿಐಡಿ ಕಸ್ಟಡಿ ಅವಧಿ ಅಂತ್ಯಗೊಂಡ ಹಿನ್ನೆಲೆಯಲ್ಲಿ ಅವರನ್ನು ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿತ್ತು. ವಿಚಾರಣೆ ವೇಳೆ ತನಗೆ ಎದೆನೋವು ಸೇರಿದಂತೆ ಆರೋಗ್ಯ ಸಮಸ್ಯೆಗಳಿದ್ದು, ಸೂಕ್ತ ಚಿಕಿತ್ಸೆ ಪಡೆಯಲು ಅವಕಾಶ ನೀಡುವಂತೆ ನೀಲಣ್ಣವರ್ ನ್ಯಾಯಾಲಯಕ್ಕೆ ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಧೀಶರು, ಆರೋಗ್ಯ ಸಮಸ್ಯೆಗಳಿದ್ದರೆ ವೈದ್ಯರು ಪರಿಶೀಲಿಸಿ ಅಗತ್ಯ ಚಿಕಿತ್ಸೆ ನೀಡಲಿದ್ದಾರೆ ಎಂದು ತಿಳಿಸಿದರು.

'ಬಿಮ್ಸ್ ಆಸ್ಪತ್ರೆಯಲ್ಲಿ ಉತ್ತಮ ಚಿಕಿತ್ಸೆ ಲಭ್ಯವಿದೆ. ಅಗತ್ಯವಿದ್ದರೆ ಕಿಮ್ಸ್ ಆಸ್ಪತ್ರೆಯಲ್ಲೂ ಚಿಕಿತ್ಸೆ ಪಡೆಯಬಹುದು. ಹೆಚ್ಚಿನ ಚಿಕಿತ್ಸೆ ಬೇಕಿದ್ದರೆ ವಕೀಲರ ಮೂಲಕ ಅರ್ಜಿ ಸಲ್ಲಿಸಿ. ಜೈಲಿನಲ್ಲಿ ಆರೋಗ್ಯ ಸಮಸ್ಯೆ ಕಂಡುಬಂದರೂ ಅಧಿಕಾರಿಗಳು ಚಿಕಿತ್ಸೆ ಒದಗಿಸುತ್ತಾರೆ, ಎಂದು ನ್ಯಾಯಾಧೀಶರು ಹೇಳಿದರು.

ಇದೇ ವೇಳೆ, ಪ್ರಕರಣ ಇನ್ನೂ ತನಿಖಾ ಹಂತದಲ್ಲಿದ್ದು, ತನಿಖಾಧಿಕಾರಿಗಳಿಗೆ ಸಂಪೂರ್ಣ ಸಹಕಾರ ನೀಡುವಂತೆ ನ್ಯಾಯಾಲಯ ನೀಲಣ್ಣವರ್‌ಗೆ ಸೂಚಿಸಿತು. ಅವರನ್ನು ಹಿಂಡಲಗಾ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸಲಾಯಿತು.

# ಸತೀಶ್‌ಗೆ ಕೆಪಿಸಿಸಿ ಸಾರಥ್ಯ, ಮೂವರು ಡಿಸಿಎಂ?

← ಮೊದಲಪುಟದಿಂದ

**ಆಪ್ತರಿಗೆ ಸೂಕ್ತ ಸ್ಥಾನಮಾನ:** ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದರೂ, ತಮ್ಮ ಆಪ್ತರಿಗೆ ಆಯಕಟ್ಟಿನ ಸ್ಥಾನ ಕೊಡಿಸುವುದಕ್ಕೆ ಸಿದ್ದ ರಾಮಯ್ಯ ತೀರ್ಮಾನಿಸಿದ್ದು, ಹೈಕಮಾಂಡ್ ಮುಂದೆ ಯೂ ಈ ವಿಷಯ ಪ್ರಸ್ತಾಪಿಸಿದ್ದಾರೆ. ಸಿದ್ದರಾಮಯ್ಯ ಅವರನ್ನು ಸಿಎಂ ಸ್ಥಾನದಿಂದ ಗೌರವಯುತವಾಗಿ ಇಳಿಸುವ ಆಲೋಚನೆಯಲ್ಲಿರುವ ಪಕ್ಷದ ಹೈಕಮಾಂಡ್ ಸಹ ಸಿದ್ದರಾಮಯ್ಯ ಹೇಳಿದವರಿಗೆ ಪ್ರಮುಖ ಸಚಿವ ಸ್ಥಾನಗಳನ್ನು ನೀಡುವ ಸಾಧ್ಯತೆಯಿದೆ.

ಹಿರಿಯ ಸಚಿವರನ್ನು ಕೈಬಿಡುವ ಸಾಧ್ಯತೆ: ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಲು ಸಜ್ಜಾಗಿರುವ ಡಿ.ಕೆ.ಶಿವಕುಮಾರ್ ಅವರಿಗೆ ಅಧಿಕಾರ ಸ್ವೀಕರಿಸುವ ಮೊದಲೇ ಸಂಪುಟ ತಲೆಬಿಸಿ ಶುರುವಾಗುವುದು ಬಹುತೇಕ ನಿಶ್ಚಿತ ಎನ್ನಲಾಗಿದೆ. ಚುನಾವಣೆಗೆ ಎರಡು ವರ್ಷವಿರುವುದರಿಂದ, ಸರಕಾರದ ವರ್ಚಸ್ಸಿಗೆ ಧಕ್ಕೆಯಾಗದಂತೆ, ಪಕ್ಷದ ಸಂಘಟನೆಯನ್ನು ಹೆಚ್ಚಿಸುವ ಕೆಲಸ ಮಾಡಬೇಕಿದೆ. ಆದ್ದರಿಂದ ಈ ಬಾರಿ ಕೆಲ ಹಿರಿಯ ಸಚಿವರನ್ನು ಕೈಬಿಟ್ಟು ಹೊಸಬರಿಗೆ ಅವಕಾಶ ನೀಡುವ ಆಲೋಚನೆಯಲ್ಲಿದ್ದಾರೆ. ಆದರೆ ಡಿ.ಕೆ.ಶಿವಕುಮಾರ್ ಮುಖ್ಯಮಂತ್ರಿಯಾದರೂ, ಸಿದ್ದರಾಮಯ್ಯ ಅವರು ತಮ್ಮ ಆಪ್ತರಿಗೆ ಸಂಪುಟದಲ್ಲಿ ಜಾಗ ಸಿಗುವಂತೆ ನೋಡಿಕೊಳ್ಳುವುದು ಬಹುತೇಕ ನಿಶ್ಚಿತವಾಗಿರುವುದರಿಂದ ಈ ಸವಾಲನ್ನು ಯಾವ ರೀತಿ ನಿಭಾಯಿಸಲಿದ್ದಾರೆ ಎನ್ನುವ ಕುತೂಹಲವಿದೆ.

**ಡಿಸಿಎಂ ಸ್ಥಾನಕ್ಕೆ ಒಬ್ಬೊಬ್ಬರು ಒಂದೊಂದು ಕ್ಲೇಮು:** ಈ ಹಿಂದೆ ಉಪಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದ ಡಿ.ಕೆ. ಶಿವಕುಮಾರ್ ಅವರು ತಮ್ಮನ್ನು ಬಿಟ್ಟು ಇನ್ಯಾರು ಡಿಸಿಎಂ ಆಗುವಂತಿಲ್ಲ ಎನ್ನುವ ಷರತ್ತು ವಿಧಿಸಿದ್ದರು. ಆದರೀಗ ಅನಿವಾರ್ಯವಾಗಿ ಡಿಸಿಎಂ ಸ್ಥಾನ ಸೃಷ್ಟಿಸಲು ಒಪ್ಪಿಗೆ ಸೂಚಿಸಬೇಕಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ನಾನು ಮುಖ್ಯಮಂತ್ರಿಯಾಗಲಿಲ್ಲ, ನನ್ನ ಮಗನನ್ನು ಉಪಮುಖ್ಯಮಂತ್ರಿಯನ್ನಾಗಿ ಮಾಡಿ ಎನ್ನುವ ಮಾತನ್ನು ರಾಹುಲ್ ಗಾಂಧಿ ಮುಂದಿಟ್ಟಿದ್ದಾರೆ. ಇನ್ನು ಮುಂದಿನ ಚುನಾವಣೆಯಲ್ಲಿಯೂ ಲಿಂಗಾಯತ ವೋಟುಗಳು ಪಕ್ಷದೊಂದಿಗೆ ಉಳಿಯಬೇಕು ಎಂದರೆ ನನಗೆ ಅವಕಾಶ ನೀಡಿ ಎನ್ನುವ ಕ್ಲೇಮನ್ನು ಈಶ್ವರ್ ಖಂಡ್ರೆ ಹಾಗೂ ಎಂ.ಬಿ. ಪಾಟೀಲ್ ಮಾಡುತ್ತಿದ್ದಾರೆ. ಸಿದ್ದರಾಮಯ್ಯ ಆಪ್ತವಲಯದಲ್ಲಿರುವ ಜಮೀರ್ ಅಹ್ಮದ್‌ಗೆ ಮುಸ್ಲಿಂ ಕೋಟದಲ್ಲಿ ಅವಕಾಶ ನೀಡಬೇಕು ಎಂದು ಸಿದ್ದು ಆಪ್ತ ಬಳಗ ಬ್ಯಾಟ್ ಬೀಸಿದೆ. ಈ ಹೆಸರುಗಳೊಂದಿಗೆ ದಲಿತ ಕೋಟದಲ್ಲಿ ಪರಂ, ಮಹದೇವಪ್ಪ ಪ್ರಯತ್ನ ನಡೆಸಿದ್ದರೂ, ಫಲ ಸಿಕ್ಕಿಲ್ಲ ಎನ್ನಲಾಗಿದೆ.

### ಯತೀಂದ್ರಗೆ ಡಿಸಿಎಂ: ಸಿಗದ ಸಿದ್ದು ಒಪ್ಪಿಗೆ

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದರೂ ಪುತ್ರ ಯತೀಂದ್ರ ಸಿದ್ದರಾಮಯ್ಯ ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳುವುದರೊಂದಿಗೆ ಒಬಿಸಿ ಕೋಟಾದಲ್ಲಿ ಉಪಮುಖ್ಯಮಂತ್ರಿ ಸ್ಥಾನ ನೀಡುವ ಆಫರ್ ಅನ್ನು ಕೆ.ಸಿ. ವೇಣುಗೋಪಾಲ್ ಕಡೆಯಿಂದ ಪಕ್ಷದ ವರಿಷ್ಠರು ನೀಡಿದ್ದಾರೆ. ಆದರೆ ತಾವು ಮುಖ್ಯಮಂತ್ರಿಯಿಂದ ಕೆಳಗಿಳಿಯುವ ಸಮಯದಲ್ಲಿ ಪುತ್ರನಿಗೆ ಉಪಮುಖ್ಯಮಂತ್ರಿ ಸ್ಥಾನ ಕೊಡಿಸಿದರೆ ತಮ್ಮ ಸಮಾಜವಾದಿ ವರ್ಚಸ್ಸಿಗೆ ಧಕ್ಕೆಯಾಗುತ್ತದೆ. ಆದ್ದರಿಂದ ಡಿಸಿಎಂ ಸ್ಥಾನ ಬೇಡ. ಬದಲಿಗೆ ಸಚಿವರನ್ನಾಗಿ ಮಾಡಿ, ಪ್ರಮುಖ ಖಾತೆ ನೀಡಿದರೆ ಸಾಕು ಎನ್ನುವ ಲೆಕ್ಕಾಚಾರದಲ್ಲಿದ್ದಾರೆ. ಆದ್ದರಿಂದ ಒಬಿಸಿ ಕೋಟಾದಲ್ಲಿ ಯತೀಂದ್ರ ಹೆಸರು ಓಡುತ್ತಿದ್ದರೂ, ಅದು ಅಂತಿಮವಾಗಿಲ್ಲ ಎನ್ನಲಾಗಿದೆ.

## ಸಮಾಚಾರ ಸಣ್ಣದಲ್ಲ

### ಹೃದಯಾಘಾತದಿಂದ ಪೊಲೀಸ್ ಪೇದೆ ಸಾವು

**ಶಿವಮೊಗ್ಗ:** ಕರ್ತವ್ಯನಿರತ ಪೊಲೀಸ್ ಕಾನ್ ಸ್ಟೇಬಲ್ ಹೃದಯಾಘಾತದಿಂದ ಸಾವನ್ನಪ್ಪಿರುವ ಘಟನೆ ಶಿವಮೊಗ್ಗದಲ್ಲಿ ನಡೆದಿದೆ. ಈರಣ್ಣ ಗುಡಾದಾರ್ ಮೃತ ದುರ್ದೈವಿ. ಮೂಲತಃ ಬೆಳಗಾವಿಯ ಗೋಕಾಕ್ ತಾಲೂಕಿನವರಾದ ಈರಣ್ಣ ಗುಡಾದಾರ್ ಕಳೆದ 7 ವರ್ಷದಿಂದ ಕೆಎಸ್‌ಆರ್‌ಪಿ 8ನೇ ಪಡೆಯಲ್ಲಿ ಕಾನ್ ಸ್ಟೇಬಲ್ ಆಗಿದ್ದರು. ಕೆಲ ದಿನಗಳ ಹಿಂದೆಯಷ್ಟೇ ಈರಣ್ಣ ಗುಡಾದಾರ್ ಅದ್ದೂರಿ ವಿವಾಹ ಆಗಿದ್ದರು. ಬುಧವಾರ ಬೆಳಗ್ಗೆ ಏಕಾಏಕಿ ಕುಸಿದು ಬಿದಿದ್ದಾರೆ. ಕೂಡಲೇ ಸ್ನೇಹಿತರು ಆಸ್ಪತ್ರೆಗೆ ರವಾನಿಸಿದ್ದಾರೆ. ಆದರೆ ಮಾರ್ಗಮಧ್ಯೆ ಈರಣ್ಣ ಮೃತಪಟ್ಟಿದ್ದಾರೆ.

### ಭಾವನಾ ರಾಮಣ್ಣ ಸೇರಿ ಹಲವರಿಗೆ ಕೋಕ್

**ಬೆಂಗಳೂರು:** ಕರ್ನಾಟಕ ಕಾಂಗ್ರೆಸ್‌ನಲ್ಲಿ ಮಹತ್ವದ ರಾಜಕೀಯ ಬೆಳವಣಿಗೆಗಳು ನಡೆಯುತ್ತಿರುವಾಗಲೇ ಕೆಪಿಸಿಸಿ ವಕ್ತಾರ ನಿಕೇತ್ ಮೌರ್ಯ, ನಟಿ ಭಾವನಾ ರಾಮಣ್ಣ ಸೇರಿದಂತೆ 31 ಕೆಪಿಸಿಸಿ ಪದಾಧಿಕಾರಿಗಳಿಗೆ ಡಿ.ಕೆ.ಶಿವಕುಮಾರ ಗೇಟ್‌ಪಾಸ್ ನೀಡಿದ್ದಾರೆ.

ಕೆಪಿಸಿಸಿ ವಕ್ತಾರ ನಿಕೇತ್ ಮೌರ್ಯ, ನಟಿ ಭಾವನಾ ರಾಮಣ್ಣ ಸೇರಿದಂತೆ 31 ಕೆಪಿಸಿಸಿ ಪದಾಧಿಕಾರಿಗಳಿಗೆ ಗೇಟ್‌ಪಾಸ್ ನೀಡಲಾಗಿದ್ದು, ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ(ಎಸ್ ಐಆರ್) ಸಭೆಗೆ ಗೈರು ಹಾಜರಿ ಹಿನ್ನೆಲೆ ಈ ಕ್ರಮ ಕೈಗೊಳ್ಳಲಾಗಿದೆ ಎನ್ನಲಾಗುತ್ತಿದ್ದರೂ, ಇದರ ಹಿಂದಿನ ರಾಜಕೀಯ ಬೇರೆಯದ್ದೇ ರೂಪ ಪಡೆದುಕೊಂಡಿದೆ. ಕೆಪಿಸಿಸಿ ವಕ್ತಾರ ನಿಕೇತ್ ರಾಜ್ ಮೌರ್ಯ, ಭಾವನಾ ರಾಮಣ್ಣ, ಶಿವಮೂರ್ತಿ ನಾಯಕ್, ಎಂ.ಸಿ.ವೇಣು ಗೋಪಾಲ್, ಷಣ್ಮುಖ ಶಿವಳ್ಳಿ, ಸಿ.ಆರ್.ಮನೋಹರ್ ಸೇರಿದಂತೆ ಮೂವರು ಕೆಪಿಸಿಸಿ ಉಪಾಧ್ಯಕ್ಷರು, 29 ಪ್ರಧಾನ ಕಾರ್ಯದರ್ಶಿಗಳಿಗೆ ಕೆಪಿಸಿಸಿ ಅಧ್ಯಕ್ಷರು ಗೇಟ್‌ಪಾಸ್ ನೀಡಿದ್ದಾರೆ. ತಕ್ಷಣವೇ ಈ ನಾಯಕರನ್ನು ಪಕ್ಷದ ಹುದ್ದೆಯಿಂದ ಕೈ ಬಿಡಲಾಗಿದೆ ಎಂದು ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ. ಆದರೆ ಕೆಲ ಪದಾಧಿಕಾರಿಗಳು ಗೈರಾಗಿದ್ದು, ಇದಕ್ಕೆ ಸುರ್ಜೇವಾಲ ಆಕ್ರೋಶಗೊಂಡಿದ್ದರು.

ರಾಜ್ಯ ರಾಜಕೀಯದಲ್ಲಿ ಮಹತ್ವದ ಬೆಳವಣಿಗೆ | ಕೊನೆ ಕ್ಷಣದಲ್ಲಿ, ತರಾತುರಿಯಲ್ಲಿ ಜಾತಿಗಣತಿ ವರದಿ ಸ್ವೀಕರಿಸಿದ ಸಿಎಂ

# ಮತ್ತೆ ಎದ್ದು ನಿಂತ ಜಾತಿ ಜನಗಣತಿ ಭೂತ

**ಬೆಂಗಳೂರು:** ರಾಜ್ಯ ರಾಜಕೀಯದಲ್ಲಿ ಮಹತ್ವದ ಬೆಳವಣಿಗೆ ನಡೆದಿದ್ದು, ಮುಖ್ಯಮಂತ್ರಿಯಾಗಲಿರುವ ಡಿ.ಕೆ.ಶಿವಕುಮಾರ್ ಅವರಿಗೆ ಜಾತಿ ಜನಗಣತಿ ವರದಿಯ ಮೊದಲ ಹೊಡೆತ ಬಿದ್ದಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಬುಧವಾರ ಸಂಜೆ ವೇಳೆ ವಿಧಾನಸೌಧಕ್ಕೆ ಆಗಮಿಸಿ ಸಿಎಂ ಕೊಠಡಿಯಲ್ಲಿ ವರದಿ ಸ್ವೀಕರಿಸಿದರು. ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂದನ್. ಆರ್. ನಾಯ್ಕ್, ಆಯೋಗದ ಸದಸ್ಯ, ಕಾರ್ಯದರ್ಶಿ ಹಾಗೂ ಅಧಿಕಾರಿಗಳು ಸಿಎಂಗೆ ವರದಿ ಸಲ್ಲಿಸಿದರು.

ಜಾತೀವಾರು ಸಮೀಕ್ಷೆ, ಸಾಮಾಜಿಕ ಶೈಕ್ಷಣಿಕ ವರದಿ ಸೇರಿದಂತೆ ಹಲವು ಆಯೋಗಗಳು ಸಲ್ಲಿಸಿದ್ದ ವರದಿಯಲ್ಲಿನ ಲೋಪದೋಷ, ಕಡತಗಳ ನಾಪತ್ತೆ ಪ್ರಕರಣ ಸಂಬಂಧಿಸಿದಂತೆ ಮತ್ತೊಮ್ಮೆ ಜನಗಣತಿಯ ವರದಿ ಸಲ್ಲಿಸುವಂತೆ ಸಿಎಂ ಸಿದ್ದರಾಮಯ್ಯ ಸೂಚಿಸಿದ್ದರು. ಈ ವೇಳೆಯಲ್ಲಿ ಹಲವು ಜಾತಿ ಹಾಗೂ ವಿಚಾರಗಳಲ್ಲಿ ಗೊಂದಲ ಉಂಟಾಗಿ ಡಿಸಿಎಂ ಡಿ.ಕೆ.ಶಿವಕುಮಾರ್ ಜಾತಿ ಜನಗಣತಿಯನ್ನು ವಿರೋಧಿಸಿದ್ದರು. ಇದರ ಮಧ್ಯದಲ್ಲಿಯೇ ನ್ಯಾಯಾಲಯಗಳ ಆದೇಶಗಳಂತೆ ಮೀಸಲಾತಿ ಸೇರಿದಂತೆ ಹಲವು ಸವಲತ್ತುಗಳ ಹಂಚಿಕೆಯಾಗಿ ಗೊಂದಲ ಉಂಟಾಗಿತ್ತು. ಹೀಗಿದ್ದರೂ ಜಾತಿ ಜನಗಣತಿ ಮಾಡುವಂತೆ ರಾಹುಲ್ ಗಾಂಧಿ ಸೂಚಿಸಿದ್ದರಿಂದ ಮತ್ತೊಮ್ಮೆ ಸಿಎಂ ಸಿದ್ದರಾಮಯ್ಯ ಜನಗಣತಿಯ ವರದಿ ಸಲ್ಲಿಸುವಂತೆ ಹಿಂದುಳಿದ ವರ್ಗಗಳ ಆಯೋಗಕ್ಕೆ ಸೂಚಿಸಿದ್ದರು.

ಹಿಂದುಳಿದ ಆಯೋಗದ ಅಧ್ಯಕ್ಷ ಮಧುಸೂದನ್ ನಾಯ್ಕ್ ನೇತೃತ್ವದಲ್ಲಿ ಜಾತಿ ಜನಗಣತಿ ವರದಿಯನ್ನು ಬುಧವಾರ ವಿಧಾನಸೌಧದಲ್ಲಿ ಸಿಎಂ ಸಿದ್ದರಾಮಯ್ಯ ಅವರಿಗೆ ಹಸ್ತಾಂತರಿಸಲಾಯಿತು. ಈ ವೇಳೆ ಸಚಿವರಾದ ಶಿವರಾಜ ತಂಗಡಗಿ, ಎಚ್.ಸಿ.ಮಹದೇವಪ್ಪ ಸೇರಿ ಹಲವರಿದ್ದರು.

ಪ್ರಸ್ತುತ ರಾಜಕೀಯ ಬೆಳವಣಿಗೆಗಳ ಮಧ್ಯೆಯೇ ತರಾತುರಿಯಲ್ಲಿ ಬುಧವಾರ ಸಿಎಂ ಕಚೇರಿಗೆ ಆಗಮಿಸಿದ ಹಿಂದುಳಿದ ಆಯೋಗದ ಅಧ್ಯಕ್ಷರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವರದಿ ಸಲ್ಲಿಸಿದರು. ಕೊನೆ ಕ್ಷಣದಲ್ಲಿ ಜನಗಣತಿ ವರದಿ ಸಲ್ಲಿಕೆಯಾಗಿರುವುದು ಡಿ.ಕೆ.ಶಿವಕುಮಾರ್ ಅಧಿಕಾರ ಸ್ವೀಕರಿಸುತ್ತಿದ್ದಂತೆ ಈ ಜನಗಣತಿ ಭೂತ ಎದ್ದು ನಿಲ್ಲಲಿದೆ ಎನ್ನಲಾಗಿದೆ.

ವರದಿ ಸ್ವೀಕಾರ ವೇಳೆ ಸಚಿವರಾದ ಶಿವರಾಜ್ ತಂಗಡಗಿ, ಎಚ್.ಸಿ.ಮಹದೇವಪ್ಪ, ಎಂ.ಸಿ.ಸುಧಾಕರ್, ಸತೀಶ್ ಜಾರಕಿಹೊಳಿ, ಚಲುರಾಯಸ್ವಾಮಿ, ಶಾಸಕರಾದ ಕೋನರೆಡ್ಡಿ, ನರೇಂದ್ರಸ್ವಾಮಿ, ಮುಖ್ಯಮಂತ್ರಿಗಳ ಕಾನೂನು ಸಲಹೆಗಾರ ಪೊನ್ನಣ್ಣ ಹಾಗೂ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಮಧುಸೂಧನ್ ಆರ್ .ನಾಯ್ಕ್, ಸದಸ್ಯರಾದ ಶಿವಣ್ಣಗೌಡ, ಚಂದ್ರಪ್ಪ ಯಾದವ, ಪ್ರತಿಭಾ ಕುಳಾಯಿ, ಡಾ. ಸಿ.ಎಂ. ಕುಂದಗೋಳ, ಡಾ. ಜಿ.ಎನ್.ಶ್ರೀಕಂಠಯ್ಯ ಹಾಗೂ ಸದಸ್ಯ ಕಾರ್ಯದರ್ಶಿ ದಯಾನಂದ್, ಆಡಳಿತಾತ್ಮಕ ಕಾರ್ಯದರ್ಶಿ ಊರ್ಮಿಳಾ ಬಿ, ಡಿ.ಎನ್.ನಾಯಕ್ ಆಯೋಗದ ವಿಶೇಷ ಸಲಹೆಗಾರರು ಮತ್ತು ಇತರೆ ತಜ್ಞರು ಉಪಸ್ಥಿತರಿದ್ದರು.

### ಗಣತಿ ಮುಗಿದು ಆರು ತಿಂಗಳಾಗಿದೆ

ವರದಿ ಸಲ್ಲಿಕೆಗೂ ಮುನ್ನ ಮಾತನಾಡಿದ ಆಯೋಗದ ಅಧ್ಯಕ್ಷ ಮಧುಸೂದನ್ ನಾಯ್ಕ್, ಸರ್ವೆ ಮುಗಿದು 6 ತಿಂಗಳು ಕಳೆದಿದೆ. ಸರ್ವೆ ಅನಾಲಿಸಿಸ್ ಮಾಡಿ ಸರಿ ಮಾಡುತ್ತಿದ್ದೆವು. ಅದೂ ಸಿದ್ಧವಾಗಿ ಒಂದು ತಿಂಗಳಾಗಿದೆ. ಮೊದಲು ಇಂಗ್ಲಿಷ್‌ನಲ್ಲಿದ್ದದ್ದನ್ನು ಕನ್ನಡಕ್ಕೆ ತರ್ಜುಮೆ ಮಾಡಬೇಕಿತ್ತು. ಸಾಮಾನ್ಯ ಜನರಿಗೆ ಅರ್ಥ ಆಗುವ ಹಾಗೇ ತರ್ಜುಮೆ ಮಾಡಿದ್ದೇವೆ. ಹಾಗಾಗಿ, ಸಮಯ ತೆಗೆದು ಕೊಂಡಿದ್ದೇವೆ. ಒಂದು ತಿಂಗಳಿಂದ ರಿಪೋರ್ಟ್ ರೆಡಿ ಇತ್ತು. ಸದಸ್ಯರು ಕೆಲವರು ಹೊರಗಡೆ ಇದ್ದರು. ಇದೇ ತಿಂಗಳು 29 ಕ್ಕೆ ನಾವು ಸಭೆ ಕರೆದಿದ್ದೇವೆ. ಕೆಲವು ಸದಸ್ಯರು ಆ ದಿನ ಬರಕ್ಕಾಗಲ್ಲ ಎಂದಿದ್ದರಿಂದ ತುರ್ತು ಸಭೆ ಮಾಡಿದ್ದೇವೆ. ಜಾತಿ ಜನಗಣತಿ ವರದಿ ಸಲ್ಲಿಕೆಗೆ ಸದಸ್ಯರ ಮಧ್ಯೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ತಕ್ಷಣಕ್ಕೆ ಜಾತಿ ಜನಗಣತಿ ಅನುಷ್ಠಾನಕ್ಕೆ ತರೋದಕ್ಕೆ ಕಷ್ಟಸಾಧ್ಯ. ವರದಿ ಸಿಕ್ಕ ತಕ್ಷಣ ಕ್ಯಾಬಿನೆಟ್ ಹೋಗುವ ಸಾಧ್ಯತೆ ಇದೆ. ಕ್ಯಾಬಿನೆಟ್ ಸ್ವೀಕಾರ ಮಾಡಿದ ಬಳಿಕ ಪ್ರಕ್ರಿಯೆ ನಡೆಯುತ್ತದೆ ಎಂದರು.

### ಜಾತಿವಾರು ಜನಸಂಖ್ಯೆ ಉಲ್ಲೇಖ

| ಸಮುದಾಯ | ಶೇ.ಪ್ರಮಾಣ | ಜನಸಂಖ್ಯೆ |
|---|---|---|
| ಮುಸ್ಲಿಂ | ಶೇ.14 | 75 ರಿಂದ 80 ಲಕ್ಷ |
| ವೀರಶೈವ ಲಿಂಗಾಯತ | ಶೇ.11 | 60 ರಿಂದ 65 ಲಕ್ಷ |
| ಒಕ್ಕಲಿಗರು | ಶೇ.10 | 55 ರಿಂದ 60 ಲಕ್ಷ |
| ಕುರುಬರು | ಶೇ.08 | 40 ರಿಂದ 45 ಲಕ್ಷ |

## ಸಿದ್ದರಾಮಯ್ಯ ಮುತ್ಸದ್ದಿತನ ಮೆಚ್ಚಬೇಕು: ರಂಭಾಪುರಿ ಶ್ರೀ

**ಚಿಕ್ಕಮಗಳೂರು:** ಸಿದ್ದರಾಮಯ್ಯ ಸಿಎಂ ಸ್ಥಾನ ಬಿಟ್ಟು ಕೊಡಲು ತೋರಿರುವ ಮುತ್ಸದ್ದಿತನ ಮೆಚ್ಚಬೇಕು ಎಂದು ರಂಭಾಪುರಿ ಶ್ರೀಗಳು ಹೇಳಿದ್ದಾರೆ.

ಬಾಳೆಹೊನ್ನೂರಿನಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 2023ರಲ್ಲಿ ಕಾಂಗ್ರೆಸ್ ಭರ್ಜರಿ ಗೆಲುವು ಸಾಧಿಸಿತ್ತು. ಅಧ್ಯಕ್ಷರು ಸಿಎಂ ಆಗೋದು ವಾಡಿಕೆ. ಹೈಕಮಾಂಡ್ ಅನುಭವಿ ಸಿದ್ದರಾಮಯ್ಯನವರಿಗೆ ಮೊದಲ ಅವಕಾಶ ನೀಡಿತ್ತು. 5 ವರ್ಷದಲ್ಲಿ ಇಬ್ಬರು ಎರಡೂವರೆ ವರ್ಷ ಅಂತ ನಿರ್ಣಯ ಮಾಡಿದ್ದರು. ಡಿಕೆಶಿ ತಾಳ್ಮೆ-ಸಹನೆ ಕಳೆದುಕೊಳ್ಳದೆ ಗಂಗಾಧರ ಜಗ್ಗುರುಗಳ ಮೇಲೆ ನಂಬಿಕೆ ಇಟ್ಟಿದ್ದರು ಎಂದರು.

ಸಿದ್ದರಾಮಯ್ಯನವರು ಉದಾರ ಅಂತಕರಣದಿಂದ ಆ ಸ್ಥಾನ ಬಿಟ್ಟು ಕೊಡುವ ಮೂಲಕ ತೋರಿರುವ ಮುತ್ಸದ್ದಿತನವನ್ನ ಎಲ್ಲರೂ ಮೆಚ್ಚಬೇಕು. ಡಿಕೆಶಿ ಸಿಎಂ ಆಗಿ ಒಳ್ಳೆಯ ಆಡಳಿತ ನಡೆಸಲಿ. ಜಾತಿ-ಧರ್ಮದ ಸಂಘರ್ಷಗಳ ಸಂದರ್ಭ ಬರಬಾರದು. ಎಲ್ಲಾ ಸಮುದಾಯದ ಜನರನ್ನ ಮೇಲೆ ತ್ತುವ ಕಾರ್ಯ ಆಗಬೇಕು. ಇತ್ತೀಚಿನ ದಿನಗಳಲ್ಲಿ ಸಂಘರ್ಷ ಹೆಚ್ಚಾಗಿದೆ. ಯಾವುದೇ ಜಾತಿ-ಧರ್ಮ ಇರಲಿ ಸಮವಸ್ತ್ರ ಎಂದು ಶಾಲೆಯ ಶಿಸ್ತು ನಿಯಮವನ್ನು ಪರಿಪಾಲಿಸಿಕೊಂಡು ಬಂದ ದಿನಗಳಿದ್ದವು. ಇಂದು ಓದುವ ಮಕ್ಕಳಲ್ಲೂ ಜಾತಿಯ ಭಾವನೆ ಬೆಳೆಸುವ ವ್ಯವಸ್ಥೆ ನಿರ್ಮಾಣವಾಗುತ್ತಿದೆ. ಧರ್ಮಪೀಠಕ್ಕೂ ಇದರಿಂದ ಬಹಳ ನೋವಾಗಿದೆ, ಅದು ಆಗಬಾರದು ಎಂದರು.

## ರಾಜ್ಯದಲ್ಲಿ ಅವಧಿಪೂರ್ವ ಚುನಾವಣೆ: ಬಿ.ವೈ.ವಿಜಯೇಂದ್ರ

**ಶಿವಮೊಗ್ಗ:** ಸಿಎಂ ಸ್ಥಾನದಿಂದ ಸಿದ್ದರಾಮಯ್ಯ ಬದಲಾವಣೆ ನಂತರವೂ ಕಾಂಗ್ರೆಸ್‌ನಲ್ಲಿ ನಾಯಕತ್ವದ ಗೊಂದಲ ಮುಂದುವರಿಯಲಿದ್ದು, ರಾಜ್ಯದಲ್ಲಿ ಅವಧಿಗೆ ಮುನ್ನವೇ ವಿಧಾನಸಭೆ ಚುನಾವಣೆ ನಡೆಯಲಿದೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷದಲ್ಲಿನ ಆಂತರಿಕ ಕಚ್ಚಾಟದಿಂದ ರಾಜ್ಯದಲ್ಲಿ ಆಡಳಿತ ಕುಸಿದಿದೆ. ಸರಕಾರದ ವೈಫಲ್ಯ ಕಾಂಗ್ರೆಸ್ ಹೈಕಮಾಂಡ್‌ನ ಗಮನಕ್ಕೆ ಬಂದಿದೆ. ಹೀಗಾಗಿಯೇ ಆ ಪಕ್ಷದ ವರಿಷ್ಠರು ಮುಖ್ಯಮಂತ್ರಿ ಬದಲಾವಣೆಯ ನಿರ್ಧಾರ ಮಾಡಿದ್ದಾರೆ. ಮುಂದೆ ಯಾರು ಸಿಎಂ ಆಗುತ್ತಾರೆ ಎಂಬುದು ಮುಖ್ಯವಲ್ಲ. ಸಿದ್ದರಾಮಯ್ಯ 10 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ರಾಜ್ಯದ ಆರ್ಥಿಕ ಸ್ಥಿತಿ ಹದಗೆಟ್ಟಿದೆ. ಅದನ್ನು ಮತ್ತೆ ಹಳಿಗೆ ತರುವ ಬಹುದೊಡ್ಡ ಸವಾಲು ಮುಂದೆ ಬರುವವರಿಗೆ ಎದುರಾಗಲಿದೆ ಎಂದು ಹೇಳಿದರು. ಈ ಸರಕಾರ ವಿಪರೀತ ಭ್ರಷ್ಟಾಚಾರದಲ್ಲಿ ಮುಳುಗಿದೆ. ಹೀಗಾಗಿಯೇ ಉಪ ಚುನಾವ ಣೆಯಲ್ಲಿ ಗೆದ್ದರೂ ಸಿದ್ದರಾಮಯ್ಯ ರಾಜೀನಾಮೆ ನೀಡಬೇಕಾದ ಅನಿವಾರ್ಯತೆ ಎದುರಾಗಿದೆ ಎಂದು ವ್ಯಂಗ್ಯವಾಡಿದರು.

ಸತತ 12 ವರ್ಷ ಆಡಳಿತ ನಡೆಸಿದ ಏಕೈಕ ಚುನಾಯಿತ ಪ್ರಧಾನಿ ಎಂಬ ಶ್ರೇಯ ಮೋದಿ ಅವರಿಗೆ ಸಲ್ಲುತ್ತದೆ. ಅವರು ಸಾರ್ವಕಾಲಿಕ ದಾಖಲೆ ಬರೆದಿದ್ದಾರೆ. ಪ್ರಧಾನಿ ಆಗಿ ಆರಂಭದಲ್ಲಿ ಸವಾಲುಗಳ ಎದುರಿಸಿದ ಮೋದಿ, ನಂತರ ಯಾವುದೇ ಹಗರಣಗಳು ಇಲ್ಲದೇ ದೇಶವನ್ನು ಅಭಿವೃದ್ಧಿ ಪಥದಲ್ಲಿ ಮುನ್ನಡೆಸಿದ್ದಾರೆ. ಇದು ಶ್ಲಾಘನೀಯ.

-ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ

ವೈದ್ಯಕೀಯ ಚಿಕಿತ್ಸೆ ಅಗತ್ಯತೆಯಿಂದ ಸ್ಥಳಾಂತರ

## ವಿರೋಧದ ನಡುವೆಯೂ ಹಂಪಿ ಲಕ್ಷ್ಮೀ ಆನೆ ಕೋಲಾರಕ್ಕೆ ಸ್ಥಳಾಂತರ

**ಹಂಪಿ:** ವಿಶ್ವವಿಖ್ಯಾತ ಹಂಪಿಯ ಶ್ರೀ ವಿರೂಪಾಕ್ಷ ದೇಗುಲದ ಆನೆ ಲಕ್ಷ್ಮೀಯನ್ನು ತೀವ್ರ ವಿರೋಧ ಹಾಗೂ ಆಕ್ರೋಶದ ನಡುವೆಯೂ ಕೊನೆಗೂ ಕೋಲಾರಕ್ಕೆ ಸ್ಥಳಾಂತರ ಮಾಡಲಾಗಿದೆ. ಮುಜರಾಯಿ ಇಲಾಖೆ ಹಾಗೂ ವಿಜಯನಗರ ಜಿಲ್ಲಾಡಳಿತದ ನೇತೃತ್ವದಲ್ಲಿ ತಡರಾತ್ರಿ 1 ಗಂಟೆಯ ಬಳಿಕ ಅತ್ಯಂತ ಗೌಪ್ಯವಾಗಿ ಈ ಕಾರ್ಯಾಚರಣೆ ನಡೆಸಲಾಗಿದೆ.

ಲಕ್ಷ್ಮೀಯನ್ನು ಹಂಪಿಯಿಂದ ಬೇರೆಡೆಗೆ ಸ್ಥಳಾಂತರಿಸಬಾರದು ಎಂದು ಆಗ್ರಹಿಸಿ ಬುಧವಾರ ಸ್ಥಳೀಯರು ಹಾಗೂ ಭಕ್ತರು ತೀವ್ರ ಹೋರಾಟ ನಡೆಸಿದ್ದರು. ಇತ್ತ ಸಾಮಾಜಿಕ ಜಾಲತಾಣಗಳಲ್ಲೂ ಆನೆಯನ್ನು ಹಂಪಿಯಲ್ಲೇ ಉಳಿಸಿಕೊಳ್ಳಬೇಕು ಎಂದು ದೊಡ್ಡ ಮಟ್ಟದ ಆಕ್ರೋಶ ವ್ಯಕ್ತವಾಗಿತ್ತು. ಇಷ್ಟೆಲ್ಲಾ ವಿರೋಧಗಳಿದ್ದ ಹಿನ್ನೆಲೆ ಜಿಲ್ಲಾಡಳಿತ ತಡರಾತ್ರಿ ಕಾರ್ಯಾಚರಣೆಯ ಹಾದಿ ಹಿಡಿಯಿತು. ವರ್ಷಗಳಿಂದ ಆನೆಯನ್ನು ತಮ್ಮದೇ ಮಗುವಿನಂತೆ ಸಾಕಿ ಸಲಹಿದ್ದ ಮಾವುತರ ಕುಟುಂಬಕ್ಕೆ ಈ ಸ್ಥಳಾಂತರ ತೀವ್ರ ಆಘಾತ

ತಂದಿದೆ. ತಡರಾತ್ರಿ ಆನೆಯನ್ನು ಲಾರಿಗೆ ಹತ್ತಿಸುವ ಸಂದರ್ಭದಲ್ಲಿ ಮಾವುತರ ಕುಟುಂಬಸ್ಥರು ಆನೆಯನ್ನು ಅಪ್ಪಿಕೊಂಡು ಬಿಕ್ಕಿ ಬಿಕ್ಕಿ ಅತ್ತ ದೃಶ್ಯ ನೆರೆದಿದ್ದವರ ಕಣ್ಣಾಲಿಗಳನ್ನು ಒದ್ದೆಯಾಗಿಸಿತ್ತು. ಸ್ಥಳೀಯರ ಆಕ್ರೋಶ ಹಾಗೂ ಭಾವನಾತ್ಮಕ ವಿರೋಧ ಇದ್ದಾಗ್ಯೂ, ಆನೆ ಲಕ್ಷ್ಮೀಯ ಆರೋಗ್ಯದ ದೃಷ್ಟಿಯಿಂದ ಈ ನಿರ್ಧಾರ ಅನಿವಾರ್ಯವಾಗಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಲಕ್ಷ್ಮಿಗೆ ಸದ್ಯ ಸೂಕ್ತ ವೈದ್ಯಕೀಯ ಚಿಕಿತ್ಸೆಯ ಅಗತ್ಯವಿದ್ದು, ಹೆಚ್ಚಿನ ಆರೈಕೆಗಾಗಿ ಕೋಲಾರಕ್ಕೆ ಶಿಫ್ಟ್ ಮಾಡಲಾಗಿದೆ ಎಂದು ಮುಜರಾಯಿ ಇಲಾಖೆ ಮತ್ತು ಜಿಲ್ಲಾಡಳಿತ ಸ್ಪಷ್ಟಪಡಿಸಿದೆ.

ಟ್ರಂಪ್ ಬಳಿಕ ಟ್ರಂಪ್ ಪುತ್ರಿಯ ಹತ್ಯೆ ಸಂಚು. ಸುದ್ದಿ 1

ಬಕ್ರೀದ್ ದಿನ 'ಟ್ರಂಪ್' ಎಮ್ಮೆಯ ವಧೆ ಸುದ್ದಿ 2




## ದಲಿತರಿಗೆ ಸಮಾಧಿ ಕಟ್ಟಿದ ಸಿದ್ದರಾಮಯ್ಯ

**ಮೈಸೂರು:** ದಲಿತರು ಸಿಎಂ ಆಗಬೇಕಾಗಿದ್ದ ಸಮಯದಲ್ಲಿ ದಲಿತರಿಗೆ ಸಮಾಧಿ ಕಟ್ಟಿ ಸಿದ್ದರಾಮಯ್ಯ ಸಿಎಂ ಆದರು. ಆದರೆ, ಈಗಲಾದರೂ ದಲಿತರ ಪರ ಸಿಎಂ ಧ್ವನಿ ಎತ್ತಲಿಲ್ಲ ಎಂದು ಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಕಟುವಾಗಿ ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದಿನ ಚುನಾವಣೆಯಲ್ಲಿ ಉದ್ದೇಶ ಪೂರ್ವಕವಾಗಿ ಪರಮೇಶ್ವರ್ ಅವರನ್ನು ಸೋಲಿಸಿದರು. 70 ವರ್ಷಗಳಿಂದ ದಲಿತರನ್ನು ವೋಟ್ ಬ್ಯಾಂಕ್ ಮಾಡಿಕೊಂಡಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ದಲಿತ ನಾಯಕರು ಸೀಡ್ ಲೆಸ್ ತರ. ಯಾರಿಗೂ ನಮಗೆ ಸಿಎಂ ಸ್ಥಾನ ಕೊಡಿ ಎಂದು ಕೇಳುವ ತಾಕತ್ತು ಇಲ್ಲ. ಕಾಂಗ್ರೆಸ್ ದಲಿತರಿಗೆ ಬಗ್ನಿಗೂಟ ಹೊಡೆದಿದೆ. ಆದ್ದರಿಂದ ದಲಿತರು ಯಾರೂ ಕೂಡ ಸಚಿವ ಸ್ಥಾನ ತೆಗೆದುಕೊಳ್ಳದೆ ಪ್ರತಿಭಟನೆ ಮಾಡಬೇಕು. ಎನ್. ರಾಚಯ್ಯ, ಬಸವಲಿಂಗಪ್ಪ, ಶ್ರೀನಿವಾಸಪ್ರಸಾದ್, ಮಲ್ಲಿಕಾರ್ಜುನಖರ್ಗೆ, ಮುನಿಯಪ್ಪ, ಪರಮೇಶ್ವರ್ ವರೆಗೂ ಕಾಂಗ್ರೆಸ್ ನಕ್ಷತ್ರ ತೋರಿಸಿದೆ. ಇದು ದಲಿತ ಸಮುದಾಯಕ್ಕೆ ಮಾಡಿದ ಮೋಸ. ಕಾಂಗ್ರೆಸ್ ದಲಿತರಿಗೆ ಮಾಡಿದ ಮೋಸ. ದಲಿತರು ಕಾಂಗ್ರೆಸ್‌ಗೆ ತಮ್ಮ ಶಕ್ತಿ ತೋರಿಸಬೇಕು ಎಂದು ಆಗ್ರಹಿಸಿದರು.

2028ರ ಚುನಾವಣೆಯಲ್ಲಿ ಬಿಜೆಪಿ 150 ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೆ ಬರುತ್ತದೆ. ಯಾವುದೇ ಅನುಮಾನ ಇಲ್ಲ. ಡಿ.ಕೆ.ಶಿವಕುಮಾರ್ ಸಿಎಂ ಆದರೂ ಅಷ್ಟೇ. ಹೋದಿಯಾ ಪಿಶಾಚಿ ಎಂದರೆ ಬಂದ್ಯಾ ಗವಾಕ್ಷಿ ಅಂತ ಅಷ್ಟೇ. ಸಿದ್ದರಾಮಯ್ಯ ಹೋಗಿ ಡಿ.ಕೆ. ಬಂದರು ಅಷ್ಟೇ. ಅತ್ತು ಕರೆದು ಡಿಕೆಶಿ ಸಿಎಂ ಆಗುತ್ತಿದ್ದಾರೆ. ಡಿಕೆಶಿ ದೆಹಲಿಯಲ್ಲಿ ಎಲ್ಲರನ್ನೂ ಭೇಟಿ ಮಾಡುತಿದ್ದರು. ಯಾವ ಪಕ್ಷದ ಯಾರನ್ನು ಭೇಟಿ ಮಾಡುತಿದ್ದರು ಎಂದು ಗೊತ್ತಿದ್ದರಿಂದಲೇ ಬದಲಾವಣೆ ಮಾಡಲು ಕಾಂಗ್ರೆಸ್ ಹೈಕಮಾಂಡ್ ಮುಂದಾಗಿದೆ.

-ಛಲವಾದಿ ನಾರಾಯಣಸ್ವಾಮಿ, ಪರಿಷತ್ ವಿಪಕ್ಷ ನಾಯಕ

**ನಮ್ಮ ಪಕ್ಷದಲ್ಲಿ ಮಾತ್ರ ಪವಾಡ:** ದಲಿತರು ಸಿಎಂ ಆಗಬೇಕು ಅಂತ ಕೇಳುವುದು ಇಲ್ಲ. ದಲಿತರು ಸಿಎಂ ಆದರೆ ಅದು ಬಿಜೆಪಿಯಲ್ಲಿ ಮಾತ್ರ. ಪವಾಡ ಎಲ್ಲವೂ ನಮ್ಮ ಪಕ್ಷದಲ್ಲಿ ಮಾತ್ರ ಆಗುವುದು ಎಂದರು.

## ಜೂ.20ರಿಂದ ಎಸ್‌ಐಆರ್ ಆರಂಭ

**ಬೆಂಗಳೂರು:** ರಾಜ್ಯದಲ್ಲಿ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆಯು ಜೂನ್ 20ರಿಂದ ಆರಂಭವಾಗಲಿದೆ. ಒಬ್ಬ ಅರ್ಹ ಮತದಾರರೂ ಪಟ್ಟಿಯಿಂದ ಕೈ ಬಿಟ್ಟು ಹೋಗದಂತೆ ಪರಿಷ್ಕರಣೆ ನಡೆಸಲಾಗುತ್ತದೆ ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ವಿ. ಅನ್ಬುಕುಮಾರ್ ತಿಳಿಸಿದರು.

ನಗರದ ವಾರ್ತಾಸೌಧದಲ್ಲಿ ಬುಧವಾರ ನಡೆದ ಎಸ್‌ಐಆರ್ ಕುರಿತ ಮಾಧ್ಯಮ ಕಾರ್ಯಗಾರದಲ್ಲಿ ಮಾತನಾಡಿದ ಅವರು, ರಾಜ್ಯದ ಅರ್ಹ ನಾಗರಿಕರು ಮತದಾರರ ಪಟ್ಟಿಯಿಂದ ವಂಚಿತರಾಗಬಾರದು. ಅನರ್ಹ ಮತದಾರರು ಪಟ್ಟಿಯಲ್ಲಿ ಇರಬಾರದು ಎಂಬ ಉದೇಶದಿಂದ ಲೋಪದೋಷಗಳಿಲ್ಲದ ವಿನೂತನ ಸಮಗ್ರ ಮತದಾರರ ಪಟ್ಟಿ ಸಿದ್ಧಪಡಿಸುವುದೇ ಮತದಾರ ಪಟ್ಟಿಗಳ ವಿಶೇಷ ಸಮಗ್ರ ಪರಷ್ಕರಣೆ(ಎಸ್‌ಐಆರ್)-2026.



ರಾಜ್ಯದಲ್ಲಿ ಮತದಾರರ ಮ್ಯಾಪಿಂಗ್ ಕಾರ್ಯವು ಶೇ.88 ರಷ್ಟಾಗಿದೆ. 2025ರ ಮತದಾರರ ಪಟ್ಟಿಯ ಪ್ರಕಾರ ಕರ್ನಾಟಕದಲ್ಲಿ 5.55 ಕೋಟಿ ಅರ್ಹ ಮತದಾರರು ಇದ್ದಾರೆ. ಎಸ್‌ಐಆರ್ ಪ್ರಕ್ರಿಯೆ ಆರಂಭವಾಗುವರೆಗೂ ಮ್ಯಾಪಿಂಗ್ ಪ್ರಕ್ರಿಯೆ ನಡೆಯಲಿದೆ. ರಾಜಕೀಯ ಪಕ್ಷಗಳಿಂದ ಈಗಾಗಲೇ ಸುಮಾರು 69 ಸಾವಿರ ಬೂತ್ ಮಟ್ಟದ ಏಜೆಂಟ್‌ಗಳನ್ನು ನೇಮಿಸಲಾಗಿದೆ.

-ವಿ.ಅನ್ಬುಕುಮಾರ್, ರಾಜ್ಯ ಮುಖ್ಯ ಚುನಾವಣಾಧಿಕಾರಿ

ಈ ಪ್ರಕ್ರಿಯೆಯಲ್ಲಿ ಪ್ರತಿಯೊಬ್ಬ ಮತದಾರನಿಂದ ಅವರದ್ದೇ ಸಹಿಯಡಿ ಸಮಗ್ರ ಮಾಹಿತಿ ಪಡೆದು ಮತದಾರರ ಪಟ್ಟಿ ಪರಿಷ್ಕರಿಸಲಾಗುವುದು ಎಂದರು. ಚುನಾವಣಾ ಆಯೋಗದ ನಿರ್ದೇಶನದಂತೆ ರಾಜ್ಯದಲ್ಲಿ ಮತದಾರರ ಪಟ್ಟಿಯ ಸಮಗ್ರ ಪರಿಷ್ಕರಣೆ ನಡೆಯುತ್ತಿದ್ದು, ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡುವ ಹೊಣೆ ಪ್ರತಿಯೊಬ್ಬ ಭಾರತೀಯನದ್ದಾಗಿದೆ. ಇದು ಕೇವಲ ಚುನಾವಣಾ ಆಯೋಗದ ಹೊಣೆಯಷ್ಟೆ ಅಲ್ಲ. ಅರ್ಹ ಮತದಾರರು ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ಮತದಾರರ ಪಟ್ಟಿಯಲ್ಲಿ ಹೆಸರು ಸೇರ್ಪಡೆ ಮಾಡಲು ಎಲ್ಲಾ ರೀತಿಯ ಕ್ರಮ ಕೈಗೊಳ್ಳಲಾಗಿದ್ದು ಬಿಎಲ್‌ಒಗಳು ಪ್ರತಿ ಮನೆಗೆ ಭೇಟಿ ನೀಡಿ ಮತದಾರರಿಗೆ ಎನ್ಯುಮರೇಷನ್ ಫಾರ್ಮ್ ಜತೆಗೆ ಎಲ್ಲ ಮಾಹಿತಿಗಳನ್ನು ಮನೆ ಮನೆ ಭೇಟಿಯಲ್ಲಿ ಪಡೆಯಲಿದ್ದಾರೆ ಎಂದರು.

### ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ:** ಮುದನೂರು, ಕಮಲನಗರ ತಾಲೂಕು.

**ಸಮಸ್ಯೆಯೇನು..?:** ರಸ್ತೆ ಮೇಲೆ ಚರಂಡಿ ನೀರು ಹರಿಯುತ್ತಿದ್ದು, ಶುಚಿತ್ವ ಕಾಪಾಡುವ ಕುರಿತು.

- **ಪರಿಹಾರ:** ಬೀದರ್ ಜಿಲ್ಲೆ ಕಮಲಾನಗರ ತಾಲೂಕಿನ ಮುದನೂರು ಗ್ರಾಮದ ಹಲವು ಕಡೆ ಚರಂಡಿ ನೀರು ರಸ್ತೆ ಮೇಲೆ ಹರಿಯುತ್ತಿದ್ದು, ಸಮರ್ಪಕ ಸಿಸಿ ರಸ್ತೆ ಹಾಗೂ ಚರಂಡಿ ನಿರ್ಮಾಣ ಮಾಡುವ ಕುರಿತು ಪೂಜಾ ಗುಂಡಪ್ಪಾ ಅವರು ಮನವಿ ಸಲ್ಲಿಸಿದ್ದರು. ಈ ಹಿನ್ನೆಲೆ ಸ್ಥಳ ಪರಿಶೀಲನೆ ನಡೆಸಿರುವ ಅಧಿಕಾರಿಗಳು, ಸಿಸಿ ರಸ್ತೆ, ಚರಂಡಿ ನಿರ್ಮಾಣಕ್ಕೆ ಕ್ರಮ ವಹಿಸಿದ್ದಾರೆ.

### ದಿನ ವಿಶೇಷ

28 ಮೇ 2026 ಗುರುವಾರ

| | |
|---|---|
| » ಸೂರ್ಯೋದಯ | : 5-43 |
| » ಸೂರ್ಯಾಸ್ತ | : 7-04 |
| » ತಿಥಿ | : ದ್ವಾದಶಿ |
| » ನಕ್ಷತ್ರ | : ಚಿತ್ತ |
| » ಸಂವತ್ಸರ | : ಪರಾಭವ |
| » ಅಯನ | : ಉತ್ತರಾಯನ |
| » ಋತು | : ಗ್ರೀಷ್ಮ |
| » ಮಾಸ | : ಅಧಿಕ ಜ್ಯೇಷ್ಠ |
| » ಪಕ್ಷ | : ಶುಕ್ಲಪಕ್ಷ |

## ರಾಮನಗರ: ಡಿಕೆಶಿ ಬೆಂಬಲಿಗರ ಸಂಭ್ರಮ

**ರಾಮನಗರ:** ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ ರಾಜ್ಯಪಾಲರನ್ನು ಭೇಟಿಯಾಗಿ ರಾಜೀನಾಮೆ ನೀಡಲಿದ್ದಾರೆ ಎಂಬ ಸುದ್ದಿ ಹೊರಬಿದ್ದ ಹಿನ್ನಲೆಯಲ್ಲಿ ಉಪಮುಖ್ಯಮಂತ್ರಿಯಾ ಗಿರುವ ಡಿ.ಕೆ.ಶಿವಕುಮಾರ್ ಮುಂದಿನ ಮುಖ್ಯಮಂತ್ರಿಯಾಗಲಿದ್ದಾರೆಂದು ಜಿಲ್ಲಾ ಯುವ ಕಾಂಗ್ರೆಸ್ ಕಾರ್ಯಕರ್ತರು ಪಟಾಕಿ ಸಿಡಿಸಿ ಸಂಭ್ರಮಿಸಿದರು.

ನಗರದ ಐಜೂರು ವೃತ್ತದಲ್ಲಿ ಕೇಂದ್ರ ಸರಕಾರದ ವಿರುದ್ಧ ಪ್ರತಿಭಟನೆ ನಡೆಸಿದ ನಂತರ, ಒಂದೆಡೆ ಸೇರಿದ ಕಾರ್ಯಕರ್ತರು ಡಿ.ಕೆ.ಶಿವಕುಮಾರ್ ಅವರಿಗೆ ಜೈಕಾರ ಹಾಕುತ್ತಾ, ಇಷ್ಟು ದಿನಗಳು ಕಾದ ಸಮಯ ಇಂದು ಬಂತು ಎಂದು ಡಿಕೆ...ಡಿಕೆ... ಘೋಷಣೆ ಮಾಡಿದರು. ಡಿ.ಕೆ.ಶಿವಕುಮಾರ್ ಅವರ ಲಕ್ಷಾಂತರ ಅಭಿಮಾನಿಗಳು ಅವರು ಮುಖ್ಯಮಂತ್ರಿಯಾಗಲೆಂದು ಅವರ ಹುಟ್ಟುಹಬ್ಬದಂದು ವಿಶೇಷ ಪೂಜೆ, ಪ್ರಾರ್ಥನೆ ಸಲ್ಲಿಸಿ ಹರಕೆ ಹೊತ್ತಿದ್ದರು, ಅದು ಇನ್ನೆರಡು ದಿನಗಳಲ್ಲಿ ಸಾಕಾರವಾಗಲಿದೆ. ಮುಖ್ಯಮಂತ್ರಿಯಾಗುವ ಆ ಸಮಯವನ್ನು ಕಣ್ತುಂಬಿಕೊಳ್ಳಲು ನಾವು ಕಾತರರಾಗಿದ್ದೇವೆ. ಡಿ.ಕೆ.ಶಿವಕುಮಾರ್ ಅವರಿಂದ ಇಡೀ ರಾಜ್ಯದ ಸಮಗ್ರ ಅಭಿವೃದ್ಧಿ ಸಾಧ್ಯವಾಗಲಿದೆ ಎಂದು ಸಂತಸಪಟ್ಟರು.

ಕಲಬುರಗಿಯಲ್ಲಿ ಇಂದು ಕುರುಬಗೊಂಡ ಸಂಘದಿಂದ ಹೋರಾಟ

## ಸಿಎಂ ಸಿದ್ದರಾಮಯ್ಯ ರಾಜೀನಾಮೆ ಬೇಡ

**ಬೆಂಗಳೂರು:** ಸಿಎಂ ಸಿದ್ದರಾಮಯ್ಯ ರಾಜೀನಾಮೆ ವಿರೋಧಿಸಿ ಪ್ರತಿಭಟನೆಗೆ ಅಭಿಮಾನಿಗಳು ಮುಂದಾಗಿದ್ದಾರೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ತವರು ಜಿಲ್ಲೆ ಕಲಬುರಗಿಯಲ್ಲೇ ಸಿದ್ದರಾಮಯ್ಯ ರಾಜೀನಾಮೆ ವಿರೋಧಿಸಿ ಹೋರಾಟಕ್ಕೆ ಕರೆ ನೀಡಲಾಗಿದೆ.

ಗುರುವಾರ ಕಲಬುರಗಿಯಲ್ಲಿ ಸಿಎಂ ಸಿದ್ದರಾಮಯ್ಯ ಅಭಿಮಾನಿಗಳಿಂದ ಹೋರಾಟಕ್ಕೆ ಕರೆ ನೀಡಲಾಗಿದೆ. ಕರ್ನಾಟಕ ಪ್ರದೇಶ ಕುರುಬಗೊಂಡ ಸಂಘದಿಂದ ಹೋರಾಟಕ್ಕೆ ಕರೆ ನೀಡಲಾಗಿದ್ದು, ನಗರದ ಎಸ್‌ವಿಪಿ ಸರ್ಕಲ್‌ನಿಂದ ಕಲಬುರಗಿ ಡಿಸಿ ಕಚೇರಿವರೆಗೆ ಬೃಹತ್ ಪ್ರತಿಭಟನಾ ಮೆರವಣಿಗೆ ಆಯೋಜನೆ ಮಾಡಲಾಗಿದೆ.

ರಾಹುಲ್ ಗಾಂಧಿ ವಿರುದ್ಧ ಸಿದ್ದರಾಮಯ್ಯ ಅಭಿಮಾನಿಗಳ ಆಕ್ರೋಶ: ಇನ್ನೊಂದೆಡೆ ಸಿದ್ದರಾಮಯ್ಯ ಅವರ ರಾಜೀನಾಮೆ ಸುದ್ದಿ ತಿಳಿಯುತ್ತಿದ್ದಂತೆ ಅವರ ಕಟ್ಟಾ ಅಭಿಮಾನಿಗಳು ಹಾಗೂ ಕಾರ್ಯಕರ್ತರು ಬೀದಿಗಿಳಿದು ತೀವ್ರ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಯಾವುದೇ ಕಾರಣಕ್ಕೂ ಸಿದ್ದರಾಮಯ್ಯ ಅವರನ್ನೇ ಮುಖ್ಯಮಂತ್ರಿಯಾಗಿ ಮುಂದುವರಿಸಬೇಕು. ರಾಹುಲ್ ಗಾಂಧಿ ಅವರ ಈ ತಪ್ಪು ನಿರ್ಧಾರಕ್ಕೆ ನಮ್ಮ ತೀವ್ರ ವಿರೋಧವಿದೆ. ಹೈಕಮಾಂಡ್‌ಗೆ ನಾವು ಕೈಮುಗಿದು ಕೇಳುತ್ತೇವೆ, ದಯವಿಟ್ಟು ಈ ತಪ್ಪು ನಿರ್ಧಾರವನ್ನು ತಕ್ಷಣವೇ ವಾಪಸ್ ಪಡೆಯಿರಿ ಎಂದು ಅಭಿಮಾನಿಗಳು ಆಕ್ರೋಶ ಹೊರಹಾಕಿದ್ದಾರೆ. ಒಂದು ವೇಳೆ ಸಿದ್ದರಾಮಯ್ಯ ಅವರನ್ನು ಕುರ್ಚಿಯಿಂದ ಇಳಿಸಿದರೆ ಮುಂದಿನ ಆರು ತಿಂಗಳು ಈ ಕಾಂಗ್ರೆಸ್ ಸರಕಾರ ಇರಲ್ಲ ಎಂದು ಅಭಿಮಾನಿಗಳು ಭವಿಷ್ಯ ನುಡಿದಿದ್ದಾರೆ. ಸಿಎಂ ಪರವಾಗಿ ತೀವ್ರ ಘೋಷಣೆಗಳನ್ನು ಕೂಗುತ್ತಾ ಧರಣಿ ನಡೆಸುತ್ತಿದ್ದ ಅಭಿಮಾನಿಗಳನ್ನು ತಕ್ಷಣವೇ ಹತೋಟಿಗೆ ತಂದ ಪೊಲೀಸರು ಹಲವರನ್ನು ವಶಕ್ಕೆ ಪಡೆದಿದ್ದಾರೆ.

### ಅಹಿಂದ ಎಚ್ಚರಿಕೆ

ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುವ ವಿಚಾರ ಹೇಳುತ್ತಿರು ವಾಗಲೇ ಕಾಂಗ್ರೆಸ್ ಗೆ ಮೊದಲ ಬಿಸಿ ತಟ್ಟಿದ್ದು, ಪರಿಣಾಮ ಎದುರಿಸಬೇಕಾಗುತ್ತದೆ ಎಂದು 'ಅಹಿಂದ' ಸಂಘಟನೆ ಎಚ್ಚರಿಕೆ ನೀಡಿದೆ. ರಾಜ್ಯ ಶೋಷಿತ ವರ್ಗಗಳ ಒಕ್ಕೂಟ ಸಹ ಸಿಡಿದೆದ್ದಿದ್ದು, ಸಿದ್ದರಾಮಯ್ಯ ಅವರಿಂದ ರಾಜೀನಾಮೆ ಕೊಡಿಸಿದರೆ ಹೋರಾಟ ಮಾಡುವುದಾಗಿ ಹೈಕಮಾಂಡ್‌ಗೆ ಎಚ್ಚರಿಕೆ ನೀಡಿದೆ. ಕರ್ನಾಟಕ ರಾಜ್ಯ ಹಿಂದುಳಿದ ವರ್ಗ ಸಮುದಾಯಗಳ ಒಕ್ಕೂಟ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಧಿಕಾರದಿಂದ ಕೆಳಗಿಳಿಸಿದರೆ ಕಾಂಗ್ರೆಸ್ ಪಕ್ಷ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ ಎಂದು ಬುಧವಾರ ಹೇಳಿದೆ. ಹಿಂದುಳಿದ ವರ್ಗಗಳು ಹಾಗೂ ಅಹಿಂದ' (ಅಲ್ಪಸಂಖ್ಯಾತರು, ಹಿಂದುಳಿದ ವರ್ಗಗಳು ಮತ್ತು ದಲಿತರು) ಸಮುದಾಯಗಳ ಬೆಂಬಲದಿಂದಲೇ ಕಾಂಗ್ರೆಸ್ ಅಧಿಕಾರಕ್ಕೆ ಬಂದಿದೆ. ಸಿದ್ದರಾಮಯ್ಯ ಅವರ ಮಟ್ಟದ ಮತ್ತೊಬ್ಬ ನಾಯಕ ಕಾಂಗ್ರೆಸ್ ಪಕ್ಷದಲ್ಲಿ ಇಲ್ಲ. ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸಿದರೆ ರಾಜ್ಯಾದ್ಯಂತ ಪ್ರತಿಭಟನೆ ನಡೆಸುವುದಾಗಿ ಎಂದು ಒಕ್ಕೂಟದ ನಾಯಕರು ಹೇಳಿದ್ದಾರೆ.

### ಸಿಎಂ ಕಚೇರಿ ಸಿಬ್ಬಂದಿ ಕಣ್ಣೀರು

ಸಿಎಂ ಸಿದ್ದರಾಮಯ್ಯ ಮುಂದೆ ಮುಖ್ಯಮಂತ್ರಿಗಳ ಕಚೇರಿ ಸಿಬ್ಬಂದಿ ಕಣ್ಣೀರು ಸುರಿಸಿದ್ದಾರೆ. ರಾಜೀನಾಮೆ ನೀಡದಂತೆ ಸಲಹೆ ನೀಡಿದ ಸಿಎಂ ಕಚೇರಿ ಸಿಬ್ಬಂದಿ, ಬಳಿಕ ಕಣ್ಣೀರಿಟ್ಟಿದ್ದಾರಂತೆ. ಬುಧವಾರ ವಿಧಾನಸೌಧದ ಸಿಎಂ ಕಚೇರಿ ಭಾವನಾತ್ಮಕ ಸನ್ನಿವೇಶಕ್ಕೆ ಸಾಕ್ಷಿಯಾಯ್ತು.

## ಭಾರತದ ನಿರ್ಮಾಣದಲ್ಲಿ ನೆಹರೂ ಪಾತ್ರ ದೊಡ್ಡದು

**ಬೆಂಗಳೂರು:** ಆಧುನಿಕ ಭಾರತದ ನಿರ್ಮಾಣದಲ್ಲಿ ನೆಹರೂ ಅವರ ಪಾತ್ರ ದೊಡ್ಡದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ವಿಧಾನ ಸೌಧದ ಪೂರ್ವ ದಿಕ್ಕಿನಲ್ಲಿರುವ ಮಾಜಿ ಪ್ರಧಾನಮಂತ್ರಿ ಜವಾಹರಲಾಲ್ ನೆಹರು ಅವರ ಪುಣ್ಯ ಸ್ಮರಣೆ ಅಂಗವಾಗಿ ಅವರ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ಭಾವಚಿತ್ರಕ್ಕೆ ಪುಷ್ಪರ್ಚನೆ ಮಾಡಿ ಮಾತನಾಡಿ, ನೆಹರು ಅವರು ದೇಶದಲ್ಲಿ ವೈಜ್ಞಾನಿಕ ಮನೋಭಾವ ಬೆಳೆಸಿದರು. ನೆಹರೂ ಅವರು ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರದ ಮೊದಲ ಪ್ರಧಾನಮಂತ್ರಿಗಳಾಗಿ 17 ವರ್ಷಗಳ ಕಾಲ ಜನರ ಸೇವೆ ಮಾಡಿದ್ದಾರೆ. ಸಮಾಜವಾದಿ ಮತ್ತು ಮಿಶ್ರ ಆರ್ಥಿಕತೆಗೆ ಹೆಚ್ಚು ಒತ್ತು ನೀಡಿ ಬೃಹತ್ ಅಣೆಕಟ್ಟುಗಳ ನಿರ್ಮಾಣ, ಶಿಕ್ಷಣ, ಸಹಕಾರ ಕ್ಷೇತ್ರಗಳಲ್ಲಿ ವೈಜ್ಞಾನಿಕ ಮನೋಭಾವವನ್ನು ಬೆಳೆಸಲು ನೆಹರೂ ಅವರು ಕಾರಣ ಕರ್ತರು. ಅವರ ಹಾದಿಯಲ್ಲಿ ನಡೆಯುವ ಪ್ರಾಮಾ ಣಿಕ ಪ್ರಯತ್ನ ಮಾಡುತ್ತೇವೆ. ಪಂಚವಾ ರ್ಷಿಕ ಯೋಜನೆಗಳನ್ನು ರೂಪಿಸಿ ದೇಶದ ಪ್ರಗತಿ ಯನ್ನು ವೈಜ್ಞಾನಿಕವಾಗಿ ಸಾಧಿಸುವ ಪ್ರಯತ್ನ ಮಾಡಿದ್ದರು. ಅವರು ಅಗಲಿ 62 ವರ್ಷಗಳಾಗಿವೆ. ಈ ಸಂದರ್ಭದಲ್ಲಿ ಅವರನ್ನು ಸ್ಮರಿಸಿ ಅವರ ಹಾದಿಯಲ್ಲಿ ನಡೆಯುವ ಪ್ರಾಮಾಣಿಕ ಪ್ರಯತ್ನವನ್ನು ಮಾಡುವುದಾಗಿ ತಿಳಿಸಿದರು.

ಪುಣ್ಯ ಸ್ಮರಣೆ ನಿಮಿತ್ತ ಜವಾಹರಲಾಲ್ ನೆಹರು ಭಾವಚಿತ್ರಕ್ಕೆ ಸಿಎಂ ಸಿದ್ದರಾಮಯ್ಯ ಪುಷ್ಪಾರ್ಚನೆ ಸಲ್ಲಿಸಿದರು.

## ಸಂಪಾದಕೀಯ

# ಮಳೆಗಾಲದ ಸನ್ನದ್ಧತೆ ಬೇಕು

ಮುಂಗಾರು ಆಗಮಿಸಿದೆ. ಈಗಾಗಲೇ ಬೆಂಗಳೂರಿನಲ್ಲಿ ಬಿದ್ದ ಮಳೆಗೆ ರಸ್ತೆಗಳು ನದಿಯಂತಾಗಿವೆ. ಮಳೆ ಎಂಬುದು ರೈತರಿಗೆ, ನಾಡಿನ ಜನತೆಗೆ ಒಳ್ಳೆಯ ಸುದ್ದಿ. ಆದರೆ ನಗರವಾಸಿಗಳಿಗೆ ಮಳೆ ಎಂದರೆ 'ಜನಜೀವನ ಅಸ್ತವ್ಯಸ್ತ' ಎನ್ನುವಂತಾಗಿದೆ. ಅದಕ್ಕೆ ಕಾರಣ ಸ್ಥಳೀಯಾಡಳಿತಗಳ ಸೂಕ್ತ ಯೋಜನೆಯಿಲ್ಲದ ಕಾಮಗಾರಿಗಳು. ಬೆಂಗಳೂರಿನಲ್ಲಿ ಮಾತ್ರವಲ್ಲ ಹೀಗಿರುವುದು. ಎರಡನೇ, ಮೂರನೇ ಹಂತದ ನಗರಗಳಲ್ಲಿ ಕೂಡ ಮಳೆ ಅಸ್ತವ್ಯಸ್ತತೆಯನ್ನು ತರುತ್ತದೆ. ಅಗೆದುಹಾಕಿದ ರಸ್ತೆಗಳು, ಅರ್ಧ ಮುಗಿಸಿಟ್ಟ ಕೇಬಲ್ ವರ್ಕ್, ಇನ್ನೇನು ಗಾಳಿ ಬೀಸಿದರೆ ಮುರಿದು ಬೀಳುವಂತಿರುವ ಮರಗಳು, ಬಾಯಿ ತೆರೆದು ನುಂಗಲು ಸನ್ನದ್ಧವಾಗಿರುವ ಮ್ಯಾನ್‌ಹೋಲ್‌ಗಳು, ಸ್ವಚ್ಛಗೊಳಿಸದ ಮೋರಿಗಳು, ಹೂಳು ತುಂಬಿಕೊಂಡ ರಾಜಕಾಲುವೆಗಳು, ಶಿಥಿಲ ಟ್ರಾನ್ಸ್‌ಫಾರ್ಮರ್‌ಗಳು, ಭಾರಿ ನೀರು ತುಂಬಿಕೊಳ್ಳಲು ರೆಡಿಯಾಗಿರುವ ಅಂಡರ್‌ಪಾಸ್‌ಗಳು ಮಳೆಗಾಲವನ್ನು ಸ್ವಾಗತಿಸುತ್ತವೆ. ಇವು ಜನಸಾಮಾನ್ಯರಿಗೆ ಗೋಳನ್ನು ತರುತ್ತವಲ್ಲದೆ ಹಿತವನ್ನಲ್ಲ. ಸರಕಾರ ಮೊದಲೇ ಇದನ್ನೆಲ್ಲ ಯೋಜಿಸಿ ಮಳೆಗಾಲಕ್ಕೆ ಸೂಕ್ತ ತಯಾರಿ ಮಾಡಿಕೊಳ್ಳಬೇಕು. ಮಳೆ ಬಿದ್ದ ನಂತರ ಈ ಬಗ್ಗೆ ಯೋಚಿಸುವುದಲ್ಲ. ಇನ್ನೂ ಕಾಲ ಮಿಂಚಿಲ್ಲ. ಅರ್ಧಕ್ಕೆ ಬಿಟ್ಟ ಕಾಮಗಾರಿಗಳನ್ನು ಪೂರೈಸಬೇಕು. ಮಳೆ ನೀರು ಹರಿದುಹೋಗುವ ಮತ್ತು ಇಂಗುವ ವ್ಯವಸ್ಥೆಗಳನ್ನು ಸಮರ್ಪಕಗೊಳಿಸಬೇಕು. ತಗ್ಗುಪ್ರದೇಶಗಳಿಗೆ ನೀರು ನುಗ್ಗುವುದು ರಾಜಧಾನಿಯ ಬಲು ದೊಡ್ಡ ಸಮಸ್ಯೆ. ಒತ್ತುವರಿ, ನೀರು ಹೋಗಲು ಜಾಗವಿಲ್ಲದಿರುವುದು ಇದಕ್ಕೆ ಕಾರಣ. ಮಳೆ ಬಂದಾಗ ನಗರದಲಿ ಪ್ರವಾಹ ಉಂಟಾಗಬಹುದಾದ 130ಕ್ಕೂ ಅಧಿಕ ಸ್ಥಳಗಳನ್ನು ಜಿಬಿಎ ಗುರುತಿಸಿದೆ. ಇವುಗಳಲ್ಲಿ 60ಕ್ಕೂ ಹೆಚ್ಚು ಅತಿ ಸೂಕ್ಷ್ಮ ಪ್ರದೇಶಗಳೂ ಇವೆ. ರಾಜಕಾಲುವೆಗಳ ಹೂಳೆತ್ತುವುದು, ಅವುಗಳ ಗೋಡೆಗಳನ್ನು ಎತ್ತರಿಸುವುದು ಆಗಬೇಕು. ಮಳೆ ಬಂದಾಗ ಚರಂಡಿಗಳು ಹೂಳೆತ್ತುವುದು, ಅಪಾಯಕಾರಿ ಮರಗಳ ಕೊಂಬೆ ಕಡಿಯುವುದು, ಮರ ಬಿದ್ದರೆ ತೆರವು ಮಾಡುವುದಷ್ಟೇ ಜಿಬಿಎ ಕರ್ತವ್ಯ ಅಲ್ಲ. ಪ್ರತೀ ಮಳೆಗಾಲದಲ್ಲಿ ಕೃತಕ ನೆರೆ ರಾಜಧಾನಿಯಲ್ಲಿ ಅಲ್ಲಲ್ಲಿ ಉಲ್ಬಣಿಸುತ್ತದೆ. ಇದನ್ನು ತಡೆಗಟ್ಟಲು ಶಾಶ್ವತ ಕ್ರಮಗಳನ್ನು ಕೈಗೊಳ್ಳದೇ ಹೋದರೆ ಪ್ರತೀ ವರ್ಷವೂ ಅನಾಹುತ ಕಟ್ಟಿಟ್ಟ ಬುತ್ತಿ. ಗ್ರಾಮೀಣ ಪ್ರದೇಶಗಳಲ್ಲಿ, ನದಿ ತೀರದ ತಾಣಗಳಲ್ಲಿ ಬೇರೆಯದೇ ಸವಾಲುಗಳಿವೆ. ಸ್ಥಳೀಯಾಡಳಿತಗಳನ್ನು ಈ ಬಗ್ಗೆ ಎಚ್ಚರಿಸಿ ಸನ್ನದ್ಧ ಸ್ಥಿತಿಯಲ್ಲಿರಿಸಬೇಕು. ತುರ್ತು ಕಾರ್ಯಾಚರಣೆ ಪಡೆಗಳನ್ನು ಸಜ್ಜುಗೊಳಿಸಬೇಕು. ತುರ್ತು ಸಹಾಯವಾಣಿಗಳನ್ನು ಚಾಲನೆಗೆ ತರಬೇಕು. ಆಸ್ತಿಪಾಸ್ತಿ, ಜೀವಹಾನಿಯನ್ನು ತಡೆಯಲು ಸೂಕ್ತ ಯೋಜನೆ ಹಾಕಿಕೊಳ್ಳಬೇಕಿದೆ.

## ಸೊಂಪಾದಕೀಯ

# ರಜತಪ್ರಿಯ ಚೋರರು

ಬೆಂಗಳೂರಿನಲ್ಲಿ ಪತ್ತೆಯಾದ ಒಂದು ವಿಚಿತ್ರ ಕಳ್ಳರ ಗ್ಯಾಂಗ್ ಕಾರ್ಯವೈಖರಿ ನೋಡಿ ಪೊಲೀಸರೇ ಒಂದು ಕ್ಷಣ ದಂಗಾಗಿದ್ದಾರೆ. ಈ ಖದೀಮರ ಗುಂಪು ಜ್ಯುವೆಲರಿ ಅಂಗಡಿಗೆ ಕನ್ನ ಹಾಕಿದೆ. ಅಂಗಡಿಯಲ್ಲಿ ಕೆಜಿಗಟ್ಟಲೇ ಬಂಗಾರ ಕಣ್ಣ ಮುಂದೆಯೇ ಇದ್ದರೂ ಖದೀಮರು ಅದನ್ನು ತಿರುಗಿಯೂ ನೋಡಿಲ್ಲ. ಬದಲು ಅಲ್ಲಿದ್ದ ಬೆಳ್ಳಿಯ ಸಾಮಗ್ರಿಗಳನ್ನು ಗಂಟು ಕಟ್ಟಿಕೊಂಡು ಪರಾರಿಯಾಗಿದ್ದಾರೆ. ಹೆಸರಘಟ್ಟ ಮುಖ್ಯರಸ್ತೆಯಲ್ಲಿರುವ ಜ್ಯುವೆಲರ್ಸ್‌ಗೆ ಕನ್ನ ಕೊರೆದು ನುಗ್ಗಿದ ಈ ಕಳ್ಳರು ನೇರವಾಗಿ ಬೆಳ್ಳಿ ಇಟ್ಟ ಜಾಗಕ್ಕೆ ಹೋಗಿದ್ದಾರೆ. ಕೆಲವೇ ನಿಮಿಷಗಳಲ್ಲಿ ಕೆಜಿಗಟ್ಟಲೇ ಬೆಳ್ಳಿ ದೋಚಿ ಪರಾರಿಯಾಗಿದ್ದಾರೆ. ಬೆಳಗ್ಗೆ ಅಂಗಡಿ ತೆರೆಯಲು ಬಂದ ಮಾಲೀಕ ಶಾಕ್. ಪೊಲೀಸರೂ ಶಾಕ್. ಬೆಲೆಬಾಳುವ ಬಂಗಾರ ಹಾಗೇ ಇದೆ. ಬೆಳ್ಳಿ ಮಾತ್ರ ಒಂದು ತುಂಡೂ ಬಿಡದೆ ದೋಚಿದ್ದಾರೆ. ಪೊಲೀಸರು ಈಗ ಈ ಕಳ್ಳರ ಬೆನ್ನು ಹತ್ತಿ ರಾಜಸ್ಥಾನದಲ್ಲಿ ಮೂವರನ್ನು ಬಂಧಿಸಿದ್ದಾರೆ. ಚಿನ್ನದ ಮೇಲಿನ ಇವರ ಅಲರ್ಜಿಗೆ ಕಾರಣ ಏನು ಎಂಬುದು ಇನ್ನೂ ಗೊತ್ತಾಗಿಲ್ಲ. ಬಹುಶಃ 'ಚಿನ್ನ ಖರೀದಿಸಬೇಡಿ' ಎಂದು ಪ್ರಧಾನಿ ಮೋದಿ ಅವರು ಹೇಳಿದ್ದನ್ನು ಇವರು ತುಂಬಾ ಗಂಭೀರವಾಗಿ ಪರಿಗಣಿಸಿದ ಹಾಗೆ ಇದೆ. ಹಾಗಾಗಿ ಚಿನ್ನವನ್ನು ಕೈಯಿಂದ ಮುಟ್ಟಲೂ ಹೋಗಿಲ್ಲ. ಅಂದರೆ ಇವರು ಅಪ್ಪಟ ದೇಶಪ್ರೇಮಿ ಭಾರತೀಯರೇ ಸೈ. ಕಳ್ಳರಾದರೇನಾಯಿತು? ಇವರ ದೇಶಪ್ರೇಮಕ್ಕೆ ಒಂದು ಸೆಲ್ಯೂಟ್ ಹೊಡೆಯಲೇ ಬೇಕು. ದೇಶಪ್ರೇಮಕ್ಕೆ ಸಂಬಂಧಿಸಿದ ಯಾವುದಾದರೂ ಪ್ರಶಸ್ತಿ ಇದ್ದರೆ ಇವರಿಗೆ ಖಂಡಿತ ನೀಡಬಹುದು. ಇವರ ಹೆಸರುಗಳನ್ನು ಅಪರಾಧ ಚರಿತ್ರೆಯಲ್ಲಿ 'ಸುವರ್ಣಾಕ್ಷರ'ಗಳಿಂದ, ಛೇ, ಅದಲ್ಲ, 'ರಜತಾಕ್ಷರ'ಗಳಿಂದ ಬರೆದಿಡಬೇಕು!

## ಸಂಪಾದಕರ ಸದ್ಯಶೋಧನೆ

# ಮರಗೆಲಸ ಮತ್ತು ಜೀವನ ಪಾಠ

ನಾನು ಇತ್ತೀಚೆಗೆ ಮಾರ್ಕ್ ಎಲಿಸನ್ ಬರೆದ How to Build Impossible Things: Lessons in Life and Carpentry ಎಂಬ ಪುಸ್ತಕವನ್ನು ಓದಿದೆ. ಇದು ಕೇವಲ ಮರಗೆಲಸದ ಬಗ್ಗೆ ಇರುವ ತಾಂತ್ರಿಕ ಕೈಪಿಡಿಯಲ್ಲ; ಇದು ಜೀವನದ ದರ್ಶನ, ತಾಳ್ಮೆಯ ಪಾಠ ಮತ್ತು ಅಸಾಧ್ಯವಾದುದನ್ನು ಸಾಧ್ಯವಾಗಿಸುವ ಕಲೆಯ ಕುರಿತಾದ ಒಂದು ವಿಭಿನ್ನ ಕೃತಿ. ನ್ಯೂಯಾರ್ಕ್‌ನ ಅತ್ಯಂತ ಪ್ರತಿಷ್ಠಿತ ಮತ್ತು ಸಂಕೀರ್ಣವಾದ ಮನೆಗಳನ್ನು ನಿರ್ಮಿಸುವಲ್ಲಿ ಹೆಸರುವಾಸಿಯಾದ ಎಲಿಸನ್, ಈ ಪುಸ್ತಕದಲ್ಲಿ ತಮ್ಮ ವೃತ್ತಿಜೀವನದ ಅನುಭವಗಳನ್ನು ಜೀವನದ ಪಾಠಗಳೊಂದಿಗೆ ಬಹಳ ರಸವತ್ತಾಗಿ ಹೆಣೆದಿದ್ದಾರೆ. ಎಲಿಸನ್ ಅವರ ದೃಷ್ಟಿಯಲ್ಲಿ ಮರ ಎನ್ನುವುದು ಕೇವಲ ನಿರ್ಜೀವ ವಸ್ತುವಲ್ಲ. ಪ್ರತಿಯೊಂದು ಮರದ ತುಂಡಿಗೂ ಅದರದ್ದೇ ಆದ ಇತಿಹಾಸ, ಬಣ್ಣ ಮತ್ತು ಗುಣಲಕ್ಷಣಗಳಿರುತ್ತವೆ. ನಾವು ಒಂದು ಮರದ ತುಂಡನ್ನು ಬಳಸುವಾಗ ಅದರ ಮಿತಿಗಳನ್ನು ಅರ್ಥಮಾಡಿಕೊಳ್ಳಬೇಕು. ಇದನ್ನೇ ಅವರು ಜೀವನಕ್ಕೂ ಅನ್ವಯಿಸುತ್ತಾರೆ. ನಾವು ನಮ್ಮ ಸುತ್ತಲಿರುವ ಜನರನ್ನು ಅಥವಾ ನಮಗಿರುವ ಸಂದರ್ಭಗಳನ್ನು ಅವು ಹೇಗಿವೆಯೋ ಹಾಗೆಯೇ ಒಪ್ಪಿಕೊಂಡಾಗ ಮಾತ್ರ ಅದ್ಭುತವಾದುದನ್ನು ಸೃಷ್ಟಿಸಲು ಸಾಧ್ಯ ಎಂಬುದು ಅವರ ವಾದ. ಪುಸ್ತಕದ ಶೀರ್ಷಿಕೆಯೇ ಹೇಳುವಂತೆ, ಎಲಿಸನ್ ಹೆಚ್ಚಾಗಿ ಕೆಲಸ ಮಾಡಿದ್ದು 'ಅಸಾಧ್ಯ' ಎನಿಸುವ ಪ್ರಾಜೆಕ್ಟ್‌ಗಳ ಮೇಲೆ. ಶ್ರೀಮಂತ ಗ್ರಾಹಕರು ಕೇಳುವ ವಿಚಿತ್ರ ವಿನ್ಯಾಸಗಳು, ವಾಸ್ತುಶಿಲ್ಪಿಗಳು ಬಿಡಿಸುವ ಜಟಿಲವಾದ ನಕ್ಷೆಗಳನ್ನು ವಾಸ್ತವಕ್ಕೆ ತರುವುದು ಸುಲಭದ ಮಾತಲ್ಲ. ದೊಡ್ಡ ಗೋಡೆಯನ್ನು ಕಟ್ಟುವುದಕ್ಕಿಂತ ಮುಂಚೆ ಒಂದು ಮಿಲಿಮೀಟರ್ ಅಳತೆಯ ವ್ಯತ್ಯಾಸವೂ ಹೇಗೆ ಇಡೀ ಕಟ್ಟಡವನ್ನು ಹಾಳು ಮಾಡಬಹುದು ಎಂಬುದನ್ನು ಅವರು ವಿವರಿಸುತ್ತಾರೆ. ಅಸಾಧ್ಯವಾದ ಕೆಲಸಗಳು ರಾತ್ರೋರಾತ್ರಿ ಆಗುವುದಿಲ್ಲ. ಅದಕ್ಕೆ ತಿಂಗಳುಗಟ್ಟಲೆ ಯೋಜಿಸುವ ಮತ್ತು ಶ್ರಮಿಸುವ ಸಂಯಮ ಬೇಕು. ಮರಗೆಲಸದಲ್ಲಿ ಒಂದು ತಪ್ಪು ಮಾಡಿದರೆ ಇಡೀ ಮರ ವ್ಯರ್ಥವಾಗಬಹುದು. ಆದರೆ ಎಲಿಸನ್ ಹೇಳುವಂತೆ, 'ತಪ್ಪುಗಳನ್ನು ಸರಿಪಡಿಸುವ ಕಲೆಯಲ್ಲೇ ನಿಜವಾದ ಕೌಶಲ ಅಡಗಿದೆ.' ಜೀವನದಲ್ಲೂ ಅಷ್ಟೇ, ನಾವು ಮಾಡಿದ ತಪ್ಪುಗಳನ್ನು ಮುಚ್ಚಿಡುವ ಬದಲು, ಅವುಗಳನ್ನು ಹೇಗೆ ಸರಿಪಡಿಸಿ ಮುಂದೆ ಸಾಗಬಹುದು ಎಂಬುದು ಮುಖ್ಯ. ಪರಿಪೂರ್ಣತೆ ಎಂಬುದು ಒಂದು ಗುರಿಯಲ್ಲ, ಅದು ಒಂದು ನಿರಂತರ ಪ್ರಯಾಣ ಎಂದು ಅವರು ನೆನಪಿಸುತ್ತಾರೆ. ಎಲಿಸನ್ ಅವರಿಗೆ ಕಾರ್ಪೆಂಟ್ರಿ ಎಂಬುದು ಕೇವಲ ಹೊಟ್ಟೆಪಾಡಿನ ಕೆಲಸವಲ್ಲ, ಅದು ಒಂದು ರೀತಿಯ ಧ್ಯಾನ. ಕೆಲಸ ಮಾಡುವಾಗ ಸುತ್ತಲಿನ ಪ್ರಪಂಚವನ್ನು ಮರೆತು, ಕೇವಲ ಆ ಮರ ಮತ್ತು ಉಪಕರಣದ ಮೇಲೆ ಗಮನ ಕೇಂದ್ರೀಕರಿಸುವುದು ಮನಸ್ಸಿಗೆ ಶಾಂತಿ ನೀಡುತ್ತದೆ. ಆಧುನಿಕ ಜಗತ್ತಿನ ಗಡಿಬಿಡಿಯಲ್ಲಿ ನಮಗೆ ಇಂಥ 'ಗಮನ' ಬಹಳ ಅವಶ್ಯಕ ಎಂದು ಅವರು ಪ್ರತಿಪಾದಿಸುತ್ತಾರೆ. ಪುಸ್ತಕದಲ್ಲಿ ಅವರು ನೀಡುವ ಕೆಲವು ಕಿವಿಮಾತುಗಳು ಓದುಗರ ಮೇಲೆ ದೀರ್ಘಕಾಲದ ಪ್ರಭಾವ ಬೀರುತ್ತವೆ. 'ಯಾವುದನ್ನಾದರೂ ಕತ್ತರಿಸುವ ಮೊದಲು ಎರಡು ಬಾರಿ ಅಳೆಯಿರಿ. ಜೀವನದ ನಿರ್ಧಾರಗಳಿಗೂ ಇದು ಅನ್ವಯಿಸುತ್ತದೆ. ಸುಲಭವಾದ ಕೆಲಸವನ್ನು ಯಾರೂ ಮಾಡುತ್ತಾರೆ, ಆದರೆ ಅಸಾಧ್ಯವಾದುದನ್ನು ಕೈಗೆತ್ತಿಕೊಂಡಾಗ ಮಾತ್ರ ನಿಮ್ಮ ನಿಜವಾದ ಶಕ್ತಿ ತಿಳಿಯುತ್ತದೆ. ಯಾವುದೇ ಕೆಲಸ ಸಣ್ಣದಲ್ಲ. ಒಂದು ಮೊಳೆಯನ್ನು ಹೊಡೆಯುವುದರಲ್ಲೂ ಒಂದು ಘನತೆ ಇದೆ. ಜಗತ್ತಿನಲ್ಲಿ ಯಾವುದೂ ಪರಿಪೂರ್ಣವಲ್ಲ, ನಾವು ಕಟ್ಟುವ ಗೋಡೆಗಳು ಸೊಟ್ಟಗಿರಬಹುದು, ನಾವು ಬಳಸುವ ಮರ ಸೀಳಿರಬಹುದು. ಆದರೆ ಆ ಸೀಳಿನ ನಡುವೆಯೂ ಒಂದು ಸೌಂದರ್ಯವನ್ನು ಹುಡುಕುವುದೇ ಜೀವನದ ಕಲೆ' ಎಂ ಬುದು ಮಾರ್ಕ್ ಎಲಿಸನ್ ನಂಬಿಕೆ. How to Build Impossible Things ಕೇವಲ ಕಾರ್ಪೆಂಟರ್‌ಗಳಿಗೆ ಸೀಮಿತವಾದ ಪುಸ್ತಕವಲ್ಲ. ಇದು ತಮ್ಮ ಜೀವನದಲ್ಲಿ ಏನನ್ನಾದರೂ ಸಾಧಿಸಬೇಕು ಎಂದು ಹಂಬಲಿಸುವ ಪ್ರತಿಯೊಬ್ಬರಿಗೂ ಸ್ಫೂರ್ತಿಯ ಸೆಲೆ. ಎಲಿಸನ್ ಅವರ ಹಾಸ್ಯಪ್ರಜ್ಞೆ, ಸರಳ ಭಾಷೆ ಮತ್ತು ಆಳವಾದ ಅನುಭವಗಳು ಈ ಪುಸ್ತಕವನ್ನು ಒಂದು ಅದ್ಭುತ ಓದನ್ನಾಗಿ ಮಾಡಿವೆ. ಅಸಾಧ್ಯವಾದುದನ್ನು ಸಾಧ್ಯವಾಗಿಸಲು ಬೇಕಿರುವುದು ದೊಡ್ಡ ಯಂತ್ರಗಳಲ್ಲ, ಬದಲಿಗೆ ಅಚಲವಾದ ವಿಶ್ವಾಸ ಮತ್ತು ತಾಳ್ಮೆಯುಳ್ಳ ಮನಸ್ಸು ಎಂಬ ಸತ್ಯವನ್ನು ಈ ಕೃತಿ ನಮಗೆ ಮನವರಿಕೆ ಮಾಡಿಕೊಡುತ್ತದೆ.

# ಬಣ್ಣ, ಭಾವನೆಗಳ ಮೆರವಣಿಗೆಯ ಬ್ರಹ್ಮಾನಂದ!

ನೂರೆಂಟು ವಿಶ್ವ

ವಿಶ್ವೇಶ್ವರ ಭಟ್

vbhat@me.com

ನಾನು ತೆಲುಗು ಮಾತಾಡಲಾರೆ. ಆದರೆ ಚೆನ್ನಾಗಿ ಅರ್ಥವಾಗುತ್ತದೆ. ಎನ್‌ಟಿಆರ್, ಚಿರಂಜೀವಿ ಸಿನಿಮಾಗಳ ಅಭಿಮಾನಿ. ರಾಮ್ ಗೋಪಾಲ ವರ್ಮ ಸಿನಿಮಾಗಳೆಂದರೆ ಹುಚ್ಚು. ಈ 'ಪ್ರವಾಹ'ದಲ್ಲಿ ದಕ್ಕಿದವರು ಬ್ರಹ್ಮಾನಂದಂ. ನನಗರಿವಿಲ್ಲದಂತೆ ನಾನು ಬ್ರಹ್ಮಾನಂದಂ ಅಭಿಮಾನಿಯಾಗಿಬಿಟ್ಟೆ. ಅದೆಷ್ಟರ ಮಟ್ಟಿಗೆ ಅಂದ್ರೆ ಬ್ರಹ್ಮಾನಂದಂ ಇದ್ದ ಸಿನಿಮಾವನ್ನು ಬಿಡುತ್ತಿರಲಿಲ್ಲ. ಅದರಲ್ಲೂ ರೇಸು ಗುರ್‍ರಂ, ದೂಕುಡು, ರೆಡಿ, ಅದುರ್ಸ್, ಮನ್ಮಥುಡು, ಬಾದ್ಷಾ, ಬಾಬಾಯಿ ಅಬ್ಬಾಯಿ, ಕಿಕ್, ಅತ್ತಾರಿಂಟಿಕಿ ದಾರೇದಿ, ಮನಸಂತ ನುವ್ವೇ, ಜಂಬಲಕಿಡಿ ಪಂಬ ಹಾಗೂ ಚಿತ್ತೆಮ್ಮ ಮೊಗುಡು ಸಿನಿಮಾಗಳನ್ನು ನಾನು ನಾಲ್ಕೈದು ಸಲ ನೋಡಿರಬಹುದು. ತಾರಾಗಣದಲ್ಲಿ ಬ್ರಹ್ಮಾನಂದಂ ಇದ್ದಾರೆ ಎಂಬ ಒಂದೇ ಕಾರಣಕ್ಕೆ ಅನೇಕ ತೆಲುಗು ಸಿನಿಮಾಗಳನ್ನು ನೋಡಿದ್ದೇನೆ. ತೆಲುಗು ಚಿತ್ರ ನೋಡಲು ಮತ್ತು ನೋಡದಿರಲು ಅವರೇ ಕಾರಣ. ಆ ಸಿನಿಮಾದಲ್ಲಿ ಬ್ರಹ್ಮಾನಂದಂ ಇಲ್ಲ ಎಂಬ ಕಾರಣಕ್ಕೆ ಕೆಲವು ಉತ್ತಮ ಚಿತ್ರಗಳನ್ನು ನೋಡಿಲ್ಲ. ಸಿನಿಮಾ ಕಥೆ ಚೆನ್ನಾಗಿಲ್ಲದಿದ್ದರೂ, ಕೇವಲ ಇವರ ಕಾಮಿಡಿ ಟ್ರ್ಯಾಕ್‌ಗಾಗಿಯೇ ಸಿನಿಮಾಗಳನ್ನು ನೋಡಿದ್ದಿದೆ. ಭಾಷೆ ಗೊತ್ತಿಲ್ಲದಿದ್ದರೂ ಒಬ್ಬ ಕಲಾವಿದನ ಮೇಲೆ ಇಷ್ಟೊಂದು ಪ್ರೀತಿ ಮೂಡಲು ಅವರ ನಟನೆಯೇ ಕಾರಣ.

ಬ್ರಹ್ಮಾನಂದಂ ಎಂಬ ಆ ಶಕ್ತಿಯೇ ಹಾಗಿದೆ, ಒಮ್ಮೆ ಆ 'ಪ್ರವಾಹ'ಕ್ಕೆ ಸಿಲುಕಿದರೆ ಅದರಿಂದ ಹೊರಬರುವುದು ಅಸಾಧ್ಯ. ಅವರೊಬ್ಬ ಪದ್ಮಶ್ರೀ ಪುರಸ್ಕೃತ ನಟ ಎಂಬುವುದಕ್ಕಿಂತ ಹೆಚ್ಚಾಗಿ, ನಮ್ಮ ಮನೆಯ ಸದಸ್ಯನಂತೆ ಕಾಣುವ ಅದ್ಭುತ ಕಲಾವಿದ. 'ಕ್ಷಣ ಕ್ಷಣಂ' ಅಥವಾ 'ಮನಿ' ಸಿನಿಮಾಗಳಲ್ಲಿ ಅವರ ನಟನೆಯನ್ನು ನಾನು ಪದೇ ಪದೆ ನೋಡಿ ಖುಷಿ ಪಟ್ಟಿದ್ದೇನೆ. ಟಿವಿ, ಯೂಟ್ಯೂಬ್ ವೀಕ್ಷಿಸುವಾಗ ಅಚಾನಕ್ ಬ್ರಹ್ಮಾನಂದಂ ಬಂದರೆ, ನಾನು ಮುಂದೆ ಹೋಗಿದ್ದೇ ಇಲ್ಲ. ನನ್ನ ಫೋನ್ ಅಲ್ಗಾರಿದಂ ಪದೇ ಪದೆ ಬ್ರಹ್ಮಾನಂದಂ ಅವರನ್ನೇ ತೋರಿಸುತ್ತದೆ. ಹೀಗಾಗಿ ದಿನಾ ಅವರ ಹಾಸ್ಯ ನಟನೆಯನ್ನು ನೋಡದೇ ಇರುವ ದಿನಗಳೇ ಇಲ್ಲ.

ತೆಲುಗು ಭಾಷೆ ಅರ್ಥವಾಗದವರಿಗೂ ಬ್ರಹ್ಮಾನಂದಂ ಇಷ್ಟವಾಗಲು ಮುಖ್ಯ ಕಾರಣ ಅವರ 'facial gymnastics'. ಅವರು ಕಣ್ಣು ಮಿಟುಕಿಸುವ ರೀತಿ, ಹುಬ್ಬು ಏರಿಸುವ ಸ್ಟೈಲ್ ಅಥವಾ ಅವಮಾನವಾದಾಗ ಮುಖವನ್ನು ಸಣ್ಣಗೆ ಮಾಡಿಕೊಳ್ಳುವ ಪರಿಗೆ ಜಗತ್ತಿನ ಯಾವುದೇ ಭಾಷೆಯ ಹಂಗಿಲ್ಲ. ಪ್ರತಿ ಬಾರಿ ನೋಡಿದಾಗಲೂ ಅವರ ಯಾವುದೋ ಒಂದು ಹೊಸ ಎಕ್ಸ್‌ಪ್ರೆಶನ್ ಮನಸ್ಸನ್ನು ತುಂಬಿಕೊಳ್ಳುತ್ತದೆ. ಅನೇಕ ಸಿನಿಮಾಗಳಲ್ಲಿ ಹೀರೋಗಳಿಗಿಂತ ಹೆಚ್ಚು ಸ್ಕ್ರೀನ್ ಸ್ಪೇಸ್ ಮತ್ತು ಸಂಭಾವನೆ ಇವರಿಗಿರುತ್ತಿತ್ತು ಇಂದು ಕೇಳಿದ್ದೇನೆ. ಉದಾಹರಣೆಗೆ, 'ದೂಕುಡು' ಅಥವಾ 'ಬಾದ್ಷಾ' ಚಿತ್ರಗಳಲ್ಲಿ ಮಹೇಶ್ ಬಾಬು ಅಥವಾ ಜ್ಯೂನಿಯರ್ ಎನ್ಟಿಆರ್ ಅವರಿಗಿಂತ ಬ್ರಹ್ಮಾನಂದಂ ಅವರ ಕಾಮಿಡಿ ಟ್ರ್ಯಾಕ್ ನೋಡಲೆಂದೇ ಜನ ಥಿಯೇಟರ್‌ಗೆ ಹೋಗುತ್ತಿದ್ದರು. ಹೀರೋ ಎಷ್ಟೇ ದೊಡ್ಡವನಾಗಿದ್ದರೂ, ಬ್ರಹ್ಮಾನಂದಂ ಅವರ ಪಾತ್ರಕ್ಕೆ ಒಂದು ಪ್ರತ್ಯೇಕ ಗೌರವ ಮತ್ತು ತೂಕ!

ಇನ್ನೇನು ಸಂಜೆ ಆಯಿತು ಅನ್ನುವಾಗ ಆಕಾಶಕ್ಕೆ ಬಣ್ಣ ಬಳಿಯುವ ಸಂಜೆಯಂತೆಯೇ ಬ್ರಹ್ಮಾನಂದಂ ಅವರ ನಟನೆ. ಅವರ ಮುಖವಿದೆಯಲ್ಲ, ಅದು ಬರೀ ಸ್ನಾಯುಗಳ ಚಲನೆಯಲ್ಲ. ಅದು ಸಹಸ್ರಾರು ಕಥೆಗಳನ್ನು ಹೊತ್ತು ನಿಂತಿರುವ ಒಂದು ಹಳೆಯ ರೈಲ್ವೆ ಸ್ಟೇಷನ್ನ ಪ್ಲಾಟ್‌ಫಾರ್ಮ್ ಇದ್ದಂತೆ. ಪ್ರತಿ ಕ್ಷಣವೂ ಅಲ್ಲಿ ಏನೋ ಒಂದು ಹೊಸ ಅಚ್ಚರಿ ಇಳಿಯುತ್ತಲೇ ಇರುತ್ತದೆ. ಅವರ ಮುಖದ ಮೇಲೆ ಮೂಡುವ ಆ ಸುಕ್ಕುಗಳು, ಹುಬ್ಬಿನ ಆ ಕುಣಿತಗಳು ಅಪ್ಪಟ ಒಂದು 'ಭಾವಗಳ ಸಂತೆಯಂತೆ'. ಅನಿವಾರ್ಯತೆಯಿಂದಲೋ ಅಥವಾ ಹತಾಶೆಯಿಂದಲೋ ಅವರು ಮುಖವನ್ನು ಚಿಕ್ಕದು ಮಾಡಿಕೊಂಡಾಗ, ನಮಗೆ ನಮ್ಮದೇ ಬದುಕಿನ ಯಾವುದೋ ಒಂದು ಕಳೆದುಹೋದ ಅಸಹಾಯಕ ಕ್ಷಣ ನೆನಪಾಗಿ, ಅದು ನಗುವಾಗಿ ಹರಿದುಹೋಗುತ್ತದೆ. ಅವರು ಬರೀ ನಗಿಸುವುದಿಲ್ಲ, ಮನುಷ್ಯನ ಮುಜುಗರವನ್ನು ಅತ್ಯಂತ ಸುಂದರವಾಗಿ ಆಚರಿಸುತ್ತಾರೆ. ಅವರ ನಟನೆಯಲ್ಲಿ ಒಂದು ಬಗೆಯ 'ಅನಾಮಿಕ ಆಪ್ತತೆ' ಇದೆ.

ಬ್ರಹ್ಮಾನಂದಂ ಹಾಸ್ಯದಲ್ಲಿ 'ಕ್ರೌರ್ಯ' ಇಲ್ಲ, ಬದಲಾಗಿ ಜೀವನದ ವಿಪರ್ಯಾಸಗಳನ್ನು ಅತ್ಯಂತ ಮೃದುವಾಗಿ ಮುಟ್ಟಿ ನೋಡುವ 'ನವಿರು' ಇದೆ. ಅವರು ತೆರೆಯ ಮೇಲೆ ಬಂದರೆ ಸಾಕು, ಸಿನಿಮಾ ಎಂಬ ಮಹಾಕಾವ್ಯದ ನಡುವೆ ಒಂದು ಪುಟ್ಟ 'ಹನಿಗವನ' ಮೂಡಿದಂತಾಗುತ್ತದೆ. ಆಕ್ಷನ್, ಸಾಹಸ, ಸೆಂಟಿಮೆಂಟ್ ಎಂಬ ಬಿರುಗಾಳಿಯ ನಡುವೆ ಅವರು ತರುವ ನಗು, ಸಿಮೆಂಟ್ ಕಾಡಿನ ಮಧ್ಯೆ ಬೆಳೆದು ನಿಂತ ಒಂದು ಪುಟ್ಟ ಗಿಡದ ಹಾಗೆ... ಅದು ನಮಗೆ ಬದುಕಲು ಭರವಸೆ ನೀಡುತ್ತದೆ. ಬ್ರಹ್ಮಾನಂದಂ ಅವರದ್ದು 'ಅನುಭವಗಳ ಮೆರವಣಿಗೆ'. ಭಾಷೆಯ ಗಡಿ ದಾಟಿ ಅವರು ನಮಗೆ ಯಾಕೆ ಇಷ್ಟವಾಗುತ್ತಾರೆ ಅಂದ್ರೆ, ಬದುಕಿನ ಸಣ್ಣಪುಟ್ಟ ನೋವುಗಳನ್ನು ನಗುವಾಗಿ ಪರಿವರ್ತಿಸುವ ಕಲೆ ಅವರಿಗೆ ಸಿದ್ಧಿಸಿದೆ. ಅವರ ಕಣ್ಣುಗಳಿವೆಯಲ್ಲ, ಅವು ಮಧ್ಯಾಹ್ನದ ನಿದ್ದೆಯಲ್ಲಿ ಕಂಡ ಕನಸಿನಿಂದ ತಟ್ಟನೆ ಎಚ್ಚರಗೊಂಡ ಮಗುವಿನ ಬೆರಗಿನಂತಿರುತ್ತವೆ. ತೀರಾ ಅನಿವಾರ್ಯವೆನಿಸುವ ಹತಾಶೆಯಲ್ಲೂ ಅವರು ಮುಖವನ್ನು ಒಂದು ವಿಚಿತ್ರ ಕೋನಕ್ಕೆ ತಿರುಗಿಸಿದರೆ, ಅಲ್ಲಿಯವರೆಗೆ ಮಂಜಿನಂತಿದ್ದ ನಗು ಹನಿಹನಿಯಾಗಿ ಸುರಿಯತೊಡಗುತ್ತದೆ. ಇಡೀ ಸಿನಿಮಾದ ಗಂಭೀರತೆಯನ್ನು ಬ್ರಹ್ಮಾನಂದಂ ತಮ್ಮ ಒಂದೇ ಒಂದು ಸಣ್ಣ ಪ್ರತಿಕ್ರಿಯೆಯ ಮೂಲಕ ಕರಗಿಸಿಬಿಡುತ್ತಾರೆ. ಅವರ ನಗುವು ನಮಗೆ ಬದುಕಿನ ಜಟಿಲತೆಯನ್ನು ಮರೆಸಿ, 'ಹೋಗಲಿ ಬಿಡು, ಇಷ್ಟೇ ಅಲ್ವಾ ಬದುಕು?' ಎಂದು ಬೆನ್ನು ತಟ್ಟಿದಂತಾಗುತ್ತದೆ. ಅವರು ತೆರೆಯ ಮೇಲೆ ಬಂದಾಗಲೆಲ್ಲ ನಮಗೆ ಯಾವುದೋ ಹಳೆಯ ಪೋಸ್ಟ್ ಆಫೀಸಿನ ಗುಮಾಸ್ತನೋ ಅಥವಾ ಬಸ್ ನಿಲ್ದಾಣದಲ್ಲಿ ಛತ್ರಿ ಹಿಡಿದು ಬಸ್ಸಿಗೆ ಕಾಯುವ ಸಜ್ಜನನೋ ನೆನಪಾಗುತ್ತಾರೆ. ಈ ಲೋಕದಲ್ಲಿ 'ಪೇಚಿಗೆ' ಬಿದ್ದ ಮನುಷ್ಯ ಎಷ್ಟು ಮೋಹಕ ಮತ್ತು ಆಕರ್ಷಕವಾಗಿ ಕಾಣಬಲ್ಲ ಎಂಬುದನ್ನು ತೋರಿಸಿಕೊಟ್ಟ ಅಪ್ರತಿಮ ಮಾಂತ್ರಿಕ ಇವರು. ಬ್ರಹ್ಮಾನಂದಂ ಅವರು ಸಂಭಾಷಣೆ ಇಲ್ಲದಿದ್ದಾಗಲೂ ಹೆಚ್ಚು ಸಂವಹನ ಮಾಡುತ್ತಾರೆ. ಅವರು ಸುಮ್ಮನೆ ಒಂದು ಕಡೆ ನಿಂತು ಆಕಾಶ ನೋಡಿದರೂ ಸಾಕು, ಅಲ್ಲಿ ನೂರಾರು ತಮಾಷೆಯ ಭಾವನೆಗಳು ಸಾಲುಗಟ್ಟಿ ನಿಲ್ಲುತ್ತವೆ. ಅವರ ನಟನೆಯಲ್ಲಿ ಒಂದು ಬಗೆಯ 'ಸಾಂಕ್ರಾಮಿಕ ಮುಗ್ಧತೆ' ಇದೆ. ಮನುಷ್ಯ ಅದೆಷ್ಟು ದೊಡ್ಡವನಾದರೂ, ಬ್ರಹ್ಮಾನಂದಂ ಅವರ ಆ ಒಂದು ವಿಶಿಷ್ಟ ನೋಟಕ್ಕೆ ಸೋಲಲೇಬೇಕು. ಅದು ಕಳೆದುಹೋದ ಬಾಲ್ಯವನ್ನು ಮತ್ತೆ ತಂದು ಅಂಗೈಯಲ್ಲಿ ಇರಿಸಿದಂತೆಯೇ ಸರಿ. ಬದುಕಿನ ಧಾವಂತದಲ್ಲಿ ನಗುವುದನ್ನೇ ಮರೆತವರಿಗೆ, ಅವರು ಒಂದು 'ಸಣ್ಣ ರಜೆ'ಯಂತೆ ಸಿಗುತ್ತಾರೆ.

ಮಳೆಗಾಲದ ಸಂಜೆಯಲ್ಲಿ ಕಿಟಕಿಯ ಗಾಜಿನ ಮೇಲೆ ಕುಳಿತ ನೀರಿನ ಹನಿಯೊಂದು ಮೆಲ್ಲನೆ ಜಾರಿ ಕೆಳಗೆ ಬೀಳುವಾಗ ನಮಗೆ ತಿಳಿಯದಂತೆ ಒಂದು ಸಣ್ಣ ಸಂಚಲನವಾಗುತ್ತದಲ್ಲವೇ? ಬ್ರಹ್ಮಾನಂದಂ ಅವರ ಮುಖಭಾವ ಕೂಡ ಹಾಗೆಯೇ, ಅತ್ಯಂತ ಸಹಜ, ಆದರೆ ಅದ್ಭುತವಾಗಿ ತಟ್ಟುವಂಥದ್ದು. ಅವರ ಮುಖ ಒಂದು 'ಪೋಸ್ಟ್ ಆಫೀಸ್' ಇದ್ದಂತೆ. ಅಲ್ಲಿ ಹತಾಶೆ, ಮುಜುಗರ, ಮುಗ್ಧತೆ ಮತ್ತು ಅಸಹಾಯಕತೆಯ ಪತ್ರಗಳು ಯಾವಾಗಲೂ ವಿಳಾಸ ಹುಡುಕುತ್ತಿರುತ್ತವೆ. ಅವರು ಸುಮ್ಮನೆ ಕಣ್ಣು ಮಿಟುಕಿಸಿದರೆ ಸಾಕು, ಸಾವಿರಾರು ಕಿಲೋಮೀಟರ್ ದೂರವಿರುವ ಪ್ರೇಕ್ಷಕನಿಗೂ ಆ ಭಾವನೆಯ ಸಪ್ಪೈ ಆಗಿಬಿಡುತ್ತದೆ. ಇದು ಶಬ್ದಗಳ ಹಂಗಿಲ್ಲದ ಅಪ್ಪಟ 'ಮೌನ ಸಂವಹನ'. ತೆಲುಗು ಸಿನಿಮಾಗಳ ಆಕ್ಷನ್ ಅಬ್ಬರಗಳ ನಡುವೆ ಇವರು ಬಂದು ಹೋದರೆ, ಅದು ಟ್ರಾಫಿಕ್ ಗದ್ದಲದ ಮಧ್ಯೆ ಕೇಳಿಸುವ ದೂರದ ಕೊಳಲಿನ ಧ್ವನಿಯಂತೆ. ಅವರ ಕಾಮಿಡಿ ದೊಡ್ಡ ಕ್ರಾಂತಿಯನ್ನೇನೂ ಮಾಡುವುದಿಲ್ಲ, ಆದರೆ ಬದುಕಿನ ಸಣ್ಣಪುಟ್ಟ ಸೋಲುಗಳನ್ನು ಅಪ್ಪಿಕೊಳ್ಳುವ ಶಕ್ತಿ ನೀಡುತ್ತದೆ.

ತೆಲುಗು ಚಿತ್ರರಂಗದಲ್ಲಿ ಎಷ್ಟೇ ಜನ ಹಿರಿಯ ನಟರಿದ್ದರೂ, ಬ್ರಹ್ಮಾನಂದಂ ಅವರ ಸ್ಥಾನವನ್ನು ಮತ್ತೊಬ್ಬನಿಂದ ಅಲ್ಲಾಡಿಸಲು ಆಗಿಲ್ಲ. ಒಬ್ಬ ಹಾಸ್ಯ ನಟನಾಗಿ ಅವರು ಗಳಿಸಿದ ಜನಪ್ರಿಯತೆ, ಗೌರವ ಮತ್ತು ಮಾರುಕಟ್ಟೆ ಮೌಲ್ಯವು ಯಾವುದೇ ಒಬ್ಬ ಸ್ಟಾರ್ ನಟನಿಗಿಂತ ಕಡಿಮೆಯಿಲ್ಲ ಎನ್ನುವುದು ಅಕ್ಷರಶಃ ಸತ್ಯ. ತೆಲುಗು ಸಿನಿಮಾಗಳಲ್ಲಿ ಚಿರಂಜೀವಿ, ಬಾಲಕೃಷ್ಣ ಅಥವಾ ನಾಗಾರ್ಜುನ ಅವರಂಥ ಘಟಾನುಘಟಿ ನಟರ ಚಿತ್ರಗಳಿದ್ದರೂ, ಪ್ರೇಕ್ಷಕರು ಚಿತ್ರಮಂದಿರಕ್ಕೆ ಬರುತ್ತಿದ್ದದ್ದು ಬ್ರಹ್ಮಾನಂದಂ ಹಾಸ್ಯವನ್ನು ನೋಡಲು. ಒಂದು ಕಾಲದಲ್ಲಿ ಚಿರಂಜೀವಿ ಅವರಂಥ ಮೆಗಾಸ್ಟಾರ್ ಪಕ್ಕದಲ್ಲೇ ಬ್ರಹ್ಮಾನಂದಂ ಅವರ ಬೃಹತ್ ಕಟೌಟ್‌ಗಳನ್ನು ಅಭಿಮಾನಿಗಳು ಹಾಕುತ್ತಿದ್ದರು. ಒಬ್ಬ ಕಾಮಿಡಿಯನ್‌ಗೆ ಈ ಮಟ್ಟದ ಗೌರವ ಸಿಗುವುದು ಭಾರತೀಯ ಚಿತ್ರರಂಗದಲ್ಲೇ ಅತ್ಯಂತ ಅಪರೂಪದ ಸಂಗತಿ. ಕೇವಲ ಪರದೆಯ ಮೇಲೆ ಅವರ ಮುಖ ಕಂಡರೆ ಸಾಕು, ಚಿತ್ರಮಂದಿರದಲ್ಲಿ ಶಿಳ್ಳೆ-ಚಪ್ಪಾಳೆಗಳ ಸುರಿಮಳೆ! ಅವರ 'ಬಾಡಿ ಲಾಂಗ್ವೇಜ್' ಮತ್ತು ಕಣ್ಣುಗಳಲ್ಲೇ ಭಾವನೆಗಳನ್ನು ವ್ಯಕ್ತಪಡಿಸುವ ಕಲೆ ಅವರನ್ನು ಉಳಿದೆಲ್ಲ ನಟರಿಗಿಂತ ಭಿನ್ನವಾಗಿ ನಿಲ್ಲಿಸಿತು.

ಒಬ್ಬ ನಟನ ವೃತ್ತಿಜೀವನದಲ್ಲಿ ನೂರು ಸಿನಿಮಾಗಳು ದೊಡ್ಡ ಸಾಧನೆ. ಆದರೆ ಬ್ರಹ್ಮಾನಂದಂ ಅವರು 1,300ಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿರುವುದು ಕೇವಲ ಆಶ್ಚರ್ಯವಲ್ಲ, ಅದೊಂದು ಅದ್ಭುತ. ಒಂದೇ ಭಾಷೆಯಲ್ಲಿ ಅತಿ ಹೆಚ್ಚು ಚಿತ್ರಗಳಲ್ಲಿ ನಟಿಸಿದ ನಟ ಎಂಬ ಹೆಗ್ಗಳಿಕೆಯೊಂದಿಗೆ ಅವರು ಗಿನ್ನೆಸ್ ವಿಶ್ವ ದಾಖಲೆಯನ್ನು ನಿರ್ಮಿಸಿದ್ದಾರೆ. 1987ರಲ್ಲಿ ಚಿತ್ರರಂಗಕ್ಕೆ ಕಾಲಿಟ್ಟ ಇವರು, ದಶಕಗಳ ಕಾಲ ವಿಶ್ರಾಂತಿಯಿಲ್ಲದೇ ದುಡಿದ ಪರಿಣಾಮವಾಗಿ ಈ ಮೈಲಿಗಲ್ಲು ಸಾಧ್ಯವಾಯಿತು. ಬ್ರಹ್ಮಾನಂದಂ ಅವರ ಬೇಡಿಕೆ ಎಷ್ಟಿತ್ತೆಂದರೆ, ಕೆಲವು ಚಿತ್ರಗಳಲ್ಲಿ ನಾಯಕ ನಟರಿಗಿಂತ ಇವರ ಸಂಭಾವನೆಯೇ ಹೆಚ್ಚಿರುತ್ತಿತ್ತು. ದಿನದ ಲೆಕ್ಕದಲ್ಲಿ ಅಥವಾ ಚಿತ್ರದ ಅವಧಿಯ ಆಧಾರದ ಮೇಲೆ ಅವರು ಕೋಟಿಗಟ್ಟಲೆ ಹಣ ಪಡೆಯುತ್ತಿದ್ದರು. ಸಿನಿಮಾ ಎಷ್ಟೇ ಗಂಭೀರವಾಗಿದ್ದರೂ, ಒಂದು ಹಾಸ್ಯದ ಎಳೆಯನ್ನು ಬ್ರಹ್ಮಾನಂದಂ ಅವರ ಮೂಲಕ ತಂದಲ್ಲಿ ಮಾತ್ರ ಸಿನಿಮಾ ಗೆಲ್ಲುತ್ತದೆ ಎಂಬ ನಂಬಿಕೆ ನಿರ್ಮಾಪಕರಲ್ಲಿತ್ತು. ಈ ಕಾರಣಕ್ಕಾಗಿಯೇ ಅವರು ಚಿತ್ರರಂಗದ ಅತಿ ಹೆಚ್ಚು ಸಂಭಾವನೆ ಪಡೆಯುವ ಪೋಷಕ ನಟರಾದರು.

ತೆಲುಗು ಚಿತ್ರರಂಗದಲ್ಲಿ ಬ್ರಹ್ಮಾನಂದಂ ಎನ್ನುವ ಹೆಸರು ಕೇವಲ ಒಬ್ಬ ಹಾಸ್ಯ ನಟನದ್ದಲ್ಲ, ಅದೊಂದು 'ಸಿನಿಮಾದ ಯಶಸ್ಸಿನ ಗ್ಯಾರಂಟಿ ಕಾರ್ಡ್'. ಒಂದು ಕಾಲದಲ್ಲಿ ತೆಲುಗು ಚಿತ್ರರಂಗದ ದೊಡ್ಡ ದೊಡ್ಡ ನಾಯಕ ನಟರು ತಮ್ಮ ಸಿನಿಮಾಗಳಲ್ಲಿ ಬ್ರಹ್ಮಾನಂದಂ ಇರಲೇಬೇಕು ಎಂದು ಪಟ್ಟು ಹಿಡಿಯುತ್ತಿದ್ದರು. ಚಿರಂಜೀವಿ, ಬಾಲಕೃಷ್ಣ, ನಾಗಾರ್ಜುನ ಮತ್ತು ವೆಂಕಟೇಶ್ ಅವರಂಥ ದಿಗ್ಗಜ ನಟರ ಕಾಲದಲ್ಲಿ, ಬ್ರಹ್ಮಾನಂದಂ ಅವರ ಕಾಮಿಡಿ ಟ್ರ್ಯಾಕ್ ಇಲ್ಲದೇ ಸಿನಿಮಾ ಪೂರ್ಣಗೊಳ್ಳುತ್ತಿರಲಿಲ್ಲ. ನಾಯಕ ನಟರು ತಮ್ಮ ಚಿತ್ರಕಥೆಯನ್ನು ಕೇಳುವಾಗಲೇ, 'ಇದರಲ್ಲಿ




ಬ್ರಹ್ಮಾನಂದಂ ಅವರಿಗೆ ಜಾಗವಿದೆಯೇ?' ಎಂದು ವಿಚಾರಿಸುತ್ತಿದ್ದರು. ಸಿನಿಮಾ ಸೋಲುವ ಹಂತದಲ್ಲಿದ್ದರೂ, ಬ್ರಹ್ಮಾನಂದಂ ಅವರ ಹತ್ತು ನಿಮಿಷದ ಹಾಸ್ಯ ಪ್ರೇಕ್ಷಕರನ್ನು ಚಿತ್ರಮಂದಿರಕ್ಕೆ ಸೆಳೆಯುತ್ತಿತ್ತು. ಇದರಿಂದಾಗಿ ದೊಡ್ಡ ಸ್ಟಾರ್‌ಗಳು ಸಹ ತಮ್ಮ ಇಮೇಜ್‌ಗಿಂತ ಸಿನಿಮಾದ ಗೆಲುವಿಗಾಗಿ ಬ್ರಹ್ಮಾನಂದಂ ಅವರ ಉಪಸ್ಥಿತಿಯನ್ನು ಬಯಸುತ್ತಿದ್ದರು. ಸ್ಟಾರ್ ನಟರು ತಮ್ಮ ಚಿತ್ರದ ಶೂಟಿಂಗ್ ಅನ್ನು ಬ್ರಹ್ಮಾನಂದಂ ಅವರ ಬಿಡುವಿಲ್ಲದ ವೇಳಾಪಟ್ಟಿಗೆ ಅನುಗುಣವಾಗಿ ಹೊಂದಾಣಿಕೆ ಮಾಡಿಕೊಳ್ಳುತ್ತಿದ್ದರು. ಅವರ ಕಾಲ್‌ಶೀಟ್ ಸಿಗದಿದ್ದರೆ ಚಿತ್ರದ ಚಿತ್ರೀಕರಣವನ್ನೇ ಮುಂದೂಡಿದ ಉದಾಹರಣೆಗಳೂ ಉಂಟು.

ಶ್ರೀನು ವೈಟ್ಲ ಅಥವಾ ವಿ.ವಿ. ವಿನಾಯಕ್ ಅಂತಹ ನಿರ್ದೇಶಕರು ಬ್ರಹ್ಮಾನಂದಂ ಅವರಿಗಾಗಿಯೇ ವಿಶೇಷ ಪಾತ್ರಗಳನ್ನು ಸೃಷ್ಟಿಸುತ್ತಿದ್ದರು. ನಾಯಕನಿಗೆ ಬಿಲ್ಡಪ್ ಕೊಡುವುದಕ್ಕಿಂತ ಹೆಚ್ಚಾಗಿ, ಬ್ರಹ್ಮಾನಂದಂ ಅವರ ಪಾತ್ರಕ್ಕೆ ಹೆಚ್ಚು ಮಹತ್ವ ನೀಡಲಾಗುತ್ತಿತ್ತು. 'ಅವರು ತೆರೆಯ ಮೇಲೆ ಬಂದರೆ ಸಾಕು, ಪ್ರೇಕ್ಷಕರು ನಗುತ್ತಾರೆ' ಎಂಬ ಅಚಲವಾದ ನಂಬಿಕೆ ಚಿತ್ರತಂಡಕ್ಕೆ ಇರುತ್ತಿತ್ತು. ಬ್ರಹ್ಮಾನಂದಂ ಕೇವಲ ಹಾಸ್ಯನಟ ಅಥವಾ ಪೋಷಕ ನಟನಾಗಿ ಉಳಿಯಲಿಲ್ಲ. ಬದಲಿಗೆ, ನಾಯಕ ನಟನಷ್ಟೇ ಪ್ರಾಮುಖ್ಯ ಪಡೆದ 'ಪ್ಯಾರಲಲ್ ಹೀರೋ' ಆಗಿ ಬೆಳೆದರು. ಅವರು ಸಿನಿಮಾದಲ್ಲಿದ್ದರೆ ಅದು ಕೇವಲ ಹಾಸ್ಯವಲ್ಲ, ಬದಲಿಗೆ ಚಿತ್ರದ ಮಾರುಕಟ್ಟೆ ಮೌಲ್ಯವನ್ನು ಹೆಚ್ಚಿಸುವ ಒಂದು ಬಲವಾದ ಶಕ್ತಿಯಾಗಿತ್ತು. ಅವರ ಈ ಸ್ಟಾರ್‌ಡಮ್ ಭಾರತೀಯ ಚಿತ್ರರಂಗದ ಇತಿಹಾಸದಲ್ಲಿಯೇ ಬೇರೆ ಯಾವುದೇ ಹಾಸ್ಯ ನಟನಿಗೆ ಸಿಗದಂಥದ್ದು. ಕೇವಲ ಒಬ್ಬ ಹಾಸ್ಯ ನಟನಿಗಾಗಿ ಕಥೆಯಲ್ಲಿ ಬದಲಾವಣೆ ಮಾಡಿಕೊಳ್ಳುವ ಅಥವಾ ಅವರನ್ನು ಕಡ್ಡಾಯವಾಗಿ ಸೇರಿಸಿಕೊಳ್ಳುವ ಷರತ್ತು ಹಾಕುವ ಮಟ್ಟಕ್ಕೆ ಅವರು ಬೆಳೆದಿದ್ದು ಅವರ ಸಾಧನೆಯ ಶಿಖರ.

ತೆಲುಗು ಚಿತ್ರರಂಗದಲ್ಲಿ ಒಂದು ಮಾತು ಪ್ರಚಲಿತದಲ್ಲಿತ್ತು – 'ಹೀರೋ ಸಿನಿಮಾ ಗೆಲ್ಲಿಸದಿದ್ದರೆ, ಬ್ರಹ್ಮಾನಂದಂ ಸಿನಿಮಾವನ್ನು ಹೇಗೋ ಬಚಾವ್ ಮಾಡ್ತಾರೆ'. ಅಂದರೆ, ಕಥೆ ಸಾಧಾರಣವಾಗಿದ್ದರೂ ಸಹ, ಬ್ರಹ್ಮಾನಂದಂ ಅವರ ಹಾಸ್ಯದ ಎಳೆಯಿಂದಾಗಿ ಸಿನಿಮಾ ಬಾಕ್ಸ್ ಆಫೀಸ್‌ನಲ್ಲಿ ಪಾರಾದ ನಿದರ್ಶನಗಳು ಸಾಕಷ್ಟಿವೆ. ಬ್ರಹ್ಮಾನಂದಂ ಮತ್ತು ಸ್ಟಾರ್ ನಟರ ಕಾಂಬಿನೇಷನ್‌ಗೆ ಪ್ರತ್ಯೇಕ ಅಭಿಮಾನಿ ಬಳಗವಿತ್ತು. ಉದಾಹರಣೆಗೆ, ಮಹೇಶ್ ಬಾಬು ಜತೆಗಿನ 'ದೂಕುಡು', ಎನ್ಟಿಆರ್ ಜತೆಗಿನ 'ಅದುರ್ಸ್' ಅಥವಾ ರವಿತೇಜ ಜತೆಗಿನ 'ವೆಂಕಿ' ಚಿತ್ರಗಳನ್ನು ಗಮನಿಸಿದರೆ, ಅಲ್ಲಿ ನಾಯಕನಿಗಿಂತ ಬ್ರಹ್ಮಾನಂದಂ ಅವರ ಪಾತ್ರಗಳೇ ಹೆಚ್ಚು ಹೈಲೈಟ್ ಆಗಿದ್ದವು. ಈ ಕಾರಣಕ್ಕಾಗಿಯೇ ನಟರು ಇವರನ್ನು ತಮ್ಮ ಸಿನಿಮಾದಲ್ಲಿ ಕಡ್ಡಾಯವಾಗಿ ಬಯಸುತ್ತಿದ್ದರು.

ಸಾಮಾನ್ಯವಾಗಿ ಸಿನಿಮಾದ ಪೋಸ್ಟರ್‌ಗಳಲ್ಲಿ ನಾಯಕ ಮತ್ತು ನಾಯಕಿಯ ಚಿತ್ರಗಳು ಮಾತ್ರ ಇರುತ್ತವೆ. ಆದರೆ ಬ್ರಹ್ಮಾನಂದಂ ಅವರ ಫೋಟೋ ಇಲ್ಲದ ಪೋಸ್ಟರ್‌ಗಳೇ ಅಂದು ಅಪರೂಪವಾಗಿದ್ದವು. ವಿತರಕರು ಕೂಡ 'ಬ್ರಹ್ಮಾನಂದಂ ಇದ್ದಾರಲ್ಲವೇ?' ಎಂದು ಖಚಿತಪಡಿಸಿಕೊಂಡೇ ಸಿನಿಮಾ ಕೊಳ್ಳುತ್ತಿದ್ದರು. ಚಿತ್ರದ ದ್ವಿತೀಯಾರ್ಧದಲ್ಲಿ ಕಥೆ ಎಲ್ಲಿಯಾದರೂ ಕುಸಿಯುತ್ತಿದೆ ಎನಿಸಿದಾಗ, ನಿರ್ದೇಶಕರು ಕೂಡಲೇ ಬ್ರಹ್ಮಾನಂದಂ ಅವರ ಎಂಟ್ರಿ ಕೊಡಿಸುತ್ತಿದ್ದರು. ಅವರು ಪರದೆಯ ಮೇಲೆ ಬಂದ ತಕ್ಷಣ ಚಿತ್ರಮಂದಿರದಲ್ಲಿ ಹೊಸ ಸಂಚಲನ ಮೂಡುತ್ತಿತ್ತು. ಇದು ಅವರ ಮೇಲಿದ್ದ ನಂಬಿಕೆ. ಬ್ರಹ್ಮಾನಂದಂ ಅವರ ನಟನೆಯಲ್ಲಿರುವ ವಿಶೇಷತೆಯೆಂದರೆ ಅವರ 'ರಿಯಾಕ್ಷನ್'. ನಾಯಕ ಎಷ್ಟೇ ಗಂಭೀರವಾಗಿ ಡೈಲಾಗ್ ಹೊಡೆದರೂ, ಪಕ್ಕದಲ್ಲಿ ನಿಂತ ಬ್ರಹ್ಮಾನಂದಂ ಕೇವಲ ಒಂದು ನೋಟ ಅಥವಾ ಮುಖದ ಸನ್ನೆ ಮಾಡಿದರೆ ಸಾಕು, ಇಡೀ ದೃಶ್ಯ ಹಾಸ್ಯಮಯ!

ತೆಲುಗಿನ ಬಹುತೇಕ ಅಗ್ರ ನಟರು ತಮ್ಮ ವೃತ್ತಿಜೀವನದ ಅತಿ ದೊಡ್ಡ ಹಿಟ್ ಚಿತ್ರಗಳನ್ನು ನೀಡಿದಾಗ, ಆ ಚಿತ್ರಗಳಲ್ಲಿ ಬ್ರಹ್ಮಾನಂದಂ ಪ್ರಮುಖ ಪಾತ್ರದಲ್ಲಿದ್ದರು ಎಂಬುದು ಕಾಕತಾಳೀಯವಲ್ಲ, ಅದು ಅವರ ಯಶಸ್ಸಿನ ಸೂತ್ರವಾಗಿತ್ತು. ಅವರು ಕೇವಲ ನಟರಾಗಿ ಉಳಿಯದೆ, ಒಂದು ಬ್ರ್ಯಾಂಡ್ ಆಗಿ ಬೆಳೆದರು. ಇಂದಿಗೂ ಸೋಷಿಯಲ್ ಮೀಡಿಯಾದಲ್ಲಿ ಅವರ ಹಳೆಯ ದೃಶ್ಯಗಳು ವೈರಲ್ ಆಗುತ್ತಿರುವುದು ಅವರ ಸ್ಟಾರ್‌ಡಮ್‌ಗೆ ಸಾಕ್ಷಿ. ಜನರು ಕೇವಲ ಬ್ರಹ್ಮಾನಂದಂ ಅವರ ಕಾಮಿಡಿ ದೃಶ್ಯಗಳನ್ನು ಮತ್ತೆ ಮತ್ತೆ ನೋಡಲು ಚಿತ್ರಮಂದಿರಕ್ಕೆ ಬರುತ್ತಿದ್ದರು. ಸ್ಟಾರ್ ನಟರ ಅಭಿಮಾನಿಗಳೂ ಸಹ ತಮ್ಮ ನಾಯಕನ ಆಕ್ಷನ್ ಜತೆಗೆ ಬ್ರಹ್ಮಾನಂದಂ ಅವರ ಹಾಸ್ಯದ 'ಬೋನಸ್' ಸಿಗಲಿ ಎಂದು ಹಂಬಲಿಸುತ್ತಿದ್ದರು.

ಇಂದಿನ ಡಿಜಿಟಲ್ ಯುಗದಲ್ಲಿ ಬ್ರಹ್ಮಾನಂದಂ ಅವರ ಮುಖವಿಲ್ಲದ ಮೀಮ್‌ಗಳೇ ಇಲ್ಲ. ಇಂದಿನ ಯುವ ಪೀಳಿಗೆಗೆ ಅವರು 'ಲಿವಿಂಗ್ ಲೆಜೆಂಡ್'. ಯಾವುದೇ ಸಂದರ್ಭಕ್ಕೂ ಹೊಂದುವಂಥ ಅವರ ಮುಖಭಾವಗಳು ಅವರನ್ನು ಸಾರ್ವಕಾಲಿಕ ಜನಪ್ರಿಯ ನಟನನ್ನಾಗಿ ಮಾಡಿದೆ. ದೊಡ್ಡ ನಿರ್ದೇಶಕರು ಬ್ರಹ್ಮಾನಂದಂ ಅವರಿಗೆ ಸ್ಕ್ರಿಪ್ಟ್ ನೀಡುವಾಗ, 'ಇದು ದೃಶ್ಯ, ನೀವು ನಿಮ್ಮ ಶೈಲಿಯಲ್ಲಿ ಇದನ್ನು ಅಭಿನಯಿಸಿ' ಎಂದು ಮುಕ್ತ ಅವಕಾಶ ನೀಡುತ್ತಿದ್ದರು. ಅವರು ನೀಡುತ್ತಿದ್ದ ಇಂಪ್ರೊವೈಸೇಶನ್ ಮೂಲ ಸ್ಕ್ರಿಪ್ಟ್‌ಗಿಂತಲೂ ಹತ್ತು ಪಟ್ಟು ಹೆಚ್ಚು ನಗು ತರಿಸುತ್ತಿತ್ತು. ಸಾಮಾನ್ಯವಾಗಿ ದೊಡ್ಡ ನಟರು ತಮ್ಮ ಪಕ್ಕದಲ್ಲಿ ಬೇರೆ ಯಾರಾದರೂ ಹೆಚ್ಚು ಹೈಲೈಟ್ ಆಗುವುದನ್ನು ಇಷ್ಟಪಡುವುದಿಲ್ಲ. ಆದರೆ ಬ್ರಹ್ಮಾನಂದಂ ವಿಷಯದಲ್ಲಿ ಇದು ಉಲ್ಟಾ ಆಗಿತ್ತು. ಚಿರಂಜೀವಿ ಅಂಥ ನಟರು ಬ್ರಹ್ಮಾನಂದಂ ಜತೆ ನಟಿಸುವಾಗ ತಮ್ಮ ಕಾಮಿಡಿ ಟೈಮಿಂಗ್ ಅನ್ನು ಇನ್ನೂ ಉತ್ತಮಗೊಳಿಸಿಕೊಳ್ಳುತ್ತಿದ್ದರಂತೆ. ನಾಯಕ ಮತ್ತು ಹಾಸ್ಯ ನಟನ ನಡುವಿನ ಈ 'ಜುಗಲ್ಬಂದಿ' ಚಿತ್ರದ ಯಶಸ್ಸಿಗೆ ಮುಖ್ಯ ಕಾರಣವಾಗುತ್ತಿತ್ತು. ಬ್ರಹ್ಮಾನಂದಂ ಅವರು ಕೇವಲ ಹಾಸ್ಯಕ್ಕಷ್ಟೇ ಅಲ್ಲ, ಎಮೋಷನಲ್ ದೃಶ್ಯಗಳಿಗೂ ಸೈ ಎನಿಸಿಕೊಂಡವರು. 'ಬಾಬಾಯಿ ಅಬ್ಬಾಯಿ' ಅಥವಾ 'ಮಾತೃದೇವೋಭವ' ಚಿತ್ರಗಳಲ್ಲಿ ಅವರ ನಟನೆ ಕಣ್ಣಾಲಿಗಳನ್ನು ತೇವಗೊಳಿಸುತ್ತವೆ.

ಸುಮಾರು ಒಂದು ವರ್ಷದ ಹಿಂದೆ, ನನ್ನ ಅಚ್ಚುಮೆಚ್ಚಿನ ನಟ ಬ್ರಹ್ಮಾನಂದಂ ಅವರ ಆತ್ಮಕಥೆಯ ಇಂಗ್ಲಿಷ್ ಅವತರಣಿಕೆ ಕಣ್ಣಿಗೆ ಬಿತ್ತು. ಎರಡು ದಿನಗಳಲ್ಲಿ ಓದಿ ಮುಗಿಸಿದೆ. ಅವರ ಬದುಕಿನ ಕಥೆ ನನ್ನನ್ನು ಆರ್ದ್ರನನ್ನಾಗಿಸಿತು. ಅವರ ಹಿನ್ನೆಲೆ, ಬಡತನ, ಪಟ್ಟ ಪಾಡು, ಅನುಭವಿಸಿದ ಅವಮಾನ, ಕೋಟಲೆ, ಅವನ್ನೆಲ್ಲ ಮೆಟ್ಟಿ ನಿಂತ ಛಲ ಅವರ ಬಗ್ಗೆ ವಿಶೇಷ ಅಭಿಮಾನವನ್ನು ಮೂಡಿಸಿತು. ಇಂದು ಹತ್ತು ಸಿನಿಮಾಗಳಲ್ಲಿ ನಟಿಸುವುದೇ ದೊಡ್ಡದು. ಹಾಗಿರುವಾಗ ಸಾವಿರದ ಮುನ್ನೂರು ಸಿನಿಮಾಗಳಲ್ಲಿ ನಟಿಸುವುದು ತಮಾಷೆ ಅಲ್ಲ. ಅಷ್ಟು ದೀರ್ಘ ಕಾಲ ಜನಪ್ರಿಯತೆ ಹಿಡಿದಿಟ್ಟುಕೊಳ್ಳುವುದು ಸಾಮಾನ್ಯ ಸಂಗತಿಯಲ್ಲ. ತಕ್ಷಣ ನನ್ನ ಆಪ್ತರೊಬ್ಬರ ಮೂಲಕ ಅವರ ಮೊಬೈಲ್ ನಂಬರ್ ಪಡೆದು, ಅವರಿಗೆ ಫೋನ್ ಮಾಡಿದೆ. ನನ್ನ ಪರಿಚಯ ಮಾಡಿಕೊಂಡ ಬಳಿಕ, 'ನಿಮ್ಮ ಜೀವನಯಾತ್ರೆಯನ್ನು ಕನ್ನಡಲ್ಲಿ ಅಕ್ಷರಕ್ಕಿಳಿಸುವೆ, ಸಮ್ಮತಿಸುವಿರಾ?' ಎಂದು ಕೇಳಿದೆ. 'ನೀವೇ ಅನುವಾದಿಸುವುದಾದರೆ, ಅದಕ್ಕಿಂತ ಸಂತೋಷ ಇನ್ನೇನಿದೆ?' ಎಂದು ಅಲ್ಲಿಯೇ ಅನುಮತಿ ನೀಡಿದರು. ಅಲ್ಲಿಗೆ ನನ್ನ ಮತ್ತು ಅವರ ಸಂಬಂಧ ಶುರುವಾಯಿತು.

ಅದರ ಫಲವೇ – 'ನಾನು ನಿಮ್ಮ ಬ್ರಹ್ಮಾನಂದಂ'

ಮೊನ್ನೆ ಈ ಕೃತಿಯನ್ನು ಹೈದರಾಬಾದ್‌ನಲ್ಲಿರುವ ಅವರ ಮನೆಗೆ ಹೋಗಿ ಕೈಗಿಟ್ಟು ಬಂದೆ. ನಮ್ಮಿಬ್ಬರಿಗೂ 'ಬ್ರಹ್ಮಾನಂದ'! ಆ ಕುರಿತು ನಿಮಗೆ ಹೇಳಲೇಬೇಕು.

# ಯಾರಾದರೂ ಜಿರಳೆ ಸಾಕುವುದನ್ನು ನೋಡಿದ್ದೀರಾ?

ಸಂಗತ

ಡಾ.ವಿಜಯ್ ದರಡಾ

vveditoped@gmail.com

ಮೆಲೋಡಿ ಯಾವುದೇ ರೂಪದಲ್ಲಿದ್ದರೂ ಬದುಕಿಗೆ ಸಂತಸ ತರುತ್ತದೆ. ಅದು ಚಾಕೊಲೇಟ್ ಆದರೂ ಆಗಿರಲಿ ಅಥವಾ ಮಧುರ ಧ್ವನಿಯಾದರೂ ಆಗಿರಲಿ. ಜಿರಳೆಯ ವಾಸನೆ, ಯುದ್ಧದ ಕ್ರೌರ್ಯದ ನಡುವೆ ಮನಸ್ಸಿಗೆ ಹಿತವಾದ ಸುದ್ದಿ ಇಟಲಿಯಿಂದ ಬಂದಿತು.

ಕಳೆದ ಕೆಲ ದಿನಗಳಿಂದ ಎರಡು ಪದಗಳು ಸಾರ್ವಜನಿಕ ವಲಯದಲ್ಲಿ ತುಂಬಾ ಓಡಾಡುತ್ತಿವೆ. ಒಂದು ಕಾಕ್ರೋಚ್ (ಹಿಂದಿಯಲ್ಲಿ ತಿಲಚಟ್ಟಾ, ಕನ್ನಡದಲ್ಲಿ ಜಿರಳೆ), ಇನ್ನೊಂದು ಮೆಲೋಡಿ. ಈ ಪದಗಳು ಎಷ್ಟೊಂದು ಸದ್ದು ಮಾಡುತ್ತಿವೆ ಅಂದರೆ ಈ ವಾರ ಬೇರೇನನ್ನೂ ಬರೆಯಲು ಮನಸ್ಸಾಗುತ್ತಿಲ್ಲ.

ಪ್ರಕರಣವೊಂದರ ವಿಚಾರಣೆ ನಡೆಸುವಾಗ ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಅವರು ಮಾತಿನ ಭರದಲ್ಲಿ ಕಾಕ್ರೋಚ್ ಎಂಬ ಪದ ಬಳಸಿದ್ದರು. ತಮ್ಮ ಭಾವನೆ ಹಂಚಿಕೊಳ್ಳುವುದಕ್ಕಷ್ಟೇ ಅವರು ಜಿರಳೆಗಳ ಬಗ್ಗೆ ಪ್ರಸ್ತಾಪಿಸಿದ್ದರು. ಆದರೂ ಕೆಲವರು ಈ ಪದವನ್ನು ತುಂಬಾ ಗಂಭೀರವಾಗಿ ತೆಗೆದುಕೊಂಡು, ದೇಶದ ಯುವಕರನ್ನು ಮುಖ್ಯ ನ್ಯಾಯಮೂರ್ತಿಗಳು ಜಿರಳೆಯೆಂದು ಕರೆದು ಅವಮಾನ ಮಾಡಿದ್ದಾರೆಂದು ಪ್ರಚಾರ ಮಾಡಿದರು. ಮುಖ್ಯ ನ್ಯಾಯಮೂರ್ತಿಗಳು ಸ್ಪಷ್ಟನೆ ನೀಡಿ, ಯುವಕರನ್ನು ಜಿರಳೆಗೆ ಹೋಲಿಸುವ ಯಾವುದೇ ಉದ್ದೇಶ ತಮಗಿರಲಿಲ್ಲ ಎಂದು ಹೇಳಿದರು.

ಆದರೆ ಒಮ್ಮೆ ನಮ್ಮ ಮನಸ್ಸಿನೊಳಗೆ ಒಂದು ವಿಚಾರ ಅಚ್ಚೊತ್ತಿದರೆ ಸುಲಭಕ್ಕೆ ಅದನ್ನು ಅಳಿಸುವುದು ಕಷ್ಟ. ಅದು ನಮ್ಮನ್ನು ಕೆಣಕುವ ವಿಚಾರವಾಗಿದ್ದರಂತೂ ಏನಾದರೊಂದು ಕಿತಾಪತಿ ಮಾಡಿಯೇ ತೀರುವುದಕ್ಕೆ ಮನಸ್ಸು ಬಯಸುತ್ತದೆ. ಅಂತೆಯೇ ಈ ಕಾಕ್ರೋಚ್ ಪದಕ್ಕೂ ಅಭಿಜೀತ್ ದಿಪ್ಕೆ ಎಂಬ ಯುವಕ ತೀಕ್ಷ್ಣವಾಗಿ ಪ್ರತಿಕ್ರಿಯಿಸಿ, ಕಾಕ್ರೋಚ್ ಜನತಾ ಪಾರ್ಟಿ ಎಂಬ ಹೆಸರಿನಲ್ಲಿ ಸಾಮಾಜಿಕ ಮಾಧ್ಯಮಗಳಲ್ಲಿ ಪೇಜ್ ಆರಂಭಿಸಿದ. ಜನರು ಮುಗಿಬಿದ್ದು ಪ್ರತಿಕ್ರಿಯಿಸಿದರು. ದಿಪ್ಕೆಯ ಇನ್‌ಸ್ಟಾ ಪೇಜನ್ನು ಲಕ್ಷಾಂತರ ಯುವಕರು ಫಾಲೋ ಮಾಡಿದರು. ಕೆಲವೇ ದಿನದಲ್ಲಿ ಅದು ಕೋಟ್ಯಂತರ ಅಭಿಮಾನಿಗಳನ್ನು ಗಳಿಸಿತು.

ಈಚೆಗಿನ ವರದಿ ಪ್ರಕಾರ ಆ ಪುಟವನ್ನೇ ನಿಷೇಧ ಮಾಡಲಾಗಿದೆ. ಸೋಷಿಯಲ್ ಮೀಡಿಯಾದಲ್ಲಿ ಇಂತಹ ಬೆಳವಣಿಗೆಗಳು ಹೊಸತೇನೂ ಅಲ್ಲ. ಇಂಟರ್ನೆಟ್ ಹೇಗೆ ಕೆಲಸ ಮಾಡುತ್ತದೆ ಅಂದರೆ, ಅಲ್ಲಿ ಯಾವುದಾದರೂ ಹವಾ ಎದ್ದರೆ ಏಕಾಏಕಿ ತುರೀಯಾವಸ್ಥೆಗೆ ಹೋಗಿ ತಲುಪುತ್ತದೆ. ಅಷ್ಟೇ ವೇಗದಲ್ಲಿ ದೊಪ್ಪನೆ ಕೆಳಗೆ ಬೀಳುತ್ತದೆ. ಕ್ರಾಂತಿಯನ್ನೇ ಉಂಟುಮಾಡುತ್ತದೆ ಎಂಬಂತಹ ವೈರಲ್ ಬೆಳವಣಿಗೆ ಅತ್ಯಲ್ಪ ಸಮಯದಲ್ಲೇ ಹೇಳಹೆಸರಿಲ್ಲದೆ ಕಣ್ಮರೆಯಾಗಿರುವುದನ್ನು ನಮ್ಮ ದೇಶ ಸಾಕಷ್ಟು ನೋಡಿದೆ.

ಗುಜರಾತ್‌ನ ಹಾರ್ದಿಕ್ ಪಟೇಲ್ ಎಂಬ ಹೆಸರು ನೆನಪಿದೆಯಾ? ಶರವೇಗದಲ್ಲಿ ಆತನ ಆಂದೋಲನ ಉತ್ತುಂಗಕ್ಕೆ ಏರಿತ್ತು. ಆದರೆ ನಮ್ಮ ದೇಶದ ರಾಜಕಾರಣವು ಆತನನ್ನೂ ಆತನ ಚಳವಳಿಯನ್ನೂ ಸಂಪೂರ್ಣ ನುಂಗಿ ಆಪೋಶನ ತೆಗೆದುಕೊಂಡಿತು. ಬಹುಶಃ ಬಹಳ ಜನರಿಗೆ ಹಾರ್ದಿಕ್ ಪಟೇಲ್ ಈಗ ಏನು ಮಾಡುತ್ತಿದ್ದಾನೆಂಬುದೂ ಗೊತ್ತಿಲ್ಲ. ಆತ ಈಗ ಗುಜರಾತ್‌ನ ವೀರಮ್‌ಗಾಮ್‌ನ ಬಿಜೆಪಿ ಶಾಸಕ. ಅಸ್ಸಾಂ, ಪಂಜಾಬ್ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಹೀಗೆ ಏಕಾಏಕಿ ಉತ್ತುಂಗಕ್ಕೇರಿ, ಬಹಳ ಬೇಗ ನಾಮಾವಶೇಷಗೊಂಡ ಚಳವಳಿಗಳ ಐತಿಹ್ಯವಿದೆ.

ಈಗ ಜಿರಳೆಗಳ ಮೂಲಭೂತ ವಿಷಯಕ್ಕೆ ಬರೋಣ. ಜಿರಳೆಗೆ ಕೆಲ ವಿಶೇಷ ಗುಣಗಳಿವೆ. ಕೀಟಗಳ ಜಗತ್ತಿನಲ್ಲಿ ಅದೊಂದು ವಿಶಿಷ್ಟ ಪ್ರಭೇದ. ಅದು ಅತ್ಯಂತ ಪುರಾತನ ಜೀವಿ. ಅದಕ್ಕೆ ಎಂತಹ ಸನ್ನಿವೇಶಗಳನ್ನು ತಾಳಿ ಬದುಕುವ ಶಕ್ತಿಯಿದೆ. ಜಿರಳೆಗಳು ಡೈನೋಸಾರ್‌ಗಳ ಯುಗದಿಂದಲೂ ಇವೆ. ಏನಿಲ್ಲವೆಂದರೂ 35 ಕೋಟಿ ವರ್ಷಗಳಿಂದ ಅವು ಜೀವಿಸುತ್ತಿವೆ! ತಲೆಯೇ ಇಲ್ಲದೆಯೂ ಅವು ವಾರಗಟ್ಟಲೆ ಬದುಕಬಲ್ಲವು. ಜಿರಳೆ 40 ನಿಮಿಷ ಉಸಿರನ್ನು ಹಿಡಿದುಕೊಳ್ಳಬಲ್ಲದು. ಅರ್ಧ ತಾಸಿಗೂ ಹೆಚ್ಚು ಕಾಲ ನೀರಲ್ಲಿ ಜೀವ ಉಳಿಸಿಕೊಳ್ಳಬಲ್ಲದು. ಕೆಲವರ ಪ್ರಕಾರ, ಈ ಭೂಮಿಯಲ್ಲಿ ಪ್ರಳಯ ಸಂಭವಿಸಿದರೂ ಜಿರಳೆ ನಾಶವಾಗುವುದಿಲ್ಲ. ಅದನ್ನೂ ತಾಳಿಕೊಂಡು ಬದುಕುಳಿಯುವ ಅಸಾಮಾನ್ಯ ಶಕ್ತಿ ಜಿರಳೆಗಿದೆ.

ಇಷ್ಟೆಲ್ಲ ಆಗಿಯೂ ಯಾರಾದರು ಜಿರಳೆ ಸಾಕುವುದನ್ನು ನೋಡಿದ್ದೀರಾ? ನನಗೆ ಎಲ್ಲಾ ಜೀವ ಜಂತುಗಳ ಬಗ್ಗೆಯೂ ಅಪಾರವಾದ ಗೌರವ ಮತ್ತು ಪ್ರೀತಿಯಿದೆ. ಆದರೂ ಒಂದು ವಿಷಯವನ್ನು ನಾನೂ ಒಪ್ಪುತ್ತೇನೆ, ನೀವೂ ಒಪ್ಪುತ್ತೀರಿ. ಅದೇನು? ಬಹಳಷ್ಟು ಜನರಿಗೆ ಜಿರಳೆಯನ್ನು ನೋಡಿದ ಕೂಡಲೇ ಕೊಲ್ಲಬೇಕು ಅನ್ನಿಸುತ್ತದೆ. ಆದ್ದರಿಂದಲೇ ಧ್ರುವ ರಾಠಿಯಂತಹ ವ್ಯಕ್ತಿಗಳು ಹಾಯಾಗಿ ಜರ್ಮನಿಯಲ್ಲಿ ಕುಳಿತು 'ಜಿರಳೆ ಮರಳಿ ಬಂದಿದೆ' ಎಂದೋ, '56 ಇಂಚಿನ ಎದೆ ನಡುಗುತ್ತಿದೆ' ಎಂದೋ ಹೇಳಿದಾಗ ಅಂತಹ ಮಾತಿನ ಹಿಂದಿನ ಉದ್ದೇಶವನ್ನು ಪ್ರಶ್ನಿಸಬೇಕು ಎಂದು ನನಗೆ ಬಹಳ ಸಹಜವಾಗಿಯೇ ಅನ್ನಿಸುತ್ತದೆ. ಅತ್ಯಂತ ಸಾಮಾನ್ಯ ವ್ಯಕ್ತಿಗೂ ಕೂಡ ಇಂತಹವರನ್ನು ನೋಡಿದಾಗ ಅಥವಾ ತೆರೆಯ ಮರೆಯಲ್ಲಿ ಕುಳಿತು ಕೆಲಸ ಮಾಡುವ ಏಜೆನ್ಸಿಗಳ ಬಗ್ಗೆ ಕೇಳಿದಾಗ ಭಾರತದ ಆರ್ಥಿಕ ಪ್ರಗತಿಯನ್ನು ಸಹಿಸಿಕೊಳ್ಳಲು ಸಾಧ್ಯವಾಗದ ಒಂದಷ್ಟು ಜನರು ಇವುಗಳ ಹಿಂದೆ ಕೆಲಸ ಮಾಡುತ್ತಿದ್ದಾರೆ ಎಂಬ ಭಾವನೆ ಮೂಡುತ್ತದೆ!

ಆದರೆ ಒಂದು ವಿಷಯವನ್ನು ಸ್ಪಷ್ಟವಾಗಿ ತಿಳಿದುಕೊಳ್ಳೋಣ. ನೇಪಾಳ ಅಥವಾ ಬಾಂಗ್ಲಾದೇಶದಲ್ಲಿ ಆದಂತೆ ಭಾರತದ ಜೆನ್ ಜೀ ಯುವಕರ ತಲೆಯಲ್ಲೂ ಭ್ರಮೆಗಳನ್ನು ಬಿತ್ತಿ, ಅವರನ್ನು ರೊಚ್ಚಿಗೆಬ್ಬಿಸಲು ಸಾಧ್ಯವಿದೆ ಎಂದು ಯಾರಾದರೂ ಅಂದುಕೊಂಡಿದ್ದರೆ ಅದು ಹಗಲುಗನಸು ಅಷ್ಟೆ. ಜೆನ್‌ಜೀ ಆಗಿರಲಿ ಅಥವಾ ಜೆನ್ ಆಲ್ಫಾ ಆಗಿರಲಿ, ಭಾರತದ ಯುವ ತಲೆಮಾರು ಅತ್ಯಂತ ಬುದ್ಧಿವಂತಿಕೆಯಿಂದ ನಡೆದುಕೊಳ್ಳುತ್ತದೆ. ಪ್ರತಿಯೊಂದು ವಿಷಯವನ್ನೂ ನಮ್ಮ ಯುವಕರು ಅತ್ಯಂತ ಆಳಕ್ಕಿಳಿದು, ಪೂರ್ವಾಪರ ವಿವೇಚನೆಯನ್ನು ಬಳಸಿಯೇ ನೋಡುತ್ತಾರೆ.

ಜೆನ್‌ಜೀ, ಜೆನ್ ಆಲ್ಫಾ ಅಂದರೇನು ಎಂಬ ವಿಷಯದಲ್ಲಿ ಗೊಂದಲ ಇರುವವರಿಗಾಗಿ ಹೇಳುತ್ತೇನೆ 1997 ಮತ್ತು 2012ರ ನಡುವೆ ಜನಿಸಿದವರು ಜೆನ್‌ಜೀ. 2013ರಿಂದ 2024ರ ನಡುವೆ ಜನಿಸಿದವರು ಜೆನ್ ಆಲ್ಫಾ. 2024ರ ಬಳಿಕ ಜನಿಸಿದವರಿಗೆ ಜೆನ್ ಬೀಟಾ ಎನ್ನುತ್ತಾರೆ. ನಮ್ಮ ದೇಶದ ಯುವಕರು ಮತ್ತು ಮಕ್ಕಳು ಬೌದ್ಧಿಕವಾಗಿ ತುಂಬಾ ಗಟ್ಟಿಗರು. ಇವರು ಬಹಳ ಎಚ್ಚರಿಕೆಯಿಂದ ಇರುತ್ತಾರೆ. ಇವರಿಗೆ ಆತ್ಮಾಭಿಮಾನ ಜಾಸ್ತಿ. ದೇಶದ ಬಗ್ಗೆ ತುಂಬಾ ಪ್ರೀತಿ ಇಟ್ಟುಕೊಂಡಿದ್ದಾರೆ. ಇವರನ್ನು ದಾರಿ ತಪ್ಪಿಸುವುದು ಅಥವಾ ಭ್ರಮೆಯಲ್ಲಿ ಬೀಳಿಸುವುದು ಬಹಳ ಕಷ್ಟ. ರಾಜಕೀಯವಾಗಿ ಎರಡು ಶಕ್ತಿಗಳು ಯಾವಾಗಲೂ ಕೆಲಸ ಮಾಡುತ್ತಿರುತ್ತವೆ ಎಂಬುದು ನಮ್ಮ ದೇಶದ ಜೆನ್‌ಜೀ ತರುಣರಿಗೆ ತಿಳಿದಿದೆ. ಸರ್ಕಾರದ ಪರ ಇರುವವರು ಮತ್ತು ಸರ್ಕಾರದ ವಿರುದ್ಧ ಇರುವವರು ಇವೇ ಆ ಎರಡು ಶಕ್ತಿಗಳು. ಆದರೆ ರಹಸ್ಯವಾದ ಯಾವುದಾದರೂ ಮೂರನೆಯ ಶಕ್ತಿ ನಮ್ಮ ನಡುವೆ ಆಟವಾಡಲು ಆರಂಭಿಸಿದರೆ ಅದನ್ನು ಜೆನ್‌ಜೀ ತಲೆಮಾರಿನವರು ಥಟ್ಟನೆ ಗುರುತಿಸುತ್ತಾರೆ. ನಿಜವಾದ ಕ್ರಾಂತಿಯ ಬಗ್ಗೆ ಮಾತನಾಡುವವರು ಯಾವತ್ತೂ ನಮ್ಮ ನಂಬಿಕೆಗಳನ್ನು ಘಾಸಿಗೊಳಿಸುವುದಿಲ್ಲ ಮತ್ತು ನಮ್ಮ ದೇವರನ್ನು ಹೀಗಳೆಯುವುದಿಲ್ಲ ಎಂಬುದೂ ಅವರಿಗೆ ಗೊತ್ತಿದೆ. ಪ್ರಾಮಾಣಿಕ ಉದ್ದೇಶ ಹೊಂದಿರುವವರು ಯಾವತ್ತೂ ಕೆಟ್ಟ ಭಾಷೆಯನ್ನು ಬಳಸುವುದಿಲ್ಲ ಮತ್ತು ಅನಾಗರಿಕರಂತೆ ಮಾತನಾಡುವುದಿಲ್ಲ ಎಂಬುದೂ ಇವರಿಗೆ ತಿಳಿದಿದೆ.

ನನಗೆ ಯುವಕರ ಭಾವನೆ ಮತ್ತು ಆಶೋತ್ತರಗಳ ಬಗ್ಗೆ ಚೆನ್ನಾಗಿ ಗೊತ್ತಿದೆ. ನಮ್ಮ ದೇಶ ಸದೃಢವಾಗಿ ಅಭಿವೃದ್ಧಿ ಹೊಂದುತ್ತಿರುವ ಈ ಕಾಲಘಟ್ಟದಲ್ಲಿ ಇಲ್ಲಿನ ಯುವಕರಲ್ಲಿ ಉದ್ಯಮಶೀಲತೆಯನ್ನು ಪ್ರೋತ್ಸಾಹಿಸಿ, ಅವರು ಹೊಸ ಹೊಸ ಉದ್ದಿಮೆಗಳನ್ನು ಸ್ಥಾಪಿಸುವಂತೆ ಪ್ರೋತ್ಸಾಹಿಸಬೇಕು, ತನ್ಮೂಲಕ ಬೇರೆಯವರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವಂತೆ ಮಾಡಬೇಕು ಎಂದು ನಾನು ಪದೇಪದೇ ಹೇಳುತ್ತಿರುತ್ತೇನೆ. ಇದನ್ನೇ ಅನೇಕ ಅಂಕಣಗಳಲ್ಲೂ ಬರೆದಿದ್ದೇನೆ. ರಷ್ಯಾದಲ್ಲಿ ವ್ಲಾದಿಮಿರ್ ಪುಟಿನ್ ಮತ್ತು ಚೀನಾದಲ್ಲಿ ಕ್ಸಿ ಜಿನ್‌ಪಿಂಗ್ ಅವರು ಈ ನಿಟ್ಟಿನಲ್ಲಿ ಬಹಳ ಪರಿಣಾಮಕಾರಿಯಾದ ಕೆಲಸ ಮಾಡಿದ್ದಾರೆ. ಅಲ್ಲಿ ಯುವಕರಿಗೆ ಹೊಸ ಹೊಸ ಅವಕಾಶಗಳನ್ನೂ ಉದ್ಯೋಗಾವಕಾಶಗಳನ್ನೂ ಸೃಷ್ಟಿಸಲಾಗುತ್ತಿದೆ. ನಮ್ಮ ದೇಶದಲ್ಲೂ ಕೂಡ ಬೇರೆ ಬೇರೆ ರೀತಿಯ ತಂತ್ರಜ್ಞಾನಗಳ ಆವಿಷ್ಕಾರವಾಗುತ್ತಿವೆ. ಅವು ನಮ್ಮಲ್ಲಿನ ಯುವಕರಿಗೆ ಹೊಸ ಮಾರ್ಗಗಳನ್ನೂ, ಹೊಸ ಸಾಧ್ಯತೆಗಳನ್ನೂ ತೆರೆಯುತ್ತಿವೆ.

ಆದರೂ ನಿರುದ್ಯೋಗಿಗಳಾಗಿಯೇ ಉಳಿದ ಒಂದಷ್ಟು ಯುವಕರು ಅಥವಾ ಇಲ್ಲಿನ ವ್ಯವಸ್ಥೆಯಿಂದ ಮೋಸಹೋಗಿದ್ದೇವೆ ಎಂಬ ಭಾವನೆಯನ್ನು ಹೊಂದಿರುವವರು ಸಹಜವಾಗಿಯೇ ಅತೃಪ್ತರಾಗಿರುತ್ತಾರೆ. ಅಂತಹ ಅತೃಪ್ತ ಯುವಕರನ್ನು ತಮ್ಮತ್ತ ಸೆಳೆದು ಸ್ವಾರ್ಥದ ಬೇಳೆ ಬೇಯಿಸಿಕೊಳ್ಳಲು ಒಂದಷ್ಟು ವಿದೇಶಿ ಶಕ್ತಿಗಳು ಯತ್ನಿಸುತ್ತಿರುತ್ತವೆ. ಆದರೆ ವಿದೇಶಿ ಶಕ್ತಿಗಳು ಯಾವತ್ತೂ ನಮ್ಮ ಯುವಕರನ್ನು ದಾರಿತಪ್ಪಿಸಲು ಸಾಧ್ಯವಿಲ್ಲ.

ಗಂಭೀರ ವಿಷಯದ ಬಳಿಕ ಈಗ ಮೆಲೋಡಿಯ ಬಗ್ಗೆಯೂ ಸ್ವಲ್ಪ ಮಾತಾಡೋಣ! ಶಬ್ದಶಃ ಅರ್ಥವನ್ನು ನೋಡಿದರೆ ಮೆಲೋಡಿ ಅಂದರೆ ಸಂಗೀತದ ಸ್ವರದಲ್ಲಿರುವ ಇಂಪು. ಆದರೆ ಈಗ ಹೆಡ್‌ಲೈನುಗಳಲ್ಲಿ ಕಾಣಿಸುತ್ತಿರುವ ಮೆಲೋಡಿಯೆಂಬುದು ಚಾಕೊಲೆಟ್‌ನ ಒಂದು ಬ್ರ್ಯಾಂಡ್. ಇಟಲಿಗೆ ತೆರಳಿದ್ದ ಪ್ರಧಾನಿ ನರೇಂದ್ರ ಮೋದಿಯವರು ಅಲ್ಲಿನ ಪ್ರಧಾನಿ ಜಾರ್ಜಿಯಾ ಮೆಲೋನಿಯವರಿಗೆ ಮೆಲೋಡಿ ಬ್ರ್ಯಾಂಡ್‌ನ ಚಾಕೊಲೆಟ್ ನೀಡಿದ್ದರು. ಅದು ಉಭಯ ದೇಶಗಳ ನಡುವೆ ಈಗಾಗಲೇ ಇರುವ ಸುಮಧುರ ಸಂಬಂಧವು ಇನ್ನೊಂದು ಎತ್ತರಕ್ಕೆ ಏರಿದ್ದರ ಪ್ರತೀಕವಾಗಿತ್ತು. ಕಾಕ್ರೋಚ್ ಪಾರ್ಟಿಯ ವಿವಾದ ಮತ್ತು ಯುದ್ಧದ ಘೋರ ಸುದ್ದಿಗಳ ನಡುವೆ ಈ ಮೆಲೋಡಿಯ ಇಂಪು ಮತ್ತು ಮಾನವ ಸ್ನೇಹದ ಕಂಪು ನನ್ನೆದೆಯೊಳಗೆ ಬೆಚ್ಚನೆಯ ಭಾವವನ್ನು ಮೂಡಿಸಿದೆ. ಥ್ಯಾಂಕ್ಯೂ ಮೆಲೋನಿ ಜೀ, ನೀವು ಭಾರತದ ಮೇಲೆ ಇಟ್ಟಿರುವ ಪ್ರೀತಿ ಹಾಗೂ ನಂಬಿಕೆಯನ್ನು ನಾವು ಯಾವತ್ತೂ ಗೌರವಿಸುತ್ತೇವೆ. ನಿಮಗೆ ಹೃದಯಾಂತರಾಳದ ನಮನಗಳು!

ಸಲಾಮತ್ ರಹೇ ದೋಸ್ತಾನಾ ಹಮಾರಾ!

## ಭಟ್ಟರ್ ಸ್ಕಾಚ್

- **ಬೆಂ.ಮು.ಮಾರುತಿ, ಬೆಂಗಳೂರು**
  ಭಟ್ರೆ, ಕೂಡಿಟ್ಟ ಹಣ ಪರರ ಪಾಲು ಎಂಬುದು ಗೊತ್ತಿದ್ದರೂ ಕೂಡಿಡುವ ಉದ್ದೇಶ?
  - **ಅದಕ್ಕೆ ನಾನು ಮಾತ್ರ ಹೊರತು ಎಂದು ಭಾವಿಸುವುದು!**
- **ಶಕು, ಕಾಮನಕೊಪ್ಪಲು**
  ಭಟ್ರೆ, ನಿಮ್ಮನ್ನು 'ಪ್ರವಾಸಿ ಪಿತಾಮಹ' ಅಂತ ಪ್ರೀತಿಯಿಂದ ಕರೆಯಲಾ?
  - **'ಹೊಸತನದ ಹರಿಕಾರ'ಕ್ಕಿಂತ ಭಿನ್ನವಾಗಿದೆ!**
- **ಕಮಲಿ(ಕಮ್ಮು) ಇಟ್ಟಮಡು**
  ಭಟ್ರೆ, ಹುಲಿಗಳ ಸಂರಕ್ಷಣೆಗೆ ಸುಲಭ ಉಪಾಯ ಯಾವುದು?
  - **ಅರಣ್ಯ ಇಲಾಖೆ ಹುಲಿಗಳಿಗೆ ಮರ ಹತ್ತುವುದನ್ನು ಕಲಿಸುವುದು!**
- **ಚೈತ್ರಾ, (ಇಮೇಲ್ ಮೂಲಕ)**
  ಭಟ್ರೇ, ನೀವೇ ವಾಸಿ ಅಂತ ಅನಿಸುತ್ತಿದೆಯಲ್ಲ?
  - **ಕಾರಣ ನಾನು ಪ್ರ'ವಾಸಿ' !**
- **ಸುಷ್ಮಾ ಪಾಟೀಲ, ಬೈಲಹೊಂಗಲ**
  ಭಟ್ರೇ, ಕೆಲವರು ನಮ್ಮಿಂದ ದೂರವಾದರೆ ಕಿರಿಕಿರಿ ಆಗುತ್ತದೆಯಲ್ಲ?
  - **ಹತ್ತಿರ ಬಂದ್ರೆ, ಇನ್ನೂ ಕಿರಿಕಿರಿ!**
- **ಜೆ.ಕೆ.ಭಟ್, ಹೊನ್ನಾವರ**
  ಭಟ್ರೇ, ನಮ್ಮ ಬಗ್ಗೆ ಟೀಕೆಗಳು ಕೇಳಿ ಬಂದಾಗ ಏನು ಮಾಡಬೇಕು!
  - **ಗಾಂಧೀಜಿಯ ಮೂರು ಮಂಗಗಳ ಪೈಕಿ ಕಿವಿ ಮುಚ್ಚಿಕೊಂಡ ಮಂಗನಾಗಬೇಕು!**
- **ಶಂಕರ ಕಲೋಗಿ, (ಇಮೇಲ್ ಮೂಲಕ)**
  ಭಟ್ರೇ, ನಿಮಗೆ ತಲೆ ಕೆಟ್ಟಿದೆಯಾ ಅಂತ ಯಾರಾದರೂ ಕೇಳಿದರೆ ಏನು ಹೇಳಬೇಕು?
  - **ಮಾತು ಮುಂದುವರಿಸಲು ಇಷ್ಟ ಇಲ್ಲದಿದ್ದರೆ, 'ಹೂಂ' ಎಂದು ಹೇಳಬೇಕು!**
- **ಕೆ.ಗಣಪತಿ, ಶ್ರೀರಂಗಪಟ್ಟಣ**
  ಭಟ್ರೇ, ಮನೆಯೇ ಅಂತಃಪುರ ಅಂತಾರಲ್ಲ, ಹಾಗಾದರೆ ವನ್ಯಧಾಮ ಯಾವುದು?
  - **ಸ್ಟೋರ್ ರೂಮ್!**
- **ಶ್ರೀಕಾಂತ ಅಂಬಲಿ, ಧಾರವಾಡ**
  ಭಟ್ರೇ, ಮದುವೆ ಅಂದ್ರೆ, ರಾತ್ರಿ ಬರುವ ಫೋನ್ ಕಾಲ್ ಇದ್ದಂತೆ ಅಂತಾರಲ್ಲ?
  - **ಹೂಂ.. ಮೊದಲು ರಿಂಗ್ ಆಗುತ್ತದೆ, ನಂತರ ಬೆಳಗಿನ ತನಕ ಎಚ್ಚರವಾಗಿರಬೇಕು!**
- **ಸುಂದರ ಹಿಪ್ಪಲಿ, ಗುಬ್ಬಿ**
  ಭಟ್ರೇ, ನೀವು ಯಾವ ವಾರ್ನಿಂಗ್‌ನ್ನು ಗಂಭೀರವಾಗಿ ತೆಗೆದುಕೊಳ್ಳುತ್ತೀರಿ?
  - **ಮೊಬೈಲ್ ಬ್ಯಾಟರಿ ಇನ್ನು ಐದು ಪರ್ಸೆಂಟ್ ಇದೆ ಎನ್ನುವುದನ್ನು!**

# ಬಾಲ ಕುಣಿಸುವ ಹಕ್ಕಿ ಮತ್ತು ಅಮುರ್ ಫಾಲ್ಕನ್

**ಹಕ್ಕಿಗಳು ವಿಶ್ವಕುಟುಂಬಿಗಳು. ಅವುಗಳ ಹಿಡಿಯಷ್ಟು ದೇಹದಲ್ಲಿ, ಪುಟ್ಟ ರೆಕ್ಕೆಗಳಲ್ಲಿ ಎಷ್ಟೊಂದು ಶಕ್ತಿ ಇದೆ ಎಂದು ನಮಗೆ ಗೊತ್ತೇ ಇರುವುದಿಲ್ಲ. ಆಹಾರ, ನಿದ್ರೆ ಇಲ್ಲದೆ ವಾರಗಟ್ಟಲೆ ಹಾರಬಲ್ಲ ಅಮುರ್ ಫಾಲ್ಕನ್ ಇದಕ್ಕೆ ಉದಾಹರಣೆ. ಹಕ್ಕಿಗಳು ನಮ್ಮಿಂದ ಮೊದಲೇ ಈ ಭೂಮಿಯಲ್ಲಿದ್ದಂಥವು. ನಮಗೆ ಈ ಭೂಮಿಯ ಚೆಲುವನ್ನು ನೆನಪಿಸುವಂಥವು. ಮನುಷ್ಯ ಹಕ್ಕಿಯಂತೆ ಅನಿಕೇತನ ಆಗುವುದು ಸಾಧ್ಯವಿದ್ದರೆ ಎಷ್ಟು ಚೆನ್ನಾಗಿತ್ತು. ಹಕ್ಕಿಯಂತೆ ಹಗುರವಾಗಿ, ಎಲ್ಲಿಗೂ ಎಂಟಿಕೊಳ್ಳದೆ!**



**ಕಾಡುದಾರಿ**
**ಹರೀಶ್ ಕೇರ**
vveditoped@gmail.com

ಕೇರಳದ ಕಡೆಯಿಂದ ಮಳೆಗಾಲದ ಮೊದಲ ಮೋಡಗಳು ಆಗಮಿಸತೊಡಗಿದ ಕೂಡಲೆ ಕರ್ನಾಟಕ ಪಶ್ಚಿಮ ಕರಾವಳಿಯಲ್ಲಿ ಮನುಷ್ಯ ಬದುಕಿನ ನಾನಾ ಘಟನೆಗಳು ಬಿಚ್ಚಿಕೊಳ್ಳ ತೊಡಗುತ್ತವೆ. ಹಾಗೆಯೇ ಕಾಡು ಗುಡ್ಡಗಳಲ್ಲಿ, ಮಲೆಯ ತುದಿಗಳಲ್ಲಿ, ಶೋಲಾ ಅರಣ್ಯಗಳಲ್ಲಿ, ನದಿ ತೊರೆಗಳಲ್ಲಿರುವ ಲಕ್ಷಾಂತರ ಜೀವಿಗಳ ಜೀವನ ಕೂಡ ರಂಗು ಪಡೆದುಕೊಳ್ಳತೊಡಗುತ್ತದೆ. ಹಾಗೆ ಮಳೆ ಕಚ್ಚಿಕೊಂಡ ಒಂದು ಹಗಲು ಮನೆಯ ಹೊರಚಾವಡಿಯ ಹೊಸ್ತಿಲ ಮೇಲೆ ಕುಳಿತು ಅಂಗಳದ ಕಡೆ ಚೂಪುಗಣ್ಣಾಗಿ ನೋಡುತ್ತಿದ್ದರೆ...

ಒಂದೆರಡು ಪುಟ್ಟ ಜೀವಗಳು ಅಲ್ಲಿ ಓಡಾಡುತ್ತಿರುವುದು ಕಾಣಿಸುತ್ತದೆ. ಎಷ್ಟು ಪುಟ್ಟದು ಎಂದರೆ, ಮುಚ್ಚಿದ ಅಂಗೈಯೊಳಗೆ ಅವುಗಳನ್ನು ಕೂರಿಸಬಹುದು. ಹನಿಯುತ್ತಿರುವ ಮಳೆಯಲ್ಲಿ, ಅಂಗಳದಲ್ಲಿ ನಿಂತ ನೀರಿನಲ್ಲಿ ಇರಬಹುದಾದ ಹುಳ ಕ್ರಿಮಿ ಕೀಟಗಳನ್ನು ಕುಕ್ಕಿ ಹೆಕ್ಕಿ ಗುಳುಂಕಾಯಿಸುತ್ತಿವೆ. ಬಾಲವನ್ನು ಮೇಲಕ್ಕೂ ಕೆಳಕ್ಕೂ ಒಂದೇ ಸಮನೆ ಆಡಿಸುತ್ತಿವೆ. ಟೇಲರಿಂಗ್ ಯಂತ್ರದ ಸೂಜಿಯಂತೆ ಅದು ಮೇಲೂ ಕೆಳಕ್ಕೂ ಓಡಿಯಾಡುತ್ತಿದೆ. ಬಣ್ಣ ಹಳದಿ ಕಪ್ಪು ಅಥವಾ ಕಪ್ಪು ಬಿಳಿ.

ಬಾಲ್ಯದಲ್ಲಿ, ಇದನ್ನು ನೋಡುತ್ತ ಕುಳಿತಿದ್ದರೆ ಹೊತ್ತು ಹೋದದ್ದೇ ಗೊತ್ತಾಗುತ್ತಿರಲಿಲ್ಲ. ಅದರಷ್ಟು ಒಳ್ಳೇ ಮನರಂಜನೆ ಇನ್ನೊಂದಿರಲಿಲ್ಲ. ಮಧ್ಯಾಹ್ನದ ನಂತರ ದಟ್ಟೈಸಿದ ಮೋಡಗಳು ಮಳೆ ತಂದರೆ, ಆ ಮಳೆಗೆ ಅಂಗಳದಲ್ಲಿ ಹರಿವ ನೀರಿನಲ್ಲಿ ನಾನಾ ಬಗೆಯ ಕ್ರಿಮಿಕೀಟ ಪ್ರತ್ಯಕ್ಷವಾಗುತ್ತಿದ್ದವು ಅಥವಾ ಕೊಚ್ಚಿಕೊಂಡು ಹೋಗುತ್ತಿದ್ದವು. ಅವುಗಳನ್ನು ಹಿಡಿದು ಲಬಕಾಯಿಸಲು ಈ ಹಕ್ಕಿಗಳು ಹಾಜರು. ಆಕಾಶಕ್ಕೂ ನೆಲಕ್ಕೂ ಹೊಲಿಗೆ ಹಾಕುವಂತೆ ಇವು ಬಾಲು ಕುಣಿಸುತ್ತಾ ಜಿಗಿಯುತ್ತಾ ಹುಳ ಹೆಕ್ಕುತ್ತಿದ್ದವು. ಒಂದು ಹುಳಕ್ಕೆ ಒಂದು ರನ್ ಥರ ಎಷ್ಟು ಸ್ಕೋರ್ ಮಾಡಿದವು ಎಂದು ಲೆಕ್ಕ ಹಾಕುತ್ತಿದ್ದವು. ಕೆಲವೊಮ್ಮೆ ಇಬ್ಬರು ನೋಡುತ್ತಾ ಕುಳಿತರೆ, ಒಂದು ನಿಮಿಷದ ಅವಧಿಯಲ್ಲಿ ಎಷ್ಟು ಸಲ ಬಾಲ ಮೇಲೆ ಕೆಳಗೆ ಮಾಡಿದವು ಎಂದು ಲೆಕ್ಕ ಇಡುವ ಸ್ಪರ್ಧೆ. ಎರಡು ಹಕ್ಕಿಗಳಿದ್ದರೆ ನನಗೊಂದು ನಿನಗೊಂದು- ಯಾವುದು ಹೆಚ್ಚು ಸಲ ಕುಂಡೆ ಕುಣಿಸುತ್ತದೆ ಎಂಬ ಪೈಪೋಟಿ. ಹೀಗೇ ಕತ್ತಲಾಗಿಬಿಡುತ್ತಿತ್ತು. ಅವು ಅಂಗಳದಿಂದಾಚೆಗಿನ ದಟ್ಟ ಕಾನನದಲ್ಲಿ ಮರೆಯಾಗಿಬಿಡುತ್ತಿದ್ದವು.

ಅದರ ಹೆಸರು ಸಿಪಿಲೆ ಅಥವಾ ಬಾಲ ಕುಣಿಸುವ ಹಕ್ಕಿ. ಸ್ವಲ್ಪ ಮಜಾ ತೆಗೆದುಕೊಳ್ಳಬಯಸುವವರು ಅದನ್ನು ಕುಂಡೆ ಕುಣಿಸುವ ಹಕ್ಕಿ ಎಂದೂ ಕರೆಯುತ್ತಾರೆ. ಇನ್ನೂ ಸ್ಥಳೀಯ ಹೆಸರಾದರೆ ಬಾಲಕುಸ್ಕ ಅಥವಾ ಕುಂಡೆಕುಸ್ಕ. ಹಕ್ಕಿಗೆ ಅದೆರಡೂ ಇರುವುದರಿಂದ ಏನಂತ ಕರೆದರೂ ಅಡ್ಡಿಯಿಲ್ಲ. ಇಂಗ್ಲಿಷ್‌ನಲ್ಲಿ ವ್ಯಾಗ್‌ಟೇಲ್ ಬರ್ಡ್. ಇದರಲ್ಲೇ ನಾಲ್ಕಾರು ಪ್ರಭೇದಗಳುಂಟು. ಎಲ್ಲದಕ್ಕೂ ಸಾಮಾನ್ಯವಾದ ಒಂದು ಸಂಗತಿ ಅಂದರೆ ಬಾಲವನ್ನು ಮೇಲಕ್ಕೂ ಕೆಳಕ್ಕೂ ಅಲ್ಲಾಡಿಸುವುದು. ಒಂದು ಪ್ರಭೇದ ಮಾತ್ರ ಎಡಕ್ಕೂ ಬಲಕ್ಕೂ ಅಲ್ಲಾಡಿಸುತ್ತದೆ.

ಇದ್ಯಾಕೆ ಹೀಗೆ ಬಾಲವನ್ನು ಮೇಲೆ ಕೆಳಗೆ ಅಲ್ಲಾಡಿಸುತ್ತದೆ? ಗೊತ್ತಿರಲಿಲ್ಲ. ಮನೆಗೆಲಸಕ್ಕೆ ಬರುತ್ತಿದ್ದ ಚಿತ್ತಣ್ಣ ಹೇಳಿದ ಕತೆಯನ್ನು ನಂಬಿದ್ದೆವು. ಹಕ್ಕಿಗಳನ್ನು ದೇವರು ಸೃಷ್ಟಿಸುವಾಗ ಒಂದೊಂದು ಕೆಲಸ, ವಾಸಸ್ಥಳ, ಸ್ವಭಾವ ಎಲ್ಲವನ್ನೂ ಕೊಟ್ಟಿದ್ದನಂತೆ. ಈ ಹಕ್ಕಿಗೆ ಹೊಳೆನೀರಿನ ಬದಿ ಇದ್ದು ಅಲ್ಲಿ ಸಿಗುವ ಎರೆಹುಳ ಇತ್ಯಾದಿ ಹಿಡಿದು ಭಕ್ಷಿಸುವ ಕೆಲಸ, ಆಹಾರ. ಆದರೆ ಈ ಹಕ್ಕಿ ದೇವರು ಹೇಳಿದ್ದು ಸರಿಯಾಗಿ ಕೇಳಿಸಿಕೊಳ್ಳದೆ ಬೇರೆ ಹಕ್ಕಿಗಳ ಆಹಾರಕ್ಕೂ ಸದ್ದಿಲ್ಲದೆ ಬಾಯಿ ಹಾಕಿತಂತೆ. ಇತರೆ ಹಕ್ಕಿಗಳು ದೇವರಿಗೆ ದೂರಿದವು. ದೇವರು ಇದಕ್ಕೆ ಸದಾ ಬಾಲ ಅಲ್ಲಾಡಿಸುತ್ತ ಇರು ಎಂದು ಶಾಪ ಕೊಟ್ಟನಂತೆ. ಕಾರಣ? ಅದು ಬಾಲ ಅಲ್ಲಾಡಿಸುವಾಗ ಇತರೆ ಹಕ್ಕಿಗಳಿಗೆ ಅದರ ಇರುವಿಕೆ ಗೊತ್ತಾಗುತ್ತದೆ. ತಮ್ಮ ಆಹಾರ ರಕ್ಷಿಸಿಕೊಳ್ಳಬಹುದು.

ನಾನಿದನ್ನು ನಿಜವೆಂದೇ ಬಹು ಕಾಲ ನಂಬಿದ್ದೆ. ನಿಜಕ್ಕೂ ಇದೊಂದು ಇತರ ಹಕ್ಕಿಗಳ ತಂಟೆಗೆ ಹೋಗದ ಸಾಧು ಪಕ್ಷಿ. ಅದು ಕುಂಡೆ ಕುಸ್ಕನಾಗಿರುವುದಕ್ಕೆ ವೈಜ್ಞಾನಿಕ- ಪ್ರಾಕೃತಿಕ ಕಾರಣ ಇದೆ. ಸದಾ ಬಾಲ

ಕುಣಿಸುತ್ತಲೇ ಇರುವ ಮೂಲಕ ಅದು ತನ್ನನ್ನು ಬೇಟೆಯಾಡಲು ಬರುವ ಪ್ರಾಣಿ- ಪಕ್ಷಿಗಳಿಗೆ 'ನಾನು ಅಲರ್ಟ್ ಆಗಿ ಇದ್ದೇನೆ, ನಿಮಗೆ ಸಿಗಲಾರೆ' ಎಂದು ಸೂಚನೆ ರವಾನಿಸುತ್ತಾ ಇರುತ್ತದೆ. ಎರಡನೇ ಕಾರಣ, ಹಾಗೆ ಬಾಲ ಕುಣಿಸುವ ಮೂಲಕ ನೆಲದಲ್ಲಿರುವ ಕ್ರಿಮಿಗಳನ್ನು ಡಿಸ್ಟರ್ಬ್ ಮಾಡಿ ಅವು ಹೊರಗೆ ಬರುವಂತೆ, ಮಿಸುಕಾಡುವಂತೆ ಮಾಡುತ್ತದೆ. ಹೀಗೆ ಅವುಗಳನ್ನು ಪತ್ತೆ ಹಚ್ಚಿ ಗಬಕಾಯಿಸುತ್ತದೆ. ಬಹುಶಃ ದೇಹವನ್ನು ಬ್ಯಾಲೆನ್ಸ್ ಮಾಡುವ ಇನ್ನೊಂದು ಕಾರಣವೂ ಇರಬಹುದು. ಇದಲ್ಲದೇ ಜೀವವಿಕಾಸದ ಜೊತೆಗೆ ವಿಕಾಸವಾಗುತ್ತ ಬಂದ, ನಮಗರಿಯದ ಬೇರೆ ಕಾರಣಗಳೂ ಇರಬಹುದು.

ಇವು ನಮ್ಮೂರಿನ ಕಾಡುಗಳೆಲ್ಲೆಲ್ಲೋ ವಾಸಿಸುವ ಹಕ್ಕಿಗಳು, ಮಳೆ ಬಂದಾಗ ಅಂಗಳಕ್ಕೆ ಬರುತ್ತವೆ ಎಂದೇ ನಾನು ಅಂದುಕೊಂಡಿದ್ದೆ. ಪಕ್ಕದಲ್ಲೇ ದಟ್ಟವಾದ ಬಂಟಮಲೆ ಗುಡ್ಡವಿತ್ತು. ಆದರೆ ಸ್ವಲ್ಪ ದೊಡ್ಡವನಾದಾಗ ಇನ್ನೊಂದು ಸತ್ಯ ಗೊತ್ತಾಯಿತು. ಇವು ಸಾಮಾನ್ಯವಾಗಿ ಪಶ್ಚಿಮ ಘಟ್ಟಗಳಲ್ಲಿ ನಿತ್ಯ ಹರಿಯುವ ತೊರೆ- ನದಿಗಳ ಬದಿಗಳಲ್ಲಿ, ಜವುಗು ತಾಣಗಳಲ್ಲಿ ವಾಸಿಸುತ್ತವೆ. ಯಾಕೆಂದರೆ ಇವುಗಳ ಆಹಾರ ಅಲ್ಲಿ ಹೆಚ್ಚು. ಮಳೆ ಬಂದಾಗ ಜನವಸತಿ ಪ್ರದೇಶಗಳಲ್ಲಿ ಮೇಲೆದ್ದು ಬರುವ ಕ್ರಿಮಿಗಳನ್ನು ಭಕ್ಷಿಸಲು ಅಲ್ಲಿಗೆ ಬರುತ್ತವೆ ಬಿಟ್ಟರೆ ದಟ್ಟ ಕಾಡೇ ಇವುಗಳ ಆವಾಸಸ್ಥಾನ.

ಇನ್ನೂ ಒಂದು ವಿಷಯ ತಿಳಿಯಿತು- ಇವುಗಳಲ್ಲಿ ಹಲವು ಪ್ರಭೇದಗಳು ಒಂದೇ ಊರಿನಲ್ಲಿ ನೆಲೆ ನಿಲ್ಲುವ ಹಕ್ಕಿಗಳೂ ಅಲ್ಲ. ಇವು ವಲಸೆ ಹಕ್ಕಿಗಳು. ಉದಾಹರಣೆಗೆ ಬೂದು ಬಾಲಕುಸ್ಕ ಹಕ್ಕಿಗಳು ಹಿಮಾಲಯದಲ್ಲಿರುತ್ತವೆ. ಬಿಳಿ ಮತ್ತು ಹಳದಿ ಹಕ್ಕಿಗಳು ಯುರೋಪ್, ಉತ್ತರ ಏಷ್ಯಾದಲ್ಲಿರುತ್ತವೆ. ಫಾರೆಸ್ಟ್ ವ್ಯಾಗ್‌ಟೇಲ್ ಚೀನಾ, ಪೂರ್ವ ಏಷ್ಯಾಕ್ಕೆ ಸೇರಿದ್ದು. ಅಲ್ಲಿ ದಟ್ಟ ಚಳಿಗಾಲ ಆವರಿಸುವ ಮೊದಲು ಹಾರಿಕೊಂಡು ದಕ್ಷಿಣ ಏಷ್ಯಾ, ಕರ್ನಾಟಕ ಹಾಗೂ ಕೇರಳದ ಪಶ್ಚಿಮ ಘಟ್ಟಗಳಿಗೆ ಬರುತ್ತವೆ. ಮೇ ತಿಂಗಳಲ್ಲಿ ಹಿಮಾಚಲ ಮೊದಲಾದೆಡೆ ಗೂಡು ಕಟ್ಟಿ ಮರಿ ಮಾಡುತ್ತವೆ. ಪಾಕಿಸ್ತಾನ, ಬಲೂಚಿಸ್ತಾನಗಳಿಗೂ ಹೋಗುತ್ತವೆ. ಒಂದು ವರ್ಷದಲ್ಲಿ ಇವು ಹಾರಾಡುವ ದೂರ ಸುಮಾರು ಆರು ಸಾವಿರ ಕಿಲೋಮೀಟರ್.

ಚಳಿಗಾಲದಲ್ಲಿ ನಮ್ಮೂರಿನಲ್ಲೆಲ್ಲಾ ಇವನ್ನು ಕಾಣಬಹುದು. ಹೀಗೆ ಇವು ನಮ್ಮೂರಿನವು ಹೌದು ಮತ್ತು ಅಲ್ಲ. ಅವು ವಿಶ್ವಕುಟುಂಬಿಗಳು. ಅವುಗಳ ಹಿಡಿಯಷ್ಟು ದೇಹದಲ್ಲಿ, ಪುಟ್ಟ ರೆಕ್ಕೆಗಳಲ್ಲಿ ಇಷ್ಟೊಂದು ಶಕ್ತಿ ಇದೆ ಎಂದು ನಮಗೆ ಗೊತ್ತೇ ಇರಲಿಲ್ಲ. ಮನುಷ್ಯ ಹಕ್ಕಿಯಂತೆ ಅನಿಕೇತನ ಆಗುವುದು ಸಾಧ್ಯವಿದ್ದರೆ ಎಷ್ಟು ಚೆನ್ನಾಗಿತ್ತು. ಹಕ್ಕಿಯಂತೆ ಹಗುರವಾಗಿ, ಎಲ್ಲಿಗೂ ಎಂಟಿಕೊಳ್ಳದೆ, ಎಲ್ಲಿ ಹೋದರೂ ಒಗ್ಗಿಕೊಂಡು ಬದುಕಿದರೆ ಮಾತ್ರ, ಇದು ಸಾಧ್ಯವೇನೊ.

ವಲಸೆ ಹಕ್ಕಿಗಳ ಶಕ್ತಿಯ ಬಗ್ಗೆ ಮಾತನಾಡುವಾಗ ನೆನಪಾಗುವ ಇನ್ನೊಂದು ಹಕ್ಕಿ ಅಮುರ್ ಫಾಲ್ಕನ್. ಪಾರಿವಾಳದಷ್ಟು ಪುಟ್ಟದಾದರೂ ಇವುಗಳ ರೆಕ್ಕೆಗೆ ದೈತ್ಯ ಶಕ್ತಿ. ಇಲ್ಲಿ ಅವುಗಳಿಗೆ ಸಂಬಂಧಿಸಿದ ಒಂದು ಸುದ್ದಿ- ಕಳೆದ ವರ್ಷ ನವೆಂಬರ್‌ನಲ್ಲಿ ಮಣಿಪುರದಲ್ಲಿ ಮೂರು ಅಮುರ್ ಫಾಲ್ಕನ್‌ಗಳಿಗೆ ಸ್ಯಾಟ್‌ಲೈಟ್ ಟ್ಯಾಗ್ ಮಾಡಲಾಯಿತು. ಇವು ನವೆಂಬರ್ ತಿಂಗಳಲ್ಲಿ ಮಣಿಪುರದಿಂದ ಹೊರಟು, ಭಾರತದ ಐದಾರು ರಾಜ್ಯಗಳನ್ನು ದಾಟಿ, ಪಶ್ಚಿಮ ಕರಾವಳಿಯ ಮೂಲಕ ಅರಬ್ಬಿ ಸಮುದ್ರವನ್ನು ಪ್ರವೇಶಿಸಿ, ಸಮುದ್ರದ ಮೇಲೆ ನಾನ್‌ಸ್ಟಾಪ್ ಹಾರುತ್ತಾ ಆಫ್ರಿಕದ ಸೊಮಾಲಿಯ ದೇಶವನ್ನು ಸೇರುತ್ತವೆ. ಹೀಗೆ ಅಲ್ಲಿಗೆ ಸೇರಲು ಅದು ತೆಗೆದುಕೊಳ್ಳುವುದು 6 ದಿನಗಳು ಮಾತ್ರ. ಮಣಿಪುರದಿಂದ ಹೊರಟರೆ ಎಲ್ಲಿಯೂ ರೆಸ್ಟ್ ತೆಗೆದುಕೊಳ್ಳಲು ಕೆಳಗಿಳಿಯುವುದೇ ಇಲ್ಲ! ಮರಳಿ ಬರುವಾಗಲೂ ಅಷ್ಟೆ. ಮೇ ತಿಂಗಳಲ್ಲಿ ಅವು ಸೊಮಾಲಿಯಾದಿಂದ ಹೊರಟು ಆರೇ ದಿನಗಳಲ್ಲಿ ಮಣಿಪುರ ಸೇರುತ್ತವೆ.

ಕತೆ ಇಲ್ಲಿಗೇ ಮುಗಿಯಲಿಲ್ಲ. ಇಲ್ಲಿಂದ ಆರಂಭವೂ ಅಲ್ಲ. ಯಾಕೆಂದರೆ ಅವು ಮಣಿಪುರದ ಪಕ್ಷಿಗಳೇ ಅಲ್ಲ. ಅವುಗಳ ನೆಲೆ ಮಂಗೋಲಿಯಾ, ಆಗ್ನೇಯ ರಷ್ಯಾ ಮತ್ತು ಉತ್ತರ ಚೀನಾ. ಅಲ್ಲಿ ಜೂನ್‌ನಿಂದ ಆಗಸ್ಟ್ ವರೆಗೆ ಬೇಸಿಗೆ. ಅವು ಬೇಸಿಗೆಯ ತಿಂಗಳುಗಳನ್ನು ಇಲ್ಲಿ ಕಳೆದು, ಗೂಡು ಕಟ್ಟಿ ಸಂತಾನೋತ್ಪತ್ತಿ ಮಾಡುತ್ತವೆ. ಅಕ್ಟೋಬರ್- ನವೆಂಬರ್ ವೇಳೆಗೆ ಮರಿಗಳಿಗೆ ರೆಕ್ಕೆ ಬಲಿತಿರುತ್ತದೆ. ಆಗ ಅವುಗಳ ವಲಸೆ ಶುರು. ನವೆಂಬರ್‌ನಲ್ಲಿ ಅವು ಅಲ್ಲಿಂದ ನೈರುತ್ಯಕ್ಕೆ ಅಂದರೆ ಈಶಾನ್ಯ ಭಾರತದ ಕಡೆಗೆ ಹಾರತೊಡಗುತ್ತವೆ. ಒಂದು ವಾರದಲ್ಲಿ ನಾಗಾಲ್ಯಾಂಡ್ ಮತ್ತು ಮಣಿಪುರದಲ್ಲಿ ಬೃಹತ್ ಸಂಖ್ಯೆಯಲ್ಲಿ ಬಂದು ಸೇರುತ್ತವೆ. ಇದು ಅವುಗಳು ಕೆಲವು ವಾರಗಳ ಕಾಲ ವಿಶ್ರಾಂತಿ ಪಡೆಯುವ ತಾಣ. ಜೊತೆಗೆ ಸಮುದ್ರದ ಮೇಲಿನ ನಿಲ್ಲದ ಹಾರಾಟಕ್ಕೆ ಶಕ್ತಿ ತುಂಬಿಸಿಕೊಳ್ಳಲು ಕೀಟಗಳನ್ನು ಗಬಗಬನೆ ತಿನ್ನುತ್ತವೆ. ಎಷ್ಟೆಂದರೆ, ತಮ್ಮ ದೇಹದ ತೂಕದ ದುಪ್ಪಟ್ಟು. ನಂತರ ಸೊಮಾಲಿಯಾಕ್ಕೆ ಹಾರುವಿಕೆ ಶುರು.

ಒಮ್ಮೆ ಹಾರಲು ತೊಡಗಿತೆಂದರೆ ದಿಗ್ಭ್ರಮೆಗೊಳಿಸುವ ತಡೆರಹಿತ ಹಾರಾಟ ಇದರದು. ಇದರ ವಲಸೆ ಮೂರು ಖಂಡಗಳಿಗೆ, ಹತ್ತಾರು ದೇಶಗಳಿಗೆ ವ್ಯಾಪಿಸಿದ್ದು. ವರ್ಷಾವಧಿಯಲ್ಲಿ ಇವು ಹಾರಾಡುವ ದೂರ 20,000 ಕಿಲೋಮೀಟರ್. ಹೋಗುವಾಗ ಮತ್ತು ಬರುವಾಗ ಇವುಗಳಿಗೆ ತುಸು ಸವಾಲು ನೀಡುವ ಜಾಗ ಎಂದರೆ ಅರಬಿ ಸಮುದ್ರ. ಆಹಾರ, ವಿಶ್ರಾಂತಿ ಇಲ್ಲದೆ ಹಲವಾರು ದಿನಗಳವರೆಗೆ ನಿರಂತರ ಹಾರಾಡುವ ಇವು, ಗಾಳಿಯ ದಿಕ್ಕನ್ನು ಅನುಸರಿಸಿ ರೆಕ್ಕೆ ಬಡಿಯದೇ ಗಂಟೆಗಟ್ಟಲೆ ಗಾಳಿಯಲ್ಲಿ ತೇಲುತ್ತಲೇ ಇರಬಲ್ಲವು.

ಇವು ಯಾವುದೇ ಹೀರೋಗಿರಿಗಾಗಿ ಹೀಗೆ ಹಾರುವುದಲ್ಲ. ಅದು ಅವುಗಳ ಬದುಕುಳಿಯುವ ತಂತ್ರ, ವಿಕಾಸಗೊಂಡ ಕ್ರಮ ಮತ್ತು ಪ್ರಾಯೋಗಿಕ ಸಹಜ ಕ್ರಿಯೆ. ಪೂರ್ವ ಏಷ್ಯಾದಲ್ಲಿ ಬೇಸಿಗೆಯಲ್ಲಿ ಈ ಗಿಡುಗಗಳು ಸಂತಾನೋತ್ಪತ್ತಿ ಮಾಡುತ್ತವೆ. ಆ ಸಮಯದಲ್ಲಿ ಅವುಗಳ ಆಹಾರ ಕೀಟಗಳು ಹೇರಳವಾಗಿರುತ್ತವೆ ಮತ್ತು ದಿನಗಳು ದೀರ್ಘವಾಗಿರುತ್ತವೆ. ಆದರೆ ಅಲ್ಲಿನ ಚಳಿಗಾಲ ಕಠಿಣ. ಆ ಸಮಯದಲ್ಲಿ ಅವು ಅಲ್ಲಿರುವುದಿಲ್ಲ. ದಕ್ಷಿಣ ಆಫ್ರಿಕಾ ಆ ತಿಂಗಳುಗಳಲ್ಲಿ ಒಣಹವೆಯಿಂದಿದ್ದು, ಸುಲಭವಾಗಿ ಆಹಾರ ನೀಡುತ್ತದೆ. ಆದ್ದರಿಂದ ಅವು ಅಲ್ಲಿಂದಿಲ್ಲಿಗೆ ಹೋಗುತ್ತವೆ. ಹಾರುವ ಮಾರ್ಗ ಹಾಗೂ ಸಮಯ ಅವುಗಳಿಗೆ ಹೇಗೆ ಗೊತ್ತಾಗುತ್ತದೆ? ಅದು ಅವುಗಳ ಗುಣಾಣುಗಳಲ್ಲೇ ನೆಲೆಯೂರಿದೆ. ತಲೆಮಾರಿನಿಂದ ತಲೆಮಾರಿಗೆ ಅದು ಹರಿದುಬಂದಿದೆ.

ಈಶಾನ್ಯ ಭಾರತದ ಮಣಿಪುರ ಹಾಗೂ ನಾಗಾಲ್ಯಾಂಡ್‌ಗಳಲ್ಲಿ ಇವುಗಳ ಆಗಮನವನ್ನೇ ಜನ ನಿರೀಕ್ಷಿಸುತ್ತಿರುತ್ತಾರೆ. ಸಾಮಾನ್ಯವಾಗಿ ಅಕ್ಟೋಬರ್ ಅಂತ್ಯ ಮತ್ತು ನವೆಂಬರ್ ಆರಂಭದ ನಡುವೆ ಇವು ಬರುತ್ತವೆ. ಇವು ಬಂತೆಂದರೆ ಚಳಿಗಾಲ ಬರುತ್ತಿದೆ ಎಂಬುದರ ಸೂಚನೆ. ಕೆಲವು ವರ್ಷಗಳ ಹಿಂದೆ ಈ ಗಿಡುಗಗಳನ್ನು ಇಲ್ಲಿನ ಜನ ಮಾಂಸಕ್ಕಾಗಿ ಬೇಟೆಯಾಡುತ್ತಿದ್ದರು. ಇದರಿಂದ ಈ ಪಕ್ಷಿಜಾತಿಯ ವಲಸೆ ಪದ್ಧತಿಗೆ ಆಗಬಹುದಾದ ವ್ಯಾಪಕ ಹಾನಿಯನ್ನು ಮನಗಂಡು ಭಾರತ ಸರಕಾರ ಈ ಹಕ್ಕಿಗಳನ್ನು ಕೊಲ್ಲುವುದನ್ನು ನಿಷೇಧಿಸಿ, ಶಿಕ್ಷಾರ್ಹ ಅಪರಾಧ ಎಂದು ಸಾರಿತು. ಜೊತೆಗೆ ಸ್ಥಳೀಯ ಜನರಿಗೂ ಈ ಬಗ್ಗೆ ಅರಿವು ಮೂಡಿಸಿತು. ಅವು ಬಂದು ತಂಗುವ ತಾಣಗಳಲ್ಲಿ ಆ ಸಮಯದಲ್ಲಿ ಬರ್ಡ್‌ವಾಚಿಂಗ್ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಿತು. ಇಂದು ಈ ಹಕ್ಕಿಗಳ ವಲಸೆ ಕಾಲವನ್ನೇ ಅಲ್ಲಿನ ಜನ ಕುತೂಹಲದ ಕಂಗಳಿಂದ ಕಾಯುತ್ತಿರುತ್ತಾರೆ.

ಹಕ್ಕಿಗಳು ಮನುಷ್ಯನ ಬದುಕಿನ ಭಾಗವಾಗುವುದು ಹೀಗೆ. ಬಾಲ್ಯದಲ್ಲಿ ಕಾಣುವ ಬಾಲಕುಸ್ಕ ಹಕ್ಕಿ, ವಾರ ಕಾಲ ತಂಗುವ ಅಮುರ್ ಫಾಲ್ಕನ್, ಇನ್ನೆಷ್ಟೋ ಬಗೆಯ ಪಕ್ಷಿಗಳು. ನಮ್ಮಿಂದ ಮೊದಲೇ ಈ ಭೂಮಿಯಲ್ಲಿದ್ದಂಥವು. ನಮಗೆ ಈ ಭೂಮಿಯ ಚೆಲುವನ್ನು ನೆನಪಿಸುವಂಥವು.

## ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

### ಪಂಚಾಂಗ ಪರಿಷ್ಕರಣೆಯಾಗಲಿ

| ಋತು | ಕ್ರಾಂತಿವೃತ್ತದಲ್ಲಿ ಸೂರ್ಯನ ಸ್ಥಾನ(ಡಿಗ್ರಿ) | | | |
|---|---|---|---|---|
| | From | | To | |
| ವಸಂತ | 330 | 18-Feb | 30 | 20-Apr |
| ಗ್ರೀಷ್ಮ | 30 | 20-Apr | 90 | 21-Jun |
| ವರ್ಷಾ | 90 | 21-Jun | 150 | 23-Aug |
| ಶರದ್ | 150 | 23-Aug | 210 | 23-Oct |
| ಹೇಮಂತ | 210 | 23-Oct | 270 | 22-Dec |
| ಶಿಶಿರ | 270 | 22-Dec | 330 | 18-Feb |

ಈಗ ಅಧಿಕ ಮಾಸ ನಡೆಯುತ್ತಿದ್ದು ಚಾಂದ್ರಮಾನ ಮತ್ತು ಸೌರಮಾನ ಕಾಲಗಣನೆಯ ಮಧ್ಯೆ ಶಿಥಿಲವಾಗುತ್ತಾ ಹೋಗುವ ಸಮನ್ವಯವನ್ನು ಮತ್ತೆ ಸಮಸ್ಥಿತಿಗೆ ತರುವುದೇ ಇದರ ಉದ್ದೇಶ. ಆದರೆ ಭೂಮಿಯ ಓಲಾಡುವಿಕೆಯಿಂದ ಉಂಟಾಗಿರುವ precession ಪ್ರಭಾವದಿಂದ ನಕ್ಷತ್ರ ಸ್ಥಾನಗಳು ಕ್ರಮೇಣ ಬದಲಾಗುತ್ತಾ ಬಂದು ಸಂಕ್ರಾಂತಿ ಆಧರಿಸಿದ ಸೌರ ಕಾಲಗಣನೆಯೇ ಕ್ರಾಂತಿವೃತ್ತದಲ್ಲಿ ಸೂರ್ಯನ ವಾರ್ಷಿಕ ಚಲನೆಯನ್ನು ಹೊಂದಿಕೊಂಡ ಋತುಮಾನ ಚರ್ಯೆಗಳೊಂದಿಗಿನ ಸಮನ್ವಯವನ್ನು ಕಳೆದುಕೊಂಡಿದೆ. ಹೀಗಾಗಿ ಸಂಕ್ರಾಂತಿ ಗಳೊಂದಿಗೆ ತಳುಕು ಹಾಕಿಕೊಂಡಿರುವ ಚಾಂದ್ರಮಾನ ಮಾಸಗಳ ಆಧಾರದಲ್ಲಿ ಗುರುತಿಸಲಾಗುವ ವಸಂತ, ಗ್ರೀಷ್ಮಾದಿ ಋತುಗಳು ಮತ್ತು ಆ ಸಮಯದಲ್ಲಿ ಪ್ರಕೃತಿಯಲ್ಲಿ ಇರಬೇಕಾದ ಲಕ್ಷಣಗಳ ಮಧ್ಯೆ ಕೂಡ ತಾಳಮೇಳ ಇಲ್ಲ. ಇದು ಸರಿಯಾಗಬೇಕಿದ್ದರೆ ಚಾಂದ್ರಮಾನ ತಿಂಗಳುಗಳು ಸಂಕ್ರಾಂತಿಗಳ ಬದಲಿಗೆ ಕ್ರಾಂತಿವೃತ್ತದಲ್ಲಿ ಸೂರ್ಯನ ಸ್ಥಾನವನ್ನು ಆಧರಿಸುವಂತೆ ಮಾಡಬೇಕು. ಪ್ರತೀ ವರ್ಷ ಸೂರ್ಯನು ಫೆಬ್ರವರಿ 18ರ ಸುಮಾರಿಗೆ 330 ಡಿಗ್ರಿ ದಾಟುತ್ತಲೇ ಪ್ರಕೃತಿಯಲ್ಲಿ ವಸಂತಾ ಗಮನದ ಸೂಚನೆಗಳು ಕಾಣಿಸತೊಡಗುತ್ತವೆ. ಸೂರ್ಯ ಈ ಸ್ಥಾನವನ್ನು ದಾಟಿದ ನಂತರ ಆರಂಭವಾಗುವ ಮೊದಲ ತಿಂಗಳನ್ನು ಚೈತ್ರ ಎಂದು ಪರಿಗಣಿಸುವ ರೀತಿ ಪಂಚಾಂಗ ರಚನೆಯ ಸೂತ್ರಗಳನ್ನು ಖಗೋಳಶಾಸ್ತ್ರಜ್ಞರು, ಪಂಚಾಂಗಕರ್ತರು ಸೇರಿ ಚರ್ಚಿಸಿ ಒಮ್ಮತದಿಂದ ಪರಿಷ್ಕರಿಸಬೇಕಾಗಿದೆ.

**- ಚಿದಂಬರ ಕಾಕತ್ಕರ್, ಮಂಗಳೂರು**

### ಪ್ರವಾಸಿ ಪ್ರಪಂಚದ ವರ್ಷದ ಪಯಣ ಪ್ರೇರಣಾದಾಯಕ

ಪ್ರವಾಸ ಮತ್ತು ಆತಿಥ್ಯ ಕ್ಷೇತ್ರಕ್ಕೆ ಮೀಸಲಾದ ಭಾರತದ ಏಕೈಕ ಬ್ರಾಡ್‌ಶೀಟ್ ವರ್ಣಮಯ ವಾರಪತ್ರಿಕೆಯಾಗಿ ಗಮನ ಸೆಳೆಯುತ್ತಿರುವ ಪ್ರವಾಸಿ ಪ್ರಪಂಚ ಒಂದು ವರುಷ ಪೂರೈಸುತ್ತಿರುವ ಈ ಸಂದರ್ಭದಲ್ಲಿ ಒಬ್ಬ ಓದುಗ ಹಾಗೂ ಬರಹಗಾರನಾಗಿ ತುಂಬಾ ಸಂತೋಷ ಮತ್ತು ಅಭಿಮಾ ನವೆನಿಸುತ್ತಿದೆ. ನಮ್ಮ ಸುತ್ತಲಿನ ಜಗತ್ತು ವಿಶಾಲ. ನೋಡಬೇಕಾದ ಜಾಗಗಳು ಅಸಂಖ್ಯ, ತಿಳಿಯಬೇಕಾದ ಸಂಸ್ಕೃತಿಗಳು ಅನಂತ. ಇಂತಹ ಅದ್ಭುತ ಜಗತ್ತನ್ನು ಕಣ್ಣುಗಳಿಂದ ನೋಡುವುದಲ್ಲದೆ, ಅಕ್ಷರಗಳ ಮೂಲಕ ಅನುಭವಿಸುವಂತೆ ಮಾಡಿದ ವೇದಿಕೆ 'ಪ್ರವಾಸಿ ಪ್ರಪಂಚ'. ಈಗ ನಮ್ಮ ಪ್ರೀತಿಯ ಪ್ರವಾಸಿ ಪ್ರಪಂಚಕ್ಕೆ ಮೊದಲ ವರ್ಷದ ಹುಟ್ಟುಹಬ್ಬ! ಪ್ರವಾಸಿ ಪ್ರಪಂಚ ಕೇವಲ ಪ್ರವಾಸಿ ತಾಣಗಳ ಮಾಹಿತಿಯನ್ನು ನೀಡುವ ತಾಣವಷ್ಟೇ ಅಲ್ಲ, ಬದಲಾಗಿ, ಇದು ನಮ್ಮನ್ನು ದೇಶ-ವಿದೇಶಗಳ ಮೂಲೆ ಮೂಲೆಗೆ ಕರೆದೊಯ್ಯುವ ಒಂದು ವರ್ಚುವಲ್ ಪ್ರವಾಸದಂತೆ ಇದೆ. ಇಲ್ಲಿ ಪ್ರಕಟವಾಗುವ ಪ್ರತಿಯೊಂದು ಲೇಖನವೂ ಓದುಗನಿಗೆ ಹೊಸ ಜಾಗವೊಂದನ್ನು ಪರಿಚಯಿ ಸುವುದಲ್ಲದೆ, ಅಲ್ಲಿನ ಗಾಳಿ, ಮಣ್ಣಿನ ವಾಸನೆ ಮತ್ತು ಜನರ ಬದುಕನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಗಿದೆ. ಅಪರಿಚಿತ ತಾಣಗಳ ರೋಚಕ ಕಥೆಗಳು ನನ್ನಲ್ಲಿನ ಪ್ರವಾಸದ ಹಸಿವನ್ನು ಇನ್ನಷ್ಟು ಹೆಚ್ಚಿಸಿವೆ. 'ಪ್ರವಾಸಿ ಪ್ರಪಂಚ' ನನಗೆ ನೀಡಿದ ದೊಡ್ಡ ಕೊಡುಗೆ ಎಂದರೆ, ನನ್ನೊಳಗಿನ ಬರಹಗಾರನನ್ನು ಗುರುತಿಸಿದ್ದು. ನಾನು ಬರೆದ ಲೇಖನಗಳನ್ನು ಓದಿ, ಸಹೃದಯ ಓದುಗರು ನೀಡಿದ ಪ್ರತಿಕ್ರಿಯೆಗಳು ನನ್ನ ಬರವಣಿಗೆಯ ಹುಮ್ಮಸ್ಸನ್ನು ಹೆಚ್ಚಿಸಿದೆ. ಕೇವಲ ಒಂದು ವರ್ಷದಲ್ಲಿ, 'ಪ್ರವಾಸಿ ಪ್ರಪಂಚ' ಒಂದು ಕುಟುಂಬವಾಗಿ ಬೆಳೆದಿದೆ. ಮುಂದಿನ ದಿನಗಳಲ್ಲಿ ಪ್ರವಾಸಿ ಪ್ರಪಂಚ ಇನ್ನಷ್ಟು ಎತ್ತರಕ್ಕೆ ಬೆಳೆಯಲಿ.

**- ಬಾಲಚಂದ್ರ ಹೆಗಡೆ, ಬೆಂಗಳೂರು**

# ಬೊಕ್ಕಸ ಬರಿದಾಗಿದ್ದಕ್ಕೆ ಪ್ರಗತಿಯ ಅಡಿಗಲ್ಲೇ ಮಾರಾಟ!

**ಗಂಟಾಘೋಷ**
**ಗುರುರಾಜ್ ಗಂಟಿಹೊಳೆ**
vveditoped@gmail.com

ಒಂದು ರಾಜ್ಯ ಸುಭಿಕ್ಷವಾದ ಬಂಗಲೆಯಾಗಿದ್ದರೆ ಮೂಲಭೂತ ಅಭಿವೃದ್ಧಿ ಆ ಮನೆಯ ಅಡಿಗಲ್ಲು ಎನ್ನಬಹುದು. ಪ್ರತಿ ಸರಕಾರ ಅಧಿಕಾರಕ್ಕೆ ಬಂದಾಗ ತನ್ನದೇ ಆದ ಒಂದು ಮನೆಯ ಪರಿಕಲ್ಪನೆಯೊಂದಿಗೆ ಬಂದಿರುತ್ತದೆ. ಈ ಕಾಂಗ್ರೆಸ್ ಸರಕಾರವು ಹೀಗೆಯೇ ಅಧಿಕಾರಕ್ಕೆ ಬಂದಿತ್ತು. ಆದರೆ ಅದರ ಆಡಳಿತದ ವೈಖರಿ ಹೇಗಿದೆ ಎಂದರೆ ಇಂದು ರಾಜ್ಯದ ಭವಿಷ್ಯಕ್ಕೆ ಆಧಾರವಾಗಬೇಕಿದ್ದ ಮೂಲಸೌಕರ್ಯ ಅಭಿವೃದ್ಧಿಯ 'ಅಡಿಗಲ್ಲ'ನ್ನೇ ಮಾರಾಟಕ್ಕಿಟ್ಟು ಬರಿಗೈಲಿ ನಿಲ್ಲುವ ದುಃಸ್ಥಿತಿಗೆ ಬಂದು ತಲುಪಿದ್ದಾರೆ; ಅಂದರೆ, ಕರ್ನಾಟಕದ ಶಾಶ್ವತ ಮೂಲಸೌಕರ್ಯ ಮತ್ತು ದೂರದೃಷ್ಟಿಯ ಅಭಿವೃದ್ಧಿ ಯೋಜನೆಗಳನ್ನು ಸಂಪೂರ್ಣವಾಗಿ ಬಲಿಕೊಟ್ಟು, ಕೇವಲ ತಾತ್ಕಾಲಿಕ ಉಳಿವಿಗಾಗಿ ಇಡೀ ರಾಜ್ಯದ ಆರ್ಥಿಕ ಭವಿಷ್ಯವನ್ನೇ ಕತ್ತಲಿಗೆ ತಳ್ಳಲಾಗುತ್ತಿದೆ.

ಕರ್ನಾಟಕದಲ್ಲಿ ಎಕ್ಸ್‌ಪ್ರೆಸ್‌ವೇಗಳು, ಸಂಚಾರ ದಟ್ಟಣೆ ನಿಯಂತ್ರಿಸುವ ರಿಂಗ್ ರೋಡ್‌ಗಳು ಮತ್ತು ಹಳ್ಳಿಗಳನ್ನು ಬೆಸೆಯುತ್ತಿದ್ದ ಅತ್ಯಾಧುನಿಕ ಹೆದ್ದಾರಿಗಳ ನಿರ್ಮಾಣದ ಭವ್ಯ ಇತಿಹಾಸವೇ ಇಂದು ಇತಿಹಾಸದ ಪುಟಗಳಿಗೆ ಸೇರಿಹೋಗುವಂತೆ ಮಾಡಲಾಗಿದೆ. ಕೇವಲ ರಾಜಕೀಯ ಉಳಿವಿಗಾಗಿ ಇಡೀ ರಾಜ್ಯದ ಕಣ್ಣೆದುರೇ ಅಭಿವೃದ್ಧಿ ವೆಚ್ಚಕ್ಕೆ ಕತ್ತರಿ ಹಾಕಲಾಗುತ್ತಿದ್ದು, ಭವಿಷ್ಯದ ತಲೆಮಾರಿನ ಬೆಳವಣಿಗೆಯನ್ನೇ ಬಲಿಗೊಡುತ್ತಿರುವ ಈ ಬೇಜವಾಬ್ದಾರಿ ಆಡಳಿತದ ವೈಖರಿಯು ಸಾರ್ವಜನಿಕ ವಲಯದಲ್ಲಿ ತೀವ್ರ ಕಳವಳಕ್ಕೆ ಕಾರಣವಾಗಿದೆ.

ಹಿಂದಿನ ಸರಕಾರದ ಸಮಯದಲ್ಲಿ ಕರ್ನಾಟಕವು ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಇಡೀ ದೇಶದಲ್ಲೇ ಮುಂಚೂಣಿಯಲ್ಲಿತ್ತು. ಈ ಅವಧಿಯಲ್ಲಿ ರಸ್ತೆಗಳ ಸುಧಾರಣೆ ಮತ್ತು ಹೆದ್ದಾರಿಗಳ ವಿಸ್ತರಣೆಗೆ ಅತ್ಯುನ್ನತ ಆದ್ಯತೆ ನೀಡಲಾಗಿತ್ತು. ಇದಕ್ಕೆ ಅತ್ಯುತ್ತಮ ಉದಾಹರಣೆಯೆಂದರೆ ಬೆಂಗಳೂರು-ಮೈಸೂರು ಎಕ್ಸ್‌ಪ್ರೆಸ್‌ವೇ ಯೋಜನೆ; ಇದು ಎರಡು ಪ್ರಮುಖ ಆರ್ಥಿಕ ನಗರಗಳ ನಡುವಿನ ಪ್ರಯಾಣದ ಸಮಯವನ್ನು ಗಣನೀಯವಾಗಿ ಕಡಿಮೆ ಮಾಡಿದ್ದಲ್ಲದೆ, ವ್ಯಾಪಾರ-ವಹಿವಾಟಿಗೆ ದೊಡ್ಡ ಶಕ್ತಿಯನ್ನು ನೀಡಿದ ಯೋಜನೆಯಾಗಿದೆ. ಇದರೊಂದಿಗೆ, ರಾಜಧಾನಿ ಬೆಂಗಳೂರಿನ ಸಂಚಾರ ದಟ್ಟಣೆಯನ್ನು ಸಂಪೂರ್ಣವಾಗಿ ನಿಯಂತ್ರಿಸಲು ಮತ್ತು ಬೈಪಾಸ್ ರಸ್ತೆಗಳ ಜಾಲವನ್ನು ವೃದ್ಧಿಸಲು ಬೆಂಗಳೂರು ಸ್ಯಾಟಲೈಟ್ ಟೌನ್ ರಿಂಗ್ ರೋಡ್ (STRR) ಯೋಜನೆಗೆ ತೀವ್ರ ವೇಗ ನೀಡಲಾಯಿತು. ಹಳ್ಳಿಗಳ ಮಾರುಕಟ್ಟೆಗಳು ಹಾಗೂ ಗ್ರಾಮೀಣ ಭಾಗದ ಕೃಷಿ ಉತ್ಪನ್ನಗಳು ಯಾವುದೇ ಅಡೆತಡೆಯಿಲ್ಲದೆ ನಗರ ಪ್ರದೇಶಗಳಿಗೆ ಸುಲಭವಾಗಿ ಸಂಪರ್ಕ ಹೊಂದುವಂತೆ ಮಾಡಲು ಕಟ್ಟುನಿಟ್ಟಾದ ಯೋಜನೆಯಡಿ ಸಾವಿರಾರು ಕಿಲೋಮೀಟರ್ ಗ್ರಾಮೀಣ ಮತ್ತು ರಾಜ್ಯ ಹೆದ್ದಾರಿಗಳನ್ನು ಅತ್ಯಾಧುನಿಕ ಮಟ್ಟಕ್ಕೆ ಮೇಲ್ದರ್ಜೆಗೇರಿಸಿತ್ತು.

ಆದರೆ, 2023ರಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ತಕ್ಷಣ ಇಡೀ ರಾಜ್ಯದ ಪ್ರಗತಿಯ ಚಕ್ರಕ್ಕೆ ಬ್ರೇಕ್ ಬಿತ್ತು. ಈ ಆಡಳಿತವು ಕೇವಲ ರಾಜಕೀಯ ಕಾರಣಗಳಿಗಾಗಿ, ಹಿಂದಿನ ಸರಕಾರವು ನಿಯಮಾನುಸಾರ ಮಂಜೂರು ಮಾಡಿದ್ದ ಬೃಹತ್ ಮೊತ್ತದ ಅಭಿವೃದ್ಧಿ ಯೋಜನೆಗಳಿಗೆ ತಕ್ಷಣವೇ ಅನ್ವಯವಾಗುವಂತೆ ಒಟ್ಟಾರೆ ಕೆಲಸ ನಿಲ್ಲಿಸುವ ಮಾರಕ 'ಸ್ಟಾಪ್ ವರ್ಕ್' ಆದೇಶವನ್ನು ಹೊರಡಿಸಿತು. ಆದರೆ ಮುಂದೆ ಆ ಯೋಜನೆಗಳಿಗೆ ಏನಾಯಿತು ಎನ್ನುವುದು ಗೊತ್ತಾಗಲೇ ಇಲ್ಲ. ಸುಮ್ಮನೇ ವಿಸ್ತೃತ ತನಿಖೆಯ ನೆಪದಲ್ಲಿ ಅಭಿವೃದ್ಧಿಯನ್ನು ನಿಲ್ಲಿಸಿದೆ ಅಷ್ಟೇ.

ಪ್ರತಿಯೊಂದು ಮಂಜೂರಾದ ರಸ್ತೆ, ರೈಲ್ವೆ ಮತ್ತು ನೀರಾವರಿ ಯೋಜನೆಗಳ ಹಿಂದೆ ಯಾವುದೋ ದೊಡ್ಡ ಹಗರಣ ಅಡಗಿದೆ ಎಂಬಂತೆ ಬಿಂಬಿಸಿ, ತನಿಖೆಯ ಮಹಾ ಬೂಟಾಟಿಕೆಯನ್ನು ಆರಂಭಿಸಲಾಯಿತು. ವಿಸ್ತೃತ ತನಿಖೆಯ ಈ ನೆಪದಲ್ಲಿ ಕಳೆದ ಮೂರು ವರ್ಷಗಳಿಂದ ಇಡೀ ರಾಜ್ಯದ ಕಣ್ಣೆದುರೇ ಮೂಲಸೌಕರ್ಯದ ಚಕ್ರಗಳನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆ. ತನಿಖೆಯ ಫೈಲುಗಳು ಧೂಳು ತಿನ್ನುತ್ತಾ ಬಿದ್ದಿವೆ. ಹಳ್ಳಿ ಮತ್ತು ನಗರಗಳಲ್ಲಿ ಅರ್ಧಕ್ಕೇ ನಿಂತುಹೋದ ರಸ್ತೆಗಳು ಹಾಗೂ ತುಕ್ಕು ಹಿಡಿಯುತ್ತಿರುವ ಕಬ್ಬಿಣದ ಕಂಬಗಳು ಮಾತ್ರ ಸರಕಾರದ ಈ ವಿಚಾರಣಾ ರಾಜಕಾರಣಕ್ಕೆ ಮೂಕಸಾಕ್ಷಿಯಾಗಿ ನಿಂತಿವೆ. ಕೇವಲ ತನಿಖೆಯ ಹೆಸರಿನಲ್ಲಿ ಅಭಿವೃದ್ಧಿಯ ಹಾದಿಗೆ ಕಲ್ಲು ಹಾಕುತ್ತಿರುವ ಈ ಆಡಳಿತ ವೈಖರಿಯು ರಾಜ್ಯದ ಭವಿಷ್ಯವನ್ನು ಕತ್ತಲೆಗೆ ನೂಕುತ್ತಿರುವಂತೆ ಭಾಸವಾಗುತ್ತಿದೆ.

ದೇಶದ ಅತ್ಯುನ್ನತ ಸಾಂವಿಧಾನಿಕ ಸಂಸ್ಥೆಯಾದ ಸಿಎಜಿ ತನ್ನ ವರದಿಯಲ್ಲಿ ಬಹಿರಂಗಪಡಿಸಿರುವ ಪ್ರಕಾರ, ಈ ಸರಕಾರವು ಅವೈಜ್ಞಾನಿಕ ಗ್ಯಾರಂಟಿ ವೆಚ್ಚಗಳನ್ನು ಸರಿದೂಗಿಸಲು ಮೂಲಸೌಕರ್ಯಗಳ ಮೇಲಿನ ಬಂಡವಾಳ ವೆಚ್ಚವನ್ನು ಒಂದೇ ವರ್ಷದಲ್ಲಿ ₹5,229 ಕೋಟಿ ಕಡಿತಗೊಳಿಸಿದೆ. ಸರಕಾರದ ಈ ಆರ್ಥಿಕ ದಿವಾಳಿತನದಿಂದಾಗಿ ಗುತ್ತಿಗೆದಾರರಿಗೆ ಕೊಡಬೇಕಾದ ಸುಮಾರು ₹37,370 ಕೋಟಿಯಷ್ಟು ಬೃಹತ್ ಬಾಕಿ ಹಣವನ್ನು ಸರಕಾರ ತಡೆಹಿಡಿದಿದೆ. ಸರಕಾರದ ಕೈಯಲ್ಲಿ ಹಣವಿಲ್ಲದ ಕಾರಣ ಇಂದು ನಗರದ ಪ್ರಮುಖ ರಸ್ತೆಗಳು, ರಾಜ್ಯ ಹೆದ್ದಾರಿಗಳು ಮತ್ತು ಹಳ್ಳಿಗಳ ಒಳಗಿನ ರಸ್ತೆ ಕಾಮಗಾರಿಗಳು ಸಂಪೂರ್ಣವಾಗಿ ನಿಂತುಹೋಗಿವೆ. ಇದರ ಭೀಕರ ಫಲಿತಾಂಶ ಏನೆಂದರೆ, ರಾಜ್ಯದಲ್ಲಿ ಅರ್ಧಕ್ಕೆ ನಿಂತುಹೋದ ಯೋಜನೆಗಳ ಸಂಖ್ಯೆಯು ಬರೋಬ್ಬರಿ 68% ರಷ್ಟು ಭಾರಿ ಏರಿಕೆ ಕಂಡಿದೆ. ಇದೇ ರೀತಿ ಮುಂದುವರೆದರೆ ನೋಡನೋಡುತ್ತಿದ್ದಂತೆ ಕರ್ನಾಟಕವು ಹಿಂದುಳಿದ ರಾಜ್ಯಗಳ ಪಟ್ಟಿಗೆ ಸೇರುವುದರಲ್ಲಿ ಸಂಶಯವಿಲ್ಲ.

### ರೈಲ್ವೆ ಜಾಲ: ಕೈಕೊಟ್ಟ ರಾಜ್ಯ ಸರಕಾರ

ಕರ್ನಾಟಕದಲ್ಲಿ ರೈಲ್ವೆ ಲೈನ್‌ಗಳ ವಿಸ್ತರಣೆ ಮತ್ತು ಹೊಸ ಮಾರ್ಗಗಳ ನಿರ್ಮಾಣವು ಕೇವಲ ಕೇಂದ್ರದ ಮೇಲಷ್ಟೇ ನಿಂತಿರುವುದಿಲ್ಲ; ಇದು ಕೇಂದ್ರ ರೈಲ್ವೆ ಇಲಾಖೆ ಮತ್ತು ರಾಜ್ಯ ಸರಕಾರದ ಜಂಟಿ ಹಣಕಾಸು ನೆರವು ಹಾಗೂ ರಾಜ್ಯ ಸರಕಾರವು ಭೂಮಿಯನ್ನು ಸ್ವಾಧೀನಪಡಿಸಿಕೊಂಡು ರೈಲ್ವೆಗೆ ಹಸ್ತಾಂತರಿಸುವ ಒಪ್ಪಂದದ ಮೇಲೆ ಸಂಪೂರ್ಣವಾಗಿ ನಿಂತಿರುತ್ತದೆ. ಹಿಂದಿನ ಸರಕಾರವು ರಾಜ್ಯದ ಹಿತದೃಷ್ಟಿಯಿಂದ ಈ ಎಲ್ಲಾ ಸಾಂಸ್ಥಿಕ ಬದ್ಧತೆಗಳನ್ನು ಚಾಚೂ ತಪ್ಪದೆ ಅತ್ಯಂತ ಕಟ್ಟುನಿಟ್ಟಾಗಿ ಪಾಲಿಸಿಕೊಂಡು ಬಂದಿತ್ತು. ಬೆಂಗಳೂರಿನ ಸಂಚಾರ ದಟ್ಟಣೆಗೆ ಬಹುದೊಡ್ಡ ಪರಿಹಾರ ನೀಡಬಲ್ಲ ಕೋಟ್ಯಂತರ ರೂಪಾಯಿ ವೆಚ್ಚದ ಬೆಂಗಳೂರು ಉಪನಗರ ರೈಲು ಯೋಜನೆಗೆ ದಶಕಗಳಿಂದ ಇದ್ದ ಎಲ್ಲಾ ತಾಂತ್ರಿಕ ಮತ್ತು ಆಡಳಿತಾತ್ಮಕ ಅಡೆತಡೆಗಳನ್ನು ನಿವಾರಿಸಿ ಮುಂದಿನ ಹಂತದ ಕಾಮಗಾರಿಗಳನ್ನು ಆರಂಭಿಸಿತ್ತು.

ಆದರೆ ಅಕ್ಟೋಬರ್ 2026ಕ್ಕೆ ಮುಗಿಯಬೇಕಿದ್ದ ಈ ಬೃಹತ್ ಯೋಜನೆಯ ಗಡುವನ್ನು ಈಗ ನೇರವಾಗಿ ಮಾರ್ಚ್ 2030ರವರೆಗೆ ಮುಂದೂಡಲಾಗಿದೆ. ರಾಜ್ಯ ಸರಕಾರವು ಒಪ್ಪಂದದ ಪ್ರಕಾರ ಎನ್ಕಂಬರೆನ್ಸ್ ಮುಕ್ತ ಭೂಮಿಯನ್ನು ಮತ್ತು ಸೂಕ್ತ ಅನುಮತಿಗಳನ್ನು ನೀಡದ ಕಾರಣ ಬೇಸತ್ತ ಕಂಟ್ರಾಕ್ಟ್ ಪಡೆದಿದ್ದ ಎಲ್‌ಟಿ ಕಂಪನಿಯು ತನ್ನ ಅಧಿಕೃತ ಕರಾರಿನಿಂದಲೇ ಸಂಪೂರ್ಣವಾಗಿ ಹೊರನಡೆದಿದೆ ಮತ್ತು ಸರಕಾರದ ವಿಳಂಬ ನೀತಿಯ ವಿರುದ್ಧ ₹505 ಕೋಟಿ ಭಾರಿ ಪರಿಹಾರಕ್ಕೆ ನ್ಯಾಯಾಲಯದಲ್ಲಿ ಬೇಡಿಕೆ ಇಟ್ಟಿದೆ. ಇದರಿಂದಾಗಿ ಈ ಸರಕಾರ ಈಗ ಅದೇ ಕಾಮಗಾರಿಗೆ ಮೂರನೇ ಬಾರಿ ಮರು-ಟೆಂಡರ್ ಕರೆಯುವ ದುಃಸ್ಥಿತಿಗೆ ಬಂದು ತಲುಪಿದೆ.

ಕೇವಲ ಬೆಂಗಳೂರಷ್ಟೇ ಅಲ್ಲದೆ, ಪ್ರಾದೇಶಿಕ ಸಮತೋಲನ ಕಾಪಾಡಲು ಕಲ್ಯಾಣ ಕರ್ನಾಟಕ ಮತ್ತು ಕಿತ್ತೂರು ಕರ್ನಾಟಕದಂತಹ ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳನ್ನು ದೇಶದ ಪ್ರಮುಖ ನಗರಗಳೊಂದಿಗೆ ಜೋಡಿಸುವ ಮಹತ್ವಾಕಾಂಕ್ಷೆಯ ಪ್ರಮುಖ ರೈಲ್ವೆ ಯೋಜನೆಗಳಿಗೆ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದ ಮೇಲೆ ತಡೆ ಉಂಟಾಗಿದೆ. ರೈಲ್ವೆ ಯೋಜನೆಗಳಿಗೆ ರಾಜ್ಯ ಸರಕಾರದ ಪಾಲಿನಿಂದ ಕೊಡಬೇಕಾದ ನಿಗದಿತ ಹಣವನ್ನು ನೀಡಲಾಗದೆ ದಿನದಿಂದ ದಿನಕ್ಕೆ ವಿಳಂಬ ಮಾಡುತ್ತಿದೆ. ಈ ತೀವ್ರ ಬಜೆಟ್ ಕಡಿತದಿಂದಾಗಿ ರೈತರಿಗೆ ಮತ್ತು ಭೂಮಾಲೀಕರಿಗೆ ನಿಯಮಾನುಸಾರ ನೀಡಬೇಕಾದ ಜಮೀನಿನ ಪರಿಹಾರದ ಹಣವನ್ನು ಬಿಡುಗಡೆ ಮಾಡಲು ಕಂದಾಯ ಇಲಾಖೆ ವಿಳಂಬ ಮಾಡುತ್ತಿದೆ; ಇದರ ಫಲವಾಗಿ ಇಡೀ ರಾಜ್ಯದಲ್ಲಿ ಭೂಸ್ವಾಧೀನ ಪ್ರಕ್ರಿಯೆಗೆ ದೊಡ್ಡ ಅಡಚಣೆ ಉಂಟಾಗಿದ್ದು, ಹೊಸ ರೈಲ್ವೆ ಮಾರ್ಗಗಳ ಕಾಮಗಾರಿಗಳು ಸಂಪೂರ್ಣವಾಗಿ ಸ್ಥಗಿತಗೊಂಡಿವೆ.

ಮಧ್ಯ ಮತ್ತು ಉತ್ತರ ಕರ್ನಾಟಕವನ್ನು ಜೋಡಿಸುವ ಮಹತ್ವಾಕಾಂಕ್ಷೆಯ 96 ಕಿಲೋಮೀಟರ್ ಉದ್ದದ ಶಿವಮೊಗ್ಗ-ಶಿಕಾರಿಪುರ- ರಾಣೆಬೆನ್ನೂರು ರೈಲ್ವೆ ಲೈನ್ ಯೋಜನೆಗೆ ರಾಜ್ಯ ಸರಕಾರವು ರೈತರಿಗೆ ಪರಿಹಾರದ ಹಣ ನೀಡದ ಕಾರಣ ಭೂಸ್ವಾಧೀನ ಪ್ರಕ್ರಿಯೆ ತೀವ್ರ ತಡೆ ಅನುಭವಿಸುತ್ತಿದೆ. ಈ ಯೋಜನೆಗೆ ಬೇಕಾಗಿರುವ ಇನ್ನು 50%ಕ್ಕಿಂತ ಹೆಚ್ಚು ಎಕರೆ ಭೂಮಿಯನ್ನು ಸರಕಾರ ಇನ್ನೂ ಸ್ವಾಧೀನಪಡಿಸಿಕೊಂಡಿಲ್ಲ. ಇದೇ ರೀತಿ, ಉತ್ತರ ಕರ್ನಾಟಕದ ಪ್ರಮುಖ ಕೈಗಾರಿಕಾ ಹಬ್‌ಗಳನ್ನು ಬೆಸೆಯುವ ಬೆಳಗಾವಿ-ಕಿತ್ತೂರು-ಧಾರವಾಡ ರೈಲ್ವೆ ಮಾರ್ಗದ ಸ್ಥಿತಿಯಂತೂ ಕಣ್ಣು ತೆರೆಯಲು ಹಾತೊರೆಯುತ್ತಿದೆ. ಈ ರೈಲ್ವೆ ಲೈನ್ನಾಗಿ ಕೇಂದ್ರ ಸರಕಾರವು ತನ್ನ ಪಾಲಿನ ಸಾವಿರಾರು ಕೋಟಿ ಹಣ ನೀಡಲು ಸಿದ್ಧವಿದ್ದರೂ, ರಾಜ್ಯ ಸರಕಾರವು ಭೂಮಿಯನ್ನೂ ಹಸ್ತಾಂತರಿಸಲು ವಿಳಂಬ ನೀತಿ ಅನಿಸರಿಸುತ್ತಿದೆ.

ಇವಿಷ್ಟೇ ಅಲ್ಲದೆ ಬೇರೆ ಯಾವುದೇ ರಾಜ್ಯ ಸರಕಾರದ ಅಧೀನದ ಕಾರ್ಯವಾಗಲಿ, ಎಲ್ಲವು ಅಂದುಕೊಂಡ ಸಮಯಕ್ಕೆ ಸರಿಯಾಗಿ ಮುಗಿಯುತ್ತಿಲ್ಲ.

ಯಾವುದೇ ಯೋಜನೆಯಾಗಿರಲಿ ಅದು ಸಲೀಸಾಗಿ ಮುಗಿಯುವುದು ರಾಜ್ಯ ಜನತೆಗೆ ಕನಸಾಗಿದೆ ಅಷ್ಟೇ. ಜನರು ದೂರು ನೀಡಿದರೂ ಕೇಳುವವರು ಇಲ್ಲದಾಗಿದೆ. ಕೊನೆಗೆ ದಂಗೆ ಏಳುವ ಪರಿಸ್ಥಿತಿ ಬಂದಿದೆ ಎಂದಾಗ ಮಾತ್ರ, ರಾಜ್ಯ ಸರಕಾರವು ಮುಂದಿನ ಕಾಮಗಾರಿ ಶುರು ಮಾಡುತ್ತಿರುವಂತೆ ಭಾಸವಾಗುತ್ತಿದೆ. ಇದೆಲ್ಲವನ್ನು ನೋಡಿದ ಮೇಲೆ ರಾಜ್ಯ ಖಜಾನೆಯಲ್ಲಿ ಮೂಲಭೂತ ಅಭಿವೃದ್ದಿಗೆ ಹಣವಿದೆಯೋ ಎಂಬ ಪ್ರಶ್ನೆ ಮೂಡುವಂತಾಗಿದೆ. ಈ ರೀತಿ ಮುಂದೂಡುವಿಕೆಯಿಂದ ಯೋಜನೆಯ ಬಜೆಟ್ ದಿನದಿಂದ ದಿನಕ್ಕೆ ಹೆಚ್ಚಾಗಿ ಕೊನೆಗೆ ತೆರಿಗೆ ಕಟ್ಟುವವರ ಮೇಲೆಯೇ ಭಾರವಾಗುತ್ತದೆ.

### ಜಿಲ್ಲಾವಾರು ಯೋಜನೆಗಳ ವಿಳಂಬದ ಕಟು ವಾಸ್ತವ

ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ನಡೆಯುತ್ತಿರುವ ಪ್ರಮುಖ ಮೂಲಸೌಕರ್ಯ ಕಾಮಗಾರಿಗಳ ವಿಳಂಬದ ವಾಸ್ತವ ಸ್ಥಿತಿಯನ್ನು ನೋಡಿದರೆ ಈ ಸರಕಾರದ ಆಡಳಿತ ವೈಫಲ್ಯ ಎದ್ದು ಕಾಣುತ್ತದೆ. ಉತ್ತರ ಕರ್ನಾಟಕದ ಪ್ರಮುಖ ವಾಣಿಜ್ಯ ಕೇಂದ್ರವಾದ ಹುಬ್ಬಳ್ಳಿಯ ಚೆನ್ನಮ್ಮ ವೃತ್ತ ಮತ್ತು ಕೆಸಿ ವೃತ್ತದ ಬಳಿ ನಿರ್ಮಾಣವಾಗುತ್ತಿರುವ ಐತಿಹಾಸಿಕ ಹುಬ್ಬಳ್ಳಿ ಫ್ಲೈ ಓವರ್ ಯೋಜನೆ ಇಂದಿಗೂ ಮುಗಿಯದೆ ನಿರಂತರವಾಗಿ ಹಾಗೆ ಉಳಿದದೆ. ಅಲ್ಲಿ ಇರುವ ಪೊಲೀಸ್ ಕಚೇರಿಯನ್ನು ಬದಲಿಸುವ ಬದಲು ಸರಕಾರ ಸುಮ್ಮನೇ ಕುಳಿತಿದ್ದು ಜನರ ಆಕ್ರೋಶದ ನಂತರ ಕ್ರಮ ಕೈಗೊಂಡಿದೆ. ಇದರಿಂದಾಗಿ ವರ್ಷಗಟ್ಟಲೇ ಕಾಮಗಾರಿ ನಿಂತಿದ್ದು ಪ್ರತಿದಿನ ಲಕ್ಷಾಂತರ ಸಾರ್ವಜನಿಕರು ಮತ್ತು ವಾಹನ ಸವಾರರು ಭಾರಿ ಧೂಳು, ಮಾಲಿನ್ಯ ಹಾಗೂ ಗಂಟೆಗಟ್ಟಲೆ ಉಂಟಾಗುವ ಟ್ರಾಫಿಕ್ ಜಾಮ್‌ನಿಂದ ರಸ್ತೆಯಲ್ಲೇ ನರಕಯಾತನೆ ಅನುಭವಿಸುತ್ತಿದ್ದಾರೆ.

ಇದು ಒಂದು ಉದಾಹರಣೆ ಅಷ್ಟೇ. ಈ ಸರಕಾರದಿಂದ ಪ್ರತಿ ಜಿಲ್ಲೆಯಲ್ಲೂ ಕಾಮಗಾರಿಗಳು ಹಾಗೆಯೇ ನಿಂತಿವೆ. ಒಂದೋ ಯೋಜನೆಗಳು ಶುರುವಾಗುತ್ತಿಲ್ಲ. ಒಂದು ವೇಳೆ ಚಾಲನೆ ಸಿಕ್ಕರೂ ರಾಜ್ಯ ಸರಕಾರ ದುಡ್ಡು ಹೊಂದಿಸುವಷ್ಟರಲ್ಲಿಯೇ ಕಾಮಗಾರಿ ಮೊತ್ತ ಮೂರು ಪಟ್ಟು ಏರುತ್ತಿದೆ.

ಸರಕಾರದ ಈ ಆರ್ಥಿಕ ದಿವಾಳಿತನ ಮತ್ತು ನಯಾಪೈಸೆ ಅನುದಾನವಿಲ್ಲದ ದುಸ್ಥಿತಿಯು ಕೇವಲ ಸಾರ್ವಜನಿಕರನ್ನು ಮಾತ್ರವಲ್ಲ, ಸ್ವತಃ ಆಡಳಿತ ಪಕ್ಷದ ಶಾಸಕರನ್ನೇ ಬೀದಿಗೆ ತಂದು ನಿಲ್ಲಿಸಿದೆ. ಕೇವಲ ಅವ್ಯವಸ್ಥಿತ ಉಚಿತ ಕೊಡುಗೆಗಳಿಗೆ ಹಣ ಹೊಂದಿಸಲು ಹೋಗಿ ಕ್ಷೇತ್ರಗಳ ಮೂಲಭೂತ ಅಭಿವೃದ್ಧಿ ಕಾಮಗಾರಿಗಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸುತ್ತಿರುವುದರ ವಿರುದ್ಧ ಸ್ವತಃ ಕಾಂಗ್ರೆಸ್ ಶಾಸಕರೇ ಈಗ ಬಹಿರಂಗವಾಗಿ ಬಂಡಾಯವೆದ್ದಿದ್ದಾರೆ. ತಮ್ಮ ಕ್ಷೇತ್ರಗಳಲ್ಲಿ ಸಣ್ಣ ರಸ್ತೆ ದುರಸ್ತಿ ಅಥವಾ ಗುಂಡಿ ಮುಚ್ಚುವ ಕೆಲಸಕ್ಕೂ ನಯಾಪೈಸೆ ಹಣವಿಲ್ಲದ ಕಾರಣ ತಾವೂ ಜನರಿಗೆ ಮುಖ ತೋರಿಸಲು ಸಾಧ್ಯವಾಗುತ್ತಿಲ್ಲ ಎಂದು ಹಲವು ಕಾಂಗ್ರೆಸ್ ಶಾಸಕರು ತಮ್ಮದೇ ಸರಕಾರದ ವಿರುದ್ಧವೇ ಅಸಮಾಧಾನ ಹೊರಹಾಕಿದ್ದಾರೆ; ಅಷ್ಟೇ ಅಲ್ಲದೆ, ಅಭಿವೃದ್ಧಿ ಕಾರ್ಯಗಳ ಈ ಆಮೆಗತಿಯ ನಡಿಗೆಯಿಂದ ಬೇಸತ್ತು ಹಲವರು ತಮ್ಮ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುವ ಕಠಿಣ ನಿರ್ಧಾರಕ್ಕೂ ಮುಂದಾಗುತ್ತಿರುವುದು ಈ ಆಡಳಿತದ ಸಂಪೂರ್ಣ ವೈಫಲ್ಯಕ್ಕೆ ಹಿಡಿದ ಕನ್ನಡಿಯಾಗಿದೆ.

ಈ ಮೇಲಿನ ಪ್ರತಿಯೊಂದು ಉದಾಹರಣೆಗಳು ಮತ್ತು ಅಧಿಕೃತ ದತ್ತಾಂಶಗಳು ಒಂದು ಕಟು ಸತ್ಯವನ್ನು ಸಾರುತ್ತಿವೆ; ಈ ಕಾಂಗ್ರೆಸ್ ಸರಕಾರವು ಕೇವಲ ತಾತ್ಕಾಲಿಕ ರಾಜಕೀಯ ಅಧಿಕಾರವನ್ನು ಹಿಡಿಯಲು ಮತ್ತು ತಕ್ಷಣದ ಚುನಾವಣಾ ಲಾಭಕ್ಕಾಗಿ ನಮ್ಮ ಇಡೀ ಕರ್ನಾಟಕ ರಾಜ್ಯದ ದೀರ್ಘಕಾಲದ ಭವಿಷ್ಯವನ್ನೇ ಆರ್ಥಿಕವಾಗಿ ಬಲಿಗೊಟ್ಟಿದೆ. ಹ್ಯಾಂಡ್‌ಬ್ರೇಕ್ ಹಾಕಿದ ವೇಗದ ಗಾಡಿಯಂತೆ ಇಡೀ ದೇಶದಲ್ಲೇ ನಂಬರ್ ಒನ್ ಆಗಿದ್ದ ನಮ್ಮ ಕರ್ನಾಟಕದ ಒಟ್ಟಾರೆ ಅಭಿವೃದ್ಧಿಯ ಎಂಜಿನ್ ಈಗ ಸಂಪೂರ್ಣವಾಗಿ ನಿಂತುಹೋಗಿದೆ.

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 314

## ಸಮಾಚಾರ ಸಣ್ಣದಲ್ಲ

### ಕಡಲ್ಗಳ್ಳತನ ತಡೆದ ಭಾರತೀಯ ಸೇನೆ

**ದೆಹಲಿ:** ಪಶ್ಚಿಮ ಹಿಂದೂ ಮಹಾಸಾಗರ ಪ್ರದೇಶದಲ್ಲಿ ವ್ಯಾಪಾರಿ ಹಡಗಿನ ಮೇಲೆ ನಡೆಯಬಹುದಾಗಿದ್ದ ಸಮುದ್ರ ದರೋಡೆ ಯತ್ನವನ್ನು ಭಾರತೀಯ ನೌಕಾಪಡೆ ವಿಫಲಗೊಳಿಸಿದೆ. ಭಾರತೀಯ ಯುದ್ಧನೌಕೆ ಐಎನ್‌ಎಸ್ ಕೊಲ್ಕತ್ತಾಗೆ, ವ್ಯಾಪಾರ ಹಡಗು ಎಂವಿ ಮಶಾಲ್ಲಾ 1 ಸಮೀಪ ಅನುಮಾನಾಸ್ಪದ ದರೋಡೆ ಚಟುವಟಿಕೆಗಳ ಮಾಹಿತಿ ದೊರಕಿದ ತಕ್ಷಣ ಕಾರ್ಯಾಚರಣೆ ಕೈಗೊಳ್ಳಲಾಯಿತು. ನೌಕಾಪಡೆ ತ್ವರಿತವಾಗಿ ಸ್ಥಳಕ್ಕೆ ತೆರಳಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತೆಗೆದುಕೊಂಡು, ಹಡಗು ಮತ್ತು ಅದರ ಸಿಬ್ಬಂದಿಯನ್ನು ಸುರಕ್ಷಿತಗೊಳಿಸಿದೆ. ಈ ಕ್ರಮದಿಂದ ಸಂಭವನೀಯ ಸಮುದ್ರ ದರೋಡೆ ದಾಳಿ ತಪ್ಪಿಸಲಾಗಿದೆ ಎಂದು ವರದಿಯಾಗಿದೆ.

### ಮಾವೋವಾದಿ ನಾಯಕರು ಶರಣಾಗತಿ

**ತೆಲಂಗಾಣ:** ಹಿರಿಯ ಮಾವೋವಾದಿ, ಭೂಗತ ನಾಯಕ ಪಾಸನೂರಿ ನರಹರಿ ಅಲಿಯಾಸ್ ವಿಶ್ವನಾಥ್ ಅಲಿಯಾಸ್ ಸಲಾಯಿ ದಾ ಅವರು ತೆಲಂಗಾಣ ಡಿಜಿಪಿ ಎದುರು ಶರಣಾದರು. ಬಿಹಾರ-ಝಾರ್ಖಂಡ್ ವಿಶೇಷ ಪ್ರದೇಶ ಸಮಿತಿಯ ಕೇಂದ್ರ ಸಮಿತಿ ಸದಸ್ಯ ಹಾಗೂ ಕಾರ್ಯದರ್ಶಿಯಾಗಿದ್ದ ಅವರು, ತಮ್ಮ ಪತ್ನಿಯೊಂದಿಗೆ ಶರಣಾಗಿದ್ದಾರೆ. ಜತೆಗೆ ಹಿರಿಯ ಮಹಿಳಾ ಮಾವೋವಾದಿ ನಾಯಕಿ ಮೇಧಾ ಬರ್ಮಮ್ಮ ಅಲಿಯಾಸ್ ಲತಾ ಅಲಿಯಾಸ್ ಪೂಜಾ ಅಲಿಯಾಸ್ ಜ್ಯೋತಿ ಕೂಡ ಶರಣಾಗಿದ್ದಾರೆ. ಪೊಲೀಸರು ಈ ಶರಣಾಗತಿಯನ್ನು ಮಾವೋವಾದಿ ಸಂಘಟನೆಗೆ ದೊಡ್ಡ ಹಿನ್ನಡೆ ಎಂದು ವಿವರಿಸಿದ್ದು, ಇದರಿಂದ ಸಂಘಟನೆ ಕುಸಿತದ ಅಂಚಿನಲ್ಲಿದೆ ಎಂದು ತಿಳಿಸಿದ್ದಾರೆ.

### ಚಂಚಲಗುಡಾ ಕೈದಿ ಆಸ್ಪತ್ರೆಯಿಂದ ಪರಾರಿ

**ಹೈದರಾಬಾದ್:** ಹೈದರಾಬಾದ್‌ನ ಚಂಚಲಗುಡಾ ಜೈಲಿನಲ್ಲಿ ಬಂಧಿತನಾಗಿದ್ದ ಆರೋಪಿಯು ಐದು ಮೊಳೆಗಳನ್ನು ನುಂಗಿದ್ದರಿಂದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆರೋಪಿಯು ಶೌಚಾಲಯದ ಕಿಟಕಿಯಿಂದ ಹೊರಬಂದು, ಆಸ್ಪತ್ರೆಯ ಕಾಂಪೌಂಡ್ ಗೋಡೆ ಹಾರಿ ಪರಾರಿಯಾಗಿದ್ದಾನೆ. ಸುಮಾರು 25 ವರ್ಷದ ಸಯ್ಯದ್ ಅಮೀರ್ ಹುಸೈನ್ ಎಂಬ ಆರೋಪಿಯನ್ನು ತಿರುಮಲಗಿರಿ ಪೊಲೀಸರು ಮೊಬೈಲ್ ಕಳ್ಳತನ ಪ್ರಕರಣದಲ್ಲಿ ಬಂಧಿಸಿದ್ದರು. ನ್ಯಾಯಾಲಯವು ಅವನಿಗೆ 14 ದಿನಗಳ ನ್ಯಾಯಾಂಗ ಬಂಧನ ವಿಧಿಸಿ ಮೇ19ರಂದು ಚಂಚಲಗುಡಾ ಜೈಲಿಗೆ ಕಳುಹಿಸಿತ್ತು. ಬಂಧನಕ್ಕೊಳಗಾದ ಕೇವಲ ಐದು ದಿನಗಳಲ್ಲೇ, ಭಾನುವಾರ ಆತ ಜೈಲಿನಲ್ಲೇ ಐದು ಮೊಳೆಗಳನ್ನು ನುಂಗಿದ್ದಾನೆ. ಆಸ್ಪತ್ರೆಗೆ ಸಾಗಿಸಲು ಇದು ಪೂರ್ವನಿಯೋಜಿತ ಯೋಜನೆಯಾಗಿರಬಹುದು ಎಂದು ಪೊಲೀಸರು ಶಂಕಿಸಿ, ಜೈಲು ಅಧಿಕಾರಿಗಳು ಅವನನ್ನು ಚಿಕಿತ್ಸೆ ಹಾಗೂ ಮೇಲ್ವಿಚಾರಣೆಗೆ ಗಾಂಧಿ ಆಸ್ಪತ್ರೆಗೆ ದಾಖಲಿಸಿದ್ದರು. ದಾಖಲಿಸಿದ ನಂತರ ಈ ಘಟನೆ ನಡೆದಿದೆ.

### ಸಂಸದರಿಗಾಗಿ ರಾಷ್ಟ್ರಮಟ್ಟದ ಆರೋಗ್ಯ ಕಾರ್ಯಾಗಾರ

**ದೆಹಲಿ:** ದಿ ನೇಷನ್ ಫಸ್ಟ್ ಪಾಲಿಸಿ ರೀಸರ್ಚ್ ಆ್ಯಂಡ್ ಚೇಂಜ್ ಫೌಂಡೇಶನ್ ವತಿಯಿಂದ ಸಂಸದರಿಗಾಗಿ ರಾಷ್ಟ್ರಮಟ್ಟದ ಕಾರ್ಯಾಗಾರವನ್ನು ದೆಹಲಿಯ ಇಂಡಿಯಾ ಹ್ಯಾಬಿಟಾಟ್ ಸೆಂಟರ್‌ನಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಾಗಾರದಲ್ಲಿ ಆರೋಗ್ಯ, ಶೈಕ್ಷಣಿಕ ಸುಧಾರಣೆ ಹಾಗೂ ಶಾಸನಬದ್ಧ ಸಂವಹನ ವಿಚಾರಗಳ ಬಗ್ಗೆ ಚರ್ಚಿಸಲಾಯಿತು. ಆರೋಗ್ಯ ಕುರಿತಾದ ವಿಚಾರ ಸಂಕಿರಣವನ್ನು ಸಂಸದ ಹಾಗೂ ಹೃದ್ರೋಗ ತಜ್ಞರಾದ ಡಾ. ಸಿ.ಎನ್. ಮಂಜುನಾಥ್ ನಡೆಸಿಕೊಟ್ಟರು.

### ಪುತ್ರರ ಹತ್ಯೆ ಮಾಡಿದ ಮಹಿಳೆಗೆ ಜೀವಾವಧಿ

**ಆಂಧ್ರಪ್ರದೇಶ:** ಚಿತ್ತೂರು ಜಿಲ್ಲಾ ನ್ಯಾಯಾಲಯವು 2017ರಲ್ಲಿ ತನ್ನ ಇಬ್ಬರು ಅಪ್ರಾಪ್ತ ಪುತ್ರರನ್ನು ಹತ್ಯೆ ಮಾಡಿದ ಮಹಿಳೆಗೆ ಜೀವಾವಧಿ ಶಿಕ್ಷೆ ವಿಧಿಸಿದೆ. ವಿವಾಹೇತರ ಸಂಬಂಧವನ್ನು ಮುಂದುವರಿಸಲು ಈ ಕೃತ್ಯ ಎಸಗಿದ್ದಾಳೆ ಎಂದು ಪ್ರಕರಣದಲ್ಲಿ ತಿಳಿದುಬಂದಿದೆ. ಹೆಚ್ಚುವರಿ ಜಿಲ್ಲಾ ನ್ಯಾಯಾಲಯವು ಆರೋಪಿಯನ್ನು ದೋಷಿ ಎಂದು ತೀರ್ಪು ನೀಡಿ, ಜೀವಾವಧಿ ಶಿಕ್ಷೆಯೊಂದಿಗೆ ₹1,000 ದಂಡವನ್ನೂ ವಿಧಿಸಿದೆ. 2017ರ ಸೆಪ್ಟೆಂಬರ್ 3ರಂದು ಆರು ಮತ್ತು ಮೂರು ವರ್ಷದ ಪುತ್ರರನ್ನು ಹತ್ಯೆ ಮಾಡಿದ ಆರೋಪ ಸಾಬೀತಾಗಿದೆ ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ.

{ಜಿ. ಪರಮೇಶ್ವರ } ಗೃಹ ಸಚಿವ

**ರಾಜ್ಯದ ನಾಯಕತ್ವದ ವಿಚಾರದಲ್ಲಿ ಕಾಂಗ್ರೆಸ್ ಹೈಕಮಾಂಡ್ ತೆಗೆದುಕೊಳ್ಳುವ ನಿರ್ಧಾರವನ್ನು ನಾವೆಲ್ಲ ನಾಯಕರು ಪಾಲಿಸುತ್ತೇವೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಬೆಂಗಳೂರಿಗೆ ಭೇಟಿ ನೀಡಿ ಅಂತಿಮ ನಿರ್ಧಾರವನ್ನು ಪ್ರಕಟಿಸುವ ಸಾಧ್ಯತೆ ಇದೆ.**

# ಪಿಣರಾಯಿಗೆ ಇಡಿ ದಾಳಿ ಶಾಕ್

## ಕೇರಳ ಮಾಜಿ ಸಿಎಂಗೆ ಸೇರಿದ 10 ಸ್ಥಳಗಳಲ್ಲಿ ಶೋಧ, ಹಲವು ದಾಖಲೆಗಳು ವಶ
## ವಿಜಯನ್ ಪುತ್ರಿ ವೀಣಾ ಒಡೆತನದ ಬೆಂಗಳೂರು ಕಚೇರಿಯ ಮೇಲೂ ಇಡಿ ದಾಳಿ

**ತಿರುವನಂತಪುರಂ:** ಸಿಎಂಆರ್‌ಎಲ್ ಕಂಪನಿಯಿಂದ ಅಕ್ರಮ ಹಣ ವರ್ಗಾವಣೆ ಪ್ರಕರಣದ ತನಿಖೆಯನ್ನು ತೀವ್ರಗೊಳಿಸಿರುವ ಜಾರಿ ನಿರ್ದೇಶನಾಲಯ (ಇಡಿ), ಬುಧವಾರ ಕೇರಳದ ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್‌ಗೆ ಸೇರಿದ ಹಲವು ಸ್ಥಳಗಳಲ್ಲಿ ದಾಳಿ ನಡೆಸಿದೆ. ಬೆಂಗಳೂರಿನಲ್ಲಿರುವ ಪಿಣರಾಯಿ ವಿಜಯನ್ ಪುತ್ರಿ ಟಿ.ವೀಣಾ ಒಡೆತನದ ಎಕ್ಸಾಲಾಜಿಕ್ ಸೊಲ್ಯೂಷನ್ಸ್ ಹೆಸರಿನ ಐಟಿ ಕಂಪನಿ, ವೀಣಾ ನಿವಾಸ ಸೇರಿದಂತೆ ಬೆಂಗಳೂರಿನ 3 ಕಡೆ ಇಡಿ ದಾಳಿ ನಡೆಸಿದೆ. ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ ಅಡಿಯಲ್ಲಿ ತಿರುವನಂತಪುರಂನಲ್ಲಿರುವ ಪಿಣರಾಯಿ ವಿಜಯನ್ ಅವರ ಬಾಡಿಗೆ ನಿವಾಸವೂ ಸೇರಿದಂತೆ ಕೇರಳದ ಒಟ್ಟು 10 ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ಕೈಗೊಂಡಿದೆ ಎಂದು ತಿಳಿದುಬಂದಿದೆ. ಇದಕ್ಕೂ ಮುನ್ನ ಅಕ್ರಮ ಹಣ ವರ್ಗಾವಣೆ ಸಂಬಂಧ ಸರಿಯಾದ ತನಿಖೆ ನಡೆಸುವಂತೆ ಬಿಜೆಪಿ ಒತ್ತಾಯಿಸಿತ್ತು.

**ಏನಿದು ಪ್ರಕರಣ?:** ಸಿಎಂಆರ್‌ಎಲ್ ಸಂಸ್ಥೆಯಿಂದ ಪಿಣರಾಯಿ ವಿಜಯನ್ ಅವರ ಪುತ್ರಿ ಟಿ. ವೀಣಾ ಮಾಲೀಕತ್ವದ ಎಕ್ಸಾಲಾಜಿಕ್ ಸೊಲ್ಯೂಷನ್ಸ್ ಕಂಪನಿಗೆ ನೀಡಲಾಗಿದೆ ಎನ್ನಲಾದ 1.72 ಕೋಟಿ ರು.ಗೆ ಸಂಬಂಧಿಸಿದ ಪ್ರಕರಣ ಇದಾಗಿದೆ. 2018ರಿಂದ 2019ರ ಅವಧಿಯಲ್ಲಿ ಯಾವುದೇ ಸೇವೆ ಒದಗಿಸದಿದ್ದರೂ ಸಿಎಂಆರ್‌ಎಲ್ ಸಂಸ್ಥೆ ಎಕ್ಸಾಲಾಜಿಕ್ ಸೊಲ್ಯೂಷನ್ಸ್‌ಗೆ ಅಕ್ರಮವಾಗಿ 1.72 ರು. ಕೋಟಿ ಪಾವತಿಸಿದೆ ಎಂಬ ಆರೋಪ ಕೇಳಿಬಂದಿದೆ. ಟಿ.ವೀಣಾ ಒಡೆತನದ ಎಕ್ಸಾಲಾಜಿಕ್ ಕಂಪನಿಯು ಸಿಎಂಆರ್‌ಎಲ್‌ನಿಂದ ಪ್ರತಿ ತಿಂಗಳ ಪಾವತಿಯಾಗಿ ಯಾವುದೇ ಸೇವೆ ನೀಡದೇ ಕೋಟ್ಯಂತರ ರುಪಾಯಿ ಪಡೆದ ಆರೋಪಗಳು ಕೇಳಿಬಂದ ಕಾರಣ, ಕೇಂದ್ರ ಸರಕಾರ 2024ರಲ್ಲಿ ವಿಸ್ತೃತ ತನಿಖೆಗೆ ಆದೇಶ ನೀಡಿತ್ತು. ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಎಕ್ಸಾಲಾಜಿಕ್ ಕಂಪನಿ ವಿರುದ್ಧ ತನಿಖೆಗೆ ಆದೇಶಿಸಿತ್ತು. ಉನ್ನತ ಮಟ್ಟದ ಮೂವರು ಸದಸ್ಯರ ತಂಡ ತನಿಖೆಯ ಉಸ್ತುವಾರಿ ವಹಿಸಿತ್ತು.

ಸಿಎಂಆರ್‌ಎಲ್ ಮತ್ತು ಕೆಎಸ್‌ಐಡಿಸಿ ಎರಡಕ್ಕೂ ತಮ್ಮ ಪಾಲನ್ನು ಸ್ಪಷ್ಟಪಡಿಸಲು ಮೊದಲೇ ನೋಟಿಸ್ ನೀಡಲಾಗಿತ್ತು. ಮಾಸಿಕ ಪಾವತಿ ವಿವಾದದ ಆರೋಪಗಳಿಗೆ ಸಿಎಂಆರ್‌ಎಲ್ ಅಸ್ಪಷ್ಟ ಉತ್ತರ ನೀಡಿದ್ದು, ಕೆಎಸ್‌ಐಡಿಸಿ ಯಾವುದೇ ಉತ್ತರ ನೀಡಿರಲಿಲ್ಲ. ಇದಾದ ನಂತರ ಎಕ್ಸಾಲಾಜಿಕ್, ಸಿಎಂಆರ್‌ಎಲ್ ಮತ್ತು ಕೆಎಸ್‌ಐಡಿಸಿ ಕಂಪನಿಗಳ ವಹಿವಾಟಿನ ಬಗ್ಗೆ ವಿವರವಾಗಿ ತನಿಖೆಗೆ ಕ್ರಮ ಕೈಗೊಳ್ಳಲಾಗಿತ್ತು.

**ಹೈಕೋರ್ಟ್ ತೀರ್ಪಿನ ಬೆನ್ನಲ್ಲೇ ಇಡಿ ಕ್ರಮ:** ಇಡಿ ತನಿಖೆಯನ್ನು ರದ್ದುಗೊಳಿಸುವಂತೆ ಸಿಎಂಆರ್‌ಎಲ್ ಸಲ್ಲಿಸಿದ್ದ ಅರ್ಜಿಯನ್ನು ಕೇರಳ ಹೈಕೋರ್ಟ್ ಮಂಗಳವಾರ ತಿರಸ್ಕರಿಸಿತ್ತು. ನ್ಯಾಯಾಲಯದ ಈ ನಿರ್ಧಾರದಿಂದ ತನಿಖೆಗೆ ಮತ್ತಷ್ಟು ವೇಗ ಸಿಕ್ಕಿದ್ದು, ಇಡಿ ವ್ಯಾಪಕ ಶೋಧ ಕಾರ್ಯಾಚರಣೆ ನಡೆಸಿದೆ.

### ಸಿಪಿಎಂ ಕಾರ್ಯಕರ್ತರಿಂದ ಇಡಿ ಅಧಿಕಾರಿಗಳ ಕಾರಿನ ಮೇಲೆ ದಾಳಿ

**ಪ.ಬಂಗಾಳದಲ್ಲಿ ಇಡಿ ಅಧಿಕಾರಿಗಳು ಶೋಧ ಕೈಗೊಂಡಿದ್ದಾಗ ಮಾಜಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಆದೇಶದಂತೆ ಅಧಿಕಾರಿಗಳನ್ನೇ ಬಂಧಿಸಲಾಗಿತ್ತು. ಟಿಎಂಸಿ ಕಾರ್ಯಕರ್ತರು ಅಧಿಕಾರಿಗಳ ಮೇಲೆ ದಾಳಿ ನಡೆಸಿದ್ದರು. ಅಂತಹದ್ದೇ ಘಟನೆ ಬುಧವಾರ ತಿರುವನಂತಪುರಂನಲ್ಲಿ ನಡೆದಿದೆ. ಇಡಿ ದಾಳಿಯಿಂದ ಸಿಟ್ಟಾದ ಪಿಣರಾಯಿ ವಿಜಯನ್ ನೇತೃತ್ವದ ಸಿಪಿಎಂ ಪಕ್ಷದ ಕಾರ್ಯಕರ್ತರು, ಇಡಿ ಕಾರುಗಳ ಮೇಲೆ ದಾಳಿ ನಡೆಸಿ ಗಾಜನ್ನು ಪುಡಿಪುಡಿ ಮಾಡಿದರು, ವಿಂಡ್‌ಶೀಲ್ಡ್‌ಗೆ ಹಾನಿ ಮಾಡಿದರು.**

**ಪಿಣರಾಯಿ ನಿವಾಸದಲ್ಲಿ ಇಡಿ ಶೋಧ ನಡೆಸಿ ಹೊರಹೊರಟಾಗ ಈ ಬೆಳವಣಿಗೆಯಾಗಿದೆ. ಕಾರ್ಯಕರ್ತರು ಹೆಲ್ಮೆಟ್‌ಗಳು, ಕಲ್ಲುಗಳು, ಪ್ಲಾಸ್ಟಿಕ್ ಬಾಟಲಿಗಳನ್ನು ಭದ್ರತಾ ಸಿಬ್ಬಂದಿಯತ್ತ ಎಸೆದರು. ಪೊಲೀಸರು, ಕೇಂದ್ರೀಯ ಭದ್ರತಾ ಪಡೆ ಸಿಬ್ಬಂದಿ ಪರಿಸ್ಥಿತಿಯನ್ನು ನಿಭಾಯಿಸಲಾಗದೆ ಪರದಾಡಿದರು. ವಿಶೇಷವಾಗಿ ಮಹಿಳಾ ಅಧಿಕಾರಿಗಳಿದ್ದ ಕಾರುಗಳತ್ತಲೇ ಜಾಸ್ತಿ ದಾಳಿ ನಡೆಯಿತು. ಈ ವೇಳೆ ಸಿಪಿಎಂ ನಾಯಕರು ಮಧ್ಯಪ್ರವೇಶಿಸಿ, ಕಾರ್ಯಕರ್ತರನ್ನು ಸಮಾಧಾನಪಡಿಸಿದರು.**

## ಚುನಾವಣಾ ಆಯೋಗಕ್ಕೆ ಮತಪಟ್ಟಿ ಪರಿಷ್ಕರಣೆಯ ಅಧಿಕಾರವಿದೆ: ನ್ಯಾಯಪೀಠ | ಪ್ರತಿಪಕ್ಷ ಸಲ್ಲಿಸಿದ್ದ ಅರ್ಜಿ ವಜಾ, ಎಸ್‌ಐಆರ್‌ಗೆ ಇನ್ನು ಯಾವುದೇ ವಿಘ್ನಗಳಿಲ್ಲ

# ಎಸ್‌ಐಆರ್ ಸರಿಯಿದೆ: ಸುಪ್ರೀಂ ಕೋರ್ಟ್ ಮುದ್ರೆ

**ದೆಹಲಿ:** ಚುನಾವಣಾ ಆಯೋಗ ನಡೆಸುತ್ತಿರುವ ವಿಶೇಷ ತೀವ್ರ ಮತದಾರರ ಪಟ್ಟಿ ಪರಿಷ್ಕರಣೆ ಪ್ರಕ್ರಿಯೆ ವಿರುದ್ಧ ಎದ್ದಿದ್ದ ರಾಜಕೀಯ ಹಾಗೂ ಕಾನೂನು ಹೋರಾಟಕ್ಕೆ ಸುಪ್ರೀಂ ಕೋರ್ಟ್ ತೆರೆ ಎಳೆದಿದೆ. ಚುನಾವಣಾ ಆಯೋಗದ ಅಧಿಕಾರವನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳನ್ನು ತಳ್ಳಿಹಾಕಿದ ನ್ಯಾಯಪೀಠ, ಎಸ್‌ಐಆರ್ ಕ್ರಮವು ಕಾನೂನು ಬದ್ಧವಾಗಿದ್ದು, ಇದು ಸ್ವಚ್ಛ ಮತ್ತು ನ್ಯಾಯಸಮ್ಮತ ಚುನಾವಣೆಗೆ ಸಹಕಾರಿಯಾಗುತ್ತದೆ ಎಂದು ಮಹತ್ವದ ತೀರ್ಪು ನೀಡಿದೆ.



ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ನೇತೃತ್ವದ ಮೂವರು ನ್ಯಾಯಮೂರ್ತಿಗಳ ಪೀಠ, ಚುನಾವಣಾ ಆಯೋಗಕ್ಕೆ ಈ ರೀತಿಯ ಎಸ್‌ಐಆರ್ ನಡೆಸುವ ಸಂಪೂರ್ಣ ಅಧಿಕಾರವಿದೆ. ಚುನಾವಣಾ ಆಯೋಗ ತನ್ನ ಅಧಿಕಾರ ವ್ಯಾಪ್ತಿ ಮೀರಿಲ್ಲ. ಬಿಹಾರ ಮತದಾರರ ಪಟ್ಟಿಯ ಎಸ್‌ಐಆರ್ ಪ್ರಕ್ರಿಯೆ ಜನಪ್ರತಿನಿಧಿತ್ವ ಕಾಯ್ದೆ ಅಥವಾ ಸಂವಿಧಾನದ ಯಾವುದೇ ವಿಧಿಯನ್ನು ಉಲ್ಲಂಘಿಸಿಲ್ಲ ಎಂದು ಹೇಳಿದೆ.

ತೀರ್ಪಿನಲ್ಲಿ, ಮತದಾರರ ಪಟ್ಟಿಯ ಶುದ್ಧತೆ ಕಾಪಾಡುವುದು ಹಾಗೂ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆಯನ್ನು ಖಚಿತಪಡಿಸುವ ಉದ್ದೇಶದಿಂದಲೇ ಈ ಕ್ರಮ ಕೈಗೊಳ್ಳಲಾಗಿದೆ. ಹೆಸರುಗಳನ್ನು ತೆಗೆದುಹಾಕುವ ಹಂತಹಂತದ ವಿಧಾನ, ಆಕ್ಷೇಪಣೆ ಸಲ್ಲಿಸಲು ಅವಕಾಶ ಹಾಗೂ ಇತರ ಭದ್ರತಾ ಕ್ರಮಗಳು ಈ ಪ್ರಕ್ರಿಯೆಯನ್ನು ನ್ಯಾಯಸಮ್ಮತ ಮತ್ತು ಏಕಪಕ್ಷೀಯವಲ್ಲದಂತಾಗಿಸುತ್ತವೆ ಎಂದು ಉಲ್ಲೇಖಿಸಿದೆ. ಇದೇ ವೇಳೆ ಎಸ್‌ಐಆರ್ ಪ್ರಕ್ರಿಯೆಯಲ್ಲಿ ಒಳಗೊಂಡಿರುವ ಸುರಕ್ಷತಾ ಕ್ರಮಗಳು ಮತದಾರರ ಪಟ್ಟಿಯ ಸಮಗ್ರತೆಯನ್ನು ಕಾಪಾಡಲು ಸಹಕಾರಿಯಾಗುತ್ತವೆ ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

ಹಿನ್ನೆಲೆಯೇನು?: ಬಿಹಾರ ಸೇರಿದಂತೆ ವಿವಿಧ ರಾಜ್ಯಗಳಲ್ಲಿ ಚುನಾವಣಾ ಆಯೋಗ ನಡೆಸುತ್ತಿರುವ ಎಸ್‌ಐಆರ್ ಪ್ರಕ್ರಿಯೆಯ ಸಂವಿಧಾನಬದ್ಧತೆಯನ್ನು ಪ್ರಶ್ನಿಸಿ ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಕೈಗೆತ್ತಿಕೊಂಡಿತ್ತು. ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್, ನ್ಯಾಯಮೂರ್ತಿಗಳಾದ ಜಾಯ್ಮಲ್ಯ ಬಾಗ್ಚಿ ಮತ್ತು ವಿ.ಎಂ.ಪಾಂಚೋಲಿ ಅವರನ್ನೊಳಗೊಂಡ ಪೀಠ ಜನವರಿ 29ರಂದು ವಿಚಾರಣೆ ಪೂರ್ಣಗೊಳಿಸಿ ತೀರ್ಪನ್ನು ಕಾಯ್ದಿರಿಸಿತ್ತು.

ಸಂವಿಧಾನದ ಕಲಂ 326, ಜನಪ್ರತಿನಿಧಿತ್ವ ಕಾಯ್ದೆ 1950 ಹಾಗೂ ಮತದಾರರ ನೋಂದಣಿ ನಿಯಮಾವಳಿ 1960ರ ಅಡಿಯಲ್ಲಿ ಚುನಾವಣಾ ಆಯೋಗಕ್ಕೆ ಇಂತಹ ಎಸ್‌ಐಆರ್ ನಡೆಸುವ ಅಧಿಕಾರವಿದೆಯೇ ಎಂಬ ಪ್ರಶ್ನೆಯನ್ನು ಕೋರ್ಟ್ ಪರಿಶೀಲಿಸಿತು. ಈ ಅರ್ಜಿಗಳನ್ನು ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್, ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್, ರಾಜಕೀಯ ವಿಶ್ಲೇಷಕ ಯೋಗೇಂದ್ರ ಯಾದವ್, ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ, ಆರ್‌ಜೆಡಿ ನಾಯಕ ಮನೋಜ್ ಝಾ, ಕಾಂಗ್ರೆಸ್ ನಾಯಕ ಕೆ.ಸಿ.ವೇಣುಗೋಪಾಲ್, ಎನ್‌ಸಿಪಿ ನಾಯಕಿ ಸುಪ್ರಿಯಾ ಸುಳೆ ಸೇರಿದಂತೆ ಹಲವು ಸಂಘಟನೆಗಳು ಹಾಗೂ ರಾಜಕೀಯ ನಾಯಕರು ಸಲ್ಲಿಸಿದ್ದರು.

ಅರ್ಜಿದಾರರು, 2025ರ ಜೂನ್ 24ರಂದು ಚುನಾವಣಾ ಆಯೋಗ ಹೊರಡಿಸಿದ್ದ ಎಸ್‌ಐಆರ್ ಆದೇಶವನ್ನು ರದ್ದುಗೊಳಿಸಬೇಕು ಎಂದು ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದ್ದರು. ಈ ಕ್ರಮವು ಸಂವಿಧಾನದ ಕಲಂ 14, 19, 21, 325 ಮತ್ತು 326ರ ಉಲ್ಲಂಘನೆ ಎಂದು ಅವರು ವಾದಿಸಿದ್ದರು. ಆದರೆ, ಚುನಾವಣಾ ಆಯೋಗ ತನ್ನ ಕ್ರಮವನ್ನು ಸಮರ್ಥಿಸಿಕೊಂಡಿದ್ದು, ಮತದಾರರ ಪಟ್ಟಿಯ ಪಾರದರ್ಶಕತೆ ಮತ್ತು ನಿಖರತೆ ಕಾಪಾಡಲು ಈ ಪ್ರಕ್ರಿಯೆ ಅಗತ್ಯವಾಗಿದೆ ಎಂದು ಸುಪ್ರೀಂ ಕೋರ್ಟ್‌ಗೆ ತಿಳಿಸಿತ್ತು. ಇದಕ್ಕೂ ಮೊದಲು ಜುಲೈ 28ರಂದು ಸುಪ್ರೀಂ ಕೋರ್ಟ್, ಬಿಹಾರದಲ್ಲಿ ಎಸ್‌ಐಆರ್ ಪ್ರಕ್ರಿಯೆಯ ನಂತರ ಆಗಸ್ಟ್ 1ರಂದು ಕರಡು ಮತದಾರರ ಪಟ್ಟಿ ಪ್ರಕಟಿಸುವುದನ್ನು ತಡೆಯಲು ನಿರಾಕರಿಸಿತ್ತು.

## ಬೈಜುಸ್ ರವೀಂದ್ರನ್‌ಗೆ 6 ತಿಂಗಳು ಜೈಲು

**ಸಿಂಗಾಪುರ:** ಬೈಜುಸ್ ಕಂಪನಿಯ ಸಂಸ್ಥಾಪಕ ಬೈಜು ರವೀಂದ್ರನ್ ಅವರಿಗೆ ಸಿಂಗಾಪುರ ನ್ಯಾಯಾಲಯವು 6 ತಿಂಗಳ ಜೈಲು ಶಿಕ್ಷೆ ವಿಧಿಸಿದೆ. ಕತಾರ್ ಇನ್ವೆಸ್ಟ್‌ಮೆಂಟ್ ಅಥಾರಿಟಿಯ ಅಂಗಸಂಸ್ಥೆಯಾದ ಕತಾರ್ ಹೋಲ್ಡಿಂಗ್‌ನ ಒಪ್ಪಂದ ಉಲ್ಲಂಘನೆ ಮತ್ತು ವಂಚನೆಯ ಪ್ರಕರಣಕ್ಕೆ ಸಂಬಂಧಿಸಿದಂತೆ ಈ ಆದೇಶ ಪ್ರಕಟವಾಗಿದೆ. ಆಸ್ತಿ ವಿವರಗಳಿಗೆ ಸಂಬಂಧಿಸಿದಂತೆ ಏಪ್ರಿಲ್ 2024ರಿಂದ ನ್ಯಾಯಾಲಯ ನೀಡಿದ್ದ ಹಲವು ಆದೇಶಗಳನ್ನು ಉಲ್ಲಂಘಿಸಿದ ಹಿನ್ನೆಲೆಯಲ್ಲಿ ಇವರಿಗೆ ಶಿಕ್ಷೆ ವಿಧಿಸಲಾಗಿದೆ. ರವೀಂದ್ರನ್ ಅವರು ಯಾವುದೇ ನೆಪ ಹೇಳದೆ ತಕ್ಷಣವೇ ಸಿಂಗಾಪುರದ ಸಂಬಂಧಿತ ಅಧಿಕಾರಿಗಳ ಮುಂದೆ ಶರಣಾಗಬೇಕು ಎಂದು ಕೋರ್ಟ್ ಖಡಕ್ ಆಗಿ ಸೂಚಿಸಿದೆ. ಕಾನೂನು ವೆಚ್ಚಗಳಿಗಾಗಿ ಸುಮಾರು 90 ಸಾವಿರ ಸಿಂಗಾಪುರ ಡಾಲರ್ (67.47 ಲಕ್ಷ ರು.) ಪಾವತಿಸುವಂತೆ ಆದೇಶಿಸಲಾಗಿದೆ.

ಹೂಡಿಕೆದಾರರ ಹಣವನ್ನು ದುರುಪಯೋಗಪಡಿಸಿಕೊಂಡು, ಆಸ್ತಿ ವಿವರಗಳನ್ನು ಅಂತರ ರಾಷ್ಟ್ರೀಯ ನ್ಯಾಯಾಲಯಗಳಿಂದ ಮುಚ್ಚಿಡಲು ಪ್ರಯತ್ನಿಸಿದ್ದಕ್ಕೆ ಬೈಜು ರವೀಂದ್ರನ್ ಅವರಿಗೆ ಈ ಜೈಲು ಶಿಕ್ಷೆ ಮತ್ತು ದಂಡ ವಿಧಿಸಲಾಗಿದೆ. ಬೈಜು ರವೀಂದ್ರನ್ ಅವರು ತಮ್ಮ ವೈಯಕ್ತಿಕ ಮತ್ತು ಕಂಪನಿಯ ಆಸ್ತಿ ವಿವರಗಳನ್ನು ಬಹಿರಂಗಪಡಿಸುವಂತೆ ನ್ಯಾಯಾಲಯ ನೀಡಿದ್ದ ಸರಣಿ ಆದೇಶಗಳನ್ನು ಏಪ್ರಿಲ್ 2024ರಿಂದಲೇ ನಿರಂತರವಾಗಿ ನಿರ್ಲಕ್ಷಿಸುತ್ತಾ ಬಂದಿದ್ದರು. ಕಾನೂನು ಪ್ರಕ್ರಿಯೆಗಳಿಂದ ತಪ್ಪಿಸಿಕೊಳ್ಳಲು ಮತ್ತು ಮಾಹಿತಿ ಮುಚ್ಚಿಡಲು ರವೀಂದ್ರನ್ ಅವರು ಉದ್ದೇಶಪೂರ್ವಕವಾಗಿ ಪ್ರಯತ್ನಿಸುತ್ತಿದ್ದಾರೆ ಎಂದು ನ್ಯಾಯಾಲಯ ಕಟು ಪದಗಳಿಂದ ಸಿಟ್ಟು ಹೊರಹಾಕಿದೆ.

## ಜಮ್ಮುಕಾಶ್ಮೀರ ಭಾರತದ ಅಂಗ: ಚೀನಾಕ್ಕೆ ತಿರುಗೇಟು

**ದೆಹಲಿ:** ಜಮ್ಮುಕಾಶ್ಮೀರ ವಿಚಾರದಲ್ಲಿ ಚೀನಾ ಮತ್ತು ಪಾಕಿಸ್ತಾನ ಜಂಟಿ ಹೇಳಿಕೆ ನೀಡಿರುವುದಕ್ಕೆ ಭಾರತ ಖಡಕ್ ತಿರುಗೇಟು ನೀಡಿದೆ. ಜಮ್ಮುಕಾಶ್ಮೀರ ಹಾಗೂ ಲಡಾಖ್ ಕೇಂದ್ರಾಡಳಿತ ಪ್ರದೇಶಗಳು ಭಾರತದ ಅವಿಭಾಜ್ಯ ಅಂಗವಾಗಿವೆ. ಇವು ಎಂದಿಗೂ ಭಾರತದ ಭಾಗವಾಗಿಯೇ ಉಳಿಯಲಿವೆ ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಸ್ಪಷ್ಟಪಡಿಸಿದೆ. ಈ ವಿಷಯದಲ್ಲಿ ಬೇರೆ ಯಾವ ದೇಶಕ್ಕೂ ಪ್ರತಿಕ್ರಿಯಿಸುವ ಅಥವಾ ಹಸ್ತಕ್ಷೇಪ ಮಾಡುವ ಹಕ್ಕಿಲ್ಲ ಎಂಬುದನ್ನು ತೀವ್ರವಾಗಿ ಒತ್ತಿಹೇಳಿದೆ. ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಅವರ ಚೀನಾ ಪ್ರವಾಸದ ಬಳಿಕ ಹೊರಬಂದ ಜಂಟಿ ಹೇಳಿಕೆಯಲ್ಲಿ ಜಮ್ಮುಕಾಶ್ಮೀರ ಉಲ್ಲೇಖಗೊಂಡಿದ್ದು, ಇದನ್ನು ಭಾರತ ತಿರಸ್ಕರಿಸಿದೆ. ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಮ್ಮ ಅಧಿಕೃತ ಹೇಳಿಕೆಯಲ್ಲಿ ಭಾರತದ ಭೂಭಾಗಗಳ ಮೇಲೆ ಯಾವುದೇ ದೇಶದ ಹಕ್ಕು ಇಲ್ಲ ಎಂದು ಎಚ್ಚರಿಸಿದ್ದಾರೆ.

## ಚಾರ್‌ಧಾಮ್ ನೋಂದಣಿ ಸ್ಥಗಿತ

**ಹರಿದ್ವಾರ:** ಉತ್ತರಾಖಂಡದಲ್ಲಿ ಚಾರ್‌ಧಾಮ್ ಯಾತ್ರೆಗೆ ಭಕ್ತರ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿರುವುದರಿಂದ ಅಧಿಕಾರಿಗಳು ಸೀಮಿತ ಸಂಖ್ಯೆಯಲ್ಲಿ ನೋಂದಣಿ ಪ್ರಕ್ರಿಯೆ ಸ್ಥಗಿತಗೊಳಿಸಿದ್ದಾರೆ. ಇದರಿಂದ ಯಾತ್ರಾರ್ಥಿಗಳಿಗೆ ತೊಂದರೆಯಾಗಿದೆ. ಮಂಗಳವಾರ ಮಧ್ಯಾಹ್ನ 2 ಗಂಟೆಯಿಂದ ಋಷಿಕುಲ ಮೈದಾನದಲ್ಲಿರುವ ತಾತ್ಕಾಲಿಕ ಕೇಂದ್ರದಲ್ಲಿ ಭಾರೀ ಜನದಟ್ಟಣೆಯಿಂದಾಗಿ ನೋಂದಣಿ ಸೇವೆಗಳನ್ನು ಸ್ಥಗಿತಗೊಳಿಸಲಾಗಿತು. ಇದು ಸಾವಿರಾರು ಭಕ್ತರನ್ನು ನಿರಾಶೆಗೊಳಿಸಿದ್ದು, ಅವರಲ್ಲಿ ಹಲವರು ನೋಂದಣಿ ಮಾಡಿಕೊಳ್ಳದೆ ಹಿಂತಿರುಗಿದರು. ಪ್ರಸ್ತುತ ಪರಿಸ್ಥಿತಿಯಿಂದಾಗಿ, ಕಳೆದ ಎರಡು ದಿನಗಳಿಂದ ಭಕ್ತರು ತೊಂದರೆ ಅನುಭವಿಸುತ್ತಿದ್ದಾರೆ. ರಾತ್ರಿಯಿಡೀ ಸರತಿ ಸಾಲಿನಲ್ಲಿ ನಿಂತಿದ್ದರೂ, ಯಾವುದೇ ಮುನ್ಸೂಚನೆ ನೀಡದೆ ನೋಂದಣಿ ಕೌಂಟರ್‌ಗಳನ್ನು ಹಠಾತ್ತನೆ ಮುಚ್ಚಲಾಗಿದೆ ಎಂದು ಭಕ್ತರು ಆರೋಪಿಸಿದ್ದಾರೆ.

## ಪುಲ್ವಾಮಾ ದಾಳಿಯ ಉಗ್ರ ಐಎಸ್‌ಐ ಪಾತ್ರ ಬಹಿರಂಗ

**ನವದೆಹಲಿ:** ಮೇ 21ರಂದು ಅಪರಿಚಿತ ಬಂದೂಕುಧಾರಿಗಳಿಂದ ಹತನಾದ ಪುಲ್ವಾಮಾ ದಾಳಿಯ ಉಗ್ರ ಹಮ್ಜಾ ಬುರ್ಹಾನ್, ಎಕೆ-47 ರೈಫಲ್ ಹಿಡಿದಿರುವ ಹೊಸ ವಿಡಿಯೊವೊಂದು ಮುನ್ನೆಲೆಗೆ ಬಂದಿದೆ. ಇದು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ (ಪಿಒಕೆ) ಮೋಸ್ಟ್ ವಾಂಟೆಡ್ ಉಗ್ರನನ್ನು ರಕ್ಷಿಸುವಲ್ಲಿ ಐಎಸ್‌ಐ ಪಾತ್ರವನ್ನು ಮತ್ತೊಮ್ಮೆ ಜಗತ್ತಿನೆದುರು ಬಹಿರಂಗಪಡಿಸಿದೆ.

ಮೂಲಗಳ ಪ್ರಕಾರ, ಬುರ್ಹಾನ್ ಹತ್ಯೆಯಾಗುವ ಕೆಲವು ದಿನಗಳ ಮೊದಲು ಈ ವಿಡಿಯೊ ಚಿತ್ರೀಕರಿಸಲಾಗಿದೆ. ಅಪರಿಚಿತ ದುಷ್ಕರ್ಮಿಗಳು ತನ್ನನ್ನು ಗುರಿಯಾಗಿಸಬಹುದು ಎಂಬ ಭಯದಿಂದ ಆತ ಸದಾ ಈ ಮಾರಕಾಸ್ತ್ರವನ್ನು ತನ್ನೊಂದಿಗೆ ಕೊಂಡೊಯ್ಯುತ್ತಿದ್ದ ಎಂದು ಮೂಲಗಳು ಹೇಳಿವೆ. ಅವನನ್ನು ಐಎಸ್‌ಐ ಶಾಲೆಯೊಂದರ ಪ್ರಾಂಶುಪಾಲನನ್ನಾಗಿ ನೇಮಿಸಿತ್ತು ಮತ್ತು ಆತ ಈ ಗೌರವಾನ್ವಿತ ಹುದ್ದೆಯನ್ನು ಬಳಸಿಕೊಂಡು ಪಿಒಕೆಯ ನಿರಪರಾಧಿ ಮಕ್ಕಳಲ್ಲಿ ಭಾರತ ವಿರೋಧಿ ಪ್ರಚಾರ ಹಾಗೂ ದ್ವೇಷವನ್ನು ಹರಡುತ್ತಿದ್ದ ಎಂದು ಗುಪ್ತಚರ ಮೂಲಗಳು ಸ್ಪಷ್ಟಪಡಿಸಿವೆ.

**ಹಮ್ಜಾ ಬುರ್ಹಾನ್ ಯಾರು?:** ಅರ್ಜುಮಂಡ್ ಗುಲ್ಜಾರ್ ದಾರ್ ಮತ್ತು 'ಡಾಕ್ಟರ್' ಎಂಬ ಹೆಸರಿನಿಂದಲೂ ಕರೆಯಲ್ಪಡುತ್ತಿದ್ದ ಬುರ್ಹಾನ್, 2019ರ ಫೆಬ್ರವರಿಯಲ್ಲಿ 40 ಕ್ಕೂ ಹೆಚ್ಚು ಭಾರತೀಯ ಸಿಆರ್‌ಪಿಎಫ್ ಸಿಬ್ಬಂದಿಯನ್ನು ಬಲಿಪಡೆದ ಪುಲ್ವಾಮಾ ಭೀಕರ ಭಯೋತ್ಪಾದಕ ದಾಳಿಯ ಪ್ರಮುಖ ಮಾಸ್ಟರ್‌ಮೈಂಡ್‌ಗಳಲ್ಲಿ ಒಬ್ಬನಾಗಿದ್ದ. ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾ ಜಿಲ್ಲೆಯ ರತ್ನಿಪೋರಾ ನಿವಾಸಿಯಾಗಿದ್ದ ಈತ, ನಂತರ ಪಾಕಿಸ್ತಾನಕ್ಕೆ ಪಲಾಯನಗೈದು ಅಲ್-ಬದ್ರ್ ಉಗ್ರಗಾಮಿ ಸಂಘಟನೆಯನ್ನು ಸೇರಿಕೊಂಡಿದ್ದ. ಜಮ್ಮು ಮತ್ತು ಕಾಶ್ಮೀರದಲ್ಲಿ ವಿವಿಧ ದೇಶದ್ರೋಹಿ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಕ್ಕಾಗಿ ಭಾರತದ ಕೇಂದ್ರ ಗೃಹ ಸಚಿವಾಲಯವು 2022ರಲ್ಲಿ ಆತನನ್ನು ಅಧಿಕೃತವಾಗಿ 'ಭಯೋತ್ಪಾದಕ' ಎಂದು ಘೋಷಿಸಿತ್ತು. ಇತ್ತೀಚಿನ ವರ್ಷಗಳಲ್ಲಿ ಆತ ಪಿಒಕೆನಲ್ಲಿ ನಕಲಿ ಹೆಸರಿನಲ್ಲಿ ತಲೆಮರೆಸಿಕೊಂಡು ಜೀವಿಸುತ್ತಿದ್ದ ಹಾಗೂ ಮುಜಾಫರಾಬಾದ್‌ನ ಖಾಸಗಿ ಕಾಲೇಜೊಂದರಲ್ಲಿ ಪ್ರಾಂಶುಪಾಲನಾಗಿ ಕೆಲಸ ಮಾಡುತ್ತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

## ಶಬರಿಮಲೆ ಆಯ್ತು, ಪದ್ಮನಾಭಸ್ವಾಮಿ ದೇಗುಲದಲ್ಲೂ ಚಿನ್ನ, ವಜ್ರ ಕಳ್ಳತನ

**ತಿರುವನಂತಪುರಂ:** ಕೇರಳದ ಶಬರಿಮಲೆ ಅಯ್ಯಪ್ಪಸ್ವಾಮಿ ದೇಗುಲದಲ್ಲಿ ಆಭರಣ ಕಳ್ಳತನವಾಗಿತ್ತು. ಅದರ ಬೆನ್ನಲ್ಲೇ ಈಗ ಅದೇ ರಾಜ್ಯದ ಪದ್ಮನಾಭಸ್ವಾಮಿ ದೇವಸ್ಥಾನದಲ್ಲಿ 78 ಗ್ರಾಮ್ ಚಿನ್ನಾಭರಣಗಳು ಹಾಗೂ ಅಮೂಲ್ಯ ವಜ್ರಾಭರಣ ನಾಪತ್ತೆಯಾಗಿರುವ ಘಟನೆ ಆತಂಕಕ್ಕೆ ಕಾರಣವಾಗಿದೆ. ದೇವಸ್ಥಾನದ ಅಮೂಲ್ಯ ಖಜಾನೆಯ ಭದ್ರತೆ ಕುರಿತು ಇದೀಗ ಗಂಭೀರ ಪ್ರಶ್ನೆಗಳು ಕೇಳಿಬಂದಿವೆ. ಪೊಲೀಸ್ ಮಹಾನಿರ್ದೇಶಕರು ಗೃಹ ಕಾರ್ಯದರ್ಶಿಗೆ ಸಲ್ಲಿಸಿರುವ ವರದಿ ಪ್ರಕಾರ, ದೇವಸ್ಥಾನದ ಸಂಗ್ರಹದಲ್ಲಿದ್ದ ಸುಮಾರು 78 ಗ್ರಾಮ್ ಚಿನ್ನಾಭರಣಗಳು ಹಾಗೂ ವೈರಂ ನಾಮ' ಎಂದು ಕರೆಯಲಾಗುವ ವಜ್ರಾಭರಣ ಪತ್ತೆಯಾಗಿಲ್ಲ ಎಂದು ತಿಳಿದುಬಂದಿದೆ. ದೇವಸ್ಥಾನದಲ್ಲಿನ ಪ್ರಸ್ತುತ ಭದ್ರತಾ ವ್ಯವಸ್ಥೆ ಬಗ್ಗೆ ಕೂಡ ವರದಿಯಲ್ಲಿ ಆತಂಕ ವ್ಯಕ್ತಪಡಿಸಲಾಗಿದೆ. ದೇವಸ್ಥಾನದ ದಾಖಲೆಗಳ ಪ್ರಕಾರ, ವೈರಂ ನಾಮ ವಜ್ರಾಭರಣವನ್ನು ಕೆಲವು ತಿಂಗಳುಗಳ ಹಿಂದೆ ದುರಸ್ತಿಗಾಗಿ ತೆಗೆದುಕೊಂಡು ಹೋಗಲಾಗಿತ್ತು. ಆದರೆ ಇದುವರೆಗೆ ಅದನ್ನು ದೇವಸ್ಥಾನಕ್ಕೆ ಮರಳಿ ತಂದಿಲ್ಲ.

ಅದೇ ರೀತಿ, ಆರು ತಿಂಗಳ ಹಿಂದೆ ದುರಸ್ತಿಗೆ ಕಳುಹಿಸಿದ್ದ ಚಿನ್ನದ ದೀಪವೂ ನಾಪತ್ತೆಯಾಗಿದೆ ಎಂದು ತಿಳಿದುಬಂದಿದೆ. ಶತಮಾನಗಳ ಇತಿಹಾಸ ಹೊಂದಿರುವ ದೇವಸ್ಥಾನದ ಅಮೂಲ್ಯ ವಸ್ತುಗಳು ಕಾಣೆಯಾಗಿರುವುದು ಭಕ್ತರು ಹಾಗೂ ಅಧಿಕಾರಿಗಳಲ್ಲಿ ಆತಂಕ ಮೂಡಿಸಿದೆ. ದೇವಸ್ಥಾನದ ಖಜಾನೆ ನಿರ್ವಹಣೆ ಹಾಗೂ ಮೇಲ್ವಿಚಾರಣೆ ಬಗ್ಗೆ ಈಗ ಪ್ರಶ್ನೆಗಳು ಎದ್ದಿವೆ.

ಶಬರಿಮಲೆ ಅಯ್ಯಪ್ಪಸ್ವಾಮಿ ದೇಗುಲದಲ್ಲೂ ಕಳೆದವರ್ಷ ದುರಸ್ತಿ ವೇಳೆ ಚಿನ್ನ ಕಳವಾಗಿತ್ತು. ಗರ್ಭಗುಡಿಯ ಮುಂಭಾಗದಲ್ಲಿ ಹಾಕಲಾಗಿದ್ದ ಚಿನ್ನದ ಹಾಳೆಗಳನ್ನು ದುರಸ್ತಿಗಾಗಿ ಹೊರಗೊಯ್ಯಲಾಗಿತ್ತು. ವಾಪಸ್ ಮರಳಿದ್ದಾಗ ಅದರ ತೂಕ ಕಡಿಮೆಯಾಗಿತ್ತು. ತನಿಖೆ ಮಾಡಿದಾಗ ಚಿನ್ನ ಕಳವಾಗಿದ್ದು ಗೊತ್ತಾಗಿತ್ತು. ಈ ಸಂಬಂಧ ಕೆಲವರ ಬಂಧನವಾಗಿದೆ. ಇನ್ನೂ ತನಿಖೆ ನಡೆಯುತ್ತಿದೆ. ಇದರ ನಡುವೆಯೇ ಇತರೆ ಹಲವು ದೇಗುಲಗಳಲ್ಲಿ ಕಳ್ಳತನದ ಘಟನೆಗಳು ನಡೆದಿವೆ.

## ಇಸ್ರೇಲ್ ದಾಳಿಗೆ ಹಮಾಸ್‌ನ ಹೊಸ ಸೇನಾ ನಾಯಕನ ಹತ್ಯೆ

**ಇಸ್ರೇಲ್:** ಗಾಜಾದಲ್ಲಿ ಹಮಾಸ್‌ನ ಹೊಸ ಸೇನಾನಾಯಕರನ್ನು ಹತ್ಯೆ ಮಾಡಿರುವುದಾಗಿ ಹೇಳಿದೆ. ಇಸ್ರೇಲ್ ರಕ್ಷಣಾ ಪಡೆ (ಐಡಿಎಫ್) ಪ್ರಕಾರ, ಗಾಜಾದಲ್ಲಿ ನಡೆದ ನಿಖರ ದಾಳಿಯಲ್ಲಿ ಹಮಾಸ್‌ನ ಪ್ರಮುಖ ಸೈನಿಕ ನಾಯಕ ಮೃತಪಟ್ಟಿದ್ದಾನೆ.

ಹಮಾಸ್‌ನ ಹಿರಿಯ ನಾಯಕ ಮೊಹಮ್ಮದ್ ಸಿನ್ವಾರ್ ಸಾವಿನ ಬಳಿಕ ಈ ಹೊಸ ನಾಯಕತ್ವ ನೇಮಕವಾಗಿತ್ತು. ಇಸ್ರೇಲ್ ಕಳೆದ ಕೆಲವು ವಾರಗಳಿಂದ ಹಮಾಸ್‌ನ ಉನ್ನತ ಮಟ್ಟದ ನಾಯಕರನ್ನು ಗುರಿಯಾಗಿಸಿಕೊಂಡು ನಿರಂತರ ಕಾರ್ಯಾಚರಣೆ ನಡೆಸುತ್ತಿದೆ. ಗಾಜಾ ಪ್ರದೇಶದಲ್ಲಿ ಇಸ್ರೇಲ್ ದಾಳಿಗಳು ತೀವ್ರಗೊಂಡ ಹಿನ್ನೆಲೆಯಲ್ಲಿ ನಾಗರಿಕರ ಸಾವು-ನೋವು ಕೂಡ ಹೆಚ್ಚಾಗಿದೆ. ಸ್ಥಳೀಯ ಆರೋಗ್ಯ ಅಧಿಕಾರಿಗಳ ಪ್ರಕಾರ, ಅನೇಕ ಮಂದಿ ಮೃತಪಟ್ಟಿದ್ದು, ಸಾವಿರಾರು ಜನರು ಸ್ಥಳಾಂತರಗೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಇದೇ ವೇಳೆ, ಯುದ್ಧ ವಿರಾಮಕ್ಕೆ ಅಂತಾರಾಷ್ಟ್ರೀಯ ಒತ್ತಡ ಹೆಚ್ಚಾದರೂ ಇಸ್ರೇಲ್ ತನ್ನ ಕಾರ್ಯಾಚರಣೆಯನ್ನು ಮುಂದುವರಿಸುತ್ತಿದೆ.

ಇಸ್ರೇಲಿ ದಾಳಿಯಲ್ಲಿ ಕೊಲ್ಲಲ್ಪಟ್ಟ ಹಮಾಸ್‌ನ ಮಿಲಿಟರಿ ವಿಂಗ್ ಕಮಾಂಡರ್ ಮೊಹಮ್ಮದ್ ಒಡೆಹ್ ಮತ್ತು ಅವರ ಪತ್ನಿ ಮತ್ತು ಮಕ್ಕಳೆಂದು ಶೋಕತಪ್ತರಿಂದ ಗುರುತಿಸಲ್ಪಟ್ಟ ಶವಗಳನ್ನು ಜನರು ಹೊತ್ತೊಯ್ಯುತ್ತಿದ್ದಾರೆ.

## ರಾಸಾಯನಿಕ ಟ್ಯಾಂಕ್ ಕುಸಿತ

**ವಾಷಿಂಗ್ಟನ್:** ಅಮೆರಿಕದ ವಾಷಿಂಗ್ಟನ್ ರಾಜ್ಯದ ಲಾಂಗ್‌ವ್ಯೂ ನಗರದಲ್ಲಿರುವ ನಿಪ್ಪೋನ್ ಡೈನವೇವ್ ಪ್ಯಾಕೇಜಿಂಗ್ ಪೇಪರ್ ಮಿಲ್‌ನಲ್ಲಿ ಭಾರೀ ರಾಸಾಯನಿಕ ಟ್ಯಾಂಕ್ ಅದರೊಳಗೆ ಕುಸಿದರಿಂದ ಒಬ್ಬರು ಮೃತಪಟ್ಟಿದ್ದು, ಇನ್ನೂ 9 ಮಂದಿ ನಾಪತ್ತೆಯಾಗಿದ್ದಾರೆ.

ಅತ್ಯಂತ ಕರಾಳ ರಾಸಾಯನಿಕ ದ್ರವವಾದ ವೈಟ್ ಲಿಕ್ಕರ್ ಸುಮಾರು 9 ಲಕ್ಷ ಗ್ಯಾಲನ್‌ಗಳಷ್ಟು ಹೊಂದಿದ್ದ ಟ್ಯಾಂಕ್ ಏಕಾಏಕಿ ಕುಸಿದಿದೆ. ಈ ದ್ರವದಲ್ಲಿ ಸೋಡಿಯಂ ಹೈಡ್ರಾಕ್ಸೈಡ್ ಮತ್ತು ಸೋಡಿಯಂ ಸಲ್ಫೈಡ್ ಮೊದಲಾದ ಅಪಾಯಕಾರಿ ರಾಸಾಯನಿಕಗಳು ಇದ್ದು, ಪೇಪರ್ ತಯಾರಿಕೆಯಲ್ಲಿ ಇವುಗಳನ್ನು ಬಳಸಲಾಗುತ್ತದೆ.

ಘಟನೆಯಲ್ಲಿ ಇನ್ನೂ 9 ಮಂದಿ ಗಾಯಗೊಂಡಿದ್ದು, ಕೆಲವರಿಗೆ ಗಂಭೀರ ಸುಟ್ಟ ಗಾಯಗಳು ಹಾಗೂ ಉಸಿರಾಟದ ಸಮಸ್ಯೆಗಳು ಉಂಟಾಗಿವೆ. ಗಾಯಗೊಂಡವರಲ್ಲಿ ಒಬ್ಬ ಅಗ್ನಿಶಾಮಕ ಸಿಬ್ಬಂದಿಯೂ ಸೇರಿದ್ದಾರೆ. ರಕ್ಷಣಾ ಕಾರ್ಯಾಚರಣೆ ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದ್ದು, ಸಾರ್ವಜನಿಕರಿಗೆ ತಕ್ಷಣದ ಅಪಾಯ ಇಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಘಟನೆ ಹೇಗೆ ಸಂಭವಿಸಿತು ಎಂಬುದು ಇನ್ನೂ ಸ್ಪಷ್ಟವಾಗಿಲ್ಲ. ಇದರಿಂದ ಪರಿಸರದ ಮೇಲಾಗುವ ದುಷ್ಪರಿಣಾಮವನ್ನು ಅಳೆಯಲು ರಾಜ್ಯ ಪರಿಸರ ಇಲಾಖೆ ತನಿಖೆ ಆರಂಭಿಸಿದೆ.

## ಅಮೆರಿಕದ ಆರ್ಥಿಕ ದಿಗ್ಬಂಧನ: ಅಂ.ರಾ. ನೆರವಿಗೆ ಕ್ಯೂಬಾ ಮೊರೆ

**ಕ್ಯೂಬಾ:** ಅಮೆರಿಕದ ಆರ್ಥಿಕ ಹಾಗೂ ಇಂಧನ ನಿರ್ಬಂಧಗಳಿಂದ ಗಂಭೀರ ಸಂಕಷ್ಟ ಎದುರಿಸುತ್ತಿರುವ ಕ್ಯೂಬಾ, ಜಾಗತಿಕ ಸಮುದಾಯದ ತುರ್ತು ಸಹಾಯವನ್ನು ಕೇಳಿದೆ. ಕ್ಯೂಬಾದ ವಿದೇಶಾಂಗ ಸಚಿವ ಬ್ರುನೋ ರೊಡ್ರಿಗ್ಸ್ ಅವರು ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಮಾತನಾಡಿ, ಶಸ್ತ್ರಾಸ್ತ್ರ ಅಥವಾ ಇಂಧನ ತಡೆ ಮೂಲಕ ಉಂಟಾಗಬಹುದಾದ ತೊಂದರೆಗಳನ್ನು ತಪ್ಪಿಸಲು ವಿಶ್ವಸಮುದಾಯ ತಕ್ಷಣ ಮುಂದಾಗಬೇಕು ಎಂದು ಮನವಿ ಮಾಡಿದ್ದಾರೆ. ಇದೇ ವೇಳೆ ಅಮೆರಿಕವು ಕ್ಯೂಬಾಗೆ 100 ದಶಲಕ್ಷ ಡಾಲರ್ ಮಾನವೀಯ ನೆರವು ನೀಡಲು ಸಿದ್ಧವಿರುವುದಾಗಿ ಹೇಳಿದರೂ, ಅದರೊಂದಿಗೆ ಅರ್ಥಪೂರ್ಣ ಸುಧಾರಣೆಗಳನ್ನು ಜಾರಿಗೆ ತರಬೇಕೆಂದು ಷರತ್ತು ವಿಧಿಸಿದೆ. ಕ್ಯೂಬಾ ಸರಕಾರ ಈ ನೆರವಿಗೆ ತಾತ್ವಿಕ ಒಪ್ಪಿಗೆ ಸೂಚಿಸಿದರೂ, ಅಮೆರಿಕದ ನಿರ್ಬಂಧಗಳನ್ನು ತೆರವುಗೊಳಿಸುವುದೇ ನಿಜವಾದ ಪರಿಹಾರ ಎಂದು ಹೇಳಿದೆ.

**ಟೀಕೆ:** ವಿಶ್ವಸಂಸ್ಥೆಯ ಕೆಲ ತಜ್ಞರು ಅಮೆರಿಕದ ಇಂಧನ ತಡೆ ಕ್ರಮವನ್ನು ಅಂತಾರಾಷ್ಟ್ರೀಯ ಕಾನೂನಿನ ಉಲ್ಲಂಘನೆ.

**ಇಂಧನ, ಆಹಾರ ಮತ್ತು ಔಷಧ ನಮಗೆ ಅತ್ಯಗತ್ಯ, ಈ ವೇಳೆಯೇ ಅಮೆರಿಕ ಇಂಧನ ಹಾಗೂ ವ್ಯಾಪಾರ ಒತ್ತಡ ಹೆಚ್ಚಿಸಿರುವುದರಿಂದ ದೇಶದಲ್ಲಿ ವಿದ್ಯುತ್ ಕೊರತೆ, ಆಹಾರ ಮತ್ತು ಔಷಧ ಅಭಾವ ಗಂಭೀರವಾದ ಸ್ಥಿತಿ ಉಂಟಾಗಿದೆ. ದೇಶದ ಹಲವೆಡೆ ದೀರ್ಘಕಾಲದ ವಿದ್ಯುತ್ ವ್ಯತ್ಯಯಗಳು ಸಾಮಾನ್ಯವಾಗಿರುವ ಸಮಸ್ಯೆಯಾಗಿದೆ.**

**ಮಿಗುಯೆಲ್ ಡಿಯಾಸ್ ಕಾನೆಲ್,** ಕ್ಯೂಬಾ ಅಧ್ಯಕ್ಷ

## ಸಾಮೂಹಿಕ ಅತ್ಯಾಚಾರ ಪ್ರಕರಣ: ವಿವಾದಿತ ಗುರು ಆಸಾರಾಂ ಖುಲಾಸೆ

**ಜೈಪುರ:** ಸಾಮೂಹಿಕ ಅತ್ಯಾಚಾರ ಪ್ರಕರಣದಲ್ಲಿ ವಿವಾದಿತ ಗುರು ಅಸಾರಾಂ ಬಾಪು ಅವರನ್ನು ರಾಜಸ್ಥಾನ ಹೈಕೋರ್ಟ್ ಖುಲಾಸೆಗೊಳಿಸಿದೆ. ಆಸಾರಾಂ ಬಾಪು ಅವರಿಗೆ ಬುಧವಾರ ರಾಜಸ್ಥಾನ ಹೈಕೋರ್ಟ್ ಬಿಗ್ ರಿಲೀಫ್ ನೀಡಿದೆ. ಭಾರತೀಯ ದಂಡ ಸಂಹಿತೆ ಹಾಗೂ ಪೋಕ್ಸೋ ಕಾಯ್ದೆಯಡಿ ದಾಖಲಿಸಲಾಗಿದ್ದ ಸಾಮೂಹಿಕ ಅತ್ಯಾಚಾರ ಮತ್ತು ಬಾಲಕಿಯ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ ಆರೋಪಗಳಿಂದ ಅವರನ್ನು ಮುಕ್ತಗೊಳಿಸಲಾಯಿತು. ಆದರೆ ಅಪ್ರಾಪ್ತೆಯ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ವಿಧಿಸಲಾದ ಜೀವಾವಧಿ ಶಿಕ್ಷೆಯನ್ನು ನ್ಯಾಯಾಲಯ ಮುಂದುವರಿಸಿದೆ. ನ್ಯಾಯಮೂರ್ತಿ ಅರುಣ್ ಮೊಂಗಾ ಮತ್ತು ನ್ಯಾಯಮೂರ್ತಿ ಯೋಗೇಂದ್ರ ಕುಮಾರ್ ಪುರೋಹಿತ್ ಒಳಗೊಂಡ ವಿಭಾಗೀಯ ಪೀಠವು ಐಪಿಸಿ ಸೆಕ್ಷನ್ 376 ಮತ್ತು ಪೋಕ್ಸೋ ಕಾಯ್ದೆಯ ಸೆಕ್ಷನ್ 5(ಎ)/6 ಅಡಿಯಲ್ಲಿ ಇದ್ದ ಆರೋಪಗಳಿಂದ ಆಸಾರಾಂ ಮುಕ್ತಗೊಂಡರು. ಆದರೆ ಐಪಿಸಿ ಸೆಕ್ಷನ್ 376(2)(ಎಫ್) ಅಡಿಯಲ್ಲಿ ಅಪ್ರಾಪ್ತೆಯ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ವಿಧಿಸಲಾದ ಶಿಕ್ಷೆಯನ್ನು ನ್ಯಾಯಪೀಠವು ಸಮರ್ಥಿಸಿದೆ. ಇದರಿಂದ ವಿಚಾರಣಾ ನ್ಯಾಯಾಲಯ ನೀಡಿದ್ದ ಜೀವಾವಧಿ ಶಿಕ್ಷೆ ಮುಂದುವರಿಯಲಿದೆ.



## ಸಮಾಚಾರ ಸಣ್ಣದಲ್ಲ

### ಇಬ್ಬರು ಕಳ್ಳರ ಬಂಧನ: ಲ್ಯಾಪ್ ಟಾಪ್ ವಶಕ್ಕೆ

**ಹುಬ್ಬಳ್ಳಿ:** ವಿದ್ಯಾನಗರದ ಬಿವಿಬಿ ಕಾಲೇಜಿನ ಸುತ್ತ ಮುತ್ತ ವಿದ್ಯಾರ್ಥಿಗಳನ್ನು ಟಾರ್ಗೆಟ್ ಮಾಡಿ ಅವರ ಲ್ಯಾಪ್ ಟಾಪ್ ಎಗರಿಸುತ್ತಿದ್ದ ಇಬ್ಬರು ಅಂತಾರಾಜ್ಯ ಆರೋಪಿಗಳನ್ನು ವಿದ್ಯಾನಗರ ಪೊಲೀಸರು ಆಂಧ್ರಪ್ರದೇಶದಲ್ಲಿ ಅರೆಸ್ಟ್ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ. ಆಂಧ್ರದ ವೆಂಕಟಗಿರಿ ಕೋಟಾ ನಿವಾಸಿಗಳಾದ ಸತ್ಯವೇಲು ಚೌಡೇಪಲ್ಲಿ ಹಾಗೂ ಸರವಣ ಚೌಡೇಪಲ್ಲಿ ಎಂಬ ಇಬ್ಬರನ್ನು ಬಂಧಿಸಿ ಸುಮಾರು 5 ಲಕ್ಷ 40 ಸಾವಿರ ರೂ. ಮೌಲ್ಯದ 6 ಲ್ಯಾಪ್ಟಾಪ್ಗಳು ಹಾಗೂ 12 ಮೊಬೈಲ್ ಫೋನ್ಗಳನ್ನು ವಶಕ್ಕೆ ಪಡೆದಿದ್ದಾರೆ. ವಿದ್ಯಾರ್ಥಿಗಳಂತೆ ಪಿಜಿಗಳಿಗೆ ಎಂಟ್ರಿ ಕೊಟ್ಟು, ಸೆಕ್ಯೂರಿಟಿ ಗಾರ್ಡ್ ಕಣ್ಣಿಗೆ ಮಣ್ಣು ಎರಚಿ ಇವರು ವಿ ಕಾಲೇಜ್ ಹಾಗೂ ಪಿಜಿಗಳಲ್ಲಿನ ಒಂಬತ್ತು ಲ್ಯಾಪಟಾಪ್ ಎಗರಿಸಿದ್ದು ಈ ಸರಣಿ ಲ್ಯಾಪಟಾಪ್ ಕಳವು ವಿದ್ಯಾನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗುತ್ತಿದ್ದಂತೆ ಇನ್ಸ್ಪೆಕ್ಟರ್ಜಾಕ್ಸನ್ ಡಿಸೋಜಾ ಮಾರ್ಗದರ್ಶನದಲ್ಲಿ ವಿಶೇಷ ತಂಡ ರಚನೆ ಮಾಡಲಾಗಿತ್ತು. ಪಿಎಸ್ಐ ಪುನೀತ್ ಕುಮಾರ್, ಸುನೀಲ್ ಎಂ. ಹಾಗೂ ಅಪರಾಧ ವಿಭಾಗದ ಪರಶುರಾಮ-ಹಿರಗಣ್ಣವರ, ಶಿವಾನಂದ ತಿರುಕಣ್ಣವರ, ಅನಿಲ ಹುಗ್ಗಿ, ಅರುಣ ಹೊಸಗೌಡರ, ಸಂತೋಷ್ ಆಡೂರ್, ಬಸವರಾಜ್ ಭಾವಿಹಾಳ, ರಾಕೇಶ್ ಬಟಕುರ್ಕಿ ಹಾಗೂ ಶರಣಗೌಡ ಮೂಲಿಮನಿ ತಂಡ ಖದೀಮರಿಗಾಗಿ ಬೆನ್ನು ಹತ್ತಿ ಬಂಧಿಸಿದೆ.

### ಡೋಹರ ಕಕ್ಕಯ್ಯ ಏಕತಾ ಸಮ್ಮೇಳನ, ಕ್ರಿಕೆಟ್ 31ಕ್ಕೆ

**ಹುಬ್ಬಳ್ಳಿ:** ಡೋಹರ ಕಕ್ಕಯ್ಯ ಸಮಾಜದ ಯುವ ಜನರಲ್ಲಿ ಕಲೆ, ಸಾಹಿತ್ಯ, ಕ್ರೀಡೆ ಹಾಗೂ ಉದ್ಯಮ ಕ್ಷೇತ್ರಗಳ ಬಗ್ಗೆ ಜಾಗೃತಿ ಮೂಡಿಸಲು ನೆಹರೂ ಮೈದಾನದಲ್ಲಿ ಮೇ 31ರಂದು ಅಖಿಲ ಕರ್ನಾಟಕ ಡೋಹರ ಕಕ್ಕಯ್ಯ ಏಕತಾ ಸಮ್ಮೇಳನ ಆಯೋಜಿಸಲಾಗಿದೆ ಎಂದು ರಾಜೇಶ ಹೋಟ್ಕರ್ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 5 ಗಂಟೆಗೆ ಈ ಬೃಹತ್ ಸಮ್ಮೇಳನ ಜರುಗಲಿದೆ. ಇದಕ್ಕೂ ಮುನ್ನ ಮೇ 29, 30 ಮತ್ತು 31ರಂದು ರಾಜ್ಯಮಟ್ಟದ ''ಕಕ್ಕಯ್ಯ ಕಪ್-2026'' ಕ್ರಿಕೆಟ್ ಪಂದ್ಯಾವಳಿ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು. ಸಮಾಜದ 5 ಸಾವಿರಕ್ಕೂ ಅಧಿಕ ಜನರು ಪಾಲ್ಗೊಳ್ಳುವ ನಿರೀಕ್ಷೆಯಿದೆ. ಯುವಕರನ್ನು ಪ್ರೋತಾಹಿಸುವುದು ಈ ಸಮ್ಮೇಳನದ ಮುಖ್ಯ ಉದ್ದೇಶ ಎಂದರು. ಆನಂದ ಶಿಂದೆ, ಲಕ್ಷ್ಮೀ ಕಾಂತ ಘೋಡಕೆ, ಶಾಂತರಾಜ ಪೋಳ, ಪರಮಾನಂದ ಘೋಡಕೆ, ವಿಲಾಸ ಹೋಟ್ಲರ್‌ಸೇರಿ ಸಮಾಜದ ಹಲವು ಗಣ್ಯರು ಗೋಷ್ಠಿಯಲ್ಲಿದ್ದರು.

### ಧಾರವಾಡದ ಐಐಐಟಿ ಘಟಿಕೋತ್ಸವ ಮೇ 30ಕ್ಕೆ

**ಧಾರವಾಡ:** ಐಐಐಟಿ 8ನೇ ಘಟಿಕೋತ್ಸವ ಮೇ 30 ರಂದು ಮುಂಜಾನೆ 11 ಗಂಟೆಗೆ ಐಐಐಟಿ ಆವರಣದಲ್ಲಿ ಆಯೋಜಿಸಿದೆ ಎಂದು ನಿರ್ದೇಶಕ ಪ್ರೊ. ಎಸ್.ಆರ್. ಮಹಾದೇವ ಪ್ರಸನ್ನ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯ ಅತಿಥಿಗಳಾಗಿ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಆಗಮಿಸಲಿದ್ದಾರೆ. ಗೌರವ ಅತಿಥಿಗಳಾಗಿ ದೆಹಲಿ ಐಐಟಿ ನಿರ್ದೇಶಕ ಪ್ರೊ. ರಂಗನ ಬ್ಯಾನರ್ಜಿ ಘಟಿಕೋತ್ಸವ ಭಾಷಣ ಮಾಡಲಿದ್ದಾರೆ ಎಂದರು. ಈ ಬಾರಿ ಘಟಿಕೋತ್ಸವದಲ್ಲಿ 136 ಕಂಪ್ಯೂಟರ ಸೈನ್ಸ್, 66 ಡೇಟಾ ಸೈನ್ಸ್ ಮತ್ತು ಆರ್ಟಿಫಿಷಿಯಲ್ ಇಂಟಲಿಜನ್ಸ್, 51 ಇ ಅಂಡ್ ಸಿ ವಿದ್ಯಾರ್ಥಿಗಳು ಪದವಿ ಪಡೆಯಲಿದ್ದಾರೆ ಎಂದರು. ಕುಲಸಚಿವ ಪ್ರೊ.ಟಿ. ಸತೀಶ ಅಣ್ಣಿಗೇರಿ, ಕೆ. ಗೋಪಿನಾಥ, ವಾಸುದೇವ ಪರ್ವತಿ ಇದ್ದರು.

### ಪ್ರಾಣಿ ಬಲಿ ಚಿತ್ರ ಪೋಸ್ಟ್ ಹಾಕಬೇಡಿ

**ನವಲಗುಂದ:** ಬಕ್ರಿದ್ ಹಬ್ಬದ ಪ್ರಯುಕ್ತ ಹಲವರು ಖುರಬಾನಿ ನೀಡುವುದಕ್ಕಾಗಿ ಸಿದ್ದರಾಗಿದ್ದೀರಿ, ಗೋವನ್ನು ಹೊರತುಪಡಿಸಿ ಬೇರೆ ಅನುಮತಿಸಿದ ಪ್ರಾಣಿಗಳ ಕುರಿತು ಗಮನ ಹರಿಸಿ ಹಾಗೂ ಪ್ರಾಣಿ

ಬಲಿ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಬಾರದು ಎಂದು ಪಿಂಜಾರ್ ನದಾಫ್ ಮನ್ಸೂರಿ ಸಂಘಗಳ ಮಹಾಮಂಡಳ ರಾಜ್ಯಾಧ್ಯಕ್ಷ ಡಾ. ಅಬ್ದುಲರಝಾಕ ನದಾಫ್ ಮನವಿ ಮಾಡಿದ್ದಾರೆ. ರಾಜ್ಯದಲ್ಲಿ ನಮ್ಮ ಸೋದರ ಹಿಂದೂ ಸಮಾಜ ಹಸುವನ್ನು ಗೋಮಾತೆ ಯಾಗಿ ಪೂಜಿಸುತ್ತದೆ. ನಾವು ಅವರ ಭಾವನೆಗೆ ಧಕ್ಕೆ ಮಾಡುವುದು ಬೇಡ. ಹಾಗಾಗಿ ಗುರುವಾರ ಬಕ್ರೀದ್ ಹಬ್ಬದಲ್ಲಿ ಮುಸ್ಲಿಮರು ಯಾವುದೇ ಕಾರಣಕ್ಕೂ ನಿಷೇಧಿತ ಪ್ರಾಣಿಗಳ ಬಲಿ ನೀಡಬಾರದು ಎಂದು ವಿನಂತಿಸಿದ್ದಾರೆ.

### ಮಾಹಿತಿ ಆಯುಕ್ತರ ಜಿಲ್ಲಾ ಪ್ರವಾಸ ಮುಂದೂಡಿಕೆ

**ಹಾವೇರಿ:** ರಾಜ್ಯ ಮಾಹಿತಿ ಪೀಠದ ಆಯುಕ್ತರಾದ ರುದ್ರಣ್ಣ ಹರ್ತಿಕೋಟಿ ಹಾಗೂ ರಾಜಶೇಖರ ಎಸ್ ಅವರ ಮೇ 30ರ ಹಾವೇರಿ ಜಿಲ್ಲಾ ಪ್ರವಾಸವನ್ನು ಆಡಳಿತಾತ್ಮ ಕಾರಣಾಂತರಗಳಿಂದ ಮುಂದೂಡಲಾಗಿದೆ ಎಂದು ಅಪರ ಜಿಲ್ಲಾಧಿಕಾರಿ ತಿಳಿಸಿದ್ದಾರೆ.

{ಬಿ.ವೈ.ವಿಜಯೇಂದ್ರ} ಬಿಜೆಪಿ ರಾಜ್ಯಾಧ್ಯಕ್ಷ

ಸಿದ್ದರಾಮಯ್ಯ ಅವರು ಅತಿ ಹೆಚ್ಚು ಅವಧಿಗೆ ಮುಖ್ಯಮಂತ್ರಿಯಾಗಿದ್ದು, ಅತಿ ಹೆಚ್ಚು ಬಾರಿ ಬಜೆಟ್ ಮಂಡಿಸಿದ್ದು ದಾಖಲೆ ಅಲ್ಲ. ಮುಖ್ಯಮಂತ್ರಿಯಾಗಿ ನಾಡಿನ ಜನತೆಯ ಸೇವೆ ಸಲ್ಲಿಸುವ ಅವಕಾಶ ದೊರೆತಾಗ ರೈತರ, ಜನಸಾಮಾನ್ಯರ ಕಷ್ಟಕ್ಕೆ, ಸಮಸ್ಯೆಗೆ ಸ್ಪಂದಿಸಿದರೆ ಮಾತ್ರ ಇತಿಹಾಸದಲ್ಲಿ ದಾಖಲಾಗಲಿದೆ.

# ರೈತರಿಗೆ ಉತ್ತಮ ಬ್ಯಾಂಕಿಂಗ್ ಸೇವೆ ಒದಗಿಸಿ

## ಜಿಲ್ಲಾ ಮಟ್ಟದ ಬ್ಯಾಂಕರ್ಸ್ ಸಮಿತಿ ಪ್ರಗತಿ ಪರಿಶೀಲನಾ ಸಮಿತಿ ಸಭೆ | ಜಿಲ್ಲಾಧಿಕಾರಿ ಸ್ನೇಹಲ್ ಸೂಚನೆ

**ವಿಶ್ವವಾಣಿ ಸುದ್ದಿಮನೆ**, ಧಾರವಾಡ

ಜಿಲ್ಲೆಯಲ್ಲಿ ಕೃಷಿ ಹಾಗೂ ಕೈಗಾರಿಕೆಗಳಿಗೆ ಪೂರಕವಾದ ಸಣ್ಣ ಉದ್ಯಮಗಳನ್ನು ಸ್ಥಾಪಿಸಿ, ಪ್ರೋತ್ಸಾಹಿಸಲು ಜಿಲ್ಲೆಯ ಎಲ್ಲ ಬ್ಯಾಂಕ್ಗಳು ಸಹಕರಿಸಬೇಕು. ಆರ್ಬಿಐ ಮಾರ್ಗಸೂಚಿಗಳನ್ನು ಉಲ್ಲಂಘಿಸಿ, ಸಾಲ ವಸೂಲಾತಿ ಮಾಡಬಾರದೆಂದು ಜಿಲ್ಲಾಧಿಕಾರಿ ಸ್ನೇಹಲ್ ಆರ್. ಹೇಳಿದರು.

ನಗರದ ಜಿಪಂ ಸಭಾಂಗಣದಲ್ಲಿ ಬುಧವಾರ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಜಿಲ್ಲಾಧಿಕಾರಿ ನೇತೃತ್ವದಲ್ಲಿ ನಡೆದ ಜಿಲ್ಲಾ ಮಟ್ಟದ ಬ್ಯಾಂಕರ್ಸ್ ಸಮಿತಿ ಹಾಗೂ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

ರೈತರು ಹಾಗೂ ಸ್ವಯಂ ಉದ್ಯೋಗಿಗಳು ಸಾಲ ವಸೂಲಾತಿಯಲ್ಲಿ ತಾರತಮ್ಯ ಮಾಡುತ್ತಿದ್ದು, ಸಬ್ಸಿಡಿ ಹಣವನ್ನು ಸಾಲದ ಮೊತ್ತಕ್ಕೆ ಹೊಂದಾಣಿಕೆ ಮಾಡಲಾಗುತ್ತಿದೆ ಎಂದು ಅನೇಕರು ದೂರು ನೀಡುತ್ತಿದ್ದಾರೆ. ಈ ಕುರಿತು ಸರಕಾರದ ನಿರ್ದೇಶನಗಳನ್ನು ಪಾಲಿಸಬೇಕು. ಸಹಾಯಧನದ ಹಣವನ್ನು ಯಾವುದೇ ಕಾರಣಕ್ಕೂ ಸಾಲಕ್ಕೆ ಹೊಂದಾಣಿಕೆ ಮಾಡಬಾರದು ಎಂದು ನಿರ್ದೇಶನ ನೀಡಿದರು. ರೈತರಿಗೆ ಹಾಗೂ ಸಣ್ಣ ಉದ್ಯಮಿಗಳಿಗೆ ತೊಂದರೆಯಾಗದಂತೆ ಬ್ಯಾಂಕ್ ಅಧಿಕಾರಿಗಳು ಕ್ರಮ ವಹಿಸಬೇಕೆಂದು ತಿಳಿಸಿದರು.

ಬ್ಯಾಂಕ್ಗಳು ಗ್ರಾಮ ಮಟ್ಟದಲ್ಲಿ ಸಭೆಗಳನ್ನು ಆಯೋಜಿಸಿ, ರೈತರಿಗೆ ಸಾಲ ಮರುಪಾವತಿ ಕುರಿತು ಜಾಗೃತಿ ಮೂಡಿಸಬೇಕು. ಸಾಲ ಮನ್ನಾ ಆಗುವ ನಿರೀಕ್ಷೆಯಲ್ಲಿ ಕಾಯದೆ ಸಾಧ್ಯವಾದಷ್ಟು ಸಾಲ ತೀರಿಸುವಂತೆ ಪ್ರೇರೆಪಿಸಬೇಕು. ಪ್ರಧಾನಮಂತ್ರಿ ಉದ್ಯೋಗ ಸೃಜನ ಕಾರ್ಯಕ್ರಮ ಯೋಜನೆಯಡಿ ಇನ್ನೂ 142 ಅರ್ಜಿಗಳು ಬ್ಯಾಂಕುಗಳಲ್ಲಿ ಬಾಕಿ ಇವೆ. ಬ್ಯಾಂಕುಗಳು ಅವುಗಳನ್ನು ಆದ್ಯತೆಯ ಮೇರೆಗೆ ತಕ್ಷಣ ವಿಲೇವಾರಿ ಮಾಡಬೇಕು ಎಂದು ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಸ್ನೇಹಲ್ ಆರ್. ನಗರದ ಜಿಪಂ ಸಭಾಂಗಣದಲ್ಲಿ ಬುಧವಾರ ನಡೆದ ಜಿಲ್ಲಾ ಮಟ್ಟದ ಬ್ಯಾಂಕರ್ಸ್ ಸಮಿತಿ ಹಾಗೂ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಮಿತಿ ಸಭೆಯಲ್ಲಿ ಮಾತನಾಡಿದರು.

ರೈತರನ್ನು ಯಾವುದೇ ರೀತಿಯಲ್ಲಿ ಕಿರುಕುಳ ನೀಡಬಾರದು. ಇಲ್ಲವಾದಲ್ಲಿ ಅವರು ಮೈಕ್ರೋ ಫೈನಾನ್ಸ್ ಸಂಸ್ಥೆಗಳ ಮೇಲೆ ಅವಲಂಬಿತರಾಗುವ ಪರಿಸ್ಥಿತಿ ಉಂಟಾಗುತ್ತದೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಸಮಿತಿಯ ಅಧ್ಯಕ್ಷರು ಆಗಿರುವ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭುವನೇಶ ಪಾಟೀಲ ಮಾತನಾಡಿ, ಸಾರ್ವಜನಿಕರು ಸಾಲ ಪಡೆಯಲು ಅರ್ಜಿಗಳನ್ನು ಸಲ್ಲಿಸಿದಾಗ ಬ್ಯಾಂಕುಗಳು ಸರಿಯಾಗಿ ಸ್ಪಂದಿಸಿ, ಶೀಘ್ರಗತಿಯಲ್ಲಿ ಸಾಲ ಮಂಜೂರಾತಿಗೆ ಕ್ರಮ ಕೈಗೊಳ್ಳಬೇಕು ಎಂದು ಹೇಳಿದರು.

ಸಾಲ ಮಂಜೂರಾತಿಯಲ್ಲಿ ಅನಗತ್ಯ ವಿಳಂಬವಾದರೆ, ಜನರು ಖಾಸಗಿ ಫೈನಾನ್ಸ್ ಸಂಸ್ಥೆಗಳ ಮೊರೆ ಹೋಗುವ ಸಾಧ್ಯತೆ ಇರುತ್ತದೆ. ಬ್ಯಾಂಕುಗಳು ಸಾರ್ವಜನಿಕರಿಗೆ ಅನುಕೂಲಕರವಾಗಿ ಸ್ಪಂದಿಸಿ, ಕಾರ್ಯನಿರ್ವಹಿಸಬೇಕು. ಚಿಕ್ಕ ಉದ್ಯಮಿಗಳಿಗೆ ಸಾಲ ಮಂಜೂರಾತಿಯಲ್ಲಿ ಯಾವುದೇ ರೀತಿಯ ವಿಳಂಬವಾಗಬಾರದು. ಸಣ್ಣ ಸಣ್ಣ ಕಾರಣಗಳಿಗೆ ಜನರನ್ನು ಅಲೆದಾಡಿಸದೇ ಸಾಲ ಮಂಜೂರು ಮಾಡಬೇಕು ಎಂದರು.

ವಿವಿಧ ಯೋಜನೆಗಳ ಅಡಿಯಲ್ಲಿ ಅರ್ಜಿ ಸಲ್ಲಿಸಿದ ಫಲಾನುಭವಿಗಳಿಗೆ ಬ್ಯಾಂಕುಗಳು ಸಮಯಕ್ಕೆ ಸರಿಯಾಗಿ ಸಾಲ ನೀಡಬೇಕು. ಸಬ್ಸಿಡಿ ಹಣ ಬರುವವರೆಗೆ ಕಾಯಬಾರದು. ವಾಹನ ಸಬ್ಸಿಡಿ ಯೋಜನೆಗಳನ್ನು ಹೊರತುಪಡಿಸಿ, ಬ್ಯಾಂಕುಗಳು ಮಂಜೂರಾದ ಸಾಲದ ಮೊತ್ತ ಮೊದಲು ಬಿಡುಗಡೆ ಮಾಡಬೇಕು ಎಂದು ಸೂಚಿಸಿದರು.

ಕೃಷಿ ಅವಧಿ ಸಾಲವನ್ನು ಬ್ಯಾಂಕುಗಳು ಕೃಷಿಯ ಕೋರ್‌ಚಟುವಟಿಕೆಗಳಿಗಿಂತ ನಾನ್-ಕೋರ್‌ಕ್ಷೇತ್ರಗಳಿಗೆ ಹೆಚ್ಚು ಒತ್ತು ನೀಡುವುದನ್ನು ಸೂಚಿಸಿ, ಮುಂದಿನ ದಿನಗಳಲ್ಲಿ ಕೋರ್‌ಕೃಷಿ ಚಟುವಟಿಕೆಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ಸಾಲ ನೀಡುವಂತೆ ನಿರ್ದೇಶನ ನೀಡಿದರು. ನಾಬಾರ್ಡ್ನ ಜಿಲ್ಲಾ ಅಭಿವೃದ್ಧಿ ವ್ಯವಸ್ಥಾಪಕ ಮಯೂರ್‌ಕಾಂಬಳೆ ಮಾತನಾಡಿ, ಕಳೆದ ಹಣಕಾಸು ವರ್ಷದಲ್ಲಿ ಜಿಲ್ಲೆಯ ಒಟ್ಟು ಸಾಲ ವಿತರಣೆ 11,800 ಕೋಟಿಯಿಂದ 14,800 ಕೋಟಿಗೆ ಏರಿಕೆಯಾಗಿದ್ದು, 3,000 ಕೋಟಿಗಳ ಹೆಚ್ಚಳ ದಾಖಲಾಗಿದೆ. ಇದರಲ್ಲಿ ಎಂಎಸ್ಎಂಇ ಕ್ಷೇತ್ರದಲ್ಲಿ 1,500 ಕೋಟಿ ಹಾಗೂ ಕೃಷಿ ಕ್ಷೇತ್ರದಲ್ಲಿ 1,000 ಕೋಟಿಗಳ ಹೆಚ್ಚಳವಾಗಿದೆ ಎಂದು ಹೇಳಿದರು.

ಸಮಗ್ರ ಕೃಷಿ ಪದ್ಧತಿ ಯೋಜನೆಗೆ ಕೃಷಿ, ತೋಟಗಾರಿಕೆ, ಪಶುಸಂಗೋಪನೆ ಹಾಗೂ ಮೀನುಗಾರಿಕೆ ಇಲಾಖೆಗಳ ಅಧಿಕಾರಿಗಳು ಸಮನ್ವಯದಿಂದ ರೈತರಿಗೆ ಜಾಗೃತಿ ಮೂಡಿಸಬೇಕು. ಒಂದು ಘಟಕಕ್ಕೆ 10 ಲಕ್ಷದಿಂದ 50 ಲಕ್ಷದವರೆಗೆ ಯೋಜನೆ ರೂಪಿಸಬಹುದಾಗಿದ್ದು, ನಬಾರ್ಡ್ ವತಿಯಿಂದ 1.5 ಲಕ್ಷದವರೆಗೆ ಸಬ್ಸಿಡಿ ದೊರೆಯಲಿದೆ ಎಂದರು.

ಜಿಲ್ಲಾ ಅಗ್ರಣೀಯ ಬ್ಯಾಂಕ್ ವ್ಯವಸ್ಥಾಪಕ ಬಸವರಾಜ ಗಡಾದವರ ಮಾತನಾಡಿ, ಜಿಲ್ಲೆಯ ಬ್ಯಾಂಕುಗಳು ರೂ. 13,790.44 ಕೋಟಿಗಳ ಗುರಿಯ ವಿರುದ್ಧ ರೂ.14,827.36 ಕೋಟಿ ಸಾಲ ವಿತರಣೆ ಮಾಡಿ ಗುರಿ ಮೀರಿ ಸಾಧನೆ ಮಾಡಿವೆ ಎಂದು ತಿಳಿಸಿದರು. ಆರ್.ಬಿ.ಐ ಸಹಾಯಕ ಮಹಾಪ್ರಬಂಧಕ ಅರುಣ ಹಾಗೂ ಬ್ಯಾಂಕ್ ಆಫ್ ಬರೋಡಾ ಹುಬ್ಬಳ್ಳಿ ಶಾಖೆಯ ಸಹಾಯಕ ಮಹಾಪ್ರಬಂಧಕ ಹರ್ಷಾ ಇದ್ದರು.

# ಕನಕದಾಸರ ತತ್ವಗಳು ಆಳದಲ್ಲಿ ನೆಲೆಸಬೇಕಿದೆ

## ಕನಕದಾಸರ 12 ಅಡಿ ಕಂಚಿನ ಪುತ್ಥಳಿ ಅನಾವರಣ | ಶಾಸಕ ಶ್ರೀನಿವಾಸ ಮಾನೆ

**ಹಾನಗಲ್:** ಬೇಡವಾದುದನ್ನೇ ಹುಡುಕಲು ಹೋಗುತ್ತೇವೆ. ವಿನಃ ನಮ್ಮೊಳಗಿನ ಶಕ್ತಿ, ಸಾಮರ್ಥ್ಯ ಅರಿಯದಾಗಿದ್ದೇವೆ. ಒತ್ತಡದ ಬದುಕಿಗೆ ಸಿಲುಕಿ ನಮ್ಮನ್ನು ನಾವೇ ಮರೆಯುತ್ತಿದ್ದೇವೆ, ಸಂಸ್ಕೃತಿ ಹಾಳು ಮಾಡುತ್ತಿದ್ದೇವೆ ಎಂದು ಶಾಸಕ ಶ್ರೀನಿವಾಸ ಮಾನೆ ಬೇಸರ ವ್ಯಕ್ತಪಡಿಸಿದರು.

ಇಲ್ಲಿನ ಬಸ್ ನಿಲ್ದಾಣದ ಬಳಿಯ ಕನಕ ಉದ್ಯಾನವನದಲ್ಲಿ ದಾಸಶ್ರೇಷ್ಠ ಭಕ್ತ ಕನಕದಾಸರ 12 ಅಡಿ ಕಂಚಿನ ಪುತ್ಥಳಿ ಅನಾವರಣಗೊಳಿಸಿ ಬಳಿಕ ಡಾ.ಬಾಬು ಜಗಜೀವರಾಂ ಭವನದಲ್ಲಿ ನಡೆದ ಸಮಾರಂಭದಲ್ಲಿ ಅವರು ಮಾತನಾಡಿದರು.

ಆ ದಿನಗಳಲ್ಲಿಯೇ ಜಾತಿ, ವರ್ಣ ಭೇದಭಾವಗಳ ವಿರುದ್ಧ ಧ್ವನಿ ಎತ್ತಿ ಮಾನವೀಯತೆಯೇ ಮಹಾಧರ್ಮ ಎಂದು ಸಾರಿದ ಕನಕದಾಸರ ಕಂಚಿನ ಪುತ್ಥಳಿಯ ಅನಾವರಣದ ಕನಸು ಇಂದು ನನಸಾಗಿದೆ. ಕಂಚಿನ ಪುತ್ಥಳಿ ಅದೊಂದು ಪ್ರತಿಮೆಯಲ್ಲ, ಅದು ಅವರ ಆದರ್ಶ, ಚಿಂತನೆ ಮತ್ತು ಸಂಸ್ಕೃತಿಯ ಪ್ರತೀಕವಾಗಿದೆ. ಮುಂದಿನ ಪೀಳಿಗೆಗೆ ಕನಕದಾಸರ ವಿಚಾರಧಾರೆ ಪರಿಚಯಿಸಲು ಇಂತಹ ಕಾರ್ಯಕ್ರಮ ಪ್ರೇರಣೆಯಾಗಬೇಕಿದೆ. ಕನಕದಾಸರ ತತ್ವಗಳು ಆಳದಲ್ಲಿ ನೆಲೆಸಬೇಕಿದೆ ಎಂದು ಹೇಳಿದರು.

ಯಳವಟ್ಟಿ ಗ್ರಾಮದ ಕಾಗಿನೆಲೆ ಗುರುಪೀಠದ ನಿವೇಶನದಲ್ಲಿ ಸಮುದಾಯ ಭವನ ನಿರ್ಮಾಣಕ್ಕೆ ಮುಂದಿನ 2 ವರ್ಷಗಳಲ್ಲಿ ಹಂತ, ಹಂತವಾಗಿ ಅನುದಾನ ದೊರಕಿಸಲು ಕಾಳಜಿ ವಹಿಸುವ ಭರವಸೆ ನೀಡಿದರು.

ಹಾನಗಲ್ ನಗರದಲ್ಲಿ ಭಕ್ತ ಕನಕದಾಸರ 12 ಅಡಿ ಕಂಚಿನ ಪುತ್ಥಳಿಯನ್ನು ಶಾಸಕ ಶ್ರೀನಿವಾಸ ಮಾನೆ ಅನಾವರಣಗೊಳಿಸಿದರು. ಕಾಗಿನೆಲೆಯ ಕನಕ ಗುರುಪೀಠದ ಶ್ರೀ ನಿರಂಜನಾನಂದಪುರಿ ಸ್ವಾಮೀಜಿ ಇದ್ದರು.

ಸಾನ್ನಿಧ್ಯ ವಹಿಸಿದ್ದ ಕಾಗಿನೆಲೆಯ ಕನಕ ಗುರುಪೀಠದ ಶ್ರೀನಿರಂಜನಾನಂದಪುರಿ ಸ್ವಾಮೀಜಿ ಮಾತನಾಡಿ, ಕಳೆದ ಕೆಲ ವರ್ಷಗಳಿಂದ ಸರ್ಕಲ್ಗಳಲ್ಲಿನ ಮೂರ್ತಿ ಅನಾವರಣ ಕಾರ್ಯಕ್ರಮಕ್ಕೆ ಹೋಗದೇ ಇರಲು ಸಂಕಲ್ಪಿಸಿದ್ದೆ. ಈ ಹಿಂದೆ 2003 ರ ಸಂದರ್ಭದಲ್ಲಿ ಹಾನಗಲ್ ನಗರದ ಕನಕ ಉದ್ಯಾನದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣ ವಿರೋಧಿಸಿ ಹೋರಾಟ ಕೈಗೊಂಡಿದ್ದೆ. ಹಾಗಾಗಿ ಈ ಸಮಾರಂಭದಲ್ಲಿ ಭಾಗವಹಿಸಿದ್ದೇನೆ. ಹಾದಿಬೀದಿಗಳಲ್ಲಿ ಮೂರ್ತಿಗಳು ಇರಬಾರದು ಎನ್ನುವ ಸುಪ್ರೀಂ ಕೋರ್ಟ್ ನಿರ್ದೇಶನವಿದೆ. ದಾರ್ಶನಿಕರ ಹೆಸರಿನಲ್ಲಿ ಸಾಮರಸ್ಯ ಕದಡುವ ಕೆಲಸ ನಡೆಯಬಾರದು. ಪುತ್ಥಳಿಗೆ ಅವಮಾನ ಆಗದ ರೀತಿ ನೋಡಿಕೊಳ್ಳುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದರು. ಹೋತನಹಳ್ಳಿಯ ಸಿದ್ದಾರೂಢ ಮಠದ ಸದ್ಗುರು ಶಂಕರಾನಂದ ಸ್ವಾಮೀಜಿ ಸಮ್ಮುಖ, ಕುರುಬರ ಸಂಘದ ತಾಲೂಕಾಧ್ಯಕ್ಷ ಮಹೇಶ ಪವಾಡಿ ಅಧ್ಯಕ್ಷತೆ ವಹಿಸಿದ್ದರು. ಹಾವೇರಿಯ ಮಾಜಿ ಶಾಸಕ ಶಿವರಾಜ ಸಜ್ಜನರ, ಪ್ರಮುಖರಾದ ಯಲ್ಲಪ್ಪ ಕಿತ್ತೂರ, ಎಂ.ಬಿ.ಕಲಾಲ, ಎ.ಎಸ್.ಬಳ್ಳಾರಿ, ನಾಗರಾಜ ಅನ್ವೇರಿ, ರಾಜೇಂದ್ರ ಹಾವೇರಣ್ಣನವರ, ರವಿ ಒಡೆಯರ, ಮಾಲತೇಶ ಬ್ಯಾಗವಾದಿ, ಸುರೇಶ ದೊಡ್ಡಕುರುಬರ ಇದ್ದರು.

# ಇಗ್ನೊ ಅತೀ ದೊಡ್ಡ ವಿವಿ

**ಧಾರವಾಡ:** ಇಗ್ನೊ ವಿಶ್ವದ ಅತಿದೊಡ್ಡ ದೂರ ಶಿಕ್ಷಣದ ವಿಶ್ವವಿದ್ಯಾಲಯವಾಗಿದೆ. ಗುಣಮಟ್ಟ ಶಿಕ್ಷಣ, ಉತ್ತಮ ವಿಷಯ ಆಧಾರಿತ ಪುಸ್ತಕಗಳು ಆನ್ಲೈನ್ ಮತ್ತು ಆಫ್ಲೈನ್ ಪಾಠಗಳ ಮೂಲಕ ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ನೀಡಲಾಗುತ್ತಿದೆ ಎಂದು ಜನತಾ ಶಿಕ್ಷಣ ಸಮಿತಿ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಹೇಳಿದರು.

ಜೆ.ಎಸ್.ಎಸ್. ಇಗ್ನೊ ಅಧ್ಯಯನ ಕೇಂದ್ರದಲ್ಲಿ ಹೊಸದಾಗಿ ಪ್ರವೇಶ ಪಡೆದ ವಿದ್ಯಾರ್ಥಿಗಳನ್ನುದ್ದೇಶಿಸಿ ಮಾತನಾಡಿ, ಧಾರವಾಡ ಅಧ್ಯಯನ ಕೇಂದ್ರ 1986 ರಲ್ಲಿ ಸ್ಥಾಪನೆಯಾಗಿ ನಿರಂತರ 30 ವರ್ಷ ಉತ್ತರ ಕರ್ನಾಟಕದಲ್ಲಿ ಲಕ್ಷಾಂತರ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುತ್ತಿದೆ ಎಂದರು.

1985ರಲ್ಲಿ ದೆಹಲಿಯಲ್ಲಿ ಮುಖ್ಯ ಆಡಳಿತ ಕಚೇರಿ ಸ್ಥಾಪಿಸಿ ಸುಮಾರು 55 ಪ್ರಾದೇಶಿಕ ಅಧ್ಯಯನ ಕೇಂದ್ರಗಳು ಹಾಗೂ 2567 ಅಧ್ಯಯನ ಕೇಂದ್ರಗಳನ್ನು ಸ್ಥಾಪಿಸಿ, ದೇಶಾದ್ಯಂತ ಶಿಕ್ಷಣ ಕ್ರಾಂತಿಯನ್ನು ತರಲಾಗಿದೆ, ಅಲ್ಲದೆ 29 ಹೊರದೇಶಗಳಲ್ಲಿ ಇಗ್ನೋ ಅಧ್ಯಯನ ಕೇಂದ್ರವನ್ನು ಸ್ಥಾಪಿಸಿದೆ. ಅಲ್ಲಿಯ ಜನರಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿದೆ ಎಂದರು.

ಇಗ್ನೋ ಸಂಯೋಜನ ಅಧಿಕಾರಿ ಡಾ. ಸೂರಜ್ ಜೈನ್ ಸ್ವಾಗತಿಸಿದರು. ಡಾ. ಆರ್. ವ್ಹಿ. ಚಿಟಗುಪ್ಪಿ ನಿರೂಪಿಸಿದರು. ಡಾ. ಮಂಜುನಾಥ ಪೂಜಾರ ವಂದಿಸಿದರು.

ಜನತಾ ಶಿಕ್ಷಣ ಸಮಿತಿ ಕಾರ್ಯದರ್ಶಿ ಡಾ.ಅಜಿತ ಪ್ರಸಾದ ಜೆ.ಎಸ್.ಎಸ್. ಇಗ್ನೊ ಅಧ್ಯಯನ ಕೇಂದ್ರದಲ್ಲಿ ನಡೆದ ಕಾರ್ಯಕ್ರಮ ಉದ್ಘಾಟಿಸಿದರು.

# ಜನಪದ ಸಂಭ್ರಮಕ್ಕೆ ಯುವಜನರ ಮೆರುಗು

ರಟ್ಟೀಹಳ್ಳಿ ಪ್ರಿಯದರ್ಶಿನಿ ಮಹಾವಿದ್ಯಾಲಯದಲ್ಲಿ ಜನಪದ ಸಂಭ್ರಮ ಕಾರ್ಯಕ್ರಮವನ್ನು ಶಾಸಕ ಯು.ಬಿ. ಬಣಕಾರ ಡೊಳ್ಳು ಬಾರಿಸಿ ಉದ್ಘಾಟಿಸಿದರು.

**ರಟ್ಟೀಹಳ್ಳಿ:** ಪಟ್ಟಣದ ಪ್ರಿಯದರ್ಶಿನಿ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ''ಜನಪದ ಸಂಭ್ರಮ'' ಕಾರ್ಯಕ್ರಮ ಗ್ರಾಮೀಣ ಸೊಗಡು, ನಾಡು-ನುಡಿ ಹಾಗೂ ಭಾರತೀಯ ಸಂಸ್ಕೃತಿಯ ವೈಭವವನ್ನು ಅನಾವರಣಗೊಳಿಸಿತು.

ವಿದ್ಯಾರ್ಥಿಗಳು ಸಂಪ್ರದಾಯಿಕ ಉಡುಗೆಯಲ್ಲಿ ಮಿಂಚಿ, ವಿವಿಧ ಜನಪದ ಕಲಾ ವೈಶಿಷ್ಟ್ಯ ಪ್ರದರ್ಶಿಸುವ ಮೂಲಕ ಕಾರ್ಯಕ್ರಮಕ್ಕೆ ವಿಶೇಷ ಮೆರುಗು ತಂದರು.

ಕಾರ್ಯಕ್ರಮವನ್ನು ಶಾಸಕ ಯು.ಬಿ. ಬಣಕಾರ ಡೊಳ್ಳು ವಾದ್ಯ ನುಡಿಸುವ ಮೂಲಕ ಉದ್ಘಾಟಿಸಿ ಮಾತನಾಡಿದರು.

ಗ್ರಾಮೀಣ ಜೀವನ ಶೈಲಿ, ಜನಪದ ಕಲೆ ಹಾಗೂ ಭಾರತೀಯ ಪರಂಪರೆಯನ್ನು ಉಳಿಸಿ ಬೆಳೆಸುವ ಕಾರ್ಯವನ್ನು ವಿದ್ಯಾರ್ಥಿಗಳು ಮಾಡುತ್ತಿರುವುದು ಸಂತಸದ ಸಂಗತಿ. ಇಂತಹ ಕಾರ್ಯಕ್ರಮಗಳು ಯುವ ಪೀಳಿಗೆಗೆ ನಮ್ಮ ಸಂಸ್ಕೃತಿಯ ಮಹತ್ವವನ್ನು ತಿಳಿಸಿಕೊಡುತ್ತವೆ ಎಂದು ಹೇಳಿದರು.

ಮಹಾವಿದ್ಯಾಲಯದ ವಿದ್ಯಾರ್ಥಿಗಳು ದೀಪಾವಳಿ, ಸೀಗೇಹುಣ್ಣಿಮೆ, ರಂಜಾನ್, ನವರಾತ್ರಿ, ಕೃಷ್ಣ ಜನ್ಮಾಷ್ಟಮಿ ಮೊದಲಾದ ಹಬ್ಬಗಳ ಸಂಭ್ರಮವನ್ನು ಪ್ರತಿಬಿಂಬಿಸುವ ಮಾದರಿಗಳನ್ನು ರೂಪಿಸಿ ಎಲ್ಲರ ಗಮನ ಸೆಳೆದರು. ಅಲಂಕೃತ ಎತ್ತುಗಳು, ಕುರಿಗಳು ಹಾಗೂ ಟ್ರಾಕ್ಟರ್ಗಳನ್ನು ತಂದು ಗ್ರಾಮೀಣ ಬದುಕಿನ ಸೊಬಗನ್ನು ಜೀವಂತವಾಗಿ ಮೂಡಿಸಿದರು. ವಿದ್ಯಾರ್ಥಿಗಳ ಈ ವಿಭಿನ್ನ ಪ್ರಯತ್ನಕ್ಕೆ ಗಣ್ಯರು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಸ್ಥೆಯ ಅಧ್ಯಕ್ಷ ಡಿ.ಎಂ. ಸಾಲಿ ಮಾತನಾಡಿ, ನಮ್ಮ ನಾಡಿನ ಸಂಸ್ಕೃತಿ, ಪರಂಪರೆ ಹಾಗೂ ಜನಪದ ಕಲೆಯನ್ನು ವಿದ್ಯಾರ್ಥಿಗಳಿಗೆ ಪರಿಚಯಿಸುವ ಇಂತಹ ಕಾರ್ಯಕ್ರಮಗಳು ದೇಶಿಯ ಮೌಲ್ಯಗಳನ್ನು ಉಳಿಸಿಕೊಳ್ಳಲು ಸಹಕಾರಿಯಾಗುತ್ತವೆ ಎಂದರು.

ಪ್ರಾಚಾರ್ಯ ರಾಘವೇಂದ್ರ ಎ.ಜಿ. ಪ್ರಾಸ್ತಾವಿಕವಾಗಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ಎಸ್.ಬಿ. ಪಾಟೀಲ, ಗುಡ್ಡಾಚಾರಿ ಕಮ್ಮಾರ, ಅಶೋಕ ಹೆಡಿಯಾಲ, ಗಣೇಶ ವೇರ್ಣೇಕರ, ವಿರೇಶ ಕರಡೆಣ್ಣನವರ ಹಾಗೂ ಸಿ.ಎಫ್. ಜಾಡರ ಉಪಸ್ಥಿತರಿದ್ದರು.

ಉಪನ್ಯಾಸಕರಾದ ಮಂಜುನಾಥ ತಲ್ಲೂರ, ರವಿ ಲಕ್ಕೊಳ್ಳಿ, ವನಿತಾ ಕೆಂಚರೆಡ್ಡಿ ಹಾಗೂ ಎಚ್.ಓ. ಸಾಲುಂಕೆ ಕಾರ್ಯಕ್ರಮ ನಿರ್ವಹಿಸಿದರು. ಕಾರ್ಯಕ್ರಮದಲ್ಲಿ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಪಂಚೆ, ಸೀರೆ ಸಂಪ್ರದಾಯಿಕ ಉಡುಪು ಧರಿಸಿ ಭಾಗವಹಿಸಿದ್ದು ವಿಶೇಷ ಆಕರ್ಷಣೆಯಾಯಿತು.

# ಯುವಕರಿಗಾಗಿ ನಲವಡಿಯಲ್ಲಿ ನಮೋ ಕ್ರಿಕೆಟ್

**ಅಣ್ಣಿಗೇರಿ:** ನಲವಡಿ ಜಿಲ್ಲಾ ಪಂಚಾಯತಿ ವ್ಯಾಪ್ತಿಯ ಯುವಕರಿಗಾಗಿ ನಮೋ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಲಾಗಿದೆ.

ಜಿ ಪಂ ಮಾಜಿ ಅಧ್ಯಕ್ಷ ಸುರೇಶ ಗಾಣಿಗೇರ ಉದ್ಘಾಟನೆ ನೆರವೇರಿಸಿ ಯುವಕರು ಕ್ರೀಡಾಮನೋಭಾವನೆ ಬೆಳೆಸಿಕೊಳ್ಳಲು ಸಲಹೆ ನೀಡಿದರು. ಆಯೋಜಕ ದೇವರಾಜ್ ದಾಡಿಬಾವಿ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಹಾಗೂ ಕೇಂದ್ರ ಸಚಿವ ಪ್ರಹ್ಲಾದ ಜೋಶಿ ಕ್ರೀಡೆಗಾಗಿ ಕೇಂದ್ರದಿಂದ ಸಾಕಷ್ಟು ನೆರವು ನೀಡುತ್ತಿದ್ದು ಯುವಕರು ಇದರ ಸದುಪಯೋಗ ಪಡಿಸಿಕೊಳ್ಳಬೇಕೆಂದರು.

ರಘು ಪಾಟೀಲ್, ಬಸವರಾಜ ರಾಮಣ್ಣವರ್, ಎಚ್,ಕೆ. ಪಾಟೀಲ್, ಮಹಾದೇವ ಚುಂಚನೂರ್, ಹನುಮಂತಗೌಡ ರಾಯನಗೌಡ, ಬಸವರಾಜ ರಾಮಣ್ಣವರ, ಡಾ. ಬಸವರಾಜ್ ಯತ್ನಳ್ಳಿ, ಸೋಮಶೇಖರಯ್ಯ ಹಿರೇಮಠ, ಪ್ರತೀಕ್ ಕುಂದಗೋಳ, ಮಂಜುನಾಥ್ ಹಡಪದ, ಅಲೋಕ್ ಕುಲಕರ್ಣಿ ಉಪಸ್ಥಿತರಿದ್ದರು.

ನಲವಡಿ ಜಿಪಂ ಕ್ಷೇತ್ರ ವ್ಯಾಪ್ತಿಯಲ್ಲಿ ನಡೆದ ನಮೋ ಕ್ರಿಕೆಟ್ ಪಂದ್ಯಾವಳಿಯನ್ನು ಜಿ ಪಂ ಮಾಜಿ ಅಧ್ಯಕ್ಷ ಸುರೇಶ ಗಾಣಿಗೇರ ಉದ್ಘಾಟಿಸಿ ಮಾತನಾಡಿದರು.

# ರಸಗೊಬ್ಬರ ಜತೆ ಕಳೆನಾಶಕ ಮಿಶ್ರಣ ಬೇಡ

**ಹಾವೇರಿ:** ಕಳೆನಾಶಕ ಮಿಶ್ರಿತ ಯೂರಿಯಾ ಹರಳುಗಳು ಬಿದ್ದ ಜಾಗದಲ್ಲಿ ಮಾತ್ರ ಕಳೆಗಳು ನಿಯಂತ್ರಣವಾಗಿ ಉಳಿದ ಜಾಗಗಳಲ್ಲಿ ಕಳೆಗಳು ಬೆಳೆಯುತ್ತವೆ ಹಾಗೂ ಅನಾವಶ್ಯಕವಾಗಿ ಯೂರಿಯಾ ರಸಗೊಬ್ಬರ ಪೋಲಾಗುತ್ತದೆ. ಸಾರಜನಕದ ಪ್ರಮಾಣ ಹೆಚ್ಚಾಗಿ ಗೋವಿನಜೋಳಕ್ಕೆ ಲದ್ದಿ ಹುಳು, ಕಾಂಡಕೊರಕ ಹಾಗೂ ಇನ್ನಿತರೆ ರೋಗ ಕೀಟಗಳ ಬಾಧೆ ಹೆಚ್ಚಾಗುತ್ತದೆ. ಈ ಕಾರಣದಿಂದ ಕಳೆನಾಶಕಗಳನ್ನು ಯೂರಿಯಾ ರಸಗೊಬ್ಬರಗಳಲ್ಲಿ ಮಿಶ್ರಣ ಮಾಡಿ ಜಮೀನಿನಲ್ಲಿ ಎರಚಬಾರದು ಎಂದು ಸಹಾಯಕ ಕೃಷಿ ನಿರ್ದೇಶಕ ವೀರಭದ್ರಪ್ಪ ಬಿ.ಎಚ್. ಅವರು ಸಲಹೆ ನೀಡಿದ್ದಾರೆ. ಹಾವೇರಿ ತಾಲೂಕಿನಲ್ಲಿ ರೈತರು ಮುಂಗಾರು ಬೆಳೆಗಳ ಬಿತ್ತನೆ ಚುರುಕು ಗೊಳಿಸಿದ್ದು, ಮುಸುಕಿನಜೋಳ ಮತ್ತು ಸೋಯಾಅವರೆ ಬೆಳೆಗಳಲ್ಲಿ ಬಿತ್ತನೆ ನಂತರ ಅಟ್ರಾಜಿನ್ ಅಥವಾ ಪೆಂಡಿಮಿಥಲಿನ್ ಕಳೆನಾಶಕಗಳನ್ನು ಯೂರಿಯಾ ರಸಗೊಬ್ಬರದಲ್ಲಿ ಮಿಶ್ರಣ ಮಾಡಿ ಜಮೀನಿನಲ್ಲಿ ಎರಚುತ್ತಿರುವುದು ಕಂಡುಬರುತ್ತಿದೆ. ಈ ರೀತಿ ಮಾಡುವುದರಿಂದ ಕಳೆಗಳು ಸಂಪೂರ್ಣವಾಗಿ ನಿಯಂತ್ರಣವಾ ಗುವುದಿಲ್ಲ. 20 ರಿಂದ 25 ದಿನಗಳ ಅವಧಿಯಲ್ಲಿ ಅಂತರ ಬೇಸಾಯ ಮಾಡುವುದರಿಂದ ಕಳೆಗಳನ್ನು ನಿಯಂತ್ರಿಸಿ ಮಣ್ಣು ಏರಿಸಲು ಅನಕೂಲವಾಗುತ್ತದೆ. ಕಳೆನಾಶಕಗಳನ್ನು ಯೂರಿಯಾ ರಸಗೊಬ್ಬರದಲ್ಲಿ ಮಿಶ್ರಣ ಮಾಡಿ ಎರಚುವುದರ ಬದಲಾಗಿ ಸಿಂಪರಣೆ ಮಾಡುವುದರಿಂದ ಕಳೆಗಳನ್ನು ಹತೋಟಿಗೆ ತರಬಹುದು. ಸಿಂಪರಣೆ ಮಾಡಿದ ಜಾಗವನ್ನು ಕಾಲ್ ತುಳಿತ ಮಾಡದೇ ಹಿಮ್ಮುಖವಾಗಿ ನಡೆಯುತ್ತಾ ಸಿಂಪರಣೆ ಮಾಡುವುದರಿಂದ ಸಿಂಪರಣೆ ಮಾಡಿದ ಜಾಗದಲ್ಲಿ ಕಳೆಗಳು ಮರು ಹುಟ್ಟುವುದಿಲ್ಲ ಎಂದು ಸಹಾಯಕ ಕೃಷಿ ನಿರ್ದೇಶಕರು ಸಲಹೆ ನೀಡಿದ್ದಾರೆ.

# ಜಮೀನು ಗಲಾಟೆ: ಗಾಳಿಯಲ್ಲಿ ಗುಂಡು

**ಧಾರವಾಡ:** ಹೊರವಲಯದ ತಡಸಿನಕೊಪ್ಪ ಗ್ರಾಮದ ಬಳಿ ಜಮೀನು ವಿವಾದಕ್ಕೆ ಸಂಬಂಧಿಸಿದಂತೆ ಭೀಕರ ಗಲಾಟೆ ನಡೆದಿದ್ದು, ಗಾಳಿಯಲ್ಲಿ ಗುಂಡು ಹಾರಿಸಿ ವ್ಯಕ್ತಿಯೊಬ್ಬನಿಗೆ ಗಾಯಗೊಳಿಸಿದ ಆರೋಪದ ಮೇಲೆ ಐವರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಎರಡು ಬಣಗಳ ನಡುವೆ ತೀವ್ರ ಮಾತಿನ ಚಕಮಕಿಯ ಘಟನೆ ಕೊನೆಗೆ ಗುಂಡಿನ ದಾಳಿಯಲ್ಲಿ ಅಂತ್ಯವಾಗಿದೆ ಎಂದು ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮೀಷನರ್ ಶಶಿಕುಮಾರ್ ತಿಳಿಸಿದ್ದಾರೆ. ಜಮೀನು ಖರೀದಿ ವಿಚಾರವಾಗಿ ಆರಂಭವಾದ ತೀವ್ರ ಮಾತಿನ ಚಕಮಕಿ ವಿಕೋಪಕ್ಕೆ ತಿರುಗಿದಾಗ ಆರೋಪಿಗಳು ಗಾಳಿಯಲ್ಲಿ ಗುಂಡು ಹಾರಿಸಿದ್ದಾರೆ. ಈ ವೇಳೆ ಸ್ಥಳದಲ್ಲಿದ್ದ ವಿಠ್ಠಲ ಎಂಬುವವರ ಕಾಲಿಗೆ ಗುಂಡು ತಗುಲಿ ತೀವ್ರ ಗಾಯಗೊಂಡಿದ್ದಾರೆ. ಗಾಯಾಳು ವಿಠ್ಠಲ ಜಮೀನಿನ ಆಸಲಿ ಮಾಲೀಕರ ಸಂಬಂಧಿಯಾಗಿದ್ದು, ಸದ್ಯ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಮೊದಲು ಬೌನ್ಸರ್ಗಳು ಗುಂಡು ಹಾರಿಸಿದ್ದಾರೆ ಎಂಬ ಮಾಹಿತಿ ಇತ್ತಾದರೂ, ಘಟನೆಯ ಬಳಿಕ ಲಭ್ಯವಾದ ಪ್ರಮುಖ ವಿಡಿಯೋ ತುಣುಕುಗಳ ಆಧಾರದ ಮೇಲೆ ಪೊಲೀಸರು ತನಿಖೆ ನಡೆಸಿ ಐವರನ್ನು ಬಂಧಿಸಿದ್ದಾರೆ. ಫಿಲೋಮಿನಾ, ಪ್ರವೀಣ್ ಸುತಾರ್, ಇಂದರಪಾಲ್, ಬೆಂಜಮಿನ್ ಮತ್ತು ವಿಶಾಲ್ ಬಂಧಿತ ಆರೋಪಿಗಳು ಎಂದು ಗುರುತಿಸಲಾಗಿದೆ. ಮತ್ತೊಬ್ಬ ಪ್ರಮುಖ ಆರೋಪಿ ಸುಂದರ್‌ಪಾಲ್ ತಲೆಮರೆಸಿಕೊಂಡಿದ್ದು, ಈತನ ಬಂಧನಕ್ಕಾಗಿ ಪ್ರತ್ಯೇಕ ಪೊಲೀಸ್ ತಂಡ ರಚಿಸಿ ಜಾಲ ಬೀಸಲಾಗಿದೆ. ಕಾರ್ಯಾಚರಣೆ ವೇಳೆ ಪೊಲೀಸರು ಆರೋಪಿಗಳಿಂದ ಒಂದು ಪಿಸ್ತೂಲ್, ಒಂದು ರಿವಾಲ್ವರ್‌ಹಾಗೂ ಕೃತ್ಯಕ್ಕೆ ಬಳಸಲಾದ ಫಾರ್ಚೂನರ್‌ಕಾರ್‌ನ್ನು ವಶಪಡಿಸಿಕೊಂಡಿದ್ದಾರೆ.

# ಪ್ರತ್ಯೇಕ ಪಾಲಿಕೆ ಸ್ಪಷ್ಟ ನಿರ್ಧಾರಕ್ಕೆ ಆಗ್ರಹ

**ಧಾರವಾಡ:** ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ಶಿಫಾರಸ್ಸಿಗೆ ರಾಜ್ಯಪಾಲರು ಸಹಿ ಹಾಕಿದ ಬೆನ್ನಲ್ಲೇ ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ಹೋರಾಟದ ಮುಂದಿನ ನಿರ್ಧಾರವನ್ನು ಕೈಗೊಳ್ಳುವಲ್ಲಿ ಕರ್ನಾಟಕ ವಿದ್ಯಾವರ್ಧಕ ಸಂಘದ ಸಭಾಂಗಣದಲ್ಲಿ ಬುಧವಾರ ನಡೆಸಲಾಯಿತು.

ರಾಜ್ಯ ಸರಕಾರ ಕೂಡಲೇ ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ರಚನೆಗೆ ಅಗತ್ಯವಾದ ಕ್ರಮಗಳನ್ನು ಕೈಗೊಳ್ಳಬೇಕು. ಸರಕಾರ ಅಂತಿಮವಾಗಿ ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ಕುರಿತು ಸ್ಪಷ್ಟ ನಿರ್ಧಾರ ತೆಗೆದುಕೊಳ್ಳುವ ವರೆಗೆ ಸದ್ಯ ನಡೆದಿರುವ ಹೋರಾಟ ಮುಂದುವರಿಯಲಿದೆ ಎಂದು ಹೋರಾಟಗಾರರು ಸರಕಾರಕ್ಕೆ ಸಂದೇಶ ರವಾನಿಸಿದರು.

ಹೋರಾಟದ ನೇತೃತ್ವ ವಹಿಸಿದ್ದ ಹಿರಿಯ ನ್ಯಾಯವಾದಿ ಬಿ.ಡಿ. ಹಿರೇಮಠ, ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ಹೋರಾಟ ಸಮಿತಿಯ ಅಧ್ಯಕ್ಷ ಮನೋಜ ಪಾಟೀಲ, ಧಾರವಾಡ ಪ್ರತ್ಯೇಕ ಪಾಲಿಕೆ ಅಭಿವೃದ್ಧಿ ವೇದಿಕೆ ಅಧ್ಯಕ್ಷ ವೆಂಕಟೇಶ ಮಾಚಕನೂರ, ಸ್ವಾಭಿಮಾನಿ ಹೋರಾಟಗಾರರ ಸಮಿತಿ ಅಧ್ಯಕ್ಷ ಗುರುರಾಜ ಹುಣಸಿಮರದ, ವ್ಯಾಪಾರಸ್ಥರ ಸಂಘದ ಮುಖಂಡ ಶಿವಶಂಕರ ಹಂಪಣ್ಣವರ, ಹಿರಿಯ ಕಾಂಗ್ರೆಸ್ ಮುಖಂಡ ವೀರಣ್ಣ ಮತ್ತಿಕಟ್ಟಿ, ಕಾಂಗ್ರೆಸ್ ಮುಖಂಡ ದಾನಪ್ಪ ಕಬ್ಬೇರ, ವಿಠಲ ಕಮ್ಮಾರ, ಮಹಾದೇವ ಹೋರಟ್ಟಿ, ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆ ಮಹಾಪೌರರಾದ ಜ್ಯೋತಿ ಪಾಟೀಲ, ಪಾಲಿಕೆ ಸದಸ್ಯ ಶಿವು ಹಿರೇಮಠ, ಶಂಕರ ಶೇಳಕೆ, ರಾಜಶೇಖರ ಕಮತಿ, ಶಂಭು ಸಾಲಿಮನಿ, ದೀಪಾ ನೀರಲಕಟ್ಟಿ, ಕವಿತಾ ಕಬ್ಬೇರ, ಸುದೀರ ಮುಧೋಳ, ಹೋಟೇಲ್ ಸಂಘದ ಅಧ್ಯಕ್ಷ ಮಹೇಶ ಶೆಟ್ಟಿ ಇದ್ದರು.

ಕರ್ನಾಟಕ ವಿದ್ಯಾವರ್ಧಕ ಸಂಘದ ಸಭಾಂಗಣದಲ್ಲಿ ಧಾರವಾಡ ಪ್ರತ್ಯೇಕ ಮಹಾನಗರ ಪಾಲಿಕೆ ಹೋರಾಟ ಸಮಿತಿಯ ಸಭೆ ನಡೆಯಿತು.

# ಸಮಾಜಮುಖಿ ಸಂಶೋಧನೆಗಳು

**ಧಾರವಾಡ:** ಸಂಶೋಧನಾ ವಿಧಾನಗಳನ್ನು ಕಟ್ಟುನಿಟ್ಟಾಗಿ ಅಳವಡಿಸಿಕೊಂಡಲ್ಲಿ ಮಾತ್ರ ಸಂಶೋಧನಾ ಗುಣಮಟ್ಟ ಕಾಪಾಡಲು ಸಾಧ್ಯ ಎಂದು ಕವಿವಿ ಕುಲಪತಿ ಪ್ರೊ. ಎ.ಎಂ. ಖಾನ್ ಅಭಿಪ್ರಾಯಪಟ್ಟರು. ಕರ್ನಾಟಕ ವಿಶ್ವವಿದ್ಯಾಲಯದ ಡಾ. ಬಾಬು ಜಗಜೀವನರಾಮ ಅಧ್ಯಯನ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ವತಿಯಿಂದ ಎಮ್.ಎಮ್ .ಟಿ.ಸಿ ಕೇಂದ್ರದಲ್ಲಿ ಆಯೋಜಿಸಿದ ಕವಿವಿ ವ್ಯಾಪ್ತಿಯ ಸಂಶೋಧನಾ ವಿದ್ಯಾರ್ಥಿಗಳಿಗಾಗಿ ನಡೆದ 3 ದಿನಗಳ ಸಂಶೋಧನಾ ತರಬೇತಿ ಕಾರ್ಯಾಗಾರದಲ್ಲಿ ಮಾತನಾಡಿದರು. ಸಂಶೋಧನೆಯ ಗುಣಮಟ್ಟವನ್ನು ಕಾಪಾಡಿಕೊಳ್ಳುವ ಜತೆ ಸಂಶೋಧನಾ ಮೌಲ್ಯಗಳನ್ನು ಸಂಶೋಧಕರು ಅಳವಡಿಸಿಕೊಳ್ಳಬೇಕು ಎಂದರು. ಕವಿವಿ ಕುಲಸಚಿವ ಪ್ರೊ. ಮೃತ್ಯುಂಜಯ ಅಗಡಿ ಮಾತನಾಡಿ, ಇಂದಿನ ಸ್ಪರ್ಧಾತ್ಮಕ ಜಗತ್ತಿನಲ್ಲಿ ಪ್ರಸ್ತುತ ಹಾಗೂ ಸಮಾಜಮುಖಿ ಸಂಶೋಧನೆಗಳ ಅಗತ್ಯವಿದೆ ಎಂದರು. ಕವಿವಿ ಹಣಕಾಸು ಅಧಿಕಾರಿ ಪ್ರದೀಪಕುಮಾರ, ಕವಿವಿ ಎಮ್.ಎಮ್.ಟಿ.ಸಿ ಕೇಂದ್ರದ ನಿರ್ದೇಶಕ ಡಾ. ಬಿ.ಹೆಚ್ ನಾಗೂರ, ವಿಭಾಗದ ಸಂಯೋಜಕ ಪ್ರೊ. ಶಿವಶರಣ ಸಿ.ಟಿ, ಡಾ. ಜಯಶ್ರೀ ದೇಶಮಾನೆ, ಡಾ. ಮಹಾದೇವ ಬಿಡ್ನಾಳ, ರಾಜಶೇಖರ ವಿಭೂತಿ, ನಂದೀಶ ಕೋಟೂರ, ಲಕ್ಷ್ಮಿ ಕನಕೂರ ಉಪಸ್ಥಿತರಿದ್ದರು.

## ಸಮಾಚಾರ ಸಣ್ಣದಲ್ಲ

### ಭಟ್ಕಳದ ದುಷ್ಕೃತ್ಯಕ್ಕೆ ಸರಕಾರವೇ ಕಾರಣ

**ಕಾರವಾರ:** ಭಟ್ಕಳದ ಮುರಿನಕಟ್ಟೆ ಧ್ವಂಸ ಪ್ರಕರಣಕ್ಕೆ ಸಂಬಂಧಿಸಿದಂತೆ, ಭಟ್ಕಳದಲ್ಲಿ ನಡೆದಿರುವ ಈ ದುಷ್ಕೃತ್ಯಕ್ಕೆ ರಾಜ್ಯ ಸರಕಾರವೇ ಕಾರಣ ಎಂದು ಬಿಜೆಪಿ ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಆರೋಪಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯ ಸರಕಾರವು ಅಲ್ಪಸಂಖ್ಯಾತರ ಮೇಲಿನ ಪ್ರಕರಣಗಳನ್ನು ಹಿಂಪಡೆದಿರುವುದು ಇಂತಹ ಕೃತ್ಯಗಳಿಗೆ ಪುಷ್ಟಿ ಕೊಟ್ಟಂತಾಗಿದೆ ಎಂದು ಕಾಗೇರಿ ದೂರಿದರು. ನಾವು ಏನು ಮಾಡಿದರೂ ನಡೆಯುತ್ತದೆ ಎಂಬ ಭ್ರಮೆಯಲ್ಲಿ ಕೆಲವರು ಇದ್ದಾರೆ. ಕೃತ್ಯ ತಡೆಯಲು ಹೋದ ಪೊಲೀಸರ ಮೇಲೆಯೇ ಹಲ್ಲೆಗೆ ಮುಂದಾಗುತ್ತಾರೆ ಎಂದರೆ ಇದರ ಅರ್ಥ ಏನು ಎಂದು ಪ್ರಶ್ನಿಸಿದರು. ರಾಷ್ಟ್ರೀಯ ಹೆದ್ದಾರಿ ಅಗಲೀಕರಣಕ್ಕಾಗಿ ಮುರಿನಕಟ್ಟೆಯನ್ನು ಬೇರೆಡೆಗೆ ಸ್ಥಳಾಂತರಿಸಲು ನಿಶ್ಚಯಿಸಲಾಗಿತ್ತು. ಇದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ , ಜಿಲ್ಲಾಡಳಿತ ಮತ್ತು ಹಿಂದೂಗಳಿಗೆ ಸಂಬಂಧಪಟ್ಟ ವಿಷಯವಾಗಿದೆ. ಇದರಲ್ಲಿ ಮುಸ್ಲಿಮರ ಭಾವನೆಗಳಿಗೆ ನೋವುಂಟು ಮಾಡುವ ಯಾವುದೇ ವಿಷಯ ಇರಲಿಲ್ಲ. ಹಿಂದೂಗಳ ಭಾವನೆಗಳಿಗೆ ಬೆಲೆ ಕೊಟ್ಟು ಜಿಲ್ಲಾಡಳಿತದ ಸಹಕಾರದೊಂದಿಗೆ ಹೊಸ ಕಟ್ಟೆಯನ್ನು ನಿರ್ಮಿಸಲಾಗಿತ್ತು ಎಂದು ಸ್ಪಷ್ಟಪಡಿಸಿದರು.

### ನಾಳೆಯಿಂದ ವಿಶ್ವ ಎಂಎಸ್ಎಂಇ ವಿಚಾರ ಸಂಕಿರಣ

**ಬೆಂಗಳೂರು:** ಮೇ 29 ರಿಂದ 31ರವರೆಗೆ ಬೆಂಗಳೂರಿನ ಅರಮನೆ ಮೈದಾನದ ತ್ರಿವಾಸಿನಿಯಲ್ಲಿ 3ನೇ ಆವೃತ್ತಿಯ ಎಫ್‌ಕೆಸಿಸಿಐ ಗ್ಲೋಬಲ್ ಎಂಎಸ್ಎಂಇ ಕಾನ್‌ಕ್ಲೇವ್ 2026 ಆಯೋಜಿಸಲಾಗಿದೆ ಎಂದು ಎಫ್‌ಕೆಸಿಸಿಐನ ಅಧ್ಯಕ್ಷೆ ಉಮಾ ರೆಡ್ಡಿ ತಿಳಿಸಿದರು. ಈ ಕುರಿತು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿರುವ ಅವರು, ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾ ಸಂಸ್ಥೆ ಹಾಗೂ ಪೀಣ್ಯ ಕೈಗಾರಿಕೆ ಸಂಘ ಸಂಯುಕ್ತವಾಗಿ ಈ ಕಾರ್ಯಕ್ರಮ ಆಯೋಜಿಸಿದೆ. ದೊಡ್ಡ ಕೈಗಾರಿಕೆಗಳ ಬೆಳವಣಿಗೆಯಲ್ಲಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಪಾತ್ರ ಮಹತ್ವದ್ದಾಗಿದೆ. ಭಾರತದಲ್ಲಿ ಎಂಎಸ್ಎಂಇ ವಲಯದಿಂದ ಉತ್ಪಾದನೆಯಾಗುವ ವಸ್ತುಗಳಲ್ಲಿ ಶೇ.40ರಷ್ಟು ರಫ್ತು ಆಗುತ್ತಿದೆ, ದೇಶದ ಆರ್ಥಿಕತೆಗೆ ಈ ವಲಯ ದೊಡ್ಡ ಕೊಡುಗೆ ನೀಡುತ್ತಿದೆ. ನವೀನ ತಂತ್ರಜ್ಞಾನಗಳನ್ನುಅಳವಡಿಸಿಕೊಂಡಾಗ ಮಾತ್ರ ಕೈಗಾರಿಕೆಗಳು ಜಾಗತಿಕ ಸ್ಪರ್ಧೆಯಲ್ಲಿ ಮುನ್ನಡೆಯಲು ಸಾಧ್ಯ ಎಂದರು. ಮೇ 29ರಂದು ನಡೆಯುವ ಉದ್ಘಾಟನಾ ಕಾರ್ಯಕ್ರಮದಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವರಾದ ಎಂ.ಬಿ.ಪಾಟೀಲ್, ಶರಣಬಸಪ್ಪ ದರ್ಶನಾಪುರ ಸೇರಿದಂತೆ ಇನ್ನಿತರರು ಭಾಗವಹಿಸಲಿದ್ದಾರೆ. ಎರಡನೇ ದಿನ ಗೃಹ ಸಚಿವ ಜಿ.ಪರಮೇಶ್ವರ್ ಎಂಎಸ್ಎಂಇ ಪ್ರಶಸ್ತಿಗಳನ್ನು ಪ್ರದಾನ ಮಾಡಲಿದ್ದಾರೆ. ಮೂರನೇ ದಿನ ಸಚಿವ ಪ್ರಿಯಾಂಕ್ ಖರ್ಗೆ, ಮಾಜಿ ಉಪ ಮುಖ್ಯಮಂತ್ರಿ ಡಾ. ಸಿ.ಎನ್.ಅಶ್ವಥ್‌ನಾರಾಯಣ ಸೇರಿದಂತೆ ಇನ್ನಿತರರು ಉಪಸ್ಥಿತರಿರಲಿದ್ದಾರೆ ಎಂದರು.

ವಿರಾಮ
ಪ್ರತಿ ಭಾನುವಾರ

ಹೋಗಿದ್ದು ಸಂಪುಟ ಪುನಾರಚನೆಗೆ, ವರಿಷ್ಠರ ಸಭೆಯಲ್ಲಿ ಕೊನೆಗೆ ಚರ್ಚೆಗೆ ಬಂದಿದ್ದು ನಾಯಕತ್ವ ಬದಲಾವಣೆ

# ಕೊನೆಕ್ಷಣದಲ್ಲಿ ಬದಲಾದರೇ ರಾಹುಲ್ ಗಾಂಧಿ?

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಅಧಿಕಾರದಲ್ಲಿ ಮುಂದುವರಿಯುವ ಆತ್ಮವಿಶ್ವಾಸದಲ್ಲಿಯೇ ದೆಹಲಿಯ ಪ್ರಯಾಣಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಾಪಸಾಗುವ ವೇಳೆಗೆ ರಾಜೀನಾಮೆಯ ಆಲೋಚನೆಗೆ ಬರಲು ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಅವರ ಕೊನೆಕ್ಷಣದ ತೀರ್ಮಾನವೇ ಕಾರಣ ಎನ್ನಲಾಗುತ್ತಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ದೆಹಲಿಗೆ ತಲುಪಿದಾಗ ನಾಯಕತ್ವ ಬದಲಾವಣೆಗೆ ಸಂಬಂಧಿಸಿದಂತೆ ಸುದೀರ್ಘ ಚರ್ಚೆ ನಡೆಯುತ್ತದೆ ಎನ್ನುವ ಮಾತು ಕಾಂಗ್ರೆಸ್ ವಲಯದಲ್ಲಿದ್ದರೂ, ಹಲವು ಸಚಿವರು ಸೇರಿದಂತೆ ಕಾಂಗ್ರೆಸ್‌ನ ಬಹುತೇಕ ನಾಯಕರು, ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಲಿದ್ದಾರೆ ಎನ್ನುವ ಬಗ್ಗೆ ಆಲೋಚನೆ ಮಾಡಿರಲಿಲ್ಲ. ಹಿರಿಯ ಸಚಿವರೂ ಕೂಡ ಸಚಿವ ಸಂಪುಟ ಪುನಾರಚನೆಗೆ ಒಪ್ಪಿಗೆ ಪಡೆದುಕೊಂಡು ಬರಲಿದ್ದಾರೆ ಎನ್ನುವ ವಿಶ್ವಾಸದಲ್ಲಿದ್ದರು. ಅದಕ್ಕೆ ಪೂರಕವಾಗಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ರಾಜ್ಯಸಭೆ, ವಿಧಾನಪರಿಷತ್ ಚುನಾವಣೆಗಷ್ಟೇ ಈ ಭೇಟಿ ಸೀಮಿತ. ನಾಯಕತ್ವ ಬದಲಾವಣೆ ಕೇವಲ ಊಹಾಪೋಹ ಎನ್ನುವ ಮೂಲಕ ಎಲ್ಲರನ್ನೂ ದಾರಿತಪ್ಪಿಸುವ ಹೇಳಿಕೆ ನೀಡಿದ್ದರು.

ಆದರೆ ವೇಣುಗೋಪಾಲ್ ಹೇಳಿಕೆ ನೀಡಿ ಅರ್ಧ ಗಂಟೆ ಕಳೆಯುವಷ್ಟರಲ್ಲಿ ಸಿದ್ದರಾಮಯ್ಯ ಅವರು ದೆಹಲಿಯಲ್ಲಿರುವ ಜಾರ್ಜ್ ನಿವಾಸದಲ್ಲಿ ಆಪ್ತ ಸಚಿವರು, ಶಾಸಕರನ್ನು ಕರೆಸಿಕೊಂಡು ತಮ್ಮ ರಾಜೀನಾಮೆ ವಿಷಯ ಪ್ರಸ್ತಾಪಿಸಿದ್ದಾರೆ. ಈ ರೀತಿಯ ತೀರ್ಮಾನಕ್ಕೆ ರಾಹುಲ್ ಗಾಂಧಿ ಅವರ ಪರೋಕ್ಷ ಸಂದೇಶವೇ ಕಾರಣ ಎನ್ನುವ ಮಾತುಗಳು ಸಿದ್ದರಾಮಯ್ಯ ಅವರ ಆಪ್ತ ವಲಯದಲ್ಲಿ ಕೇಳಿಬರುತ್ತಿದೆ.

**ರಾಜ್ಯಸಭೆಗೆ ಆಹ್ವಾನವಿತ್ತ ರಾಗಾ:** ಇಂದಿರಾ ಭವನದಲ್ಲಿ ನಡೆದ ಸಭೆಯಲ್ಲಿ ರಾಹುಲ್ ಗಾಂಧಿ ನೇರವಾಗಿ ಸಿದ್ದರಾಮಯ್ಯ ಅವರಿಗೆ ರಾಜೀನಾಮೆ ನೀಡಲು ಸೂಚನೆ ನೀಡಿಲ್ಲ. ಬದಲಿಗೆ ಮುಂದಿನ ತಿಂಗಳು ನಡೆಯಲಿರುವ ರಾಜ್ಯಸಭಾ ಚುನಾವಣೆಯಲ್ಲಿ ಕರ್ನಾಟಕದಿಂದ ಸ್ಪರ್ಧಿಸಿ ದೆಹಲಿಗೆ ಬರುವಂತೆ, ಇಲ್ಲಿ ರಾಷ್ಟ್ರ ಮಟ್ಟದಲ್ಲಿ ಒಬಿಸಿ ಸಂಘಟನೆಯಲ್ಲಿ ತೊಡಗಿಸಿಕೊಳ್ಳುವಂತೆ ಸಲಹೆ ನೀಡಿದ್ದಾರೆ. ಇದಕ್ಕೂ ಮೊದಲು ರಾಹುಲ್ ಗಾಂಧಿ ಅವರು ಸೋನಿಯಾ ಗಾಂಧಿ ಅವರೊಂದಿಗೆ ಚರ್ಚಿಸಿದ್ದು, ಸೋನಿಯಾ ಅವರು ಡಿಕೆಶಿಗೆ 'ಕೂಲಿ' ನೀಡುವುದು ಸೂಕ್ತ ಎನ್ನುವ ಮಾತನ್ನು ಹೇಳಿದ್ದರು ಎನ್ನಲಾಗಿದೆ. ಸಭೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಸರಕಾರ ರಚನೆಯ ಸಮಯದಲ್ಲಿ ಆಗಿರುವ ಮೌಖಿಕ ಒಪ್ಪಂದದ ಬಗ್ಗೆಯೂ ರಾಹುಲ್ ಗಮನ ಸೆಳೆದಿದ್ದಾರೆ. ಈ ಎಲ್ಲ ಬೆಳವಣಿಗೆಯ ಬೆನ್ನಲ್ಲೇ ರಾಜೀನಾಮೆ ನೀಡಲು ಮುಂದಾಗಿರುವ ಸಿದ್ದರಾಮಯ್ಯ ಅವರು, 'ನನಗೆ ರಾಷ್ಟ್ರ ರಾಜಕಾರಣ ಒಗ್ಗಿ ಬರುವುದಿಲ್ಲ. ಆದ್ದರಿಂದ ರಾಜ್ಯಸಭೆಗೆ ಬರುವುದಿಲ್ಲ. ಆದರೆ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ' ಎನ್ನುವ ಮಾತನ್ನು ಹೇಳಿದ್ದಾರೆ ಎಂದು ತಿಳಿದುಬಂದಿದೆ.

### ರಾಗಾ ಮಾತಿಗೆ ಕಟ್ಟುಬಿದ್ದ ಸಿದ್ದರಾಮಯ್ಯ



ಸಿದ್ದರಾಮಯ್ಯ ಅವರು ಇಷ್ಟು ಸುಲಭವಾಗಿ ರಾಜೀನಾಮೆಗೆ ಒಪ್ಪಿ, ಆಪ್ತರ ವಿರೋಧದ ನಡುವೆಯೂ ರಾಜೀನಾಮೆಗೆ ಮುಂದಾಗುತ್ತಾರೆ ಎಂದು ಅನೇಕರು ಭಾವಿಸಿರಲಿಲ್ಲ. ಆದರೆ ರಾಹುಲ್ ಗಾಂಧಿ ಅವರು ರಾಜೀನಾಮೆಗೆ ಪರೋಕ್ಷ ಸೂಚನೆ ನೀಡುತ್ತಿದ್ದಂತೆ, ರಾಗಾ ಮಾತಿಗೆ ಬೆಲೆ ಕೊಟ್ಟು ಈ ತೀರ್ಮಾನಕ್ಕೆ ಬಂದಿದ್ದಾರೆ ಎನ್ನಲಾಗಿದೆ. ಏಕೆಂದರೆ, ಈ ಹಿಂದೆ ಜೆಡಿಎಸ್‌ನಿಂದ ಹೊರ ಬಂದ ಸಮಯದಲ್ಲಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಇಬ್ಬರೂ ಸಿದ್ದರಾಮಯ್ಯ ಅವರನ್ನು ಪಕ್ಷಕ್ಕೆ ಕರೆತಂದು ಸೂಕ್ತ ಸ್ಥಾನಮಾನ ನೀಡಿದ್ದರು. 2023 ವಿಧಾನಸಭಾ ಚುನಾವಣೆಯ ಬಳಿಕ ಡಿ.ಕೆ.ಶಿವಕುಮಾರ್ ಅವರಿಗೆ ಮೊದಲ ಅವಧಿಯಲ್ಲಿ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎನ್ನುವ ಪ್ರಸ್ತಾಪ ಬಂದಾಗಲೂ ರಾಹುಲ್ ಗಾಂಧಿ ಅವರು ಸಿದ್ದರಾಮಯ್ಯ ಪರ ಬ್ಯಾಟ್ ಬೀಸಿದ್ದರು. ಎರಡೂವರೆ ವರ್ಷದ ಬಳಿಕವೂ ಆರು ತಿಂಗಳು ಹೆಚ್ಚುವರಿಯಾಗಿ ಅಧಿಕಾರದಲ್ಲಿ ಮುಂದುವರೆಯಲು ರಾಗಾ ಮೌನವೇ ಪ್ರಮುಖ ಕಾರಣ. ಆದ್ದರಿಂದ ಇದೀಗ ಅವರು ಕೇಳಿದಾಗ ವಿರೋಧಿಸಿ, ಪ್ರತಿಭಟಿಸುವುದು ಸರಿಯಲ್ಲ ಎನ್ನುವ ಕಾರಣಕ್ಕೆ ರಾಹುಲ್ ಮಾತಿಗೆ ಎದುರಾಡದೆ, ರಾಜ್ಯಸಭೆಗೆ ಬರುವುದಿಲ್ಲ ಎನ್ನುವ ಜತೆಗೆ ರಾಜೀನಾಮೆ ನೀಡಲು ಸಮ್ಮತಿ ಸೂಚಿಸಿ ಸಭೆಯಿಂದ ಹೊರ ಬಂದಿದ್ದಾರೆ ಎನ್ನಲಾಗಿದೆ.

ಸಿಎಂ ಅಧಿಕೃತ ನಿವಾಸ ಕಾವೇರಿ ಮುಂದೆ ಸಿದ್ದು ಕಾಣಲು ಬಂದ ಅಭಿಮಾನಿಗಳು.

### ಸಂಪುಟ ಪುನಾರಚನೆಗೆ ಸಮಯ ಕೇಳಿದ್ದ ಸಿದ್ದು!

ಆಪ್ತ ಮೂಲಗಳ ಪ್ರಕಾರ ಸಿದ್ದರಾಮಯ್ಯ ಅವರೇ ರಾಹುಲ್ ಗಾಂಧಿ ಅವರನ್ನು ಭೇಟಿಯಾಗಲು ಅವಕಾಶ ಕೇಳಿದ್ದರು. ಶುಕ್ರವಾರ ಅಥವಾ ಶನಿವಾರದಂದು ರಾಹುಲ್ ಗಾಂಧಿ ಕಚೇರಿಗೆ ಕರೆ ಮಾಡಿದ್ದ ಸಿದ್ದರಾಮಯ್ಯ ಅವರು ಸಚಿವ ಸಂಪುಟ ಪುನಾರಚನೆ ಬಗ್ಗೆ ಚರ್ಚಿಸಲು ಸಮಯ ಬೇಕೆಂದು ಕೇಳಿದ್ದರು. ರಾಹುಲ್ ಸಹ ಚರ್ಚೆಗೆ ಬರುವಂತೆ ಕೆ.ಸಿ.ವೇಣು ಗೋಪಾಲ್ ಮೂಲಕ ಕರೆ ಕಳುಹಿಸಿದ್ದರು. ದೆಹಲಿಗೆ ತೆರಳುವ ಸಮಯದಲ್ಲಿ, ನಾಯಕತ್ವ ಬದಲಾವಣೆ ಬಗ್ಗೆ ಪ್ರಸ್ತಾಪವಾಗುತ್ತದೆ ಎನ್ನುವ ಅಂದಾಜು ಇದ್ದರೂ, ಸಂಪುಟ ಪುನಾರಚನೆಗೆ ಅವಕಾಶ ಪಡೆಯ ಬಹುದು. ಹೆಚ್ಚೆಂದರೆ ಪುನಾರಚನೆ ವೇಳೆ ಡಿಕೆ ಆಪ್ತರಿಗೆ ಹೆಚ್ಚಿನ ಮಣೆ ಹಾಕಬೇಕಾಗುತ್ತದೆ ಎನ್ನುವ ಲೆಕ್ಕಾಚಾರದಲ್ಲಿದ್ದರು. ದೆಹಲಿಯಲ್ಲಿ ಕ್ಲೋಸ್ ಡೋರ್ ಮೀಟಿಂಗ್‌ನಲ್ಲಿ ಕೂತಾಗ, ರಾಹುಲ್ ಗಾಂಧಿ ಅವರು ರಾಜ್ಯಸಭೆಗೆ ಬರುವ ವಿಷಯ ಪ್ರಸ್ತಾಪಿಸುತ್ತಿದ್ದಂತೆ ರಾಜೀನಾಮೆಯ ಸುಳಿವು ಸಿಕ್ಕಿದೆ

ಏರಿದ ತೈಲ ದರ: ಜೂನ್-ಆಗಸ್ಟ್ ಮಧ್ಯೆ ಸಂಚಾರ ಕಡಿತ

## ಟಾಟಾ ಏರ್‌ಲೈನ್ಸ್ ಯಾನ ಕಡಿತ

**ದೆಹಲಿ:** ಹೆಚ್ಚುತ್ತಿರುವ ಇಂಧನ ಬೆಲೆ ಮತ್ತು ಕಾರ್ಯಾಚರಣೆಯ ವೆಚ್ಚವನ್ನು ಸರಿದೂಗಿಸಲು, ಟಾಟಾ ಗ್ರೂಪ್ ಒಡೆತನದ ಏರ್ ಇಂಡಿಯಾ, ಜೂನ್ ಮತ್ತು ಆಗಸ್ಟ್ 2026ರ ನಡುವೆ ಆಯ್ದ ದೇಶೀಯ ಮತ್ತು ಅಂತರರಾಷ್ಟ್ರೀಯ ಮಾರ್ಗಗಳಲ್ಲಿನ ವಿಮಾನ ಸಂಚಾರವನ್ನು ತಾತ್ಕಾಲಿಕವಾಗಿ ಕಡಿಮೆ ಮಾಡಲಿದೆ.

ಜೂನ್ ಮತ್ತು ಆಗಸ್ಟ್ 2026 ರ ನಡುವೆ ಆಯ್ದ ಅಂತರರಾಷ್ಟ್ರೀಯ ಸೇವೆಗಳಿಗೆ ನಾವು ಈ ಹಿಂದೆ ಘೋಷಿಸಿದ ಹೊಂದಾಣಿಕೆಗಳ ಮುಂದುವರಿಕೆಯಾಗಿ, ಅದೇ ಅವಧಿಯಲ್ಲಿ ನಾವು ಕೆಲವು ದೇಶೀಯ ಮಾರ್ಗಗಳಲ್ಲಿ ಕಾರ್ಯಾಚರಣೆಗಳನ್ನು ತಾತ್ಕಾಲಿಕವಾಗಿ ಕಡಿತ ಮಾಡಲಿದ್ದೇವೆ, ಆಯ್ದ ಮಾರ್ಗಗಳಲ್ಲಿ ವಿಮಾನ ಪ್ರಯಾಣವನ್ನು ಕಡಿಮೆ ಮಾಡಿದ್ದೇವೆ ಎಂದು ಏರ್ ಇಂಡಿಯಾ ತಿಳಿಸಿದೆ.

ಪಿಟಿಐ ಮೂಲಗಳ ಪ್ರಕಾರ, ವಿಮಾನಯಾನ ಸಂಸ್ಥೆಯು ತನ್ನ ದೇಶೀಯ ವಿಮಾನಗಳಲ್ಲಿ ಸುಮಾರು ಶೇ.20-22 ರಷ್ಟು ಕಡಿತಗೊಳಿಸುವ ನಿರೀಕ್ಷೆಯಿದೆ. ಹೆಚ್ಚುತ್ತಿರುವ ಆರ್ಥಿಕ ಮತ್ತು ಕಾರ್ಯಾಚರಣೆಯ ಒತ್ತಡಗಳ ನಡುವೆ ಏರ್ ಇಂಡಿಯಾ ಈಗಾಗಲೇ ತನ್ನ ಅಂತರರಾಷ್ಟ್ರೀಯ ಕಾರ್ಯಾಚರಣೆಗಳಲ್ಲಿ ಶೇ.27ರಷ್ಟು ಕಡಿತಗೊಳಿಸಿದೆ ಎಂದು ಮೂಲಗಳು ತಿಳಿಸಿವೆ.

**ವಾರಕ್ಕೆ 4,400 ವಿಮಾನ ಸೇವೆ:** ಏರ್ ಇಂಡಿಯಾ ಪ್ರಸ್ತುತ ವಾರಕ್ಕೆ ಸುಮಾರು 4,400 ವಿಮಾನಗಳನ್ನು ನಿರ್ವಹಿಸುತ್ತಿದೆ, ಇದರಲ್ಲಿ ಸುಮಾರು 3,600 ದೇಶೀಯ ಮತ್ತು 800 ಅಂತರರಾಷ್ಟ್ರೀಯ ಸೇವೆಗಳು ಸೇರಿವೆ. ಹೆಚ್ಚಿದ ಇಂಧನ ಬೆಲೆಗಳ ಕಾರ್ಯಾಚರಣೆಯ ಮೇಲೆ ನಿರಂತರ ಪರಿಣಾಮ ಬೀರುವುದರಿಂದ ತಾತ್ಕಾಲಿಕ ಹೊಂದಾಣಿಕೆಗಳು ಅಗತ್ಯವಾಗಿವೆ ಎಂದು ವಿಮಾನಯಾನ ಸಂಸ್ಥೆ ತಿಳಿಸಿದೆ.

ಪರಿಸ್ಥಿತಿಗಳು ಸ್ಥಿರವಾದಂತೆ ವಿಮಾನ ಸೇವೆ ಮರು ಸ್ಥಾಪಿಸುವ ಉದ್ದೇಶದಿಂದ ಏರ್ ಇಂಡಿಯಾ ಬೇಡಿಕೆ ಮತ್ತು ಕಾರ್ಯಾಚರಣೆಯ ಪರಿಸ್ಥಿತಿಗಳನ್ನು ನಿಕಟವಾಗಿ ಮೇಲ್ವಿಚಾರಣೆ ಮಾಡುವುದನ್ನು ಮುಂದುವರಿಸುತ್ತದೆ ಎಂದು ಹೇಳಿಕೆಯಲ್ಲಿ ಸೇರಿಸಲಾಗಿದೆ. ವಿಮಾನ ಕಡಿಮೆ ಮಾಡಿದ ಸ್ಥಳಗಳಿಗೆ ಈಗಾಗಲೇ ಟಿಕೆಟ್ ಬುಕ್ ಮಾಡಿರುವ ಪ್ರಯಾಣಿಕರಿಗೆ ಪರ್ಯಾಯ ವಿಮಾನ ವ್ಯವಸ್ಥೆಗಳು, ಉಚಿತವಾಗಿ ದಿನಾಂಕ ಬದಲಾವಣೆಗಳು ಅಥವಾ ಪೂರ್ಣ ಮರುಪಾವತಿಗಳ ಮೂಲಕ ಸಹಾಯ ಮಾಡಲಾಗುವುದು ಎಂದು ವಿಮಾನಯಾನ ಸಂಸ್ಥೆ ಭರವಸೆ ನೀಡಿದೆ.

ಜಿಲ್ಲೆಯಾದ್ಯಂತ ಒಟ್ಟು 10,223 ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ಬೆಳೆ

## ರೇಷ್ಮೆ ಉತ್ಪಾದನೆ: ತುಮಕೂರು ರಾಜ್ಯದಲ್ಲೇ ಪ್ರಥಮ

ರಂಗನಾಥ ಕೆ. ಹೊನ್ನಮರಡಿ ತುಮಕೂರು

ಸಾಮಾನ್ಯವಾಗಿ ತೆಂಗು ಮತ್ತು ಅಡಿಕೆಗೆ ಹೆಸರಾದ ಕಲ್ಪತರು ನಾಡು ತುಮಕೂರು ಈಗ ರೇಷ್ಮೆ ಕೃಷಿಯಲ್ಲೂ ರಾಜ್ಯಕ್ಕೆ ಮಾದರಿಯಾಗಿ ಹೊರಹೊಮ್ಮಿದೆ. 2025-26ನೇ ಸಾಲಿನ ರೇಷ್ಮೆ ಇಲಾಖೆಯ ಇತ್ತೀಚಿನ ಅಂಕಿ ಅಂಶಗಳ ಪ್ರಕಾರ, ರೇಷ್ಮೆ ಗೂಡು ಉತ್ಪಾದನೆಯಲ್ಲಿ ಜಿಲ್ಲೆಯು ರಾಜ್ಯದಲ್ಲೇ ಪ್ರಥಮ ಸ್ಥಾನ ಪಡೆದು ಹೊಸ ದಾಖಲೆ ಬರೆದಿದೆ.

ಮಾ 2026ರ ಅಂತ್ಯಕ್ಕೆ ಲಭ್ಯವಿರುವ ದತ್ತಾಂಶಗಳ ಪ್ರಕಾರ, ಜಿಲ್ಲೆಯ ರೈತರು ರೇಷ್ಮೆ ಕೃಷಿಯನ್ನು ಒಂದು ಲಾಭದಾಯಕ ಉದ್ದಿಮೆಯಾಗಿ ಸ್ವೀಕರಿಸಿದ್ದಾರೆ. ಜಿಲ್ಲೆಯಾದ್ಯಂತ ಒಟ್ಟು 10,223 ಹೆಕ್ಟೇರ್ ಪ್ರದೇಶದಲ್ಲಿ ಹಿಪ್ಪುನೇರಳೆ ಬೆಳೆಯುವ ಗುರಿಯನ್ನು ತಲುಪಲಾಗಿದ್ದು, ಹಸಿರು ಹೊದಿಕೆಯಂತೆ ಕಾಡುತ್ತಿರುವ ಹಿಪ್ಪುನೇರಳೆ ತೋಟಗಳು ಜಿಲ್ಲೆಯ ಆರ್ಥಿಕತೆಗೆ ಬಲ ತುಂಬುತ್ತಿವೆ.

**ತಾಲೂಕುಗಳ ನಡುವೆ ರೇಷ್ಮೆ ಪೈಪೋಟಿ:** ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ರೇಷ್ಮೆ ಕೃಷಿ ಸಮೃದ್ಧವಾಗಿ ಬೆಳೆದಿದೆ, ಸಿರಾ ಮತ್ತು ಪಾವಗಡದ ಭಾಗಗಳಲ್ಲಿ ನೀರಿನ ಮಿತಬಳಕೆಯೊಂದಿಗೆ ರೇಷ್ಮೆ ಕೃಷಿ ಕ್ರಾಂತಿ ಮಾಡಲಾಗಿದೆ. ಸಿರಾ ತಾಲೂಕು 1921 ಹೆಕ್ಟೇರ್ ಹಾಗೂ ಪಾವಗಡ 1845 ಹೆಕ್ಟೇರ್ ವಿಸ್ತೀರ್ಣದೊಂದಿಗೆ ಜಿಲ್ಲೆಯ ಪ್ರಮುಖ ರೇಷ್ಮೆ ಕೇಂದ್ರಗಳಾಗಿ ಹೊರಹೊಮ್ಮಿವೆ. ಜಿಲ್ಲೆಯ ಒಟ್ಟು ಸಾಧನೆಯಲ್ಲಿ ಕುಣಿಗಲ್ ಬಿತ್ತನೆ ವಲಯದ ಪಾಲು ಅತಿ ದೊಡ್ಡದಾಗಿದ್ದು ಬರೊಬ್ಬರಿ 2209 ಹೆಕ್ಟೇರ್ ವಿಸ್ತೀರ್ಣದಲ್ಲಿ ಸಾಧನೆ ಮಾಡಿರುವ ಈ ವಲಯ, ಜಿಲ್ಲೆಯ ರೇಷ್ಮೆ ಕೃಷಿಯ ಬೆನ್ನೆಲುಬಾಗಿ ನಿಂತಿದೆ.

### 5 ಸಾವಿರ ಮೆಟ್ರಿಕ್ ಟನ್ ಗೂಡು ಉತ್ಪಾದನೆ!

ಜಿಲ್ಲೆಯ ರೈತರ ಶ್ರಮದ ಫಲವಾಗಿ ಒಟ್ಟು 5008.746 ಮೆಟ್ರಿಕ್ ಟನ್ ರೇಷ್ಮೆ ಗೂಡು ಉತ್ಪಾದನೆಯಾಗಿದೆ. ಇದರಲ್ಲಿ ಕೇವಲ ಪ್ರಮಾಣ ಮಾತ್ರವಲ್ಲದೆ ಗುಣಮಟ್ಟಕ್ಕೂ ಆದ್ಯತೆ ನೀಡಲಾಗಿದೆ. ಉತ್ತಮ ಗುಣ ಮಟ್ಟದ ದ್ವಿತಳಿ ರೇಷ್ಮೆಯು ಸುಮಾರು 2974.669 ಮೆ. ಟನ್ ಉತ್ಪಾದನೆಯಾ ಗಿದ್ದರೆ, ಮಿಶ್ರ ತಳಿ 1676.371 ಮೆ.ಟನ್ ಹಾಗೂ ಸಾಂಪ್ರದಾಯಿಕ ಮೈಸೂರು ತಳಿ 357.706 ಮೆ.ಟನ್‌ನಷ್ಟು ಉತ್ಪತ್ತಿಯಾಗಿದೆ.

### ರಾಜ್ಯದಲ್ಲೇ ಮೊದಲ ಸ್ಥಾನ

ರೇಷ್ಮೆ ಇಲಾಖೆಯ ದಕ್ಷ ಮಾರ್ಗದರ್ಶನ ಮತ್ತು ರೈತರ ಅವಿರತ ಶ್ರಮದಿಂದಾಗಿ ತುಮಕೂರು ಜಿಲ್ಲೆಯು ಇಂದು ಕರ್ನಾಟಕದ ರೇಷ್ಮೆ ಭೂಪಟದಲ್ಲಿ ನಂಬರ್ ಒನ್ ಸ್ಥಾನಕ್ಕೆ ಏರಿದೆ. ಸುಮಾರು 7607.87 ಲಕ್ಷದಷ್ಟು ಚಾಕಿ ಮೊಟ್ಟೆಗಳ ಪೂರೈಕೆಯು ಜಿಲ್ಲೆಯ ರೇಷ್ಮೆ ಕೃಷಿಯ ವಿಸ್ತಾರವನ್ನು ಎತ್ತಿ ತೋರಿಸುತ್ತದೆ.

ಬೇರೆ ಕೃಷಿಗಳಿಗೆ ಹೋಲಿಸಿದರೆ ರೇಷ್ಮೆ ನಮಗೆ ಕೈ ಹಿಡಿಯುವ ಬೆಳೆ. ವರ್ಷಪೂರ್ತಿ ಕಷ್ಟಪಟ್ಟು ಕಾಯುವ ಅಗತ್ಯವಿಲ್ಲ, ಕೇವಲ 26 ರಿಂದ 30 ದಿನಗಳಲ್ಲಿ ಒಂದು ಇಳುವರಿ (ಬೆಳೆ) ಕೈಗೆ ಬರುತ್ತದೆ. ವರ್ಷದಲ್ಲಿ ಕನಿಷ್ಠ 5 ರಿಂದ 6 ಬಾರಿ ಆದಾಯ ನೋಡಬಹುದು. ಸರಿಯಾಗಿ ನಿರ್ವಹಣೆ ಮಾಡಿದರೆ ತಿಂಗಳು ತಿಂಗಳು ಕೈಯಲ್ಲಿ ಹಣ ಓಡಾಡುತ್ತಿರುತ್ತದೆ.

ನಾಗರಾಜು, ಪಾವಗಡ, ರೈತ

# ಹಳೆಯ ಆಧಾರ್ ಆ್ಯಪ್‌ಗೆ ಬ್ರೇಕ್: ಹೊಸ ಆ್ಯಪ್‌ಗೆ ಹಲವು ಸುರಕ್ಷೆ

## ಡಿಜಿಟಲ್ ವಂಚನೆ ತಡೆ, ಸಾರ್ವಜನಿಕರ ಬಯೋಮೆಟ್ರಿಕ್ ಡೇಟಾ ರಕ್ಷಣೆಗೆ ಪ್ರಾಧಿಕಾರದಿಂದ ಹೊಸ ತಂತ್ರಜ್ಞಾನ ಜಾರಿ

ದೇಶದ ಪ್ರತಿಯೊಬ್ಬ ನಾಗರಿಕನ ಅತ್ಯಗತ್ಯ ಗುರುತಿನ ಚೀಟಿಯಾಗಿರುವ ಆಧಾರ್ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರ ಹಾಗೂ ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ (UIDAI) ಅತ್ಯಂತ ಮಹತ್ವದ ಮತ್ತು ದೊಡ್ಡ ಬದಲಾವಣೆಗೆ ಮುಂದಾಗಿದೆ. ನಿಮ್ಮ ಮೊಬೈಲ್‌ನಲ್ಲಿದ್ದ ಹಳೆಯ mAadhaar ಆ್ಯಪ್ ಇನ್ನುಂದೆ ಇತಿಹಾಸ ಪುಟ ಸೇರಲಿದ್ದು, ಅದರ ಜಾಗಕ್ಕೆ ಅತ್ಯಾಧುನಿಕ ತಂತ್ರಜ್ಞಾನ ಹಾಗೂ ಬಿಗಿ ಭದ್ರತೆಯುಳ್ಳ ಹೊಸ ಅಚಿಭಜಚಚಿಟ್ಟ ಆ್ಯಪ್ ಅನ್ನು ಅಧಿಕೃತವಾಗಿ ಪರಿಚಯಿಸಲಾಗಿದೆ. ಡಿಜಿಟಲ್ ವಂಚನೆಗಳಿಗೆ ಸಂಪೂರ್ಣ ಬ್ರೇಕ್ ಹಾಕುವ ಮತ್ತು ಸಾರ್ವಜನಿಕರ ಬಯೋಮೆಟ್ರಿಕ್ ಡೇಟಾವನ್ನು ದುರ್ಬಳಕೆಯಿಂದ ರಕ್ಷಿಸುವ ಉದ್ದೇಶದಿಂದ ಈ ಕ್ರಾಂತಿಕಾರಿ ಹೆಜ್ಜೆ ಇಡಲಾಗಿದೆ. ಇದರೊಂದಿಗೆ ನಾಗರಿಕರಿಗೆ ಮತ್ತೊಂದು ಭರ್ಜರಿ' ರಿಯಾಯಿತಿಯನ್ನೂ ಸರಕಾರ ಘೋಷಿಸಿದೆ.

### ಹಳೆಯ ಆ್ಯಪ್ ಬಂದ್ ಏಕೆ ?

ಇಷ್ಟು ದಿನ ಬಳಕೆಯಲ್ಲಿದ್ದ ಹಳೆಯ mAadhaar ಆ್ಯಪ್ ಸಾರ್ವಜನಿಕರಿಗೆ ಸೇವೆಗಳನ್ನು ಒದಗಿಸುತ್ತಿತ್ತಾದರೂ, ಸುರಕ್ಷತೆಯ ದೃಷ್ಟಿಯಿಂದ ಕೆಲವು ಮಿತಿಗಳನ್ನು ಹೊಂದಿತ್ತು. ಮುಖ್ಯವಾಗಿ ಹಳೆಯ ಆ್ಯಪ್‌ನಲ್ಲಿ ಡೇಟಾ ಸೋರಿಕೆ ದೂರುಗಳು ಬರುತ್ತಿದ್ದವು. ದೃಢೀಕರಣ (Authentication) ಪ್ರಕ್ರಿಯೆಯ ಸಮಯ ದಲ್ಲಿ ಬಳಕೆದಾರರ ಸಂಪೂರ್ಣ ಆಧಾರ್ ವಿವರಗಳು ಪರದೆಯ ಮೇಲೆ ಕಾಣಿಸಿಕೊಳ್ಳುತ್ತಿದ್ದವು. ಇದು ಸಾರ್ವಜನಿಕ ಸ್ಥಳಗಳಲ್ಲಿ ಡೇಟಾ ದುರ್ಬಳಕೆಗೆ ಅವಕಾಶ ನೀಡುತ್ತಿತ್ತು. ಹಳೆಯ ವ್ಯವಸ್ಥೆಯು ಕೇವಲ ಎಸ್‌ಎಂಎಸ್ ಮೂಲಕ ಬರುವ ಒನ್ ಟೈಮ್ ಪಾಸ್‌ವರ್ಡ್ ಅನ್ನು ಮಾತ್ರ ನೆಚ್ಚಿಕೊಂಡಿತ್ತು. ಪ್ರಸ್ತುತ ದಿನಗಳಲ್ಲಿ ಸಿಮ್ ಕ್ಲೋನಿಂಗ್ ಮತ್ತು ಒಟಿಪಿ ವಂಚನೆಗಳು ಹೆಚ್ಚುತ್ತಿರುವು ದರಿಂದ ಈ ವ್ಯವಸ್ಥೆ ಸುರಕ್ಷಿತವಲ್ಲ ಎಂದು ಪ್ರಾಧಿ ಕಾರ ನಿರ್ಧರಿ ಸಿದೆ. ಹೀಗಾಗಿ, ಹಳೆಯ ಆ್ಯಪ್ ಅನ್ನು ಶೀಘ್ರದಲ್ಲೇ ಸ್ಥಗಿತಗೊಳಿ ಸಲಾಗುತ್ತಿದ್ದು, ಪ್ರತಿಯೊಬ್ಬರೂ ಹೊಸ ಆ್ಯಪ್‌ಗೆ ಅಪ್‌ಗ್ರೇಡ್ ಆಗುವಂತೆ ಭಾರತೀಯ ವಿಶಿಷ್ಟ ಗುರುತಿನ ಪ್ರಾಧಿಕಾರ ಸೂಚಿಸಿದೆ.

### ಹೊಸ ಆ್ಯಪ್ ಡೌನ್‌ಲೋಡ್ ಹೇಗೆ?

ನಿಮ್ಮ ಆಂಡ್ರಾಯ್ಡ್ ಅಥವಾ ಐಫೋನ್‌ನ ಅಧಿಕೃತ ಪ್ಲೇ ಸ್ಟೋರ್/ಆ್ಯಪ್ ಸ್ಟೋರ್‌ಗೆ ಹೋಗಿ Aadhaar ಎಂದು ಟೈಪ್ ಮಾಡಿ (ಅಭಿವೃದ್ಧಿಪಡಿ ಸಿದವರು UIDAI ಎಂದು ಪರಿಶೀಲಿಸಿ) ಡೌನ್‌ಲೋಡ್ ಮಾಡಿ. ನಿಮ್ಮ ಭಾಷೆಯನ್ನು ಆಯ್ಕೆ ಮಾಡಿ, ಆಧಾರ್‌ಗೆ ಲಿಂಕ್ ಆಗಿರುವ ಮೊಬೈಲ್ ಸಂಖ್ಯೆ ನೀಡಿ ಒಟಿಪಿ ಮೂಲಕ ಲಾಗಿನ್ ಆಗಿ. ಹೆಚ್ಚಿನ ಸುರಕ್ಷತೆಗಾಗಿ 4 ಅಂಕಿಗಳ ಸುರಕ್ಷಿತ ಪಿನ್ ಸೆಟ್ ಮಾಡಿಕೊಳ್ಳಿ. ಹೆಸರು, ಲಿಂಗ, ಮೊಬೈಲ್ ಸಂಖ್ಯೆ ಮತ್ತು ಬಯೋಮೆಟ್ರಿಕ್ ಬದಲಾವಣೆಗಳಂತಹ ಪ್ರಮುಖ ತಿದ್ದುಪಡಿಗಳಿಗೆ ಇನ್ನು ಮುಂದೆಯೂ ಅಧಿಕೃತ ಆಧಾರ್ ನೋಂದಣಿ ಕೇಂದ್ರಕ್ಕೇ ಭೇಟಿ ನೀಡಬೇಕಾಗುತ್ತದೆ. ಇದಕ್ಕೆ ನಿಗದಿತ ಶುಲ್ಕ ಅನ್ವಯವಾಗುತ್ತದೆ.

### ಒಂದು ವರ್ಷ ಉಚಿತ ಅಪ್‌ಡೇಟ್

ಈ ಹಿಂದೆ 2026ರ ಜೂನ್ ತಿಂಗಳವರೆಗೆ ಮಾತ್ರ ಉಚಿತವಾಗಿ ಆಧಾರ್ ದಾಖಲೆ ನವೀಕರಿಸಲು ಅವಕಾಶವಿತ್ತು. ಆದರೆ ಸಾರ್ವಜನಿಕರ ಸಕಾರಾತ್ಮಕ ಸ್ಪಂದನೆಯನ್ನು ಗಮನಿಸಿರುವ ಪ್ರಾಧಿಕಾರ, ಈ ಉಚಿತ ಸೇವೆಯನ್ನು ಜೂನ್ 14, 2027ರವರೆಗೆ (ಇನ್ನೊಂದು ವರ್ಷ) ವಿಸ್ತರಿಸಿದೆ. ಸಾರ್ವಜನಿಕರು ಆನ್‌ಲೈನ್‌ನಲ್ಲಿ myAadhaar ಪೋರ್ಟಲ್ ಮೂಲಕ ತಮ್ಮ ಗುರುತಿನ ಚೀಟಿ ಮತ್ತು ವಿಳಾಸದ ಪುರಾವೆಗಳನ್ನು ಯಾವುದೇ ಶುಲ್ಕವಿಲ್ಲದೆ ಉಚಿತವಾಗಿ ಅಪ್‌ಡೇಟ್ ಮಾಡಬಹುದು.

### ಆಧಾರ್ ಕಾರ್ಡ್ ಅಪ್‌ಡೇಟ್ ಉಚಿತ

ಹೊಸ ಆ್ಯಪ್‌ಬಿಡುಗಡೆಯ ಬೆನ್ನಲ್ಲೇ ಕೇಂದ್ರ ಸರಕಾರ ಸಾರ್ವಜನಿಕರಿಗೆ ಮತ್ತೊಂದು ಬಿಗ್ ರಿಲೀಫ್ ನೀಡಿದೆ. ತಮ್ಮ ಆಧಾರ್ ಕಾರ್ಡ್ ಪಡೆದು ಹತ್ತು ವರ್ಷ ಕಳೆದಿರುವ ಸಾರ್ವಜನಿಕರು ಉಚಿತವಾಗಿ ದಾಖಲೆಗಳನ್ನು ಅಪ್‌ಡೇಟ್ ಮಾಡಲು ನೀಡಲಾಗಿದ್ದ ಗಡುವನ್ನು ವಿಸ್ತರಿಸಲಾಗಿದೆ.

### ಏನಿದು 'ಫೇಸ್ ಅಥೆಂಟಿಕೇಶನ್'?

ಹೊಸ ಆ್ಯಪ್‌ನ ಅತ್ಯಂತ ಆಕರ್ಷಕ ಮತ್ತು ಪ್ರಮುಖ ಫೀಚರ್ ಎಂದರೆ ಅದು ಮುಖದ ಗುರುತಿಸುವಿಕೆ (Face Authentication) ತಂತ್ರಜ್ಞಾನ. ಇನ್ನುಂದೆ ಆಧಾರ್ ವಿವರಗಳನ್ನು ಯಾರೂ ಕದಿಯಲು ಸಾಧ್ಯವಿಲ್ಲದಂತೆ ಈ ಹೊಸ ಆ್ಯಪ್‌ನಲ್ಲಿ ಭದ್ರತೆ ಒದಗಿಸಲಾಗಿದೆ.

**ಬಯೋಮೆಟ್ರಿಕ್ ಲಾಕ್:** ನಿಮ್ಮ ಫಿಂಗರ್‌ಪ್ರಿಂಟ್ (ಬೆರಳಚ್ಚು), ಕಣ್ಣಿನ ಐರಿಸ್ ಮತ್ತು ಮುಖದ ಡೇಟಾವನ್ನು ನೇರವಾಗಿ ಹೊಸ ಆ್ಯಪ್ ಮೂಲಕವೇ ಲಾಕ್ ಅಥವಾ ಅನ್‌ಲಾಕ್ ಮಾಡಬಹುದು. ನೀವು ಬಯೋಮೆಟ್ರಿಕ್ ಲಾಕ್ ಮಾಡಿದರೆ ಜಗತ್ತಿನ ಯಾವುದೇ ಮೂಲೆಯಲ್ಲಿದ್ದರೂ ನಿಮ್ಮ ಹೆಬ್ಬೆರಳ ಗುರುತನ್ನು ಯಾರೂ ದುರ್ಬಳಕೆ ಮಾಡಿಕೊಳ್ಳಲು ಸಾಧ್ಯವೇ ಇಲ್ಲ. ಒಂದು ವೇಳೆ ಒಟಿಪಿ ಬರದೇ ಇದ್ದಾಗ ಅಥವಾ ಬೆರಳಚ್ಚು ಅಳಿಸಿಹೋಗಿರುವ ಹಿರಿಯ ನಾಗರಿಕರು ತಮ್ಮ ಮುಖವನ್ನು ಆ್ಯಪ್ ಕ್ಯಾಮೆರಾ ಮುಂದೆ ತೋರಿಸುವ ಮೂಲಕ (FaceAuth) ಕ್ಷಣಾರ್ಧದಲ್ಲಿ ಲಾಗಿನ್ ಆಗಬ ಹುದು ಮತ್ತು ದೃಢೀಕರಣ ಪ್ರಕ್ರಿಯೆ ಮುಗಿಸಬಹುದು.

**ಸುರಕ್ಷಿತ ಕ್ಯೂ ಆರ್ ಕೋಡ್ ಶೇರಿಂಗ್:** ಹೋಟೆಲ್‌ಗಳು, ಆಸ್ಪತ್ರೆಗಳು ಅಥವಾ ಸರ್ಕಾರಿ ಕಚೇರಿಗಳಲ್ಲಿ ನಿಮ್ಮ ಸಂಪೂರ್ಣ ಆಧಾರ್ ನಂಬರ್ ನೀಡುವ ಅಗತ್ಯವಿಲ್ಲ. ಬದಲಿಗೆ ಹೊಸ ಆ್ಯಪ್‌ನಲ್ಲಿರುವ ಸುರಕ್ಷಿತ ಕ್ಯೂಆರ್ ಕೋಡ್ ತೋರಿಸಿದರೆ ಸಾಕು, ಅಗತ್ಯವಿರುವ ಕನಿಷ್ಠ ಮಾಹಿತಿ ಮಾತ್ರ ಅವರಿಗೆ ಲಭ್ಯವಾಗುತ್ತದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ




QR CODE ಸ್ಕ್ಯಾನ್ ಮಾಡಿ, ಫೋನ್ ಪೇ / ಗೂಗಲ್ ಪೇ ಮಾಡಿದ ಸ್ಕ್ರೀನ್ ಶಾಟ್ ನೊಂದಿಗೆ ನಿಮ್ಮ ವಿಳಾಸವನ್ನು ಕೆಳಗಿನ ವಾಟ್ಸಪ್ ನಂಬರ್‌ಗೆ ಕಳುಹಿಸಿ.
ನಿಮ್ಮ ಮನೆ ಬಾಗಿಲಿಗೆ ಪುಸ್ತಕ ತಲುಪಿಸುತ್ತೇವೆ. 63623 93966

ವಿಶ್ವವಾಣಿ 28-05-2026 ಗುರುವಾರ @vishwavaninews

# ಆರಾಮ

ಅನುದಿನವೂ ವಿರಾಮಕ್ಕೆ ಒಂದು ನೆಪ

## ಭಾವುಕತೆ

### ಈ ಕ್ಷಣದಲ್ಲಿ

ಒಬ್ಬ ಶಿಷ್ಯ ಜೆನ್ ಗುರುವನ್ನು ಕೇಳಿದ: 'ಗುರುವೇ, ಸತ್ಯ ಎಂದರೆ ಏನು?' ಗುರು ಸ್ವಲ್ಪ ಹೊತ್ತು ಮೌನವಾಗಿದ್ದರು. ಆಮೇಲೆ ಕೇಳಿದರು: ನಿನಗೆ ಹಸಿವಿದೆಯಾ? ಶಿಷ್ಯ ಹೌದೆಂದ. ಗುರು- 'ಹಾಗಿದ್ರೆ ಊಟ ಮಾಡು.' ಶಿಷ್ಯ- 'ಆದರೆ ಸತ್ಯ?' ಗುರು ನಕ್ಕರು: ಹಸಿದಾಗ ತಿನ್ನುವುದು, ದಣಿದಾಗ ಮಲಗುವುದು- ಜನರಿಗೆ ಕಷ್ಟವಾಗೋದು ಇದೇ. ಅವರು ತಿನ್ನುವಾಗ ಸಾವಿರ ಚಿಂತೆಯಲ್ಲಿ ಇರುತ್ತಾರೆ. ಮಲಗುವಾಗ ನಾಳೆಯ ಬಗ್ಗೆ ಚಿಂತಿಸುತ್ತಾರೆ. ಮನಸ್ಸು ಎಲ್ಲೋ ಓಡುತ್ತಿದ್ದರೆ ಜೀವನ ಮಿಸ್ ಆಗುತ್ತದೆ. ಈ ಕ್ಷಣದಲ್ಲಿ ಇದ್ದರೆ ಚಹಾದ ಕಪ್ ಕೂಡ ಜ್ಞಾನ ಕೊಡುತ್ತದೆ.

## ಮಾತು ಗೀತೆ

### ಸಂಸಾರದ ಅಂಟು

ಸಂಸಾರದಲ್ಲಿ ಹೇಗಿರಬೇಕು? ಸುಖ-ದುಃಖ ಬರುತ್ತವೆ, ಹೋಗುತ್ತವೆ. ಭಗವದ್ಗೀತೆಯಲ್ಲಿ ಶ್ರೀಕೃಷ್ಣ ಹೇಳುವುದು: 'ಮಾತ್ರಾಸ್ಪರ್ಶಾಸ್ತು ಕೌಂತೇಯ ಶೀತೋಷ್ಣಸುಖದುಃಖದಾಃ' ಅಂದರೆ ಚಳಿ- ಉಷ್ಣತೆ ಹೇಗೆ ಬರುತ್ತವೋ ಹಾಗೆಯೇ ಸುಖ-ದುಃಖವೂ ಬರುತ್ತವೆ, ಹೋಗುತ್ತವೆ. ಸಂಸಾರದಲ್ಲಿ ಎಲ್ಲವೂ ಶಾಶ್ವತ ಅಲ್ಲ. ಇಂದು ಸಂತೋಷ, ನಾಳೆ ಕಷ್ಟ. ಇವೆರಡನ್ನೂ ಸಮವಾಗಿ ನೋಡು ಎನ್ನುತ್ತದೆ ಭಗವದ್ಗೀತೆ. ಜೀವನದಲ್ಲಿ ಬಂಧನದ ಮೂಲವೆಂದರೆ ಆಸಕ್ತಿ ಮತ್ತು ನಾನು ಎಂಬ ಭಾವ. 'ಧ್ಯಾಯತೋ ವಿಷಯಾನ್ ಪುಂಸಃ ಸಂಗಸ್ತೇಷೂಪಜಾಯತೇ' ಅಂದರೆ ಮನಸ್ಸು ಯಾವುದಕ್ಕಾದರೂ ಅಂಟಿಕೊಂಡರೆ ಆಸೆ ಹುಟ್ಟುತ್ತದೆ. ಆಸೆ ನೆರವೇರದಿದ್ದರೆ ಕೋಪ. ಕೋಪದಿಂದ ಗೊಂದಲ. ಸಂಸಾರ ನಮ್ಮನ್ನು ಕಾಡೋದು ಲೋಕದಿಂದ ಅಲ್ಲ. ಅದರ ಮೇಲೆ ನಾವು ಕಟ್ಟಿಕೊಳ್ಳುವ ಅತಿಯಾದ ಆಸಕ್ತಿಯಿಂದ. ಸಂಸಾರವನ್ನು ತೊರೆಯಬೇಕಿಲ್ಲ; ಸಂಸಾರದ ಮಧ್ಯೆ ಮನಸ್ಸಿಗೆ ಸ್ವಾತಂತ್ರ್ಯ ಸಿಗಬೇಕು. ಕಮಲ ನೀರಿನಲ್ಲಿ ಇರುತ್ತದೆ. ಆದರೆ ನೀರು ಅದಕ್ಕೆ ಅಂಟಿಕೊಳ್ಳುವುದಿಲ್ಲ. ಗೀತೆಯ ಪ್ರಕಾರ ಸಂಸಾರದಲ್ಲಿರುವ ಜೀವನ ಅದಕ್ಕೆ ಹೋಲಿಕೆ.

## ಸುತ್ತಮುತ್ತ

### ಅತಿ ಸಣ್ಣ ನದಿ

ರಾಜಸ್ಥಾನದ ಅರ್ವಾರಿ ನದಿಯೊಂದಿಗೆ ಅನೇಕ ದಾಖಲೆಗಳು ಜೋಡಿಸಿಕೊಂಡಿವೆ. ಇದು ಭಾರತದ ಅತ್ಯಂತ ಕಡಿಮೆ ಉದ್ದದ ನದಿ, ಇದರ ಉದ್ದ ಕೇವಲ 90 ಕಿಲೋಮೀಟರ್. ಬಹುತೇಕ ಒಣ ಪ್ರದೇಶಗಳಲ್ಲಿ ಇದು ಹರಿಯುತ್ತದೆ. ಈ ನದಿ 1980ರ ಸುಮಾರಿಗೆ ಬತ್ತಿಯೇ ಹೋಗಿತ್ತು. 'ಭಾರತದ ನದಿಗಳ ಮನುಷ್ಯ' ಎಂದೇ ಹೆಸರಾದ ಡಾ. ರಾಜೇಂದ್ರ ಸಿಂಗ್ ಮತ್ತಿತರರ ಪ್ರಯತ್ನ ದಿಂದ 1995ರ ಸುಮಾರಿಗೆ ಮರಳಿ ನೀರು ತುಂಬಿಕೊಂಡು ಹರಿಯಲಾರಂಭಿಸಿತು. ಇದಕ್ಕಾಗಿ ನದಿಯುದ್ದಕ್ಕೂ 300 ಚೆಕ್ ಡ್ಯಾಂಗಳನ್ನು ಕಟ್ಟಲಾಗಿದೆ. ಇದನ್ನು ಸ್ಥಳೀಯರೇ ನಿರ್ವಹಿಸುತ್ತಾರೆ.

## ಹನಿ ಹನಿ ಕವಿತೆ

### ಒಂದೇ ಮೊನೆ

ಎಲ್ಲ ಮನೆ ಗುರುಮನೆ
ಅರಮನೆ
ನಿಂತಿರುವುದರ ಕಾರಣ
ಒಂದೇ, ಅದು
ನೇಗಿಲ ಮೊನೆ

• ಮೀನಾ

# ಪರಿಸರದ ಕೊಂಡಿ ಆಹಾರದ ಕಣಜ ಚಾಲ್ತಿ ಮಾವು

• ನಾಗರಾಜ ನಾಯಕ (ನ್ಯಾಯವಾದಿ)

ಜೀವ ವೈವಿಧ್ಯದ ಕಾವಲುಗಾರ, ಆಹಾರದ ಕಣಜ, ಪರಿಸರದ ಕೊಂಡಿಯಾದ ಚಾಲ್ತಿ ಮಾವಿಗೆ ಭಾರತದ ಗ್ರಾಮೀಣ ಸಂಸ್ಕೃತಿಯಲ್ಲಿ ವಿಶೇಷ ಸ್ಥಾನವಿದೆ. ಚಾಲ್ತಿ ಮಾವನ್ನು ನಾಡಮಾವು ಅಂತಲೂ ಕೆಲವರು ಕಾಡ ಮಾವು ಎಂತಲೂ ಕರೆಯುತ್ತಾರೆ. ಆದರೆ, ಇತ್ತೀಚಿನ ದಶಕಗಳಲ್ಲಿ ಸಂಕರಗೊಂಡ (ಹೈಬ್ರಿಡ್) ಮಾವಿನ ತಳಿಗಳ ಪ್ರಚಾರ ಹೆಚ್ಚಾದಂತೆ, ಪಾರಂಪರಿಕ ಚಾಲ್ತಿ ಮಾವು ಮರಗಳು ನಿಧಾನವಾಗಿ ಕಡಿಮೆಯಾಗುತ್ತಿವೆ. ಒಂದಾನೊಂದು ಕಾಲದಲ್ಲಿ ಹಳ್ಳಿಗಳ ಗದ್ದೆಬದಿಗಳು, ಕಾಡಂಚುಗಳು, ದೇವರಕಾಡುಗಳು ಹಾಗೂ ಮನೆಮಠಗಳ ಸುತ್ತಲೂ ದೈತ್ಯಾಕಾರದ ಚಾಲ್ತಿ ಮಾವು ಮರಗಳು ಸಾಮಾನ್ಯವಾಗಿದ್ದವು. ಇವು ಕೇವಲ ಹಣ್ಣು ಕೊಡುವ ಮರಗಳಲ್ಲ; ಜೀವ ವೈವಿಧ್ಯವನ್ನು ಉಳಿಸುವ, ಮಣ್ಣನ್ನು ಕಾಪಾಡುವ, ಪಕ್ಷಿ-ಪಶುಗಳಿಗೆ ಆಶ್ರಯ ಮತ್ತು ಆಹಾರ ನೀಡುವ, ಗ್ರಾಮೀಣ ಆರ್ಥಿಕತೆಗೆ ನೆರವಾಗುವ ಪ್ರಕೃತಿಯ ಅಮೂಲ್ಯ ಸಂಪತ್ತು. ಇಂದಿನ ಪರಿಸರ ಸಂಕಷ್ಟದ ಸಂದರ್ಭದಲ್ಲಿ ನಾಡಮಾವು ಮರಗಳ ಮಹತ್ವವನ್ನು ಮರುಪರಿಶೀಲಿಸುವ ಅಗತ್ಯ ಇದೆ.

ಬೇಸಿಗೆ ರಜೆ ಬಂತೆಂದರೆ ಹಳ್ಳಿಗಳ ಒಳಗೆ ಇರುವ ದೈತ್ಯಾಕಾರದ ಚಾಲ್ತಿ ಮರದ ಬುಡವೇ ಹಳ್ಳಿ ಮಕ್ಕಳ ಪಾರ್ಲಿಮೆಂಟು. ಆ ರಜೆಯಲ್ಲಿ ಮಕ್ಕಳೆಲ್ಲ ಮರದ ಕೆಳಗೆ ಆಡುತ್ತಾ, ಆಗಾಗ ಬೀಳುವ ಹಣ್ಣುಗಳನ್ನು ಸ್ಪರ್ಧೆಯಿಂದ ಹೆಕ್ಕುತ್ತಾ ಸಂಭ್ರಮ, ಸಂತೋಷಗಳಿಂದ ತೇಲುತ್ತಿದ್ದರು. ಕೆಲವೊಂದು ಮರಗಳನ್ನು ಹತ್ತಿ ಕೊಯ್ಯಲು ಆಗದಿರುವಷ್ಟು ಮೇಲೆ ಹಣ್ಣುಗಳು ಆಗುತ್ತಿದ್ದವು. ಆ ಮರಗಳು ಅಷ್ಟು ಮೇಲಕ್ಕೆ ಯಾಕೆ ಮರಗಳನ್ನು ಬಿಡುತ್ತಿದ್ದವು ಎಂದರೆ ಇಂತಹ ಪುಟ್ಟ ಮಕ್ಕಳಿಗೆ ಸಿಹಿ ಗಿಫ್ಟ್ ಕೊಡಲು. ಇಂದು ಆ ಕಾಲದ ಮಕ್ಕಳು ಆ ಮರಗಳನ್ನು ಹುಡುಕಿದರೆ ಅವು ಕಾಣುತ್ತಿಲ್ಲ. ಯಾಕೆಂದರೆ ಅವು ಕಟ್ಟಡಗಳ ಸ್ಲಾಪಿಗೆ ಹಲಗೆಯಾಗಲೋ, ಇನ್ನಿತರ ಆಧುನಿಕತೆಯ ಕಾಮಗಾರಿಗಳಿಗೆ ಬಲಿಯಾಗಿಬಿಟ್ಟಿವೆ.

ನಾಡಮಾವು ಮರಗಳು ಸ್ಥಳೀಯ ಹವಾಮಾನಕ್ಕೆ ಹೊಂದಿಕೊಂಡಿರುವ ಸ್ವದೇಶಿ ತಳಿಗಳಾಗಿವೆ. ಇವು ಹಲವಾರು ತಲೆಮಾರುಗಳಿಂದ ಪ್ರಕೃತಿಯಲ್ಲೇ ಬೆಳೆಯುತ್ತ ಬಂದಿರುವುದರಿಂದ ಸ್ಥಳೀಯ ಮಣ್ಣು, ಮಳೆ, ಬಿಸಿಲು ಹಾಗೂ ರೋಗಗಳಿಗೆ ಉತ್ತಮ ಪ್ರತಿರೋಧ ಶಕ್ತಿಯನ್ನು ಹೊಂದಿವೆ. ಹೈಬ್ರಿಡ್ ತಳಿಗಳಿಗೆ ಹೋಲಿಸಿದರೆ ನಾಡಮಾವು ಮರಗಳಿಗೆ ಕಡಿಮೆ ಗೊಬ್ಬರ ಮತ್ತು ಕಡಿಮೆ ನಿರ್ವಹಣೆ ಸಾಕಾಗುತ್ತದೆ. ಇದರಿಂದ ರೈತರಿಗೆ ವೆಚ್ಚವೂ ಕಡಿಮೆಯಾಗುತ್ತದೆ. ವೈಜ್ಞಾನಿಕ ಅಧ್ಯಯನಗಳ ಪ್ರಕಾರ ಸ್ಥಳೀಯ ತಳಿಗಳ ಮರಗಳು ಪರಿಸರ ಬದಲಾವಣೆಗೆ ಹೆಚ್ಚು ತಾಳ್ಮೆಯಿಂದ ಹೊಂದಿಕೊಳ್ಳುತ್ತವೆ. ಹವಾಮಾನ ಬದಲಾವಣೆ ಹೆಚ್ಚುತ್ತಿರುವ ಈ ಕಾಲದಲ್ಲಿ ನಾಡಮಾವುಗಳಂತಹ ಸ್ಥಳೀಯ ತಳಿಗಳನ್ನು ಉಳಿಸುವುದು ಆಹಾರ ಭದ್ರತೆಗಾಗಿ ಬಹಳ ಮುಖ್ಯ.

ನಾಡಮಾವಿನ ಇನ್ನೊಂದು ದೊಡ್ಡ ವೈಶಿಷ್ಟ್ಯ, ಅದರ ವೈವಿಧ್ಯಮಯ ರುಚಿಗಳು. ಪ್ರತಿಯೊಂದು ಪ್ರದೇಶಕ್ಕೂ ತನ್ನದೇ ಆದ ವಿಶಿಷ್ಟ ನಾಡಮಾವಿನ ತಳಿಗಳಿವೆ. ಕೆಲವು ಹಣ್ಣುಗಳು ತುಂಬ ಸಿಹಿಯಾಗಿರುತ್ತವೆ; ಕೆಲವು ಹುಳಿ-ಸಿಹಿ ರುಚಿಯನ್ನು ಹೊಂದಿರುತ್ತವೆ; ಕೆಲವು ತೀವ್ರ ಪರಿಮಳದಿಂದ ಪ್ರಸಿದ್ಧವಾಗಿರುತ್ತವೆ. ಒಂದೇ ಮರದ ಹಣ್ಣು ಮತ್ತೊಂದು ಮರದ ಹಣ್ಣಿನಂತೆ ಇರದು. ಅವುಗಳಿಗೆ ವಿಧ ವಿಧವಾದ ಹೆಸರುಗಳು ಅವುಗಳ ರುಚಿಯ ಮೇಲೆ ಇರುತ್ತದೆ. ಕೆಲವಕ್ಕೆ ಜೀರಿಗೆ ಹಣ್ಣು, ಇನ್ನೊಂದಕ್ಕೆ ಸಾಂಬಾರ ಹಣ್ಣು, ಮತ್ತೊಂದಕ್ಕೆ ಗೋಲಾಕಾರವಾಗಿ ಚಿಕ್ಕದಾಗಿರುವದರಿಂದ ಮೊಟ್ಟೆ ಹಣ್ಣು, ಜೇನಿನ ಹಣ್ಣು ಇತ್ಯಾದಿ. ಸಂಕರ ತಳಿಗಳಲ್ಲಿ ಸಾಮಾನ್ಯವಾಗಿ ಮಾರುಕಟ್ಟೆ ಬೇಡಿಕೆ ಮತ್ತು ಒಂದೇ ರೀತಿಯ ಆಕಾರ-ಬಣ್ಣಕ್ಕೆ ಹೆಚ್ಚಿನ ಮಹತ್ವ ಕೊಡಲಾಗುತ್ತದೆ. ಆದರೆ, ನಾಡಮಾವಿನಲ್ಲಿ ರುಚಿ, ಪೌಷ್ಟಿಕತೆ ಮತ್ತು ಪ್ರಾಕೃತಿಕ ಸುವಾಸನೆ ಸಮೃದ್ಧವಾಗಿರುತ್ತದೆ.

ನಾಡಮಾವುಗಳು ಪೌಷ್ಟಿಕಾಂಶಗಳ ಉತ್ತಮ ಮೂಲವಾಗಿವೆ. ಮಾವಿನ ಹಣ್ಣಿನಲ್ಲಿ ವಿಟಮಿನ್ ಎ, ವಿಟಮಿನ್ ಸಿ , ನಾರು, ಆಂಟಿಆಕ್ಸಿಡೆಂಟ್‌ಗಳು ಮತ್ತು ಅನೇಕ ಖನಿಜಾಂಶಗಳು ದೊರೆಯುತ್ತವೆ. ಗ್ರಾಮೀಣ ಪ್ರದೇಶಗಳಲ್ಲಿ ಬೇಸಿಗೆಯ ಕಾಲದಲ್ಲಿ ನಾಡಮಾವು ಜನರ ಪೌಷ್ಟಿಕ ಆಹಾರದ ಭಾಗವಾಗಿತ್ತು. ಹಣ್ಣು ಮಾತ್ರವಲ್ಲದೆ, ಮಾವಿನ ಕಾಯಿ ಉಪ್ಪಿನಕಾಯಿ, ಚಟ್ನಿ, ಹಪ್ಪಳ, ಮಾವಿನ ಹಣ್ಣು ಒಣಗಿಸಿ ಮಾಡುವ ಅಮಚೂರು ಮುಂತಾದ ರೂಪಗಳಲ್ಲಿ ವರ್ಷಪೂರ್ತಿ ಉಪಯೋಗವಾಗುತ್ತಿತ್ತು. ಈ ದೃಷ್ಟಿಯಿಂದ ನಾಡಮಾವು ಆಹಾರದ ಕಣಜಕ್ಕೆ ಮಹತ್ತರ ಕೊಡುಗೆ ನೀಡುತ್ತದೆ.

ಪರಿಸರದ ದೃಷ್ಟಿಯಿಂದ ನಾಡಮಾವು ಮರಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಒಂದು ದೊಡ್ಡ ಮಾವಿನ ಮರ ಸಾವಿರಾರು ಜೀವಿಗಳಿಗೆ ಆಶ್ರಯ ನೀಡುತ್ತದೆ. ಕಾಗೆ, ಗಿಳಿ, ಚಿಲಿ-ಪಿಲಿ ಹಕ್ಕಿಗಳು, ಅಳಿಲುಗಳು, ಜೇನು ಹುಳುಗಳು ಮತ್ತು ಅನೇಕ ಕೀಟಗಳು ಈ ಮರಗಳ ಮೇಲೆ ಅವಲಂಬಿತವಾಗಿರುತ್ತವೆ. ಮಾವಿನ ಹೂವುಗಳು ಜೇನು ಹುಳುಗಳಿಗೆ ಮಕರಂದ ಒದಗಿಸುತ್ತವೆ. ಇದರಿಂದ ಪರಾಗಸ್ಪರ್ಶ ಪ್ರಕ್ರಿಯೆ ಸುಗಮವಾಗುತ್ತದೆ ಮತ್ತು ಕೃಷಿ ಉತ್ಪಾದನೆಗೂ ಪರೋಕ್ಷವಾಗಿ ನೆರವಾಗುತ್ತದೆ. ದೊಡ್ಡ ಮರಗಳು ಕಾರ್ಬನ್ ಡೈಆಕ್ಸೈಡ್ ಅನ್ನು ಹೀರಿಕೊಂಡು ಆಮ್ಲಜನಕವನ್ನು ಬಿಡುಗಡೆ ಮಾಡುವುದರಿಂದ ವಾಯುಮಾಲಿನ್ಯ ಕಡಿಮೆಯಾಗುತ್ತದೆ ಹಾಗೂ ತಾಪಮಾನ ನಿಯಂತ್ರಣವಾಗುತ್ತದೆ.

ಇತ್ತೀಚಿನ ವರ್ಷಗಳಲ್ಲಿ ದೊಡ್ಡ ನಾಡಮಾವು ಮರಗಳನ್ನು ರಸ್ತೆ ಕಾಮಗಾರಿ ಮತ್ತು ಮರದ ವ್ಯಾಪಾರಕ್ಕಾಗಿ ಕಡಿದು ಹಾಕಲಾಗುತ್ತಿದೆ. ಇದರಿಂದ ಕೇವಲ ಮರಗಳ ನಷ್ಟವಲ್ಲ, ಸಂಪೂರ್ಣ ಪರಿಸರ ಸಮತೋಲನವೇ ಹದಗೆಡುತ್ತಿದೆ. ಪಕ್ಷಿ-ಪ್ರಾಣಿಗಳ ನೈಸರ್ಗಿಕ ಆಹಾರ ಮೂಲಗಳು ಕಡಿಮೆಯಾಗುತ್ತಿರುವುದರಿಂದ ಅವು ಮಾನವ ವಸತಿಗಳತ್ತ ಮುಖ ಮಾಡುತ್ತಿವೆ. ವಿಶೇಷವಾಗಿ ಮಂಗಗಳ ಹಾವಳಿ ಹೆಚ್ಚುತ್ತಿರುವುದಕ್ಕೆ ಕಾಡಿನ ಆಹಾರ ಸಂಪನ್ಮೂಲಗಳ ಕೊರತೆ ಒಂದು ಪ್ರಮುಖ ಕಾರಣವೆಂದು ಪರಿಸರ ತಜ್ಞರು ಹೇಳುತ್ತಾರೆ. ಹಿಂದೆ ಅರಣ್ಯಗಳಲ್ಲಿ ಸಹ ಅಪ್ಪೆ ಹುಳಿ ಮಾವಿನ ಮರ ಮತ್ತು ಇತ್ಯಾದಿ ಚಾಲ್ತಿ ಮರಗಳು ವಿಪುಲವಾಗಿ ಬೆಳೆಯುತ್ತಿದ್ದವು. ಆ ಕಾಲದಲ್ಲಿ ಹಳ್ಳಿಗಳಿಗೆ ಮಂಗಗಳ ಆಗಮನ ತುಂಬಾ ಕಡಿಮೆಯಾಗಿತ್ತು. ಕಾರಣ ಮಂಗಗಳು ಆ ಮಾವಿನ ಮರದ ಹಣ್ಣು, ಮಂಗನ ಹಲಸಿನ ಹಣ್ಣುಗಳನ್ನು ತಿನ್ನುತ್ತಾ ಅಲ್ಲೇ ಬ್ಯುಸಿ ಇರುತ್ತಿದ್ದವು. ಹಳ್ಳಿಗಳ ಅಂಚು ಮತ್ತು ಕಾಡಂಚು ಪ್ರದೇಶಗಳಲ್ಲಿ ಹೆಚ್ಚು ಹೆಚ್ಚು ನಾಡಮಾವು ಮರಗಳನ್ನು ನೆಟ್ಟರೆ ಮಂಗಗಳು ಮತ್ತು ಪಕ್ಷಿಗಳಿಗೆ ಸ್ವಾಭಾವಿಕ ಆಹಾರ ದೊರೆಯುತ್ತದೆ. ಇದರಿಂದ ಬೆಳೆ ಹಾನಿ ಮತ್ತು ಮಾನವ-ಪ್ರಾಣಿ ಸಂಘರ್ಷವೂ ಕಡಿಮೆಯಾಗಬಹುದು.

ನಾಡಮಾವು ಮರಗಳು ಮಣ್ಣಿನ ಸಂರಕ್ಷಣೆಯಲ್ಲಿಯೂ ಪ್ರಮುಖ ಪಾತ್ರವಹಿಸುತ್ತವೆ. ಇವುಗಳ ಆಳವಾದ ಬೇರುಗಳು ಮಣ್ಣಿನ ಒರಟುತನವನ್ನು ಕಡಿಮೆ ಮಾಡುತ್ತವೆ ಹಾಗೂ ಮಳೆನೀರು ಭೂಮಿಯೊಳಗೆ ಹೀರಿಕೊಳ್ಳಲು ಸಹಾಯ ಮಾಡುತ್ತವೆ. ಮರಗಳ ನೆರಳು ಸ್ಥಳೀಯ ತಾಪಮಾನವನ್ನು ತಗ್ಗಿಸಿ ಸೂಕ್ಷ್ಮ ಹವಾಮಾನವನ್ನು ಸಮತೋಲನದಲ್ಲಿಡುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ದೊಡ್ಡ ಮಾವಿನ ಮರಗಳು ಜನರ ಸಾಮಾಜಿಕ ಜೀವನದ ಕೇಂದ್ರವಾಗಿದ್ದವು. ಜನರು ಅದರ ನೆರಳಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು; ಹಬ್ಬ-ಜಾತ್ರೆಗಳು, ಸಭೆಗಳು ನಡೆಯುತ್ತಿದ್ದವು. ಹೀಗಾಗಿ ನಾಡಮಾವು ಮರಗಳು ಕೇವಲ ಪರಿಸರ ಸಂಪತ್ತಲ್ಲ, ಸಾಂಸ್ಕೃತಿಕ ಪರಂಪರೆಯ ಭಾಗವೂ ಆಗಿವೆ.

ಇಂದು ನಾಡಮಾವು ಮರಗಳ ಸಂರಕ್ಷಣೆ ಅತ್ಯಗತ್ಯವಾಗಿದೆ. ಶಾಲೆಗಳು, ಗ್ರಾಮ ಪಂಚಾಯಿತಿಗಳು, ರೈತ ಸಂಘಗಳು ಮತ್ತು ಪರಿಸರ ಸಂಘಟನೆಗಳು ಸೇರಿ ನಾಡಮಾವು ನೆಡುವ ಅಭಿಯಾನಗಳನ್ನು ಕೈಗೊಳ್ಳಬೇಕು. ಪ್ರತಿಯೊಂದು ಹಳ್ಳಿಯಲ್ಲೂ ಸ್ಥಳೀಯ ತಳಿಗಳ ಬೀಜಗಳನ್ನು ಸಂಗ್ರಹಿಸಿ ನರ್ಸರಿಗಳನ್ನು ನಿರ್ಮಿಸಬಹುದು. ಸರಕಾರವೂ ಸ್ಥಳೀಯ ಹಣ್ಣು ತಳಿಗಳ ಸಂರಕ್ಷಣೆಗೆ ವಿಶೇಷ ಯೋಜನೆಗಳನ್ನು ರೂಪಿಸಬೇಕು. ರೈತರಿಗೆ ನಾಡಮಾವು ನೆಡುವುದಕ್ಕೆ ಪ್ರೋತ್ಸಾಹಧನ ಮತ್ತು ತಾಂತ್ರಿಕ ಮಾರ್ಗದರ್ಶನ ನೀಡಿದರೆ ಹೆಚ್ಚು ಜನರು ಈ ಕಾರ್ಯದಲ್ಲಿ ತೊಡಗಿಸಿಕೊಳ್ಳಬಹುದು. ಈಗ ಮಳೆಗಾಲದ ಹೊಸ್ತಿಲಿನಲ್ಲಿ ನಾವಿರುವುದರಿಂದ ನಾಡ ಮಾವು ಗಿಡಗಳನ್ನು ನೆಡಲು ಇದು ಸುಕಾಲ.

ಒಟ್ಟಿನಲ್ಲಿ, ನಾಡಮಾವು ಮರಗಳು ಪ್ರಕೃತಿಯ ಜೀವನಾಡಿ. ಅವು ಹೆಚ್ಚು ನಿರ್ವಹಣೆ ಬೇಡದ, ದೀರ್ಘಕಾಲ ಬದುಕುವ, ರುಚಿಕರ ಮತ್ತು ಪೌಷ್ಟಿಕ ಹಣ್ಣುಗಳನ್ನು ನೀಡುವ ಮರಗಳು. ಜೀವ ವೈವಿಧ್ಯ ಸಂರಕ್ಷಣೆ, ಪರಿಸರ ಸಮತೋಲನ, ಆಹಾರ ಭದ್ರತೆ ಮತ್ತು ಮಾನವ-ಪ್ರಾಣಿ ಸಹಜ ಸಹವಾಸಕ್ಕೆ ನಾಡಮಾವುಗಳ ಪಾತ್ರ ಅಪಾರ. ಆದ್ದರಿಂದ ಒಂದು ಮನೆ - ಒಂದು ನಾಡಮಾವು ಎಂಬ ಚಳವಳಿಯ ಮನೋಭಾವದೊಂದಿಗೆ ಹೆಚ್ಚು ಹೆಚ್ಚು ನಾಡಮಾವು ಗಿಡಗಳನ್ನು ನೆಡುವುದು ಇಂದಿನ ಕಾಲದ ಅವಶ್ಯವಾಗಿದೆ.

# ಮೆಟ್ರೋ, ಪುಸ್ತಕ ಮತ್ತು ಪುರಿ ಉಂಡೆ

• ಕಾರ್ತಿಕ್ ಕೃಷ್ಣ

ಸಂಜೆಯಾದ ಮೇಲೆ ಮೆಟ್ರೋದಲ್ಲಿ ಸೀಟು ಸಿಗುವುದು ವಿರಳ. ಹಾ, ಮೆಟ್ರೋ ಹೊರಡುವ ನಿಲ್ದಾಣದ ಬಗ್ಗೆ ಹೇಳುತ್ತಿಲ್ಲ. ಅಲ್ಲಿ ಸೀಟು ಸಿಗುವ ಪ್ರೊಬಾಬಿಲಿಟಿ ತುಂಬಾ ಜಾಸ್ತಿ. ನಂತರದ ಸ್ಟೇಷನ್‌ಗಳಲ್ಲಿ ಅದು ಕ್ಷೀಣಿಸುತ್ತಾ ಹೋಗುತ್ತದೆ. ಇಂದು ಅದೇ ಮನಸ್ಥಿತಿಯಲ್ಲಿ ಮೆಟ್ರೋ ಏರಿದೆ. ಪುಣ್ಯಕ್ಕೆ ಕಾಲಿಡಲು ಜಾಗವಿತ್ತು. ಆಫೀಸಿಗೆ ಬರುವ ವೇಳೆ ಸೀಟು ಸಿಗುವುದರಿಂದ ಪುಸ್ತಕ ಓದಿಕೊಂಡು ಪಯಣಿಸುತ್ತೇನೆ. ಸಂಜೆ ಆ ಭಾಗ್ಯವಿಲ್ಲದ ಕಾರಣ ಹಾಡು ಕೇಳಿಕೊಂಡು ಪಯಣಿಸುತ್ತೇನೆ. ನಿಂತುಕೊಂಡು ಓದುವವರೂ ಇದ್ದಾರೆ, ನನಗದು ಸರಿಬರುವುದಿಲ್ಲ. ಮೆಟ್ರೋದ ಒಳಗೆ ಅಲ್ಲಲ್ಲಿ ಅಂಟಿಸಿದ್ದ ಜಾಹೀರಾತಿನ ಪೋಸ್ಟರ್‌ಗಳನ್ನು ಓದುತ್ತಾ, ಇಯರ್ ಫೋನನ್ನು ಕಿವಿಗೆ ಸಿಕ್ಕಿಸುವಷ್ಟರಲ್ಲಿ, ಒಬ್ಬರು ಸೀಟು ಸಿಕ್ಕ ಪುಣ್ಯಾತ್ಮರು ಪುಸ್ತಕ ಹಿಡಿದು ಕೂತಿದ್ದು ಕಣ್ಣಿಗೆ ಬಿತ್ತು. ಮೆಲ್ಲಗೆ ಇಣುಕಿದೆ. ಯಾವುದೋ ಇಂಗ್ಲಿಷ್ ಪುಸ್ತಕ. ಅಕ್ಷರಗಳಿಗೆ ಗಾಳ ಹಾಕುವಂತೆ ಪುಟದೊಳಗೆ ಮುಳುಗಿದ್ದರು. ಇಯರ್ ಫೋನಿನಲ್ಲಿ ಹೊಮ್ಮುತ್ತಿದ್ದ, ಸುಮೇಧ್ ಸಂಯೋಜಿಸಿದ ತಾವರೆ ಹಾಡು ನನ್ನನ್ನು ಇನ್ನೇನು ಇನ್ನೊಂದು ಲೋಕಕ್ಕೆ ಕರೆದೊಯ್ಯಬೇಕು, ಅಷ್ಟರಲ್ಲಿ ಒಂದು ದೊಡ್ಡ ಕವರ್ ಹಿಡಿದುಕೊಂಡ ಒಬ್ಬ ಮಹಿಳೆ ಸೀಟು ಸಿಗುವುದೋ, ಕೊನೇಪಕ್ಷ ತನ್ನ ಚೀಲವನ್ನು ಹಿಡಿದು ಕೂರುವವರು ಸಿಕ್ಕರೂ ಸಾಕು ಎಂಬ ದೃಷ್ಟಿಯಲ್ಲಿ ಅತ್ತಿಂದಿತ್ತ ನೋಡುತ್ತಿದ್ದುದು ನನ್ನ ಕಣ್ಣಿಗೆ ಬಿತ್ತು. ಒಳಗೇನೋ ಮುಟ್ಟಿದರೆ ಮುರಿ ಎನ್ನುವಂತದ್ದು ಇತ್ತೇನೋ! ಕೆಳಗೆ ಇಟ್ಟರೆ ಯಾರಾದರೊಬ್ಬರ ಪಾದ ತಗುಲಿ ಒಳಗಿದದ್ದು ಛಿದ್ರವಾದರೆ? ಪಾಪ.

ಮುಂದಿನ ನಿಲ್ದಾಣ ಬಂದು ಇನ್ನಷ್ಟು ಮಂದಿ ಒಳನುಗ್ಗಿದರು. ಸೀಟು ಸಿಗದೆ ಅವರು ಅಳುವುದೊಂದು ಬಾಕಿ. ಅದೃಷ್ಟವಶಾತ್ ನಮ್ಮ ಓದುಗ ಈಗ ತಲೆ ಎತ್ತಿದರು. ಪುಸ್ತಕದ ವಸ್ತು ಇಷ್ಟವಾಗದೇ ಇದ್ದಿದ್ದಕ್ಕೋ, ಇಲ್ಲಾ ಕಣ್ಣಿಗೆ ಕೊಂಚ ವಿರಾಮ ನೀಡಲೋ.. ಅಂತೂ ತಲೆ ಎತ್ತಿದ ಅವರಿಗೆ ಈ ಮಹಿಳೆ ಕಂಡರು. ಮಹಿಳೆಯ ಪಾಡು ಮುಖದಲ್ಲೇ ಪ್ರಕಟವಾಗುತ್ತಿತ್ತು. ತಲೆ ಎತ್ತಿದ್ದೇ, ಮರುಗಿದ ಅವರು, You want me to hold your bag? ಅಂತ ಕೇಳಿದ್ದೇ, ಮಹಿಳೆಗೆ ಅದು ಗತ ಜನ್ಮದ ಪುಣ್ಯದ ಫಲಶೃತಿಯಂತೆ ಕಂಡು, ತಲೆಯಾಡಿಸಿ, ಚೀಲವನ್ನು, ವರ್ಷವಿನ್ನೂ ತುಂಬಿರದ ಕಂದನೆಂಬಂತೆ, ಜಾಗ್ರತೆಯಿಂದ ಓದುಗರಿಗೆ ದಾಟಿಸಿ ನಿರಾಳರಾದರು. ಈಗ ಪೇಚಿಗೆ ಸಿಕ್ಕಿಕೊಂಡದ್ದು ನಮ್ಮ ಓದುಗರು. ಇಷ್ಟಗಲದ ಚೀಲ ತೊಡೆಯ ಮೇಲೆ. ಐದು ನಿಮಿಷದ ಮೊದಲು ಅದೇ ಜಾಗದಲ್ಲಿ ಪುಸ್ತಕವನ್ನಿಟ್ಟು, ತಲೆ ಬಗ್ಗಿಸಿ ಓದುತ್ತಿದ್ದರು. ಈಗ? ಈ ಚೀಲ. ಅದೂ 'ಬೀ ಕೇರ್‌ಫುಲ್ ಹಾ?' ಅನ್ನೋ ಸೂಚನೆಯೊಂದಿಗೆ ಮಹಿಳೆ ದಾಟಿಸಿದ್ದು. ಸೀಟು ಸಿಗದೇ ಒದ್ದಾಡುತ್ತಿದ್ದ ಪಕ್ಷಕ್ಕೆ ಓಟು ಹಾಕಿ ಅಧಿಕಾರಕ್ಕೆ ಕೂರಿಸಿದ ಮತದಾರನ ಭಾವವಿತ್ತು ಅವರ ಮುಖದಲ್ಲಿ. ಏಗಲೇ ಬೇಕು! ಹೇಗೋ ಚೀಲವನ್ನು ಚೂರು ಆಚೆ ಈಚೆ ಮಾಡಿ, ಅದನ್ನು ಬಳಸಿ ತಬ್ಬಿಕೊಂಡು, ಚೀಲದ ಮೇಲಿಂದ ತಲೆ ಎತ್ತಿ ಹಾಕಿ, ಪುಸ್ತಕ ಓದಲು ಮತ್ತೆ ಶುರುಮಾಡಿದರು. ಮಹಿಳೆಗೆ ಅಯ್ಯೋ ಎನಿಸಿತೋ ಏನೋ. ಮುಖದಲ್ಲಿ ಮರುಕದ ವಕ್ರ ಗೆರೆಗಳು ಎದ್ದವು. ಆದರೂ ಚೀಲವನ್ನು ಮತ್ತೆ ಕೇಳುವಂತಿಲ್ಲ. ಒಳಗಿದ್ದದ್ದು ಸಹ ಪ್ರಯಾಣಿಕರ ತಿಕ್ಕಾಟಕ್ಕೆ ಸಿಕ್ಕು ನಜ್ಜಾದರೆ? ಅಂತೂ ಓದುಗರು ಪಟ್ಟು ಬಿಡದೆ, ಚೀಲವನ್ನು ಹಿಡಿದೇ ಓದುತ್ತಾ ಕೂತರು. ಎಂತಹ ಪ್ರಗಾಢ ಓದುಗ! ಅಥವಾ ಅಷ್ಟೊಂದು ಕಾಡುವ ಪುಸ್ತಕವೋ? ಮುಖಪುಟ ನೋಡಿ ಪುಸ್ತಕದ ಹೆಸರು ತಿಳಿಯುವುದು ಸಾಧ್ಯವಿರಲಿಲ್ಲ. ಅಷ್ಟೊಂದು ಕೆಳಗೆ ಹಿಡಿದಿದ್ದರು. ಪುಸ್ತಕದ ಒಳಗೆ ಇಣುಕಿದರೂ ಹೆಸರು ಕಾಣಿಸಲಿಲ್ಲ. ಅದೊಂದು ರಹಸ್ಯದಂತೆಯೇ ಉಳಿಯಿತು, ಇರಲಿ. ಕೆಲವೊಂದನ್ನು ಜಾಸ್ತಿ ಕೆದಕಬಾರದು.

ಅಂತೂ ಓದುಗರ ನಿಲ್ದಾಣ ಬಂದು, ಚೀಲವನ್ನು ಮಹಿಳೆಗೆ ಕೊಟ್ಟು, ಅವರಿಂದ ಥ್ಯಾಂಕ್ಸ್ ಎಂಬ ಬಳುವಳಿ ಇಸಿದುಕೊಂಡು ಇಳಿದರು. ಮಹಿಳೆಗೆ ಓದುಗರ ಸೀಟು ಸಿಕ್ಕಿತ್ತು. ಕೂತಿದ್ದೇ, ಚೀಲ ತೆರೆದು ಒಳಗಿದ್ದದ್ದಕ್ಕೆ ಏನೂ ಆಗಲಿಲ್ಲ ಎನ್ನುವುದನ್ನು ಖಾತ್ರಿಪಡಿಸಲು ಒಂದೊಂದನ್ನೇ ಸರಿಸಿ ನೋಡಿದರು. ಏನಪ್ಪಾ ಅಷ್ಟೊಂದು ಕಾಳಜಿ ಮಾಡಬೇಕಾಗಿದ್ದ ವಸ್ತು, ನೋಡೋಣ ಎಂದು ಮೆಲ್ಲಗೆ ಚೀಲದೊಳಗೆ ಇಣುಕಿದೆ. ನನ್ನ ಕುತೂಹಲದ ಕಾಯುವಿಕೆಗೆ ಉತ್ತರವಾಗಿ ಒಳಗೆ ಬೆಲ್ಲದೊಳದ್ದಿದ ಗರಿ ಗರಿ ಪುರಿ ಉಂಡೆಗಳು ಕಂಡವು!! ನಾಳಿನ ಪೂಜೆಗೋ, ಇನ್ನಾವುದೋ ಕಾರ್ಯಕ್ರಮಕ್ಕೋ ಬೇಕಾದವು ಇರಬೇಕು. ಎಂತಹ ಕಾಳಜಿ. ಅದನ್ನು ಹಿಡಿದು ಕೂತಿದ್ದ ಓದುಗರ ಮೇಲೆಯೂ ಗೌರವ ಉಕ್ಕಿತು. ತಮ್ಮ ಓದಿಗೆ ಕಷ್ಟವಾದರೂ, ಮತ್ತೊಬ್ಬರ ಚೀಲ ಹಿಡಿದು ಕೂತದ್ದು ಮತ್ತೊಮ್ಮೆ ಕಣ್ಮುಂದೆ ಬಂತು. ಒಳಗಿದ್ದದ್ದು ಪುರಿ ಉಂಡೆ ಎಂದು ಗೊತ್ತಿದ್ದರೆ, ಮೊದಲಿನಷ್ಟು ಕಾಳಜಿಯಿಂದ ಚೀಲ ಹಿಡಿದುಕೊಳ್ಳುತ್ತಿದ್ದರೋ ಎಂಬ ಪ್ರಶ್ನೆ ಮೂಡಿ ನಗು ಬಂತು. ಆದದ್ದು ಮಾತ್ರ ನೋಡಿ ಖುಷಿ ಪಡೋ ಮಾರಾಯ, ಆಗಬಹುದಾದ ಪಾಸಿಬಿಲಿಟಿ ನೆನೆಯಬೇಡ ಎಂದು ಯಾರೋ ಮಹಾನುಭಾವರು ಹೇಳಿದ್ದು ನೆನಪಿಗೆ ಬರುವಷ್ಟರಲ್ಲಿ ನನ್ನ ನಿಲ್ದಾಣ ಬಂದು ಮೆಟ್ರೋದಿಂದಿಳಿದೆ.

# ನೆನಪ ಕೌದಿ

• ಜಯಂತಿ ಕೆ. ವೈ.

ಹಳೆಯ ನೆನಪುಗಳ ನೇಯ್ದ ಕೌದಿಯ ಹೊದ್ದು ಬದು ಕೆಂಬೋ ಬದುಕಲ್ಲಿ ಸವಿ ನೆನಪುಗಳ ಹೆಕ್ಕುತ್ತಿದ್ದೇನೆ. ಅಲ್ಲೊಂದು ಪುಟ್ಟ ಬಣ್ಣದ ಬಟ್ಟೆ ಹೊಸತರಂತೆ ಕಾಣುತ್ತಿತ್ತು. ಅರೆ ಇದು ನನ್ನ ಮೊದಲ ಹೊಸ ಲಂಗದ ತುಣುಕಲ್ಲವೆ?! ಹಿತವಾದ ಭಾವವೊಂದು ಮನದೊಳಗೆ ಹಾದು ಅಣ್ಣನ ನೆನಪ ಸವಿ ಹೂರಣವನಿತ್ತು ಸಾಗಿತು.

ಕೌದಿಯ ತುಂಬಾ ಹೆಣೆದುಕೊಂಡ ಹಳೆಯ ತುಂಡುಗಳಲ್ಲಿ ಕಣ್ಣ ಸೆಳೆಯಿತೊಂದು ಕೆಂಪಂಚು! ಇದು ನನ್ನ ಮದುವೆ ಸೀರೆಯದು! ಹರುಷ ಉಕ್ಕಿ ಮೃದು ಮಧುರವಾಯ್ತು ಮನಸು. ಮದುವೆಯ ಮೊದಲ ವರ್ಷದ ಇವರ ಅಂಗಿಯ ತುಂಡು ಇಣುಕಿತ್ತು. ಬಿಸಿಯುಸಿರ ಬಿಸುಪ ಹೊತ್ತು ತಂದಿತ್ತು. ಕೌದಿಯ ಎದೆಗವಚಿ ನೆನಪುಗಳಂಗಳದಲಿ ಹೆಜ್ಜೆ ಹಾಕುವಾಗ ಬೊಂಬೆಗಳು ನಕ್ಕವು! ಅಂಬೆಗಾಲಿಕ್ಕಿ ಬಂದ ಮಗಳ ಪುಟ್ಟ ಲಂಗದ ಬೊಂಬೆಗಳು ಕುಣಿಯುತ್ತಿದ್ದವು! ತುಟಿಯಂಚಲಿ ನಸುನಗು! ಮಗನ ಚೊಣ್ಣ ಟಾಮ್ ಮತ್ತು ಜೆರ್ರಿಗಳ ಕತೆ ಹೇಳುತ್ತಿದ್ದವು. ಆ ಚೊಣ್ಣಕಾಗಿ ಹಠ ಹಿಡಿದಳುತ್ತಿದ್ದ ಮಗನ ಮುಖ ತೇಲಿ ಬಂದು ಮರೆಯಾಯಿತು! ಕೌದಿಯುದ್ದಗಲಕ್ಕೂ ಬದುಕಿನ ಮಾಸದ ಬಣ್ಣಗಳು! ಹೆಣೆದುಕೊಂಡು ಹೊಸ ಹೊಸ ಕತೆ ನೇಯುತ್ತಿತ್ತು. ಮರೆಯಲಾಗದ ಹಲವು ಬಣ್ಣಗಳ ಹೂವುಗಳು ಅರಳಿ ಮನದಂಗಳದಲ್ಲಿ ನಗುತ್ತಿದ್ದವು!

# ಪುಸ್ತಕದಿ ದೊರೆತರಿವು ಮಸ್ತಕದಿ ತಳೆದ ಮಣಿ

• ಎಂ. ಪರಮೇಶ್ವರ, ಮದ್ದಿಹಳ್ಳಿ

ಶಾಲೆಗಳಲ್ಲಿ ಮಕ್ಕಳಿಗಾಗಿ ಇಟ್ಟ ಚಿಕ್ಕ ಚಿಕ್ಕ ಭಾರತ ಭಾರತಿ ಪುಸ್ತಕಗಳನ್ನು ನಾವು ನಮ್ಮ ಮಾಸ್ತರರಿಂದ ಅಂಗಲಾಚಿ ಕೇಳಿ ತೆಗೆದುಕೊಂಡು ಓದುತ್ತಿದ್ದೆವು. ಊರಿಂದ ಊರಿಗೆ ಹೋಗಬೇಕಾದರೆ ಒಂದು ಪುಸ್ತಕ ಇಟ್ಟುಕೊಂಡೇ ಹೋಗುತ್ತಿದ್ದ ಕಾಲ. ಹೊಲದಲ್ಲಿ ಎಮ್ಮೆ ಮೇಯಿಸಲು ಹೋದರೆ ನಮಗೆ ಪುಸ್ತಕ ಸಹಪಾಠಿಯಾಗಿರುತ್ತಿದ್ದ ಕಾಲ. ಬಿಡುವು ಸಿಕ್ಕರೆ ಸಾಕು ಬೇಸರ ಕಳೆಯಲು ಪುಸ್ತಕ ಓದುತ್ತಿದ್ದ ಕಾಲ.

ಪುಸ್ತಕ ಓದುವ ಹವ್ಯಾಸ ನಮ್ಮ ಜ್ಞಾನದ ಹಸಿವು ಹೆಚ್ಚುವಂತೆ ಮಾಡುತ್ತಿತ್ತು. ಜೊತೆ ಜೊತೆಗೆ ಚಮತ್ಕಾರ ಗಣಿತ, ರಸಪ್ರಶ್ನೆ, ಸಾಮಾನ್ಯ ಜ್ಞಾನದ ಪುಸ್ತಕ ಓದುತ್ತಾ ಕಾಲ ಸಾಗಿದ್ದೇ ಗೊತ್ತಾಗುತ್ತಿರಲಿಲ್ಲ. ರೇಡಿಯೋದಲ್ಲಿ ಅಥವಾ ಪತ್ರಿಕೆಗಳಲ್ಲಿ ಯಾವುದಾದರೂ ರಸಪ್ರಶ್ನೆ ಕೇಳಿ ಉತ್ತರಿಸಿದವರಿಗೆ ಬಹುಮಾನ ಎಂದರಂತೂ ಮುಗಿದೇ ಹೋಯ್ತು, ರಾತ್ರಿಯೆಲ್ಲಾ ಪುಸ್ತಕ ಓದುತ್ತಾ ಕೂರುತ್ತಿದ್ದೆವು. ಯಾವುದೋ ಒಂದು ವಿಷಯ ಓದಲು ಇಡೀ ಪುಸ್ತಕವನ್ನೇ ಎರಡು ಮೂರು ಬಾರಿ ಓದುತ್ತಿದ್ದೆವು. ಜೊತೆಗೆ ಆ ಒಂದು ಪ್ರಶ್ನೆಯ ಉತ್ತರಕ್ಕೆ ನಾವು ಅನೇಕ ಪುಸ್ತಕಗಳನ್ನು ಓದಿ ನಮ್ಮ ಪಠ್ಯ ಜ್ಞಾನ ಸಾಮಾನ್ಯ ಜ್ಞಾನ ಹೆಚ್ಚಿಸಿಕೊಳ್ಳುತ್ತಿದ್ದೆವು. ನಮ್ಮ ತಾತ ಓದುತ್ತಿದ್ದ ಚಂದಮಾಮ, ಬಾಲ ಮಂಗಳ, ಬಾಲಮಿತ್ರ ಕಥೆಗಾಗಿ ಓದುತ್ತಿದ್ದರೆ, ದಿಕ್ಸೂಚಿ, ಚುಟುಕು ತರದ ಜ್ಞಾನಕ್ಕಾಗಿ ಅನೇಕ ಪತ್ರಿಕೆಗಳನ್ನು ಓದುತ್ತಿದ್ದ ಕಾಲವದು. ಅನೇಕ ಮಹನೀಯರು ಜೀವನದ ಕಷ್ಟ ಕಾರ್ಪಣ್ಯ ಅನುಭವಿಸಿದ್ದನ್ನು ಅನೇಕ ಪುಸ್ತಕಗಳು ಹಾಗೂ ಮಹನೀಯರ ಜೀವನ

ಚರಿತ್ರೆ ಸಾಧನೆ ಓದಿ ಪ್ರಭಾವಿತರಾಗಿ ಆತ್ಮಹತ್ಯೆ ಕೈ ಬಿಟ್ಟ ಅನೇಕ ಉದಾಹರಣೆಗಳು ಇವೆ. ಅಣ್ಣಾ ಹಜಾರೆ ಜೀವನದಲ್ಲಿ ನಿರಾಶೆ ಆತ್ಮಹತ್ಯೆ ಯೋಚನೆ ಬಂದಾಗ ಸ್ವಾಮಿ ವಿವೇಕಾನಂದರ ಪುಸ್ತಕ ಓದಿ ತುಂಬಾ ಪ್ರಭಾವಿತರಾಗಿ, ಭ್ರಷ್ಟಾಚಾರದ ವಿರುದ್ಧ ಹೋರಾಡುವಂತೆ ಮಾಡಿತು.

ಬಲ್ಲವನೇ ಬಲ್ಲ ಬೆಲ್ಲದ ರುಚಿಯ ಎನ್ನುವಂತೆ ಪುಸ್ತಕಕ್ಕಾಗಿ ಹಾತೊರೆದು ಓದುತ್ತಿದ್ದ ಕಾಲವೆಲ್ಲಿ ಈಗೆಲ್ಲಿ ಎನ್ನುವಂತಾಗಿದೆ. ಅನೇಕ ಪುಸ್ತಕಗಳನ್ನು ಕದ್ದು ಓದಿದ್ದನ್ನು ನೋಡಿದ್ದೇವೆ. ಯಾರು ನೋಡಿದರೂ ಇಂದು ಕನಿಷ್ಠ ಅರ್ಧ ಗಂಟೆಯೂ ಓದುವ ಹವ್ಯಾಸ ಕಡಿಮೆಯಾಗುತ್ತಿರುವುದು ದುರದೃಷ್ಟಕರ. ಜ್ಞಾನದ ಹಸಿವನ್ನು ನೀಗಲು ಪುಸ್ತಕ ಅನಿವಾರ್ಯ ಎನ್ನುವುದನ್ನು ನಾವು ನಮ್ಮ ಮಕ್ಕಳಿಗೆ ಮನದಟ್ಟು ಮಾಡಿಕೊಡಲು ನಾವೂ ಓದುವುದನ್ನು ರೂಢಿಸಿಕೊಳ್ಳಬೇಕಿದೆ.

# ನಮ್ಮನ್ನು ಸೋಲಿಸುವ ಅಸ್ತ್ರ, ನಮ್ಮದೇ ಅಹಂಕಾರ!

ಒಂದೊಳ್ಳೆ ಮಾತು

ರೂಪಾ ಗುರುರಾಜ್

Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ರಾವಣನು ಶ್ರೀರಾಮನ ಎದುರು ಯುದ್ಧಭೂಮಿಯಲ್ಲಿ ನಿಲ್ಲುವುದಕ್ಕೂ ಎಷ್ಟೋ ವರ್ಷಗಳ ಮುನ್ನವೇ ಆತನ ವಿನಾಶದ ಮುನ್ನುಡಿ ಬರೆಯಲ್ಪಟ್ಟಿತ್ತು. ಅದು ಬೇರೆಲ್ಲೂ ಅಲ್ಲ, ಸಾಕ್ಷಾತ್ ಪರಮಶಿವನ ಪವಿತ್ರ ನಿವಾಸವಾದ ಕೈಲಾಸ ಪರ್ವತದ ದ್ವಾರದಲ್ಲಿ! ಒಂದು ಸಣ್ಣ ಅವಮಾನ, ಒಂದು ಭೀಕರ ಶಾಪ-ಕೊನೆಗೆ ಇಡೀ ಸುವರ್ಣ ಲಂಕೆ ಹನು ಮಂತ ಮತ್ತು ವಾನರ ಸೇನೆಯಿಂದ ಭಸ್ಮವಾ ಗಲು ಕಾರಣವಾಯಿತು. ಕೆಲವು ಪತನಗಳು ಹಠಾತ್ತಾಗಿ ಸಂಭವಿಸುವುದಿಲ್ಲ, ಅವು ಬಹಳ ಹಿಂದೆಯೇ ಲಿಖಿತವಾಗಿರುತ್ತವೆ ಎಂಬುದಕ್ಕೆ ಈ ಕಥೆಯೇ ಸಾಕ್ಷಿ.

ರಾವಣನು ಜಗತ್ತನ್ನೇ ಗೆದ್ದು, ಬ್ರಹ್ಮನಿಂದ ದೇವತೆಗಳು ಅಥವಾ ದಾನವರಿಂದ ತನಗೆ ಸಾವು ಬರಬಾರದೆಂಬ ಅಪ್ರತಿಮ ವರಗಳನ್ನು ಪಡೆದು ಬೀಗುತ್ತಿದ್ದ ಕಾಲವದು. ಒಂದು ದಿನ ಆತ ತನ್ನ ಪುಷ್ಪಕ ವಿಮಾನದಲ್ಲಿ ಆಕಾಶಮಾರ್ಗವಾಗಿ ಚಲಿಸುತ್ತಿರುವಾಗ, ಕೈಲಾಸ ಪರ್ವತದ ಬಳಿ ವಿಮಾನವು ದಿಢೀರನೆ ನಿಂತುಹೋಯಿತು. ತನ್ನ ದಾರಿಗೆ ಅಡ್ಡಿಪಡಿಸುವ ಶಕ್ತಿ ಈ ಜಗತ್ತಿನಲ್ಲಿ ಯಾರಿಗಿದೆ ಎಂದು ಕ್ರೋಧದಿಂದ ರಾವಣನು ಕೆಳಗಿಳಿದನು.

ಅಲ್ಲಿ ಕೈಲಾಸದ ದ್ವಾರಪಾಲಕನೂ, ಶಿವನ ಪರಮ ಭಕ್ತನೂ ಆದ ನಂದೀಶ್ವರನು ರಾವಣನನ್ನು ತಡೆದನು. ಶಿವ-ಪಾರ್ವತಿಯರು ಏಕಾಂತದಲ್ಲಿದ್ದಾರೆ, ಹಾಗಾಗಿ ಮುಂದೆ ಹೋಗಲು ಸಾಧ್ಯವಿಲ್ಲ ಎಂದು ಶಾಂತವಾಗಿ ತಿಳಿಸಿದನು. ಅಹಂಕಾರದಿಂದ ಕಣ್ಣು ಕಾಣದಾಗಿದ್ದ ರಾವಣನು ನಂದೀಶ್ವರನ ವಾನರ ಸದೃಶ ಮುಖವನ್ನು ನೋಡಿ ಅಟ್ಟಹಾಸಗೈದನು. ನಂದಿಯನ್ನು ಒಬ್ಬ ಸಾಮಾನ್ಯ ವಿಕಾರ ಮುಖದ ಪ್ರಾಣಿ ಎಂದು ತೀರಾ ಕೀಳಾಗಿ ನಿಂದಿಸಿ, ಅಪಹಾಸ್ಯ ಮಾಡಿದನು.

ತನ್ನ ಆರಾಧ್ಯ ದೈವದ ದ್ವಾರದಲ್ಲೇ ತನಗೆ ನಡೆದ ಈ ಅವಮಾನದಿಂದ ಮತ್ತು ರಾವಣನ ಮಿತಿಮೀರಿದ ಗರ್ವದಿಂದ ನಂದೀಶ್ವರನಿಗೆ ತೀವ್ರ ಕೋಪ ಬಂದಿತು. ಆತ ರಾವಣನ ಕಣ್ಣುಗಳನ್ನು ನೇರವಾಗಿ ನೋಡಿ ಶಾಪವನ್ನು ನೀಡಿದನು: ಯಾವ ವಾನರ ಮುಖವನ್ನು ನೋಡಿ ನೀನು ಹೀಗೆ ಅಟ್ಟಹಾಸಗೈದು ಅವಮಾನಿಸಿದೆಯೋ, ಅದೇ ವಾನರ ಜನಾಂಗವೇ ನಿನ್ನ ವಿನಾಶಕ್ಕೆ ಕಾರಣವಾಗಲಿ. ದೇವ-ದಾನವರಿಂದ ನಿನಗೆ ಸಾವು ಬರದಿದ್ದರೂ, ನನ್ನದೇ ರೂಪ ಮತ್ತು ಪರಾಕ್ರಮವನ್ನು ಹೊಂದಲಿರುವ ವಾನರರು ಸೃಷ್ಟಿಯಾಗಲಿದ್ದಾರೆ. ಅವರು ನಿನ್ನ ಹೆಮ್ಮೆಯ ಸುವರ್ಣ ಲಂಕೆಯನ್ನು ಸುಟ್ಟು ಬೂದಿ ಮಾಡುತ್ತಾರೆ ಮತ್ತು ನಿನ್ನ ಅಹಂಕಾರದ ಸಾಮ್ರಾಜ್ಯವನ್ನು ಸಂಪೂರ್ಣವಾಗಿ ಧೂಳೀಪಟ ಮಾಡುತ್ತಾರೆ.

ರಾವಣನು ದೇವತೆಗಳ ಎದುರು ತಾನು ಅಮರನೆಂಬ ಭ್ರಮೆಯಲ್ಲಿದ್ದ ಕಾರಣ, ಕೇವಲ ಕೋತಿಗಳು ತನ್ನನ್ನು ಏನು ಮಾಡಲು ಸಾಧ್ಯ ಎಂದು ಆ ಶಾಪವನ್ನು ನಿರ್ಲಕ್ಷಿಸಿದನು. ತಾನು ಬ್ರಹ್ಮನಿಂದ ವರ ಕೇಳುವಾಗ ಮನುಷ್ಯರನ್ನು ಮತ್ತು ವಾನರರನ್ನು ತೀರಾ ಕೀಳೆಂದು ಭಾವಿಸಿ, ಅವರಿಂದ ರಕ್ಷಣೆ ಕೇಳುವುದನ್ನೇ ಮರೆತಿದ್ದ ಪ್ರಮಾದ ಅಹಂಕಾರದ ಅಮಲಿನಲ್ಲಿ ಆತನಿಗೆ ನೆನಪಾಗಲಿಲ್ಲ.

ನಂದಿಯ ಶಾಪಕ್ಕೆ ಪ್ರತಿಯಾಗಿ ತನ್ನ ತಾಕತ್ತನ್ನು ಪ್ರದರ್ಶಿಸಲು, ರಾವಣನು ಕೈಲಾಸ ಪರ್ವತದ ಕೆಳಗೆ ತನ್ನ ಇಪ್ಪತ್ತು ಕೈಗಳನ್ನಿಟ್ಟು ಇಡೀ

ಪರ್ವತವನ್ನೇ ಮೇಲೆತ್ತಲು ಯತ್ನಿಸಿದನು. ಇಡೀ ಪರ್ವತವು ನಡುಗತೊಡಗಿತು. ಆಗ ಶಿವನು ಅತ್ಯಂತ ಸಹಜವಾಗಿ ತನ್ನ ಕಾಲಿನ ಹೆಬ್ಬೆರಳಿನಿಂದ ಪರ್ವತವನ್ನು ಸಲ್ಪ ಒತ್ತಿದನು. ಆ ಭಾರಕ್ಕೆ ರಾವಣನ ಕೈಗಳು ಪರ್ವತದ ಅಡಿಯಲ್ಲಿ ಸಿಲುಕಿ ನಜ್ಜುಗುಜ್ಜಾದವು. ನೋವಿನ್ನು ತಡೆಯಲಾರದೆ ರಾವಣನು ಮಾಡಿದ ಭೀಕರ ಕಿರುಚಾಟಕ್ಕೆ ಜಗತ್ತೇ ನಡುಗಿತು (ಹೀಗಾಗಿಯೇ ಆತನಿಗೆ 'ರಾವಣ'- ಭೀಕರವಾಗಿ ಕಿರುಚುವವನು ಎಂಬ ಹೆಸರು ಬಂದಿತು). ನಂತರ ಶಿವನನ್ನು ಪ್ರಸನ್ನಗೊಳಿಸಲು ಆತ ಸಾವಿರ ವರ್ಷಗಳ ಕಾಲ 'ಶಿವ ತಾಂಡವ ಸ್ತೋತ್ರ'ವನ್ನು ಹಾಡಿ ಪ್ರಾರ್ಥಿಸಿದ ಮೇಲಷ್ಟೇ ಶಿವನು ಆತನನ್ನು ಮುಕ್ತಗೊಳಿಸಿದನು. ಮುಂದೆ ಹನುಮಂತನು ಸಮುದ್ರವನ್ನು ಲಂಘಿಸಿ, ತನ್ನ ಬಾಲದ ಬೆಂಕಿಯಿಂದ ಇಡೀ ಲಂಕೆಯನ್ನು ದಹಿಸಿದಾಗ ಮತ್ತು ವಾನರ ಸೇನೆಯು ರಾಮಸೇತುವನ್ನು ಕಟ್ಟಿ ಲಂಕೆಯ ಕೋಟೆಯ ಬಾಗಿಲನ್ನು ಮುರಿದಾಗ, ಅದು ಕೇವಲ ಆ ಕ್ಷಣದ ಯುದ್ಧದ ವಿಜಯವಾಗಿರಲಿಲ್ಲ. ಅದು ಶತಮಾನಗಳ ಹಿಂದೆ ಕೈಲಾಸದ ಪವಿತ್ರ ಮಣ್ಣಿನಲ್ಲಿ ನಂದೀಶ್ವರನು ನೀಡಿದ ಶಾಪದ ಸಾಕ್ಷಾತ್ಕಾರವಾಗಿತ್ತು.

ನಾವು ಉತ್ಕೃಷ್ಟರು ಎನ್ನುವ ಅಹಂಕಾರದಲ್ಲಿ ಮತ್ತೊಬ್ಬರಿಗೆ ಅವಮಾನ ಮಾಡುವ ಮೊದಲು ನೂರು ಬಾರಿ ಯೋಚಿಸಿ. ಬೇರೆಯವರ ನಡೆ-ನುಡಿಗಳಿಗಿಂತ ಹೆಚ್ಚು ನಮ್ಮ ಅಹಂಕಾರವೇ ನಮ್ಮನ್ನು ಭೂಮಿಗೆ ಇಳಿಸುತ್ತದೆ. ಈ ಪ್ರಜ್ಞೆ ಇದ್ದಾಗ ಸಮಚಿತ್ತದಿಂದ ವ್ಯವಹರಿಸುವ ತಾಳ್ಮೆ ಬೆಳೆಸಿಕೊಳ್ಳುತ್ತೇವೆ.

## ಪದಬಂಧ

• ಸಿ.ರವಿಶಂಕರ ಶಾಸ್ತ್ರಿ, ದಂಬೆ



### ಎಡದಿಂದ ಬಲಕ್ಕೆ

2. ಮೊದಲಿಗೆ ಆಡು, ನಂತರ ದಶರಥನಂದನ, ಒಟ್ಟಾರೆ ಶಾಶ್ವತ ಎಂದರ್ಥ (5)
6. ಕಾಗದಪತ್ರಗಳಿಗೆ ಹಾಕುವ ಸಹಿ (4)
8. ಚಂದ್ರನನ್ನು ತಲೆಯಲ್ಲಿ ಧರಿಸಿರುವ ಶಿವ (4)
10. ಗಿಡ ಬೆಳೆದು ದೊಡ್ಡದಾದರೆ ಸಿಗುವ ಮರ (2)
11. ಹಸು ಕೂಗುವುದು ಹೀಗೆ (2)
14. ಗಾಳಿಯ ಮಗನೆಂಬ ರೀತಿಯಲ್ಲಿ ಹನುಮಂತನಿಗೆ ಒಪ್ಪುವ ಹೆಸರು (4)
16. ಅನ್ಯರ ಮೇಲೆ ಸಂದೇಹ ಪಡುವುದು (4)
17. ವಿಡಂಬನಾತ್ಮಕವಾಗಿ ಪದ್ಯ ಬರೆಯುವವನು (5)

### ಮೇಲಿಂದ ಕೆಳಕ್ಕೆ

1. ಒಡಹುಟ್ಟಿದವನು (4)
3. ಗತ್ತಿನಿಂದ ಬಂದಿದೆ ಈ ವಿಶ್ವ (3)
4. ಚೆಲ್ಲಾಪಿಲ್ಲಿಯಾಗಿ ಬಂದಿರುವ ರೋಗ ಗುಣಪಡಿಸುವಿಕೆ (3)
5. ಜೀವನದಲ್ಲಿರಬೇಕಾದ ಹೊಂದಾಣಿಕೆ (4)
7. ಮರೆಯಾಗು ಎನ್ನುವುದನ್ನು ಧ್ವನಿಸುವ ನುಡಿಗಟ್ಟು 5)
9. ಬೇಲೂರು, ಹಳೆಬೀಡಿನಲ್ಲಿರುವ ಕಲ್ಲಿನಲ್ಲಿ ಕೆತ್ತಿರುವ ಸ್ತ್ರೀ ವಿಗ್ರಹ (5)
12. ಸೈನಿಕರು ನಡೆಸುವ ದೈಹಿಕ ಕಸರತ್ತು (4)
13. ಸ್ಮಶಾನಕ್ಕೆ ಇನ್ನೊಂದು ಹೆಸರು (4)
15. ಕೆರೆ ಅಥವಾ ಜಲಾಶಯಕ್ಕೆ ಮತ್ತೊಂದು ಹೆಸರಿದು (3)
16. ಮತ್ತೊಂದು ಕೈಯೊಂದಿಗೆ ಬಂದಿರುವ ಶಿವ ಇಲ್ಲಿ ಚೆಲ್ಲಾಪಿಲ್ಲಿಯಾಗಿದ್ದಾನೆ (3)

### ಸರಿಯುತ್ತರಗಳು

ಎಡದಿಂದ ಬಲಕ್ಕೆ
2. ಅಜರಾಮರ 6. ದಸಕತ್ತು 8. ಶಶಿಧರ 10. ತರು 11. ಅಂಬಾ 14. ವಾಯುಸುತ 16. ಶಂಕೆಪಡು 17. ವಿಕಟಕವಿ

ಮೇಲಿಂದ ಕೆಳಕ್ಕೆ
1. ಸಹೋದರ 3. ಜಗತ್ತು 4. ಮನಶ 5. ಸಾಮರಸ್ಯ 7. ಕಣ್ಣುತಪ್ಪಿಸು 9. ಶಿಲಾಬಾಲಿಕೆ 12. ಕವಾಯತು 13. ಸುಡುಗಾಡು 15. ತಟಾಕ 16. ಶಂರಕ

ನೀವೂ ಬರೆಯಬಹುದು

ನಮ್ಮ ವಿಳಾಸ

ಪುರವಣಿ ವಿಭಾಗ, ನಂ.1687, 3ನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098

e-mail: vishwavanimagazine@gmail.com

## ಐಪಿಎಲ್-2026 ಅಂಕಪಟ್ಟಿ

| ತಂಡ | ಪಂದ್ಯ | ಗೆಲುವು | ಸೋಲು | ಅಂಕ |
|---|---|---|---|---|
| Q ಬೆಂಗಳೂರು | 14 | 9 | 5 | 18 |
| Q ಗುಜರಾತ್ | 14 | 9 | 5 | 18 |
| Q ಹೈದರಾಬಾದ್ | 14 | 9 | 5 | 18 |
| Q ರಾಜಸ್ಥಾನ್ | 13 | 7 | 6 | 14 |
| ಪಂಜಾಬ್ | 13 | 6 | 6 | 13 |
| ಕೋಲ್ಕತಾ | 13 | 6 | 6 | 13 |
| ಚೆನ್ನೈ | 14 | 6 | 8 | 12 |
| ಡೆಲ್ಲಿ | 13 | 6 | 7 | 12 |
| ಮುಂಬೈ | 12 | 4 | 9 | 8 |
| ಲಖನೌ | 13 | 4 | 9 | 8 |

# ಸೂರ್ಯವಂಶಿ ಸುಂಟರಗಾಳಿ

## ಎಲಿಮಿನೇಟರ್‌ನಲ್ಲಿ 29 ಎಸೆತಕ್ಕೆ 97 ರನ್, ಐಪಿಎಲ್‌ನ ವೇಗದ ಶತಕ ಮಿಸ್ ಹೈದರಾಬಾದ್ ತಬ್ಬಿಬ್ಬು, ಒಂದು ಐಪಿಎಲ್‌ನಲ್ಲಿ ಗರಿಷ್ಠ ಸಿಕ್ಸರ್ ಬಾರಿಸಿದ ವೈಭವ್

**ಮುಲ್ಲಾಂಪುರ:** ನವಚಂಡೀಗಢದ ಯಾದವೀಂದ್ರ ಸಿಂಗ್ ಮೈದಾನದಲ್ಲಿ ನಡೆದ ಐಪಿಎಲ್ ಎಲಿಮಿನೇಟರ್ ಪಂದ್ಯದಲ್ಲಿ ಸನ್ ರೈಸರ್ಸ್ ಹೈದರಾಬಾದ್ ವಿರುದ್ಧ ರಾಜಸ್ಥಾನ್ ರಾಯಲ್ಸ್ ಬ್ಯಾಟರ್‌ಗಳು ಅಬ್ಬರಿಸಿದ್ದಾರೆ. ವೈಭವ್ ಸೂರ್ಯವಂಶಿಯ ಮತ್ತೊಂದು ಸ್ಫೋಟಕ ಬ್ಯಾಟಿಂಗ್‌ನಿಂದ 20 ಓವರ್‌ಗಳಲ್ಲಿ ರಾಜಸ್ಥಾನ್ 8 ವಿಕೆಟ್‌ಗಳಿಗೆ 243 ರನ್ ಗಳಿಸಿತು. ಅತಿವೇಗದ ಐಪಿಎಲ್ ಶತಕ ಬಾರಿಸಿದ ದಾಖಲೆಯನ್ನು ಸೂರ್ಯವಂಶಿಯು ಸನಿಹದಲ್ಲಿ ತಪ್ಪಿಸಿಕೊಂಡು ನಿರಾಶೆಗೊಳಗಾದರು.

ಕಳೆದ ಐಪಿಎಲ್ ಸೀಸನ್‌ನಲ್ಲಿ ಭಾರತೀಯ ಬ್ಯಾಟರ್ ಒಬ್ಬನ ಅತಿವೇಗದ ಶತಕದ ದಾಖಲೆ ಬರೆದಿರುವ ವೈಭವ್ ಸೂರ್ಯವಂಶಿ ಅವರಿಗೆ, ಇದೀಗ ಐಪಿಎಲ್‌ನಲ್ಲೇ ಅತಿವೇಗದ ಶತಕ ಬಾರಿಸಿದ ದಾಖಲೆ ಕೂದಲೆಳೆ ಅಂತರದಿಂದ ತಪ್ಪಿದೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಕ್ರಿಸ್ ಗೇಲ್ ಅವರು 2013ರಲ್ಲಿ ಪುಣೆ ವಾರಿಯರ್ಸ್ ವಿರುದ್ಧ 30 ಎಸೆತಗಳಲ್ಲಿ ಶತಕ ಬಾರಿಸಿರುವುದು ದಾಖಲೆಯಾಗಿದೆ. ಇದೇ ಹಾದಿಯಲ್ಲಿದ್ದ ವೈಭವ್ ಇನ್ನೇನು ಶತಕ ಗಳಿಸಿಯೇಬಿಟ್ಟರು ಎಂದುಕೊಂಡಿದ್ದಾಗ 29 ಎಸೆತಗಳಲ್ಲಿ 97 ರನ್‌ಗಳಿಸಿ ಕ್ಯಾಚ್ ನೀಡಿ ಹೊರನಡೆದರು. ವೈಭವ್ ಅವರ ಈ ಆಟ ಕ್ರಿಕೆಟ್ ಪಂಡಿತರನ್ನು ತಬ್ಬಿಬ್ಬಾಗಿಸಿದೆ.

ಅವರ ಅಪೂರ್ವ ಸಾಧನೆಗಾಗಿ ಕಾದು ಕುಳಿತಿದ್ದ ಅಸಂಖ್ಯಾತ ಕ್ರಿಕೆಟ್ ಪ್ರೇಮಿಗಳು ನಿರಾಸೆ ಅನುಭವಿಸಿದರು. ಆದರೆ ಅವರು ಈ ಸಂದರ್ಭದಲ್ಲಿ ಮಾತ್ರ ಅನೇಕ ದಾಖಲೆಗಳನ್ನು ಮುರಿದರು. ಅನೇಕ ಮೈಲಿಗಲ್ಲುಗಳನ್ನು ದಾಟಿದರು. ಅವರು ಔಟಾದಾಗ ಎದುರಾಳಿ ತಂಡದ ಆಟಗಾರರೂ ಅವರ ಬೆನ್ನುತಟ್ಟಿದರು.

### ಪವರ್ ಪ್ಲೇನಲ್ಲಿ ಹೆಚ್ಚು 50+ ರನ್

6 ಬಾರಿ- ಡೇವಿಡ್ ವಾರ್ನರ್
5 ಬಾರಿ - ವೈಭವ್ ಸೂರ್ಯವಂಶಿ
4 ಬಾರಿ - ಟ್ರಾವಿಸ್ ಹೆಡ್

### ಪವರ್ ಪ್ಲೇನಲ್ಲಿ ಅತಿ ಹೆಚ್ಚು ಸಿಕ್ಸರ್

8 ಸಿಕ್ಸರ್ - ವೈಭವ್ (ರಾಜಸ್ಥಾನ) ಎದುರಾಳಿ ಹೈದರಾಬಾದ್, 2026
7 ಸಿಕ್ಸರ್- ಸನತ್ ಜಯಸೂರ್ಯ (ಮುಂಬೈ) ಎದುರಾಳಿ ಚೆನ್ನೈ, 2008

### 65 ಸಿಕ್ಸರ್: ಗೇಲ್ ದಾಖಲೆ ಪತನ

ವೈಭವ್ ಪ್ರಸ್ತುತ ಪಂದ್ಯದಲ್ಲಿ 12 ಸಿಕ್ಸರ್‌ಗಳನ್ನು ಬಾರಿಸುವ ಮೂಲಕ ಒಂದು ಐಪಿಎಲ್ ಆವೃತ್ತಿಯಲ್ಲಿ ಗರಿಷ್ಠ 65 ಸಿಕ್ಸರ್ ಬಾರಿಸಿದ ದಾಖಲೆಯನ್ನು ನಿರ್ಮಿಸಿದರು. ಕ್ರಿಸ್ ಗೇಲ್ ಅವರು 2012ರಲ್ಲಿ 59 ಸಿಕ್ಸರ್ ಬಾರಿಸಿದ್ದರು. ಆ್ಯಂಡ್ರೆ ರಸೆಲ್ (ಕೋಲ್ಕತಾ ನೈಟ್ ರೈಡರ್ಸ್) 2019ರಲ್ಲಿ 52 ಸಿಕ್ಸರ್ ಬಾರಿಸಿದ್ದರು.

### ಪ್ಲೇಆಫ್ ವೇಗದ 50

16 ಎಸೆತ - ಸುರೇಶ್ ರೈನಾ (ಚೆನ್ನೈ, 2014)
16 ಎಸೆತ - ವೈಭವ್ ಸೂರ್ಯವಂಶಿ (ರಾಜಸ್ಥಾನ, 2026)
17 ಎಸೆತ - ಆಡಮ್ ಗಿಲ್‌ಕ್ರಿಸ್ಟ್ (ಡೆಕ್ಕನ್ ಚಾರ್ಜರ್ಸ್, 2009)

## ಸಮಾಚಾರ ಸಣ್ಣದಲ್ಲ

### ಇದು ಮೂರ್ಖತನ: ಪತ್ರಕರ್ತನ ವಿರುದ್ಧ ಕಿಡಿಕಾರಿದ ಫಿಲಿಪ್ಸ್

**ಧರ್ಮಶಾಲಾ:** ಮಂಗಳವಾರ ಕ್ವಾಲಿಫೈಯರ್-1ರಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ವಿರುದ್ಧ ಗುಜರಾತ್ ಟೈಟಾನ್ಸ್ ಸೋತ ನಂತರ, ಗುಜರಾತ್ ಪರ ಪಂದ್ಯದಲ್ಲಿ ಪತ್ರಿಕಾಗೋಷ್ಠಿಗೆ ಆಗಮಿಸಿದ್ದ ಗ್ಲೆನ್ ಫಿಲಿಪ್ಸ್ ಪತ್ರಕರ್ತರ ವಿರುದ್ಧವೇ ಗರಂ ಆದರು. ಪ್ರಸ್ತುತ ಪಂದ್ಯದಲ್ಲಿ ಫಿಲಿಪ್ಸ್‌ಗೆ ಸ್ಥಾನ ಸಿಕ್ಕಿರಲಿಲ್ಲ. ಆದರೂ ಪತ್ರಿಕಾಗೋಷ್ಠಿಗೆ ಬಂದಿದ್ದಾಗ, ಪತ್ರಕರ್ತರೊಬ್ಬರು 255 ರನ್‌ಗಳ ಬೃಹತ್ ಗುರಿಯನ್ನಿಟ್ಟುಕೊಂಡು ಚೇಸಿಂಗ್‌ಗೆ ಆಗಮಿಸಿದ್ದ ಗುಜರಾತ್ ಬ್ಯಾಟಿಂಗ್‌ಗೆ ಇಳಿಯುವ ಮುನ್ನವೇ ಮಾನಸಿಕವಾಗಿ ಸೋತುಹೋಗಿತ್ತಾ? ಎಂದು ಕೇಳಿದರು. ಈ ಪ್ರಶ್ನೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ ಫಿಲಿಪ್ಸ್, ಅದು ತೀರಾ ಮೂರ್ಖತನದ ಪ್ರಶ್ನೆ ಎಂದು ಖಾರವಾಗಿ ಉತ್ತರಿಸಿದರು. ಮೈದಾನಕ್ಕಿಳಿಯುವ ಯಾವುದೇ ತಂಡವೂ ಮೊದಲೇ ಸೋಲನ್ನು ಒಪ್ಪಿಕೊಳ್ಳುವುದಿಲ್ಲ. 250 ರನ್‌ಗಳ ಗುರಿಯನ್ನು ಬೆನ್ನಟ್ಟುವಾಗ ಸ್ಕೋರ್‌ಬೋರ್ಡ್ ಒತ್ತಡ ವಿಪರೀತವಾಗಿರುತ್ತದೆ. ಪಂಜಾಬ್ ಕಿಂಗ್ಸ್‌ನಂತಹ ಕೆಲವೇ ತಂಡಗಳು ಇದನ್ನು ಈ ಹಿಂದೆ ಚೇಸಿಂಗ್ ಮಾಡಿ ತೋರಿಸಿವೆ. ಆದರೆ ಅದು ಕಾಣುವಷ್ಟು ಸುಲಭ ವಲ್ಲ ಎಂದು ತಂಡದ ಪರ ಬ್ಯಾಟ್ ಮಾಡಿದರು.

ವಿರಾಮ
ಪ್ರತಿ ಭಾನುವಾರ

## ಯಾವುದೇ ನಿರ್ಧಾರ ಧೋನಿಗೆ ಬಿಟ್ಟಿದ್ದು: ಚೆನ್ನೈ ಸಿಇಒ ಕಾಶಿ ವಿಶ್ವನಾಥನ್

# ಚೆನ್ನೈ ಕಿಂಗ್ಸ್ ಕೋಚ್ ಆಗುತ್ತಾರಾ ಧೋನಿ?

**ಚೆನ್ನೈ:** ಚೆನ್ನೈ ಸೂಪರ್ ಕಿಂಗ್ಸ್ ತಂಡದ ಮಾಲೀಕ ಕಾಶಿ ವಿಶ್ವನಾಥನ್, ಎಂ.ಎಸ್.ಧೋನಿ ಅವರನ್ನು ಫ್ರಾಂಚೈಸಿಯ 'ಶಾಶ್ವತ ಆಟಗಾರ' ಎಂದು ಕರೆದಿದ್ದು, ಮುಂದಿನ ದಿನಗಳಲ್ಲಿ ಅನುಭವಿ ಆಟಗಾರ ಮುಖ್ಯ ಕೋಚ್ ಆಗಿ ಅಧಿಕಾರ ವಹಿಸಿಕೊಳ್ಳಲು ತಂಡದ ಆಡಳಿತ ಮಂಡಳಿ ಒಪ್ಪಿಗೆ ಸೂಚಿಸಿದೆ ಎಂದಿದ್ದಾರೆ. 44 ವರ್ಷದ ಚೆನ್ನೈ ಮಾಜಿ ನಾಯಕ ಧೋನಿ ತಂಡದಲ್ಲಿ ಇದ್ದರೂ, ಈ ಆವೃತ್ತಿಯಲ್ಲಿ ಒಂದೇ ಒಂದು ಪಂದ್ಯಗಳಲ್ಲಿಯೂ ಕಾಣಿಸಿಕೊಂಡಿಲ್ಲ. ಐಪಿಎಲ್ 2026 ಧೋನಿಯ ಕೊನೆಯ ಸೀಸನ್ ಆಗಿರಬಹುದು ಎಂದು ಹೀಗಾಗಲೇ ಹಲವರು ಊಹಿಸಿದ್ದಾರೆ. ಕಳೆದ ಕೆಲವು ವರ್ಷಗಳಿಂದ ಧೋನಿ ಸುತ್ತ ಇದೇ ರೀತಿಯ ಚರ್ಚೆಯಾಗುತ್ತಿದೆ. ಆದರೆ, ಇದೀಗ ಚೆನ್ನೈ ಸಿಇಒ ಧೋನಿಯಿಂದ ಫ್ರಾಂಚೈಸಿ ಮುಂದೆ ಏನನ್ನು ನಿರೀಕ್ಷಿಸುತ್ತದೆ ಎಂಬುದರ ಕುರಿತು ಮಾತನಾಡಿದ್ದಾರೆ. ಸಂದರ್ಶನದಲ್ಲಿ ಮಾತನಾಡಿದ ಕಾಶಿ, ಯಾವುದೇ ನಿರ್ಧಾರವನ್ನು ಧೋನಿ ಸ್ವತಃ ತಾವೇ ತೆಗೆದುಕೊಳ್ಳುತ್ತಾರೆ. ಚೆನ್ನೈ ತಂಡವು ಥಲಾ ತಂಡದ 'ಶಾಶ್ವತ ಆಟಗಾರ'ನಾಗಿರಲು ಬಯಸುತ್ತದೆ. ಅದು ಆಟಗಾರ, ತರಬೇತುದಾರ ಅಥವಾ ಮಾರ್ಗದರ್ಶಕರಾಗಿರಲಿ' ಎಂದರು. ಚೆನ್ನೈ ತಂಡವು ಸತತ ಮೂರನೇ ಬಾರಿಗೆ ಐಪಿಎಲ್ ಪ್ಲೇಆಫ್ ಪ್ರವೇಶಿಸಲು ವಿಫಲವಾದ ನಂತರ ಮುಖ್ಯ ಕೋಚ್ ಸ್ಟೀಫನ್ ಫ್ಲೆಮಿಂಗ್ ಕುರಿತು ಟೀಕೆಗಳು ವ್ಯಕ್ತವಾಗುತ್ತಿರುವ ಬೆನ್ನಲ್ಲೇ ತಂಡದ ಸಿಇಒ ಕಾಶಿ ಈ ಹೇಳಿಕೆಗಳು ಬಂದಿವೆ. ಕಳೆದ ವಾರ, ಚೆನ್ನೈ ಮಾಜಿ ಆಟಗಾರ ಆರ್.ಅಶ್ವಿನ್ ಅವರು ಫ್ಲೆಮಿಂಗ್ ಅವರನ್ನು ಮುಖ್ಯ ಕೋಚ್ ಆಗಿ ಬದಲಿಸುವ ಕಲ್ಪನೆಯನ್ನು ಬೆಂಬಲಿಸಿದ್ದರು. ಧೋನಿ ಇರುವಾಗ ತಂಡವು ಬೇರೆಡೆ ನೋಡುವ ಅಗತ್ಯವಿಲ್ಲ ಎಂದು ಹೇಳಿದರು.

## ಕೊಹ್ಲಿ ಜತೆಗಿನ ರೀಲ್ಸ್ ಸೇರಿ 200 ಪೋಸ್ಟ್ ಅಳಿಸಿದ ಅರ್ಷದೀಪ್

**ಚಂಡೀಗಢ:** ಐಪಿಎಲ್ ಸೀಸನ್ 19ರಿಂದ ಪಂಜಾಬ್ ಕಿಂಗ್ಸ್ ತಂಡ ಹೊರಬೀಳುತ್ತಿದ್ದಂತೆ ತಂಡದ ಪ್ರಮುಖ ವೇಗಿ ಅರ್ಷದೀಪ್ ಸಿಂಗ್ ತಮ್ಮ ಇನ್ಸ್ಟಾಗ್ರಾಮ್ ಖಾತೆಯಿಂದ 200ಕ್ಕೂ ಹೆಚ್ಚು ಪೋಸ್ಟ್‌ಗಳನ್ನು ಅಳಿಸಿದ್ದಾರೆ. ಕೊಹ್ಲಿ ಜೊತೆಗಿನ ರೀಲ್ಸ್ ಅನ್ನೂ ಅರ್ಷದೀಪ್ ತೆಗೆದಿದ್ದಾರೆ. ಐಪಿಎಲ್ 2026ರಲ್ಲಿ ಅರ್ಷದೀಪ್ ಅಷ್ಟೇನು ಉತ್ತಮ ಪ್ರದರ್ಶನವನ್ನು ನೀಡಿಲ್ಲ. ಪ್ರತೀ ಪಂದ್ಯದಲ್ಲೂ 10ಕ್ಕೂ ಅಧಿಕ ಸರಾಸರಿಯಲ್ಲಿ ಬೌಲಿಂಗ್ ಮಾಡುವುದರ ಜೊತೆಗೆ 14 ಪಂದ್ಯಗಳಲ್ಲಿ 14 ವಿಕೆಟ್‌ಗಳನ್ನು ಪಡೆದಿದ್ದಾರೆ. ಅರ್ಷದೀಪ್ ಡಿಲೀಟ್ ಮಾಡಿದ ಪೋಸ್ಟ್‌ಗಳ ಪೈಕಿ ವಿರಾಟ್ ಕೊಹ್ಲಿ ಜೊತೆಗಿನ ರೀಲ್ಸ್ ಕೂಡ ಸೇರಿದೆ. ಕಳೆದ ವರ್ಷ ಡಿಸೆಂಬರ್‌ನಲ್ಲಿ ವಿರಾಟ್ ಕೊಹ್ಲಿ ತಮಾಷೆ ಮಾಡುತ್ತಿದ್ದ ರೀಲ್ಸ್ ಒಂದನ್ನು ಅರ್ಷದೀಪ್ ಇನ್ಸ್ಟಾಗ್ರಾಮ್‌ನಲ್ಲಿ ಹಂಚಿಕೊಂಡಿದ್ದರು. ಈ ರೀಲ್ಸ್ ಬರೋಬ್ಬರಿ 1.5 ಕೋಟಿ ವೀಕ್ಷಣೆ ಪಡೆದುಕೊಂಡಿತ್ತು. ಅರ್ಷದೀಪ್ ಯಾವ ಕಾರಣಕ್ಕೆ ಅಳಿಸಿದ್ದಾರೆ ಎಂದು ಗೊತ್ತಾಗಿಲ್ಲ.

## ಇಂಡಿಯಾ ಪ್ಯಾರಾ ಅಥ್ಲೆಟಿಕ್ಸ್: ಜಾವೆಲಿನ್‌ನಲ್ಲಿ ಗಂಗವ್ವಗೆ ಚಿನ್ನ

### ಶಾಟ್‌ಪುಟ್‌ನಲ್ಲಿ ಗಂಗವ್ವ-ಮಂಜುಳಾಗೆ ಬೆಳ್ಳಿ ಪದಕ

ಮಹಿಳೆಯರ ಎಫ್11, ಎಫ್12 ಶಾಟ್‌ಪುಟ್ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದ ಕರ್ನಾಟಕದ ಮಂಜುಳಾ ಹುಣಸೆಕಟ್ಟೆ, ಕಂಚು ವಿಜೇತೆ ಗಂಗವ್ವ ನೀಲಪ್ಪ ಹರಿಜನ.

**ಬೆಂಗಳೂರು:** ಬೆಂಗಳೂರಿನ ಕಂಠೀರವ ಸ್ಟೇಡಿಯಂನಲ್ಲಿ ನಡೆಯುತ್ತಿರುವ 8ನೇ ಇಂಡಿಯನ್ ಓಪನ್ ಅಂತಾರಾಷ್ಟ್ರೀಯ ಪ್ಯಾರಾಲಿಂಪಿಕ್ ಅಥ್ಲೆಟಿಕ್ ಚಾಂಪಿಯನ್‌ಶಿಪ್‌ನಲ್ಲಿ ರಾಜ್ಯದ ಗಂಗವ್ವ ಹರಿಜನ ಜಾವೆಲಿನ್ ಎಫ್12/13 ವಿಭಾಗದಲ್ಲಿ ಚಿನ್ನದ ಪದಕ ಗೆದ್ದರು. ಇನ್ನು ಶಾಟ್‌ಪುಟ್ ವಿಭಾಗದಲ್ಲಿ ಗಂಗವ್ವ ಹರಿಜನ ಕಂಚು ಮತ್ತು ಮಂಜುಳಾ ಹುಣಸೆಕಟ್ಟೆ ಬೆಳ್ಳಿ ಪದಕ ಗೆದ್ದರು.

ಡಿಸ್ಕಸ್ ಥ್ರೋ ಎಫ್54 ವಿಭಾಗದಲ್ಲಿ ಉತ್ತರಪ್ರದೇಶದ ಸುವರ್ಣಾ ರಾಜ್ ಚಿನ್ನ, ತಮಿಳುನಾಡಿನ ಕೀರ್ತಿಕಾ ಬೆಳ್ಳಿ, ಬಿಹಾರದ ಅರ್ಚನಾ ಕುಮಾರಿ ಕಂಚಿನ ಪದಕ ಗೆದ್ದರು. ಮಹಿಳೆಯರ ಶಾಟ್‌ಪುಟ್ ಎಫ್40/41 ವಿಭಾಗದಲ್ಲಿ ತಮಿಳುನಾಡಿನ ಎನ್ವತಮಿಜಿ ಚಿನ್ನ, ಹರ್ಯಾಣದ ಉಷಾ ಬೆಳ್ಳಿ, ಮಹಾರಾಷ್ಟ್ರದ ಅಂಕುತಾಯ್ ಉಲಭಗತ್ ಕಂಚಿನ ಪದಕ ಗೆದ್ದರು.

ದಿವ್ಯಾಂಗ ಕ್ರೀಡಾಪಟುವೊಬ್ಬರ ಎತ್ತರಜಿಗಿತದ ರೋಚಕ ದೃಶ್ಯ

## ಫ್ರೆಂಚ್ ಗ್ರ್ಯಾನ್‌ಸ್ಲಾಮ್ ಟೆನಿಸ್

# ಜಾನಿಕ್ ಸಿನ್ನರ್ 3ನೇ ಸುತ್ತಿಗೆ

**ಪ್ಯಾರಿಸ್:** ಇಲ್ಲಿ ನಡೆಯುತ್ತಿರುವ ಫ್ರೆಂಚ್ ಓಪನ್ ಗ್ರ್ಯಾನ್‌ಸ್ಲಾಮ್ ಟೆನಿಸ್‌ನಲ್ಲಿ ಬುಧವಾರ ಪ್ಯಾಬ್ಲೊ ಕರೆನೊ ಬುಸ್ಟಾ 3ನೇ ಸುತ್ತಿಗೇರಿದ್ದಾರೆ. ಕರೆನೊ 7-5, 4-6, 1-0ಯಿಂದ ಮುನ್ನಡೆ ಸಾಧಿಸಿದ್ದಾಗ ಎದುರಾಳಿ ಥನಾಸಿ ಕೊಕ್ಕಿನಾಕಸ್ ಪಂದ್ಯದಿಂದ ಹಿಂದೆ ಸರಿದಿದ್ದಾರೆ. ಹೀಗಾಗಿ ಕರೆನೊ ಮುಂದಿನ ಸುತ್ತಿಗೇರಿದ್ದಾರೆ. ಇನ್ನೊಂದು ಪಂದ್ಯದಲ್ಲಿ ಮಿಯೋಮಿರ್ ಕೆಮಾನೊವಿಕ್ ವಿರುದ್ಧ 3-6, 6-2, 6-1, 6-2ರಿಂದ ನೂನೊ ಬೋರ್ಗ್ಸ್ ಗೆಲುವು ಸಾಧಿಸಿದ್ದಾರೆ. ಖ್ಯಾತ ಆಟಗಾರ ಆಂಡ್ರೆ ರಬ್ಲೆವ್ 6-1, 1-6, 6-3, 7-6ರಿಂದ ಕೆಮಿಲೊ ಕಾರಾಬೆಲ್ಲಿ ವಿರುದ್ಧ ಗೆದ್ದಿದ್ದಾರೆ. ವಿಶ್ವವಿಖ್ಯಾತ ಆಟಗಾರ ಜಾನಿಕ್ ಸಿನ್ನರ್ ಸುಲಭದ ಜಯ ಸಾಧಿಸಿ 3ನೇ ಸುತ್ತಿಗೇರಿದರು. ಅವರು 6-1, 6-3, 6-4ರಿಂದ ಕ್ಲೆಮೆಂಟ್ ಟಬುರ್ ವಿರುದ್ಧ ನೇರಸೆಟ್‌ಗಳ ಜಯ ಸಾಧಿಸಿದರು. ಮಹಿಳಾ ವಿಭಾಗದ 2ನೇ ಸುತ್ತಿನಲ್ಲಿ ಎಲಿನಾ ಸ್ವಿಟೋಲಿನಾ 6-0, 6-4ರಿಂದ ಕೈಟ್ಲಿನ್ ಖೆವೆಡೊ ವಿರುದ್ಧ, ಮೇರಿ ಬೌಜ್ಕೋವಾ 6-0, 7-6ರಿಂದ ಫ್ರಾನ್ಸೆಸ್ಕಾ ಜೋನ್ಸ್ ವಿರುದ್ಧ ಗೆದ್ದು 3ನೇ ಸುತ್ತಿಗೇರಿದರು.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಶ್ರೀ ಡಿ.ಕೆ.ಶಿವಕುಮಾರ್
ಸನ್ಮಾನ್ಯ ಉಪಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರದ ಐತಿಹಾಸಿಕ ತೀರ್ಮಾನ !

ರಾಜ್ಯದ ಎಲ್ಲಾ ಇಲಾಖೆಗಳ ಎಲ್ಲಾ ಹಂತದ ನೇರ ನೇಮಕಾತಿಗಳಲ್ಲಿ ಸಾಧಕ ಕ್ರೀಡಾಪಟುಗಳಿಗೆ
2% ಕ್ರೀಡಾ ಮೀಸಲಾತಿ
ಜಾರಿಗೊಳಿಸಲು ಕರ್ನಾಟಕ ಸರ್ಕಾರವು ಅನುಮೋದನೆ ನೀಡಿದೆ.

ಪೊಲೀಸ್ ಇಲಾಖೆಯಲ್ಲಿ ಕಾನ್ಸ್‌ಟೇಬಲ್, ಸಬ್‌ಇನ್ಸ್‌ಪೆಕ್ಟರ್ ಮತ್ತು ಡಿ.ವೈ.ಎಸ್.ಪಿ. ಹುದ್ದೆಗಳ ನೇರ ನೇಮಕಾತಿಯಲ್ಲಿ ಕ್ರೀಡಾಪಟುಗಳಿಗೆ 3% ಮೀಸಲಾತಿ ಜಾರಿಗೊಳಿಸಲಾಗಿದೆ.

ಕ್ರೀಡಾ-ಸ್ನೇಹಿ ಸರ್ಕಾರ, ಕ್ರೀಡಾ-ಸ್ನೇಹಿ ಮುಖ್ಯಮಂತ್ರಿಗಳು

ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್, ಏಷಿಯನ್ ಗೇಮ್ಸ್, ಏಷಿಯನ್ ಪ್ಯಾರಾ ಗೇಮ್ಸ್ ಮತ್ತು ಕಾಮನ್‌ವೆಲ್ತ್ ಗೇಮ್ಸ್‌ಗಳಲ್ಲಿ ಪದಕ ವಿಜೇತ ಸಾಧಕ ಕ್ರೀಡಾಪಟುಗಳಿಗೆ ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಗುಂಪು-ಎ, ಗುಂಪು-ಬಿ ಮತ್ತು ಇತರೆ ಹುದ್ದೆಗಳಿಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿ ಮೂಲಕ ನೇರ ನೇಮಕಾತಿ ಮಾಡಲಾಗುತ್ತಿದೆ.

ಆಯುಕ್ತರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ರಾಜ್ಯ ಯುವ ಕೇಂದ್ರ, ನೃಪತುಂಗ ರಸ್ತೆ, ಬೆಂಗಳೂರು -560001.
ಯುವ ಸಹಾಯವಾಣಿ: 155265

Department of Youth Empowerment and Sports | Dyes_Karnataka | dyesdept@gmail.com | dyes.karnataka.gov.in